ಶೀರ್ಷಿಕೆ: [illegible]

ಲೇಖಕ: H. M. ಶಂಕರನಾರಾಯಣ ರಾವ್

ಮಸಾಲೆ ದೋಸೆ

ಹಳ್ಳಿಯವನು ಪಟ್ಟಣಿಗರ ಹೋಟೆಲುಗಳಲ್ಲಿ ಮಸಾಲೆ ದೋಸೆಯನ್ನು ತ್ತಿದ್ದರೆ ಅದನ್ನು ಸಹಾನುಭೂತಿಯಿಂದ ನೋಡುವ ನಾಗರಿಕರಿದ್ದಾರೆಯೇ? ೋಟ ಅವರಿಗೆ ಏನೋ ಅನಾಹುತವನ್ನು ಸೂಚಿಸುತ್ತದೆಯಲ್ಲವೆ? ಹಿರೋ ಾದ ಮೇಲೆ ಆಟಂಬಾಂಬು ಬಿತ್ತು, ಬಂಗಾಳದಲ್ಲಿ ಲಕ್ಷಗಟ್ಟಲೆ ಜನರು ರವಿಲ್ಲದೆ ಸತ್ತರು—ಬಹುದೂರದ ಸಮಾಚಾರ. ಇವುಗಳಿಂದ ಮನಸ್ಸು ತವಾಗುವಷ್ಟು ಹೃದಯ ತಲ್ಲಣಗೊಳ್ಳುವುದಿಲ್ಲ. ಈ ದುರಂತಗಳಿಂದ ಪರಂಗಿ ರ ಮೇಲೆ ನಮಗಿರುವ ವಿಶ್ವಾಸವಾದರೂ ಕಡಮೆಯಾಗಿದೆಯೇ? ಆದರೆ ಾಗುತ್ತಲೇ ಬಸ್ಸೇರಿ ಬಂದು ನಗರದಲ್ಲಿ ಮಸಾಲೆ ದೋಸೆಯನ್ನು ಮೆಲ್ಲು ವ ಹಳ್ಳಿಗನನ್ನು ಕಂಡು ನಾಗರಿಕನ ಮನಸ್ಸು ಪ್ರಕ್ಷುಬ್ಧವಾಗುತ್ತದೆ. ಏಕೆ? ಲ್ಲಿ ಯಾವ ದುರಂತವಡಗಿದೆ? ದೇಶದಲ್ಲಿ ಈಗಿನ ಆಹಾರಾಭಾವಕ್ಕೂ ರೈತ ಾಲೆ ದೋಸೆ ತಿನ್ನುವುದಕ್ಕೂ ಏನು ಸಂಬಂಧ? "ಕಾಲಕಾಲಕ್ಕೆ ಮಳೆಯಾಗು ಬೆಳೆ ಬೆಳೆಯುತ್ತಿಲ್ಲ; ರೈತರು ಮಸಾಲೆ ದೋಸೆಯನ್ನು ತಿನ್ನುವುದಕ್ಕೆ ಂಭಿಸಿಬಿಟ್ಟರು....ಬಸ್ಸಿನಲ್ಲಿ ಪ್ರಯಾಣ ಮಾಡುವುದೇ ದುಸ್ತರ, ಹಳ್ಳಿಯವ ಜ್ಜೆಯಷ್ಟು ದೂರಕ್ಕೂ ಬಸ್ಸೇ ಬೇಕು—ಪಟ್ಟಣಕ್ಕೆ ಹೋಗಿ ಮಸಾಲೆ ತಿನ್ನಬೇಡವೇ?....ಎಷ್ಟೋ ಜಮೀನುಗಳು ಬಂಜರು ಬಿದ್ದಿವೆ; ನಿಗೆ ಹೋಟಲಿನ ಮಸಾಲೆ ದೋಸೆಯ ರುಚಿ ನಾಲಗೆಗೂರಿದರೆ .ಗುತ್ತಿಗೆ ಸರಿಯಾಗಿ ಬರುತ್ತಿಲ್ಲ; ಮಸಾಲೆ ರುಚಿ ಕಂಡವ ..ಪಟ್ಟಣದಲ್ಲಿ ಏನಿದೆ ನಾಜೂಕು, ಹಳ್ಳಿಗೆ ಹೋಗಿ ನೋಡ ತನವನ್ನು; ಎಲ್ಲಾ ಮಸಾಲೆ ದೋಸೆಯ ಮಹತ್ತು!"

ಮತ್ತು ಪಟ್ಟಣಿಗರು ಇವರ ವ್ಯವಹಾರದಲ್ಲಿ ಒಂದು ಬ್ಬಿಸಿದೆ, ಗ್ರಾಮ್ಯಜಿಹ್ವಾ ಬಾಂಧವ್ಯದಿಂದ ಈ ಮಸಾಲೆ

ಗಳಿಗೆ ಬಸ್ಸುಗಳಲ್ಲಿ ಹೋಗಿ ಮಸಾಲೆ ದೋಸೆಗಳನ್ನು ದೋ, ಏಕಿದು ನಾಗರಿಕರಿಗೆ ಅಸಮ್ಮತವಾಗಬೇಕೋ—

ಚಿಂತಿಸತಕ್ಕ ವಿಷಯ. ಹಾಗೆಯೇ ಆಲೋಚಿಸಿದರೆ ಆ ದೋಸೆಗಳನ್ನು ತಿನ್ನು
ದಕ್ಕೆ ಅವರೇ ಅಲ್ಲವೆ ಹೆಚ್ಚು ಅರ್ಹರು ? ಯಾರ ಕೈಕೆಸರಾದರೆ ಯಾರ ಬಾ
ಮೊಸರಾಗಬೇಕು ? ಕೃಷಿಗೆ ತಕ್ಕಫಲ ಕರ್ಷಕನಿಗೇ ಎಂಬ ಧ್ಯೇಯದ ಘೋಷ
ನಗರದಲ್ಲಿ ಮೊದಲು ಹುಟ್ಟಿತೋ ಹಳ್ಳಿಗಳಲ್ಲೊ ? ಈ ಮಸಾಲೆ ದೋಸೆಯ
ಹಳ್ಳಿಯವನು ಬೆಳೆಯದಿರುವ ಯಾವ ದ್ರವ್ಯವಿದೆ—ಇದರ ಹಿಟ್ಟುಗಳನ
ಅರೆಯುವ ಯಂತ್ರವೊಂದು ವಿನಾ ? (ಈ ಯಂತ್ರಸ್ಪರ್ಶದಿಂದ ರುಚಿ ಹೆಚ
ತ್ತದೋ ಕೆಡುತ್ತದೋ ರಸಜ್ಞರು ವಿವೇಚಿಸಲಿ.) ಅದನ್ನು ಹುಯ್ಯುವ ಭಟ್ಟನೋ
ಆತನೂ ಕೆಟ್ಟು ಪಟ್ಟಣವನ್ನು ಸೇರಿದ ಹಳ್ಳಿಗನೇ ಅಲ್ಲವೇ ? ಈ ದೋಸೆ ತವ
ದೆಂದುಕೊಳ್ಳುವುದಕ್ಕೆ ನಾಗರಿಕರಿಗೇನು ಹಕ್ಕು ? ಅದನ್ನು ತಿಂದು ಶ್ಲಾಘ್ಯವಾ
ಪದಾರ್ಥವಿದು ಎಂದು ಮೊದಲು ಗುರುತಿಸಿ ಪ್ರಚಾರಕ್ಕೆ ತಂದವರು ಅವ
ಬಹುದು, ನಗರದಲ್ಲಿ ಆ ಭಟ್ಟನ ಪ್ರತಿಭೆ ಕುದುರಿರಬಹುದು ; ಆದಮಾತ್ರಕ್ಕೆ
ಕೆಲವರು ವಿಮರ್ಶಕರು ಕೆಲವರು ಕೃತಿಕಾರರನ್ನು ವಿಶೇಷವಾಗಿ ಪ್ರಶಂಸಿಸಿ ಅವ
ತಮಗೆ ಮಾತ್ರ ವಿಶಿಷ್ಟರೆಂದುಕೊಳ್ಳುವ ಹಾಗೆ, ರುಚಿಕಂಡ ಮಾತ್ರಕ್ಕೇ ಮಸಾ
ದೋಸೆಯೂ ನಾಗರಿಕರ ಹಕ್ಕಿನದಾಗಿ ಆಗಬೇಕೆ ? ಈ ರುಚಿಸ್ವಾಮ್ಯ ಖ
ನಾರ್ಹವೋ ಮಂಡನಾರ್ಹವೋ ? ರುಚಿಸಾಮ್ಯದಿಂದ ಗ್ರಾಮೀಣನೂ ನ
ರಿಕನ ನಿಲವಿಗೆ ಸಂದನಲ್ಲಾ ಎಂಬ ಅಸೂಯೆಯಿಂದ ಈ ಅಸಹನೆ ನಗರಗಳ
ಪ್ರಚಲಿತವಾಗಿದೆ ಎಂದು ನನ್ನ ಊಹೆ. ಅಹುದು, ಇಲ್ಲಿದೆ ಭಯ. ಗ್ರಾ
ಯಿಂದ ಬ್ರಾಹ್ಮಣ, ಕಲ್ಮಾದಿಂದ ಮುಸಲ್ಮಾನ್, ಜ್ಞಾನಸ್ನಾನದಿಂದ ಕ
ಲಿಂಗಧಾರಣೆಯಿಂದ ವೀರಶೈವ—ನಂಬಿದರೆ ನಂಬಿ ಬಿಟ್ಟರೆ ಬಿಡಿ
ರೊಟ್ಟಿಗಳನ್ನು ತಿನ್ನುತ್ತಿರುವವರೆಗೆ ಹಳ್ಳಿಗ ಹಳ್ಳಿಗ; ಆತ ಮಸಾ
ತಿನ್ನಲು ಪ್ರಾರಂಭಿಸಿ ಬಿಟ್ಟನೆಂದರೆ ಆತ ನಾಗರಿಕನಾಗಿ ಮಾ
ತ್ತಾನೆ! ಹಳ್ಳಿಯವರೆಲ್ಲ ನಾಗರಿಕರಾಗಿಬಿಟ್ಟರೆ ನಾಗರಿಕ
ಉಳಿಯುತ್ತದೆಯೇ ಎಂಬ ಭಯ ಸಹಜವಾಗಿಯೇ ಮೂ
ಗನ ಈ ಪರಿವರ್ತನೆಯಲ್ಲಿದೆ ನಾಗರಿಕನ ದುರಂತದ ಮೊ
ದುರ್ಗ ತನ್ನ ಮಸಾಲೆ ದೋಸೆಯ ಒಳಸಂಚಿನಿಂದಲೇ ಭ
ರೈತ ನಾಗರಿಕನಾಗುವುದೂ ಬೇಲಿ ಹೊಲವನ್ನು ನುಂ
ನಲ್ಲವೇ ; 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು

'ಕೆಲಸ ನಿನಗೆ, ಫಲ ನನಗೆ'ಎಂಬ ಗೀತಾಸೂಕ್ತಿಯಲ್ಲಿ ಇದುವರೆಗೂ ನಿಷ್ಠವಾಗಿದ್ದ ನಮ್ಮ ಪೌರ ಸಂಸ್ಕೃತಿಯ ನೆಲಗಟ್ಟಿನಲ್ಲಿ ಇಂಥ ಬಿರುಕು ತೋರಿದರೆ ಏನು ಗತಿ ? ರೈತ ತಾನು ಬೆಳೆದುದನ್ನೆಲ್ಲಾ ತಾನೇ ತಿಂದು ಮುಗಿಸಿದರೆ ನಾವು ಬಾಳುವುದೆಂತು ? ಹಳ್ಳಿಯವನು ನಾಗರಿಕನಾದರೆ ಭೂಮಿ ಬಂಜೆಯಾದಂತೆ ತಾನೆ ; ಆಗ ನಾಡಿನ ಮಕ್ಕಳಾರು, ನಮ್ಮ ಸಂಸ್ಕೃತಿಗೇನು ಗತಿ ? ಈ ರೀತಿಯಲ್ಲಿ, ಪಲಾಂಡುವಿನ ಈ ಅಪೂರ್ವವಾದ ಅಪೂಪದ ನವ್ಯಸ್ಪೃಹೆಯುಳ್ಳ ಪಲ್ಲೀಜನದ ವಿಷಯವಾಗಿ ನಾಗರಿಕರು ಪಡುವ ಆತಂಕದಲ್ಲಿ ಸ್ವಾರ್ಥಕ್ಕಿಂತಲೂ ದೇಶಾಭಿಮಾನ ಒಂದು ನವಿರಷ್ಟು ಹೆಚ್ಚಾಗಿರುವಂತೆ ತೋರುತ್ತದೆ.

ನಿಜವಾಗಿ ಮಸಾಲೆ ದೋಸೆ ಕ್ರಾಂತಿಕಾರಕವಾದ ವಸ್ತುವೇನೋ ಹೌದು. ಅದು ಹಿಟ್ಟಿನ ಮುದ್ದೆಯಂತೆ ಸರಳವಾದ ಉಣಿಸಲ್ಲ. ಅದು ಬಹು ಸಂಕೀರ್ಣ ವಸ್ತು. ಅನೇಕ ತಂತಿಗಳಿಂದ ಕೂಡಿ ಶ್ರುತಿಗೆ ಸಿದ್ಧವಾದ ಪಿಟೀಲಿನ ಮೇಲೆ ಕುಶಲ ವಾದಕನು ಕಮಾನನ್ನು ಆಡಿಸುವ ಹಾಗಾಗುತ್ತದೆ, ಪ್ರವೀಣನಾದ ವಲಲನು ಹದವರಿತು ನಿರ್ಮಿಸಿದ ಮಸಾಲೆ ದೋಸೆಯ ಮೊದಲ ತುಣುಕು ರಸನೆಗೆ ಸೋಕಿದಾಗ. ಕಾಂತೆಯ ಪ್ರಣಯ ಕೋಪದಂತೆ ಅದು ಹೊರಗೆ ಕಟು, ಒಳಗೆ ಮೃದು. ಅಗ್ನಿಸಾಕ್ಷ್ಯವಾಗಿ ವರಿಸಿದ ಗೃಹಿಣಿಯೊಡನೆ ನಾವು ನಡೆಸುವ ಗಾರ್ಹಸ್ಥ್ಯದಂತಲ್ಲ ಅದರೊಳಗಿನ ಮಸಾಲೆಯ ರುಚಿ ; ಅನ್ಯಸ್ತ್ರೀ ಕಟಾಕ್ಷದಂತಿದೆ ಆ ಪಲಾಂಡು ಮಾಧುರ್ಯ. ಇಂಗಿನ ಕಹಿ, ಮೆಂತ್ಯದ ಒಗಚು, ಹಸಿಶುಂಠಿ ಹಸಿಮೆಣಸಿನಕಾಯಿ ಮೆಣಸುಗಳ ವಿಶಿಷ್ಟವಾದ ಖಾರಗಳು, ಪಲ್ಯದ ಕಾಯಿಗಳ ವಿವಿಧ ಮಾಧುರ್ಯ, ಹಿಟ್ಟುಗಳ ಹುದುಗಿನ ಹಿತವಾದ ಹುಳಿ, ತುಪ್ಪದ ಕಂಪು, ಬೆಣ್ಣೆಯ ವಿಪುಲಾರ್ದ್ರತೆ —ಈ ಸಮೃದ್ಧ ರಸಗಳನ್ನು ಹೊಂದಿಸಿ, ಸುತ್ತಲೂ ಕೆನ್ನಾಲಗೆಯನ್ನು ಚಾಚಿ ಕಾವಲೆಯ ಮೇಲಿರುವ ಭಕ್ಷ್ಯವನ್ನು ರುಚಿ ನೋಡಲು ಹವಣಿಸುವ ಅಗ್ನಿದೇವನನ್ನು ನೀರಿನಿಂದ ದಟ್ಟಿಸುತ್ತಾ, ಕಣ್ಣಿಗೆ ನಾಲಗೆಯ ಹರಿತವನ್ನು ಕೊಟ್ಟು ಒಂದು ಕ್ಷಣವೂ ಹಿಂಚು ಮುಂಚಿಲ್ಲದಂತೆ ಸಿದ್ಧಕ್ಷಣದಲ್ಲಿ ಎಲೆಗಿಳಿಸುವ ಕುಶಲ ಬಾಣಸಿಗನ ಕುಶಲ ಕೃತಿ ಈ ಮಸಾಲೆ ದೋಸೆ. ಇದಕ್ಕೆ ಯಾವ ರಸನಾವಂತ ಮರುಳಾಗಲೊಲ್ಲ ? ಮಡಿಕೆಯಲ್ಲಿ ಗರುಗನ್ನು ಹೊಳೆಸುತ್ತಾ, ಬಿಚ್ಚಿದ ಗಳಿಗೆಯಲ್ಲಿ ಹದವಾಗಿ ಬೆಂದ ಸ್ವರ್ಣೋದರವನ್ನು ಪ್ರದರ್ಶಿಸಿ, ರಸಾರ್ದ್ರವಾದ ಮಸಾಲೆ ಪಲ್ಯದ ಸುಗಂಧಭಾರವಾದ ಬಾನಿನ ಪತಾಕೆಯಂತಿರುವ ಹಬೆಯಿಂದ ಘ್ರಾಣೇಂ

ದ್ರಿಯವನ್ನು ವಿಭ್ರಮಗೊಳಿಸುತ್ತಾ, ನಿಮ್ಮ ಹಸ್ತಗತವಾಗುವ ಈ ವಸ್ತು ಮನೆಯಲ್ಲಿ ದೊರೆಯುವ ವಸ್ತುವೇ, ಮಠದಲ್ಲಿ ದೊರೆಯುವ ವಸ್ತುವೇ? ಯಾವ ರಸಜ್ಞವಾದ ಜಿಹ್ವೆ ಇದನ್ನು ಮೋಹಿಸಿ ಮುದ್ದಿಸದು? ಆ ಮಡ್ಡಿ ಇಡ್ಲಿಯನ್ನು ಇದರ ಮುಂದೆ ನಿವಾಳಿಸಬೇಕಲ್ಲವೆ? ಈ ಮೈಸೂರು ಮಸಾಲೆಯ ಪ್ರಲೋಭನಕ್ಕೆ ಸಿಕ್ಕಿ ಚೇತರಿಸಿಕೊಂಡ ಮಡಿ ಯಾರದು, ಎಲ್ಲಿದೆ? ಸರಳತೆಯಿಂದ ಸಂಕೀರ್ಣತೆಗೆ, ಗ್ರಾಮೀಣತೆಯಿಂದ ನಾಗರಿಕತೆಗೆ, ವೈದಿಕದ ಇರುಕಟ್ಟಿನಿಂದ ಲೌಕಿಕದ ಹಸರಕ್ಕೆ, ಮೌಗ್ಧ್ಯದಿಂದ ಪ್ರೌಢಿಮೆಗೆ, ಕ್ಷೇತ್ರದಿಂದ ಯಂತ್ರಾಗಾರಕ್ಕೆ, ಪಂಚಾಯಿತಿಯಿಂದ ರಾಜ್ಯಸಭೆಗೆ, ಈ ಮಸಾಲೆ ದೋಸೆ ಮಂದಿಗಳನ್ನು ಸೆಳೆದೊಯ್ಯುತ್ತಿರುವುದೇನಚ್ಚರಿ? ಇದರಿಂದ ಎಷ್ಟೊಂದು ಗುಡಿಗಳು ಹುಡಿಗೂಡಿಲ್ಲ, ಎಷ್ಟೊಂದು ಹೊಲ ಹಾಳುಬಿದ್ದಿಲ್ಲ? ಸುಂದರಿಯಾದ ವಿಲಾಸಿನಿಯ ರಖಾವುದಾರನಂತೆ, ನಾಗರಿಕನು ಈ ಮಸಾಲೆ ದೋಸೆಯ ಪ್ರಲೋಭನಕ್ಕೆ ಸಿಕ್ಕುವ ಹಳ್ಳಿಗನ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸುವುದು ಸಾಧ್ಯವಾದ ಮಾತೆ?

ಹೀಗೆ ಅನೇಕ ದೃಷ್ಟಿಗಳಿಂದ ಅಯೋಗ್ಯವಾದರೂ ಭೋಗ್ಯವಾದ ಈ ವಸ್ತು ನಮ್ಮ ನಾಗರಿಕ ಸಂಸ್ಕೃತಿಯ ವಿಶಿಷ್ಟವಾದ ರುಚಿಯನ್ನು ಲೋಕಕ್ಕೆ ಎತ್ತಿ ತೋರಿಸಿಕೊಡುವಂತೆ, ಒಂದು ರೀತಿಯಲ್ಲಿ ನಮ್ಮ ಭಾರತದ ಸಂಸ್ಕೃತಿಯ ಮೂಲವನ್ನೇ ಅಲ್ಲಾಡಿಸುತ್ತಿದೆಯೋ ಏನೋ. ಏಕೆಂದರೆ ನಮ್ಮ ಸಂಸ್ಕೃತಿ ಅರಣ್ಯಜನ್ಯವಾದದ್ದು, ವ್ಯಕ್ತಿನಿಷ್ಠವಾದದ್ದು; ವನ್ಯಜನಪೋಷಿತವಾಗಿ ಅನ್ಯಜನದುರ್ಗಮವಾದದ್ದು. ಅದು ಪಾಶ್ಚಾತ್ಯ ಸಂಸ್ಕೃತಿಯಂತೆ ನಾಗರಿಕವಲ್ಲ—ಅದು ಬದುಕಬೇಕಾದರೆ ಗ್ರಾಮ್ಯರಿಂದ ಗ್ರಾಮಗಳಲ್ಲಿ. ನಗರದಲ್ಲಿ ಅದರ ವ್ಯಾಪ್ತಿ ಕಡಮೆ. ಅದಕ್ಕೇ ನಮ್ಮನ್ನು ಪಾಶ್ಚಾತ್ಯಲೋಕ ದೂರುತ್ತದೆ—ಭಾರತೀಯರು ಸಂಸ್ಕೃತರಾದರೂ ನಾಗರಿಕರಲ್ಲ ಎಂದು. ಏಕೆಂದರೆ ಅದರ ಪ್ರಜೆ ನಾಗರಿಕ, ಆದರೆ ಸಂಸ್ಕೃತವಲ್ಲ. ನಮ್ಮದೋ ಸಂಸ್ಕೃತಿಸಂಪನ್ನವಾದರೂ ನಾಗರಿಕವಲ್ಲ! ನಗರಕ್ಕೂ ನಮ್ಮ ಸಂಸ್ಕೃತಿಗೂ ಸ್ವಲ್ಪ ದೂರ ದೂರವೇ. ನಗರದಲ್ಲಿ ಅದು ನಮ್ಮ ಮುಂದಿನ ಬೈಠಕುಖಾನೆಗಳಲ್ಲಿ ತಲೆದೋರದು; ಹಿಂದಿನ ಪಾಕಶಾಲೆಯಲ್ಲಡಗುತ್ತದೆ. ನಿಜ, ಪಂಡಿತ ನೆಹ್ರುವಿನ ಮೂದಲಿಕೆ ಸತ್ಯವನ್ನೇ ಹೇಳುತ್ತದೆ: ನಮ್ಮ ಅಡಿಗೆಮನೆಗಳಲ್ಲೇ ನಮ್ಮ ಸಂಸ್ಕೃತಿಯ ನೆಲೆ. ಅವೇ ಅದರ ನಿಧಿಸ್ಥಾನ. ಅಂತಃಪುರವೆಲ್ಲಿ, ವೇಶ್ಯಾಗೃಹವೆಲ್ಲಿ? ಪಾಕಗೃಹಗಳೆಲ್ಲಿ, ಹೋಟೆಲುಗಳೆಲ್ಲಿ? ರೈತ ಮಸಾಲೆ ದೋಸೆ

ಯನ್ನು ತಿನ್ನುತ್ತಿದ್ದರೆ ಅದನ್ನು ಕಂಡ ನಮಗೆ ನಮ್ಮ ರಸಿಕ ಪೂರ್ವಜರು ಅವರ 'ದುರಭ್ಯಾಸ'ಗಳನ್ನು ಅನುಕರಿಸುವ ನಮ್ಮ ವಿಷಯದಲ್ಲಿ ಪಡುತ್ತಿದ್ದ ಕನಿಕರ ಇವರ ವಿಷಯಕ್ಕೆ ನಮಗೆ ಮತ್ತೆ ಮೂಡುತ್ತದೆ. "ನಾವು ಕೆಟ್ಟೆವು, ನೀವೂ ಕೆಡಬೇಕೆ ? ನಮ್ಮ ನಾಲಗೆ ನಿಮ್ಮ ನಾಲಗೆಯಷ್ಟು ಪಟುವಾಗಿಲ್ಲ. ಅದರ ಜಾಡ್ಯಕ್ಕೆ ಈ ಮಸಾಲೆ ಬೇಕು. ನಿಮ್ಮದು ಸರಳ ಮತ್ತು ಮುಗ್ಧ. ನಿಮ್ಮ ರುಚಿಯನ್ನು ಶುಚಿಯಾಗಿಟ್ಟು ಕೊಂಡು ಗ್ರಾಮೀಣತೆಯನ್ನುಳಿಸಿಕೊಳ್ಳಿ, ಸಂಸ್ಕೃತಿಗೆ ಆಕರರಾಗಿ. ನಿಮ್ಮಿಂದಲೇ ಅದರ ಉದ್ಧಾರ. ನಮಗೆ ಕುಲವಿಲ್ಲ, ಗೋತ್ರವಿಲ್ಲ, ಆಚಾರವಿಲ್ಲ ವಿಚಾರವಿಲ್ಲ— ಇಲ್ಲಿ ಎಲ್ಲರೂ ಒಂದಾಗಿಬಿಟ್ಟೆವು. ಇನ್ನೂ ನಿಮ್ಮಲ್ಲಿ ವ್ಯಕ್ತಿವಿವೇಕ ಉಳಿದಿದೆ. ನಾವಂತೂ ನಾವಾದೆವು, ನೀವು ನೀವಾಗಿರಬಾರದೇ ? ನಿಮ್ಮ ಕನಿಕರಕ್ಕೆ ನಾವು ಪಾತ್ರರು" ಈ ತೆರ ಹರಿಯುತ್ತದೆ ನಮ್ಮ ಸಮೃದ್ಧಾನುಕಂಪೆಯ ಲಹರಿ. ನಮಗೂ ಹಳ್ಳಿಯವನಿಗೂ ಇರುವ ಅಂತರವನ್ನು ಈ ಭಕ್ಷ್ಯ ವಿಶೇಷದಿಂದ ಉಳಿಸಿಕೊಳ್ಳ ಬೇಕೆಂದು ನಮಗೆ ಆಸೆ.

"ನೀವು ನೀವಾಗಿರಿ, ನಾವು ನಾವಾಗಿರುತ್ತೇವೆ," ಇದೀಗ ಮಾತು ಸಂಪ್ರದಾಯನಿಷ್ಠರ ಹೃದಯತಲದಲ್ಲಿ ಸದಾ ಜಾಗೃತವಾಗಿರುವ ಪ್ರಜ್ಞಾವಾಣಿ, ಸ್ವಾಸ್ಥ್ಯಮಂತ್ರ. ಸ್ವಾಸ್ಥ್ಯಕ್ಕೆ ಧಕ್ಕೆ ಬರುವ ಸಂದರ್ಭಗಳಲ್ಲೆಲ್ಲಾ ಸಂಪ್ರದಾಯ ನಿಷ್ಠೆ ತಲೆದೋರುತ್ತದೆ. ಅಸ್ವಸ್ಥವಾದದ್ದು ಸ್ವಾಸ್ಥ್ಯಕ್ಕೆ ಬರುವ ಹವಣಿಕೆಯೇ ಪ್ರಗತಿ ಎನ್ನಿಸಿಕೊಳ್ಳುತ್ತದೆಯೋ ಏನೋ. ನೀವು ಅಸ್ವಸ್ಥರೋ, ಹಾಗಾದರೆ ನೀವು ಪ್ರಗತಿಶೀಲರು ; ಸ್ವಸ್ಥರೋ, ಹಾಗಾದರೆ ಸಂಪ್ರದಾಯನಿಷ್ಠರು. ಮನುಷ್ಯ ಎಲ್ಲಿ ಸಾಂಪ್ರದಾಯಿಕನೋ ಎಲ್ಲಿ ಪ್ರಗತಿಶೀಲನೋ ಹೇಳಲು ಬರುವಂತಿಲ್ಲ. ಅದು ಯಾವ ಯಾವ ವಿಷಯಗಳಲ್ಲಿ ಅವನು ನೆಮ್ಮದಿಯಾಗಿದ್ದಾನೆ, ಯಾವಯಾದವು ಗಳಲ್ಲಿ ಅಸ್ವಸ್ಥ ಎಂಬುದರ ಮೇಲೆ ಹೋಗುತ್ತದೆ. ಮಸಾಲೆ ದೋಸೆಯ ವಿಷಯ ದಲ್ಲಿ ನಾಗರಿಕ ಸಂಪ್ರದಾಯನಿಷ್ಠ. ಮಸಾಲೆ ದೋಸೆಗೋ ಹಳ್ಳಿಗನನ್ನು ನಾಗರಿಕ ನನ್ನಾಗಿ ಪರಿವರ್ತನಗೊಳಿಸುವ ಪ್ರಭಾವವಿದೆ; ಹಿಟ್ಟು ರೊಟ್ಟಿಗಳಿಗೆ ನಾಗರಿಕ ನನ್ನು ಆಕರ್ಷಿಸಿ ಹಳ್ಳಿಗನನ್ನಾಗಿ ಮಾಡುವ ಸಾಮರ್ಥ್ಯವಿಲ್ಲ. ಆದುದರಿಂದ ಹಳ್ಳಿಗನ ಹಳ್ಳಿಗತನಕ್ಕೆ ಯಾರಿಂದಲೂ ಯಾವ ಅಪಾಯವೂ ಇಲ್ಲ. ಆದರೆ ನಾಗರಿಕ ನಾಗರಿಕತೆಯ ವೈಶಿಷ್ಟ್ಯವನ್ನು ತನಗೊಬ್ಬನಿಗೇ ಉಳಿಸಿಕೊಳ್ಳಲಾರ. ತಮ್ಮ ದಾಯಾದಿಗಳು ಬೆಳೆಯಲೆಂದು ಯಾರಿಗೆ ತಾನೆ ಆಸೆ ಇದೆ ? ಈ ಮಸಾಲೆ

ದೋಸೆಯ ವ್ಯಾಪ್ತಿಯೋ ಕ್ಷಾಮದಿಂದ ಕ್ಷೀಣಿಸದು; ರೇಷರ್ ಶಾಸನಗಳಿಂದ ಕುಂಠಿತವಾಗದು. ಇದನ್ನು ತಡೆಗಟ್ಟಿ ತನ್ನ ವಿಶಿಷ್ಟತೆಯನ್ನು ಕಾಪಾಡಿಕೊಳ್ಳಲಾರದ ನಾಗರಿಕನ ಈ ಅಸಾಮರ್ಥ್ಯ ನಿಂದೆಯಲ್ಲಿ ಅಲ್ಲವೆ ಮುಗಿಯಬೇಕು? ಎಲ್ಲ ಕ್ಷೋಭೆಗಳಿಗೂ ಇದರ ರುಚಿ ಪ್ರಸರಣವೇ ಕಾರಣವೆಂದು ರೈಲುಗಳಲ್ಲೂ ಬಸ್ಸುಗಳಲ್ಲೂ ಗೋಷ್ಠಿಗಳಲ್ಲೂ ಚೌಕಗಳಲ್ಲೂ ಪಟ್ಟಣಿಗರು ಗುಸುಗುಸು ಎಂದು ಬುಸುಗುಟ್ಟುತ್ತಿದ್ದಾರೆ—ಒಂದು ದೋಸೆಗೆ ಹತ್ತು ಬಾಯಾದರೆ ಏನು ಗತಿ ಎಂದು.

ಅಲ್ಲದೆ ಇನ್ನೊಂದು ರಹಸ್ಯ ಈ ಮಸಾಲೆ ದೋಸೆಯ ನಿಂದೆಯಲ್ಲಡಗಿದೆ. ನಿಮ್ಮ ಧ್ಯೇಯವೇನು ನಮ್ಮ ಸಂಸ್ಕೃತಿಯ ವಿಷಯದಲ್ಲಿ, ಹೇಳಬಲ್ಲಿರಾ? ನಿಮಗೆ ಏಕತೆಯಲ್ಲಿಷ್ಟವೋ, ವೈವಿಧ್ಯದಲ್ಲಿ ಪ್ರೀತಿಯೋ? ಭಾರತದ ಜನ ಒಂದು ಜನಾಂಗವಾಗಿರಬೇಕೇ ಅಥವಾ ಅನೇಕ ಜನಾಂಗಗಳ ಉದ್ಗೀಥವಾಗಿರಬೇಕೇ? ಒಂದು ಮತ, ಒಂದು ಪುಸ್ತಕ, ಒಬ್ಬ ಗುರು, ಒಂದು ಶಿಸ್ತು, ಒಂದು ಮಾತು, ಒಂದು ರೀತಿ, ಈ ಏಕಮೇವಾ ದ್ವಿತೀಯತೆಯಲ್ಲಿ ನೀವು ಆಸಕ್ತರಾಗಿದ್ದೀರಾ; ಅಥವಾ ಬಹುಮತ, ಬಹುಗುರು, ಬಹುಪುಸ್ತಕಗಳಲ್ಲಿ ನಿಮ್ಮ ಶ್ರದ್ಧೆಯೋ? ನಿಮಗೆ ಸ್ವಾಪದ ಏಕಸ್ಥಿತಿ ಇಷ್ಟವೋ, ಜಾಗರದ ಬಹುಸ್ಥಿತಿ ಪ್ರಿಯವೋ? ನೀವು ಏಕತಾ ಪ್ರಿಯರಾದರೆ ಈ ಮಸಾಲೆ ದೋಸೆಯ ನಿಂದೆ ನಿಮಗೆ ಸಲ್ಲದು. ಅದರ ವ್ಯಾಪ್ತಿ ಹೆಚ್ಚಿದಷ್ಟೂ ನಿಮ್ಮ ಧ್ಯೇಯವೂ ಗುರಿಮುಟ್ಟುತ್ತದೆ. ಏಕೆಂದರೆ ಅನ್ನದಂತೆ ನಾಲಗೆ, ನಾಲಗೆಯಂತೆ ಮನಸ್ಸು, ಮನಸ್ಸಿನಂತೆ ಭಾವನೆ, ಭಾವನೆಯಂತೆ ಜನ, ಜನದಂತೆ ಜನಾಂಗ—ಏಕಾನ್ನದಿಂದ ಏಕಜನಾಂಗ, ಬಹ್ವನ್ನಗಳಿಂದ ಬಹು ಜನಾಂಗಗಳು, ವಿಪುಲ ಸಂಪ್ರದಾಯಗಳು, ವಿಶಿಷ್ಟ ಸಂಸ್ಕೃತಿಗಳು. ಇಂದ್ರಿಯಗಳಲ್ಲೆಲ್ಲಾ ಬಹು ಪ್ರಬಲವಾದ ರಸನೆಯ ಗ್ರಸನದಿಂದ ಸಂಪ್ರದಾಯಗಳ ಜುಟ್ಟನ್ನೆಲ್ಲಾ ಹಿಡಿದು ಅಲ್ಲಾಡಿಸಿ, ಅನೇಕ ಸಂಸ್ಕೃತಿಗಳನ್ನು ಧ್ವಂಸಮಾಡಿ, ಒಂದೇ ನಾಗರಿಕತೆಯನ್ನು ಸ್ಥಾಪಿಸಿ, ಒಂದು ಜನಾಂಗವನ್ನು ಯಾವ ಸಮರ್ಥನಾದರೂ ನಿರ್ಮಿಸಬಲ್ಲನು. ಈ ಚಕ್ರ ಎಲ್ಲಿ ಒಡೆದರೆ ಅಲ್ಲಿ ಬಹು ಜನಾಂಗ ಬಹು ಸಂಸ್ಕೃತಿ ನಿರ್ಮಾಣಗೊಳ್ಳುತ್ತವೆ; ಎಲ್ಲಿ ಒಂದುಗೂಡಿದರೆ ಅಲ್ಲಿ ಒಂದು ಜನಾಂಗ ಒಂದು ನಾಗರಿಕತೆ ಮೂಡಿಕೊಳ್ಳುತ್ತದೆ. ಅನ್ನದ ರುಚಿಯ ಮೇಲಿನ ಪ್ರಭುತ್ವದಿಂದ ನಮಗೆ ಬೇಕಾದ ಜನವನ್ನೂ ಜನಾಂಗವನ್ನೂ ನಾವು ಸೃಷ್ಟಿಸಬಹುದೆಂಬ

ರಹಸ್ಯವನ್ನು ಕಮ್ಯೂನಲ್ ಕಿಚಿನ್ಸ್ ಅನ್ನು ನಿರ್ಮಿಸಿದ ರಷ್ಯ ಬಲ್ಲುದು ; ನಂಬರ್ ಒನ್, ನಂಬರ್ ಟು, ನಂಬರ್ ತ್ರಿ ಲಂಚ್, ಡಿನ್ನರ್, ಬ್ರೆಕ್‌ಫಾಸ್ಟನ್ನು ಕಲ್ಪಿಸಿ ಈ ಕಡಲಿಂದ ಆ ಕಡಲಿನ ತೀರಕ್ಕೆ ಎಲ್ಲೆಂದರಲ್ಲಿ ಒಂದೇ ರುಚಿಯಲ್ಲಿ ಹಂಚುವ ಅಮೆರಿಕಾ ಬಲ್ಲುದು ; ಪ್ರತ್ಯೇಕ ಹಾಸ್ಟೆಲ್ಲುಗಳು ಬೇಡವೆಂಬ ಜನರು ಬಲ್ಲರು ; ಭುಕ್ತಿ ಪ್ರಭುತ್ವವುಳ್ಳ ಸೈನ್ಯ ವ್ಯವಸ್ಥೆ ಬಲ್ಲುದು. ಈಗ ನಮ್ಮ ಭಾರತದಲ್ಲಿ ಎಷ್ಟು ಬಗೆಯ ಪಾಕಶಾಲೆಗಳಿವೆ, ಎಷ್ಟು ವಿಧವಾದ ಆಹಾರಗಳು ಯಾವ ಯಾವ ರುಚಿಗಳಲ್ಲಿ ಅಲ್ಲಿ ಪಾಕಗೊಳ್ಳುತ್ತಿವೆ, ಯಾವ ಯಾವ ಜನಾಂಗಕ್ಕೆ ಯಾವ ಯಾವ ಅಡಿಗೆ ವಿಶಿಷ್ಟವಾದದ್ದು, ಇಷ್ಟವಾದದ್ದು, ಎಣಿಸಿ ವಿಭಜಿಸಿ ಹೇಳಬಲ್ಲಿರಾ? ಭಾರತದಲ್ಲಿ ಅಷ್ಟು ಮತಗಳಿವೆ, ಅಷ್ಟು ಸಂಸ್ಕೃತಿಗಳಿವೆ, ಅಷ್ಟು ಜನಾಂಗಗಳಿವೆ! ದ್ವೈತಕ್ಕೂ, ವಿಶಿಷ್ಟಾದ್ವೈತಕ್ಕೂ, ಅದ್ವೈತಕ್ಕೂ ಈಗ ಏಕೆ ಹಿಂದಿನಷ್ಟು ಸ್ಪರ್ಧೆಯಿಲ್ಲ, ಗೊತ್ತೆ? ಪರಸ್ಪರವಾದ ಅಡಿಗೆಗಳ ವಿನಿಮಯ ಈಗ ಈ ಮತಸ್ಥ ಯುವ ಜನಕ್ಕೆ ಸಾಧ್ಯ—ಅದರಿಂದ. ಈ ಮತಗಳ ವ್ಯತ್ಯಾಸವನ್ನು ಆಯಾ ಬ್ರಹ್ಮಸೂತ್ರ ಭಾಷ್ಯಗಳಿಂದ ಅಳೆಯುವುದು ಮಂಕುತನ. ಇವುಗಳ ಮಾನದಂಡ ಆಂಬೊಡೆ, ಪುಳಿಯೋಗರೆ ಮತ್ತು ಹೋಳಿಗೆ. ಆಯಾ ಮತಗಳ ಸಂಸ್ಕೃತಿಯ ವೈಶಿಷ್ಟ್ಯ ಈ ಖಾದ್ಯವಸ್ತುಗಳಲ್ಲಿ ಅಡಗಿದೆಯೇ ಹೊರತು ಆಯಾ ಸಿದ್ಧಾಂತಗಳಲ್ಲಲ್ಲ. ಈ ಭೋಜನ ದ್ರವ್ಯಗಳ ಪರಸ್ಪರಾಕರ್ಷಣೆಯಿಂದ ಈಗಿನ ತ್ರಿಮತಸ್ಥರಿಗೆ ಸೌಹಾರ್ದ ಸೌಮನಸ್ಯಗಳು ಏರ್ಪಟ್ಟಿವೆಯೇ ವಿನಾ ತತ್ವಗಳ ಸಮನ್ವಯದಿಂದಲ್ಲ. ಹಿಂದಣವರಿಗೆ ಈ ಪಙ್ತಿಲಾಭದ ಸೌಕರ್ಯವಿರಲಿಲ್ಲ. ಅದರಿಂದ ಆಯಾ ಮತದವರ ಆಯಾ ವಿಶಿಷ್ಟ ಸಂಸ್ಕೃತಿ ಅವರವರ ಪೂರ್ವಗ್ರಹಗಳಿಂದ ಸಂರಕ್ಷಿತವಾಗಿ ಮೆರೆದು ಮೊರೆಯುತ್ತಿತ್ತು. ಈಗ ಪಾಕಶಾಲೆಯ ಮಡಿ ಮಡಿದಿದೆ, ಅಪಾಙ್ತೇಯರ ಪಟ್ಟಿ ಮಾಸಿದೆ, ನಾಲಗೆಯ ರುಚಿಗ್ರಹಣಶಕ್ತಿ ಹದಗೊಂಡಿದೆ, ಪೂರ್ವಗ್ರಹದ ಬೇಲಿ ಮುರಿದು ಸಹಾನುಭೂತಿ ಹಸರಿಸಿದೆ. ಬ್ರಾಹ್ಮಣ್ಯ ಒಂದಾಗಬೇಕೆಂಬ ಹಂಬಲವೂ ಕೂಡ ಈ ಆಹಾರಸಾಮ್ಯ ಸಂಭವಿಸಿದ ದಿನದಿಂದ ಮೊದಲಿಟ್ಟಿತು ಎಂಬುದು ನಾವೆಲ್ಲರೂ ಗಮನಿಸತಕ್ಕ ವಿಷಯ. ಈಗ ಅದು ಎಲ್ಲ ಜಾತಿಗಳೂ ಒಂದಾಗಬೇಕೆಂಬ ಪ್ರಸ್ತಾನಕ್ಕಿಳಿದಿದೆ ಒಂದು ರುಚಿ, ಒಂದು ಜನ ; ಮತ್ತೊಂದು ರುಚಿ ಮತ್ತೊಂದು ಜನ, ಮತ್ತೊಂದು ಮತ. ರುಚಿಯಂತೆ ಮತಿ. ತಮ್ಮ ತಮ್ಮ ಮತಗಳಲ್ಲಿ ಅಭಿಮಾನವುಳ್ಳ ಮತವಳರು ರುಚಿಗಳ ಏಕತೆಯನ್ನು ಸಾಧಿಸುವ

ಹೋಟೆಲುಗಳನ್ನೂ ಹಾಸ್ಟೆಲುಗಳನ್ನೂ ಕ್ಲಬ್ಬುಗಳನ್ನೂ ನಿಂದಿಸುವುದೂ ಮಡಿವಂತರಾದ ಸ್ವಯಂಪಾಕಿಗಳನ್ನು ವಂದಿಸುವುದೂ ಈ ಹುರುಳನ್ನರಿತೇ. ನಮ ನಮಗೆ ವಿಶಿಷ್ಟವೂ ಸಂರಕ್ಷಣೀಯವೂ ಗೋಪ್ಯವೂ ಆದ ಮತ ನಮ್ಮ ನಮ್ಮ ಪಾಕಶಾಲೆಗಳಲ್ಲಡಗಿದೆ ಎಂದ ಮೇಲೆ, ಅದನ್ನು ದುಶ್ಶಾಸನನು ಸಭೆಯಲ್ಲಿ ದ್ರೌಪದಿಯ ಸೀರೆಯನ್ನೆಳೆದಂತೆ ಈ ಭಟ್ಟರುಗಳು ಹೋಟೆಲುಗಳಲ್ಲಿ ಬಯಲಿಗೆಳೆಯುತ್ತಿದಾರಲ್ಲ! ಇದನ್ನು ಯಾವ ಮತಾಭಿಮಾನಿ ಸಹಿಸಿಯಾನು? "ಮಂತ್ರಂ ಯತ್ನೇನ ಗೋಪಯೇತ್" ನಿಶ್ಚಯ. ರಾಮಾನುಜರು ಗೋಪುರವೇರಿ ನಿಂತು ಮೂಲಮಂತ್ರವನ್ನೇ ಉಗ್ಗಡಿಸಿದರೂ ಯಾರಿಗೇನಾಯಿತು? ಪುಳಿಯೋಗರೆ ಉಳುಂದೋಹರೆಗಳ ಪಾಕರಹಸ್ಯ ರಹಸ್ಯವಾಗಿ ಉಳಿಯುವವರೆಗೂ ಮಂತ್ರ ಸುರಕ್ಷಿತವಾಗಿಯೇ ಇರುತ್ತದೆ ಎಂಬುದನ್ನು ಬಲ್ಲ ಜನವೇ ಬಲ್ಲುದು.

ಆದುದರಿಂದ, ಜನಾಂಗವನ್ನು ಒಂದುಗೂಡಿಸುವುದು ಪಾಕಶಾಲೆ, ವಿಂಗಡಿಸುವುದು ಪಾಕಶಾಲೆ. ಸೌಹಾರ್ದವನ್ನು ಮುದುರಿಸುವುದೂ ಕುದುರಿಸುವುದೂ ಪಾಕಶಾಲೆಯ ಕೆಲಸವೇ. ಶ್ರೀವೈಷ್ಣವರು ಇಷ್ಟರೂ ಸಹ್ಯರೂ ಆಗಿರುವುದು ಶ್ರೀಭಾಷ್ಯದಿಂದಲೋ ಕ್ಷೀರಾನ್ನದಿಂದಲೋ ರುಚಿಬಲ್ಲವರು ಹೇಳಲಿ. ಆಹಾರಸಾಮ್ಯದಿಂದ ಮತಸಾಮ್ಯ; ಅಭಿಮತವಾದ ಅಡಿಗೆಯಿಂದ ಅಭಿಮಾನದ ಬಳವಿ; ಪರಸ್ಪರ ಭೋಜನಾಹ್ವಾನ ವಿನಿಮಯದಿಂದ ಸ್ನೇಹಸ್ವಾಸ್ಥ್ಯ; ಪ್ರಸಾದ ಸಮೃದ್ಧಿಯಿಂದ ಶಿಷ್ಯವೃದ್ಧಿ. ಒಬ್ಬರ ಮನಸ್ಸು ಮತ್ತೊಬ್ಬರಿಗೆ ತಿಳಿಯಬೇಕಾದರೆ ನಾಲಗೆ ನುಡಿಯುವ ಮಾತಿನಿಂದಲ್ಲ; ರಸನೆ ಸವಿಯುವ ರಸದಿಂದ. ಮಹಮ್ಮದೀಯರನ್ನು ಕಂಡರೆ ಸಹಾನುಭೂತಿಯಿರಲಿ ಎನ್ನುವುದು ಬಯಲಿನ ಮಾತು. ಅದು ಕುರಾನಿನ ಪಠನದಿಂದಲೂ ಉರ್ದೂ ಭಾಷೆಯಿಂದಲೂ ಕುದುರದು. ಪಲಾವು ಮತ್ತು ಬಿರಿಯಾನಿಗಳನ್ನು ತಿನ್ನಿರಿ—ಇದೀಗ ಅದನ್ನು ಸಾಧಿಸುವ ಉಪಾಯ. ಇಂಗ್ಲೀಷರ ಸಾಹಸಕ್ಕೂ ಸಾಹಿತ್ಯಕ್ಕೂ ಬೆರಗಾಗಿ ಅವರಂತಾಗಬೇಕೆಂದು ಎಷ್ಟು ನಟಿಸಿದರೆ ತಾನೆ ಏನು? ಬ್ರೆಡ್, ಬೀರ್, ಜಾಂ, ಹಾಂ, ಇವುಗಳಿಂದ ನಮಗೆ ಆಂಗ್ಲತನ ಪ್ರಾಪ್ತವಾಗಬೇಕೇ ಹೊರತು ಅದಕ್ಕೆ ಬೇರೆ ಮಾರ್ಗವಿಲ್ಲ. ಕಾಫಿ ಕುಡಿಯುವ ಅಭ್ಯಾಸದಿಂದ ನಮ್ಮಲ್ಲಿ ಕುದುರಿರುವಷ್ಟು ಆಂಗ್ಲಮಮತೆ ಮತ್ತೇತರಿಂದ ಆಗಿದೆ, ಬೆರಳು ಮಡಿಸಿರಿ. ಆಪೆಲ್ಸ್ ಮತ್ತು ಕ್ಯಾಬೇಜಸ್ ಇವುಗಳಿಲ್ಲದೆ ಷೇಕ್ಸ್‌ಪಿಯರೂ ಡಿಕನ್ಸೂ ನಮಗೆ ಮಾನ್ಯರಾಗುತ್ತಿದ್ದರೆ? ಆಹಾರ ವೈಷಮ್ಯವಿರುವವರೆಗೂ ಆಂಗ್ಲ

ಆಂಗ್ಲ ; ಭಾರತೀಯ ಭಾರತೀಯ. ಮಹಾತ್ಮರು ಲೋಕಪ್ರಿಯರಾದುದು ಹೇಗೆ —ಅವರ ಆಹಾರ ಸಾಮಗ್ರಿಗಳ ಸರ್ವಲೋಕಪ್ರಿಯತೆಯಿಂದಲ್ಲವೇ ?—ಆಡಿನ ಹಾಲು ಹೊರತು. (ಇದರಿಂದಲೋ ಏನೋ ಅವರಿಗೆ ನಿಗೂಢಾತ್ಮರೆಂದು ಅಪ ಖ್ಯಾತಿ ಬಂದದ್ದು.) ದ್ರಾಕ್ಷಿ, ಖರ್ಜೂರ, ಬಾದಾಮಿ, ಕಿತ್ತಲೇ ಹಣ್ಣು, ಕಡಲೆ ಕಾಯಿ, ಈರುಳ್ಳಿ, ಬೆಳ್ಳುಳ್ಳಿ ಇತ್ಯಾದಿ ಯಾರಿಗೆ ಬೇಡ. ಪಾಕಿಸ್ತಾನಕ್ಕೂ ಆಂಗ್ಲಸ್ಥಾನಕ್ಕೂ ಇರುವ ಮಧುರ ಸಂಬಂಧ ಮತ್ತೇತರಿಂದ ಗೋವು ಮತ್ತು ಗೋಧಿಯಿಂದಲ್ಲದೆ! ಉತ್ತರ ಕರ್ಣಾಟಕವೂ ದಕ್ಷಿಣ ಕರ್ಣಾಟಕವೂ ಒಂದಾಗ ಬೇಕೇ—ಇವರ ಜೀವಾಳ ಭಾಷಣದಲ್ಲಿಲ್ಲ ; ಭಕರಿಯಲ್ಲಿದೆ. ಅಬ್ರಾಹ್ಮಣರಿಗೂ ಬ್ರಾಹ್ಮಣರಿಗೂ ಏಕೆ ವೃಥಾ ಸ್ಪರ್ಧೆ ? ಹೋಟೆಲುಗಳ ಮೂಲಕ ಬ್ರಾಹ್ಮಣಾ ಹಾರಗಳು ಹರಡಿ ಅವರೂ ಮನೋವೃತ್ತಿಯಲ್ಲಿ ಬ್ರಾಹ್ಮಣರೇ ಆಗಿರುವುದರಿಂದ. ಹುಟ್ಟಿನಲ್ಲಿ ಒಂದೇ ತೆರನಾದ ಜೇನುನೊಣಗಳು ರಾಣಿ, ಸೈನಿಕ, ಕಾರ್ಮಿಕ ಎಂದು ಕ್ರಮೇಣ ವಿಂಗಡಗೊಳ್ಳುವುದು ಅವು ಅವು ತಿಂದು ಬೆಳೆಯುವ ಆಹಾರದ ಗುಣ, ಪ್ರಮಾಣ ಮತ್ತು ಪೌಷ್ಟಿಕ ಗುಣದ ವ್ಯತ್ಯಾಸ ಗಳಿಂದ ಅಲ್ಲವೇ? ಹಾಗೆಯೇ ನಮ್ಮ ಈ ವರ್ಣವ್ಯವಸ್ಥೆಯೂ ಕೂಡ. ಹಿಂದೆ ಆಹಾರವೈಷಮ್ಯದಿಂದ ವಿಂಗಡಗೊಂಡಿತು—ಈಗ ಸಾಮ್ಯದಿಂದ ಒಂದಾಗ ಹತ್ತಿದೆ. ಉತ್ತರ ದಕ್ಷಿಣ ಭಾರತಗಳು ಸೌಮನಸ್ಯದಿಂದಿರಬೇಕೇ ? ಹಾಗಾದರೆ ಗೋಧಿ ಮತ್ತು ಅಕ್ಕಿಗಳ ಪರಸ್ಪರ ವಿನಿಮಯವಾಗಲಿ. ಹಾ, ಇಲ್ಲಿದೆ ಕಷ್ಟ. ಅಕ್ಕಿಯ ರುಚಿ ಹರಡಿ ಅದರ ಸ್ಪೃಹೆ ಹಬ್ಬುವಂತೆ ಗೋಧಿಯದು ಹರಡದು ; ಅದರಿಂದ ದಕ್ಷಿಣಕ್ಕೆ ಉತ್ತರದಿಂದ ಬಾಧೆ. ದೋಸೆ ಇಡ್ಲಿಗಳು ಹರಡುವಂತೆ ಹಿಟ್ಟುಭಕರಿಗಳು ರಸನೆಯನ್ನು ಗ್ರಸನಮಾಡವು ; ಅದರಿಂದಲೇ ಒಂದು ಕೋಮಿ ನವರಿಂದ ಮತ್ತೊಂದು ಕೋಮಿನವರಿಗೆ ತೊಂದರೆ, ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಕಿನಿಸು. ಸಂಸ್ಕೃತಿ ಸಂಪನ್ನರಾದ ದುರ್ಬಲರಿಗೆ ಯಾವಾ ಗಲೂ ಆತ್ಮರಕ್ಷಣೆಯಲ್ಲಿಯೇ ಜ್ಞಾನ; ಪ್ರಬಲರಿಗೋ ಆಕ್ರಮಣದಲ್ಲಿಯೇ ವ್ಯಸನ. ಮಸಾಲೆ ದೋಸೆಯ ರುಚಿಯನ್ನು ಕಂಡು ಅದಕ್ಕೆ ವ್ಯಾಮೋಹ ಗೊಳ್ಳುವ ಹಳ್ಳಿಯವನ ವಿಷಯದಲ್ಲಿ ದುರ್ಬಲನೂ ಪರಾವಲಂಬಿಯೂ ರಸಿಕನೂ ಆದ ನಾಗರಿಕನು ಭಯಜನ್ಯವಾದ ವಿಷಾದವನ್ನು ಸೂಚಿಸುವುದೇನು ಸೋಜಿಗ.

ಅವರೆ ಕಾಲ ನಮ್ಮದಲ್ಲ ; ರೈತನದು. ಪ್ರಸಿದ್ಧವಾದ ತುಣಿತ್ರೇಂಗೊಳಲನ್ನು

ತಿಂದು "ಇದೇನೂಂತ ಹಾಕಿದಿರಿ ನಳ್ಳಿಕಾಲು ಆಗಿದ್ದಂಗೈತೆ" ಎಂದು ಗೊಡ್ಡು ಸಾರಿಗೇ ಒಲಿದು, ನಾಗರಿಕನ ವದನಕ್ಕೆ ಸ್ಮಿತವನ್ನೂ ಮನಸ್ಸಿಗೆ ನೆಮ್ಮದಿಯನ್ನೂ ತಂದ ಹಳ್ಳಿಗನ ಕಾಲ ಮುಗಿಯಿತು. ಈಗ ಪಾಕಶಾಲೆ ವಿವಿಕ್ತವಲ್ಲ, ವೈಯಕ್ತಿಕ ವಲ್ಲ. ಅದು ಸಾರ್ವತ್ರಿಕ, ಸಾರ್ವಜನಿಕ. ಈಗ ಹಳ್ಳಿಗನು ನಾಗರಿಕನಾಗುವುದೂ ಹಿಂದೂಗಳೆಲ್ಲಾ ಒಂದಾಗುವುದೂ ತಪ್ಪದು. ಯಾರಿಗೂ ಯಾವ ವೈಶಿಷ್ಟ್ಯವೂ ಉಳಿಯಬಾರದೆಂಬುದು ಈಗಿನ ನಿಯಮ. ಈ ಐಕ್ಯವನ್ನು ಸಾಧಿಸುವುದರಲ್ಲಿ ಮಸಾಲೆ ದೋಸೆ ಅತ್ಯಂತ ಪ್ರಭಾವ ಶಾಲಿಯಾದ ವಸ್ತು. ಈ ಭಕ್ಷ್ಯಾಗ್ರಗಣ್ಯನ ಕಾಲವೂ ಮುಗಿದು ಬಿರಿಯಾನಿಯ ಮುಂಬೆಳಗು ರಸನಾನಭದಲ್ಲಿ ಹೊಗರಿಡು ತ್ತಿದೆಯೋ ಏನೋ—ಕರ್ಣ ಕ್ಷೇತ್ರದಲ್ಲಿ ಈ ಫಾರಸೀ ಹಾಡುಗಳಂತೆ. ಭವಿಷ್ಯ ವನ್ನು ಬಲ್ಲವರಾರು? "ಪಾಕ ತಮ್ಮದಲ್ಲದವರಿಗೆ ಶೋಕ ತಪ್ಪಿದ್ದಲ್ಲ; ನಿಮ್ಮ ಕಿರ್ಚ್ ನಿಮ್ಮದಾದರೆ ಕಮ್ಯೂನಿಸಂ ಏನು ಮಾಡೀತು"—ಇತ್ಯಾದಿ ಗಾದೆಗಳಿಂದ ನಾವು ನಮ್ಮ ನಮ್ಮ ಸಂಸ್ಕೃತಿಗಳನ್ನು ಕಾಪಾಡಿಕೊಳ್ಳಬೇಕಾಗಿದೆ. ಈ ಗಾದೆಗಳ ಬೋಧೆಯಿಂದ ನಮ್ಮ ಬಾಧೆಗಳ ಪರಿಹಾರ ಎಷ್ಟರ ಮಟ್ಟಿಗೆ ಆಗುತ್ತದೋ ಕಾಣೆ.

ಸದ್ಯಕ್ಕೆ, ಬಿರಿಯಾನಿ ಮತ್ತು ಪೋಡ್ಕಗಳ ಕಾಲ ಬರುವವರೆಗೂ, ಕೋಮು ಕೋಮುಗಳಲ್ಲಿ ಸಾಮರಸ್ಯವನ್ನು ಕಲ್ಪಿಸಿ, ಒಬ್ಬರಿಗೆ ಮಾತ್ರ ವಿಶಿಷ್ಟವೆನಿಸದೆ, ರುಚಿ ಕಂಡವರೆಲ್ಲರಿಗೂ ವಿಶಿಷ್ಟವೂ ಇಷ್ಟವೂ ಆಗಿ, ಈ ರಸನಾ ಸಂಸ್ಕೃತಿಯಿಂದ ನಾಗರಿಕ ಜೀವನವನ್ನು ಸುಮಧುರವಾಗಿಮಾಡುವ ರಾಜಪುರಸ್ಕೃತವಾದ ಮಸಾಲೆ ದೋಸೆ ಅಥವಾ ಪಲಾಂಡ್ವಪೂಪವನ್ನು ನಾವು ರಹಸ್ಯವಾಗಿ ಕಂಡುಕೊಂಡಿರುವ ವಿಶ್ರಾಂತಿ ಮಂದಿರದಲ್ಲಿ ಹಳ್ಳಿಗನ ಕಣ್ಣಿಗೆ ಮರೆಯಾಗಿ ಮೆದ್ದು ಸುಖಿಸಿ ಸುಮನಸ್ಕ ರಾಗುವುದು ಉಚಿತವಲ್ಲವೇ?

ಹಗಲು-ಇರುಳು

ಈಗ ಹಿಮಂತ ಋತು. ಹಿಮಮುಗ್ಧವಾದ ಭೂಮಿಗೆ ಸೂರ್ಯೋದಯದ ಅರಿವಿಲ್ಲ. ಶ್ರೀಮುಕ್ತವಾಗುತ್ತಿರುವ ದೇವಾಲಯದ ಪೂಜಾ ಸಮಯಗಳಲ್ಲಿ ಡವಣೆಯ ಧ್ವನಿ ಮಾತ್ರ ಕೇಳಿ ಬರುವಂತೆ, ಪ್ರಭಾತ ಸಮಯದಲ್ಲಿ ಕಾಗೆಗಳ ಧ್ವನಿ ಮಾತ್ರ ಕೇಳಿಬರುತ್ತಿದೆ. ಶುಕಪಿಕಶಾರಿಕಾದಿಗಳ ಮಂಜುಳ ಸ್ವನಸಮೃದ್ಧಿಯಿಂದ ಈಗ ಹಗಲು ಮೊದಲಿಡದು. ಪೂರ್ವಾಹ್ನದ ಬಹು ಭಾಗದವರೆಗೆ ಜೀವಕ್ಕೆ ಇರುಳಿನ ಮಾಯೆ ಹರಿಯದು, ಹಗಲಿನ ಮಾಯೆ ಸಲ್ಲದು.

ಎಷ್ಟು ಮೋಹಕವಾಗಿವೆ ಈ ಕೃಷ್ಣ ಶುಕ್ಲ ಗತಿಗಳು. ಒಂದರಲ್ಲಿ ಸ್ವಪ್ನ, ಮತ್ತೊಂದರಲ್ಲಿ ಜಾಗರ; ಒಂದರ ಭ್ರಮೆ ಮತ್ತೊಂದರ ಪ್ರಮೆ; ಇದರಲ್ಲಿ ವಿಶ್ರಾಂತಿ, ಅದರಲ್ಲಿ ಶ್ರಾಂತಿ; ಇಲ್ಲಿ ಸರ್ವ ತ್ಯಾಗ ಪ್ರಪತ್ತಿ, ಅಲ್ಲಿ ಅಹಂರತಿನಿಷ್ಠ ಪ್ರವೃತ್ತಿ. ಒಂದಿಲ್ಲದೆ ಮತ್ತೊಂದಾಗುವಂತಿಲ್ಲ, ಒಂದರಿಂದ ಮತ್ತೊಂದಕ್ಕೆ ಪ್ರಚಲನೆ. ಗೀತಕ್ಕೆ ನಾದದಿಂದ ನಡೆಯೋ ಅಂತರ ಮೌನದಿಂದ ನಡೆಯೋ? ಹಾಗೆಯೇ, ನಮ್ಮರಿವಿಗೆ ಜಾಗ್ರದವಸ್ಥೆಯಲ್ಲಿ ನಡೆಯೋ ಸುಷುಪ್ತಿಯಲ್ಲಿ ನಡೆಯೋ? ಮಗುವೊಂದು ಈಗ ಪಂಚೆಯನ್ನು ಎಳೆದು ಕೇಕೆ ಹಾಕುತ್ತಾ ನನ್ನ ಗಮನವನ್ನು ಸೆಳೆಯುವುದಕ್ಕೆ ಪ್ರಾರಂಭಿಸಿದೆ. ಅದರ ಎಳನಗೆ ಎಷ್ಟು ಸರಳ, ಎಷ್ಟು ಸುಂದರ, ಎಷ್ಟು ಹಗುರ! ಹಗಲಿನ ಈ ಎಳ ಬೆಳಕು ಅದನ್ನು ಮುಟ್ಟಿ ಮುಟ್ಟಿ ಮೈದಡವಿ ಅದರ ಶೈಶವವನ್ನು ಅದಕ್ಕೆ ಮರಳಿಕೊಟ್ಟಂತೆ ನನಗೆ ಭಾಸವಾಗುತ್ತಿದೆ. ನಿನ್ನೆ ಇರುಳು ಅದು ತನ್ನ ಸುಷುಪ್ತಿಯಲ್ಲಿ ಎಷ್ಟೊಂದು ಗಂಭೀರವಾಗಿ ಕಂಡಿತು. ಆಗ ಅದರ ಭಾವ ಎಷ್ಟು ಗಹನ; ಅದರ ಅರಿವು, ಮೂಲ ಪ್ರಜ್ಞೆಯನ್ನೇ ಸಂಗಮಿಸಿದಂತೆ, ಎಷ್ಟು ಗಂಭೀರ; ಅದು ನಿನ್ನೆ ಮೊನ್ನೆಯದಲ್ಲ, ನನಗಿಂತಲೂ ವಯಸ್ಸಿನಲ್ಲಿ ಹಿರಿಯದು, ನನ್ನನ್ನು ಮುಂಚಿ ನಿಲ್ಲತಕ್ಕದ್ದು, ಪುರಾತನಳಾದ ಈ ವಿಶ್ವಂಭರೆಯ ಯುಗ ಯುಗಗಳ ಅನುಭವದ ಸಾರವನ್ನೆಲ್ಲಾ ಒಳಕೊಂಡು ಮೂರ್ತಿಮತ್ತಾದ ಅವಳ ಪಕ್ವಫಲ ಎಂದು ತೋರಿತಲ್ಲವೆ? ಯೋಗಿಯ ತುರಿಯಾವಸ್ಥೆಗೂ ಅದರ ಪ್ರಸ್ಫುರಜ್ಜೀವದ ಸುಷುಪ್ತ್ಯವಸ್ಥೆಯಲ್ಲಿನ ಪ್ರಶಾಂತ ಮುದ್ರೆಗೂ ವ್ಯತ್ಯಾಸ ಕಂಡಿತೇ? ವಟವೃಕ್ಷದ ಅಡಿಯಲ್ಲಿ ಧ್ಯಾನಸ್ಥನಾದ ಬುದ್ಧ

ನಂತಲ್ಲವೆ ಅದು ತೊಟ್ಟಿಲಲ್ಲಿ ಮಲಗಿದ್ದುದು? ಆ ಸಮೃದ್ಧ ಭಾವನಿಮಗ್ನತೆ ಅದಕ್ಕೆ ಇರುಳು ಕೊಟ್ಟ ವರ; ಈ ಶೈಶವ ಮಧುರ ನಗ್ನತೆ ಅದಕ್ಕೆ ಹಗಲಿತ್ತ ವರ. ಇರುಳಿನಲ್ಲಿ ತಾನು ಯುಗ ಯುಗಗಳಲ್ಲಿ ಸಂಪಾದಿಸಿದ ಅಮೃತವನ್ನು ಹಗಲಿನಲ್ಲಿ ಈ ರೀತಿ ತನ್ನ ಮುಗ್ಧಹಾಸದಿಂದ, ತೊದಲು ನುಡಿಗಳಿಂದ, ಅಂಗಭಂಗಿಗಳಿಂದ, ಲಾಸ್ಯ ತಾಂಡವಗಳಿಂದ, ಅದು ನಮಗೆ ಹಂಚುತ್ತಿರುವಂತೆ ತೋರುತ್ತದೆ. ಹಗಲಿನ ಮಾಯೆ ಹಗಲಿಗೆ, ಇರುಳಿನ ಮಾಯೆ ಇರುಳಿಗೆ.

ಹೌದು, ಹಗಲಿನ ಮಾಯೆ ಹಗಲಿಗೆ ಇರುಳಿನ ಮಾಯೆ ಇರುಳಿಗೆ. ಈಗ ನನ್ನೆದುರಿಗೆ ದಿಟ್ಟವಾಗಿ ನಿಮಿರಿ ನಿಂತು ತನ್ನ ಬಹುಬಾಹುಗಳನ್ನು ದೆಸೆದೆಸೆಗೆ ಚೆಲ್ಲಿ ದಿಗ್ವಿಜಯ ಸೂಚನೆಗೆಂದು ತನ್ನ ಪರ್ಣಪತಾಕೆಗಳನ್ನು ಕಣ್ಣಿಗಿಂಪಾಗಿ ಹಾರಿಸುತ್ತಾ ಕರ್ಣ ಮನೋಹರವಾಗಿ ಮರ್ಮರಿಸುತ್ತಾ ತಾನೇ ತಾನಾಗಿರುವ ಆ ಬಸರಿ ಮರ ನಿನ್ನೆ ಇರುಳು ಅಲ್ಲಿತ್ತೆ? ಈ ಬಯಲಿನ ಹಸಿರೋ? ಹತ್ತಿರದ ಅರಳಿ ಕಟ್ಟೆಯೋ? ಸುತ್ತಲಿನ ಬೇಲಿಯೋ? ಅತ್ತಲಿನ ರಸ್ತೆಯೋ? ಡೇಗೆ ಮುಯ್ಯನೆ ಮೇಲಿನಿಂದ ಕೆಳಗಿಳಿದು ತನ್ನ ಬೇಟೆಯನ್ನು ಎತ್ತಿಕೊಂಡು ಹೋಗುವಂತೆ ಇವುಗಳೆಲ್ಲವುಗಳದರ ವ್ಯಕ್ತಿತ್ವವನ್ನೂ ಇರುಳು ನಿನ್ನೆ ಕೊಂಡೊಯ್ದಿತ್ತಲ್ಲವೆ? ನನಗೂ ಅವಕ್ಕೂ ಕಾರಣಿಕ ಇದ್ದ ಸಂಬಂಧ ಕಡಿದಿತ್ತಲ್ಲವೆ? ಈಗಲೋ ಅವು ಅವು, ನಾನು ನಾನು. ಎಲ್ಲರಂತೆ ಅವಕ್ಕೂ ನನಗೂ ಈಗ ಲೌಕಿಕ ವ್ಯವಹಾರ ಸಾಧ್ಯ. ಈಗ ಆ ರಸ್ತೆ ರಸ್ತೆ, ವೈತರಣಿಯಲ್ಲ; ಅರಳಿಗಿಡ ಭೇತಾಳ ನಿವಾಸವಲ್ಲ; ಬೇಲಿಯ ಗಿಡಗಳು ಭೇತಾಳ ಪರಿವಾರಗಳಲ್ಲ; ಬಸರಿಮರ ಧ್ಯಾನಸ್ಥ ಯೋಗಿಯಲ್ಲ; ಅದು ಇದಾಗಿ, ಇದು ಅದಾಗಿ, ಎಲ್ಲವೂ ಎಲ್ಲವಾಗಿ, ಕೊನೆಗೆ ಇಲ್ಲವೂ ಆಗಿ, ಚಿತ್ರಮುಕ್ತಭಾವನೆಗಳಂತೆ ವಿಹರಿಸುತ್ತಿದ್ದ ಕಾಲ ಮುಗಿಯಿತು. ಈಗ ಹಗಲಿನದು ರಾಜ್ಯಭಾರ. ವಿಶ್ವಯಂತ್ರ ಚಲಿಸತೊಡಗಿದೆ. ಕರ್ಮಸಾಕ್ಷಿ ತೂಕಡಿಸುತ್ತಿಲ್ಲ. ಅಪಹೃತ ವಸ್ತ್ರಗಳನ್ನು ಗೋಪಿಯರಿಗೆ ಕೃಷ್ಣ ಮರಳಿಯೆಸೆದಂತೆ ಅವರವರ ಪರಿಚ್ಛದಗಳನ್ನು ಅವರವರಿಗೆ ಚೆಲ್ಲಿಕೊಟ್ಟು ನಿಶಾಭಗವತಿ ಮರೆಯಾದಳು. ಈಗ ಸೂರ್ಯಪ್ರಭೆಯಿಂದ ಕರ್ಮಪ್ರಜ್ಞೆ ಪ್ರವಹಿಸತೊಡಗಿದೆ. ತದ್ದತ್ತಸ್ಫೂರ್ತಿಯಿಂದ ನಾವು, ಪರದೆಯ ಮೇಲಿನ ಗೊಂಬೆಗಳಂತೆ, ಪರಸ್ಪರ ಚೋದಿತರಾಗಿ ವರ್ತಿಸುತ್ತಿದ್ದೇವೆ. ಎಂಥ ಮಾಯೆ! ನಾನು ಸ್ತಬ್ಧನಾಗಿ ನಿಂತು ಈ ಪ್ರಭಾವಿಷ್ಟ ಜಗತ್ತನ್ನು ದಿಟ್ಟಿಸುತ್ತಿದ್ದೇನೆ. ನನಗೆ ಈ ಮಾಯೆ ಬೆರಗು; ನನ್ನ ನೆರೆಹೊರೆಗೆ

ನಾನು ಬೆರಗು. ಅವರಿಗೆ ಹಗಲಾಯಿತು, ನಾನಿನ್ನೂ ನಿಶಾಗ್ರಸ್ತ.

ಹಗಲಿನ ಈ ಚಲಜಗತ್ತಿನಲ್ಲಿ ನಾನು ಮಾತ್ರ ಸ್ತಬ್ಧ. ನನ್ನದು ಮಾತ್ರ ನಿರರ್ಥಕವಾದ ಶೂನ್ಯದೃಷ್ಟಿ. ಕುದುರೆ ಕೆನೆಯುತ್ತಿದೆ, ಬೆಕ್ಕು ಮ್ಯಾ ಎನ್ನುತ್ತಿದೆ, ಮಂದೆಗೆ ಸೇರುವ ದನವನ್ನು ಕುರಿತು ಕರು ಅಂಬಾ ಎಂದು ಕೊರಲಿನ ಹಗ್ಗವನ್ನು ತುಯ್ಯುತ್ತಿದೆ. ಸೂರಿನ ಬೆಳಗಿಂಡಿಯಿಂದ ಒಳಕ್ಕೆ ತೂರಿ ಚಪಾತಿಯನ್ನು ಕದ್ದು ಓಡುತ್ತಿರುವ ಕೋತಿಯನ್ನು ಗದರಿಸುತ್ತಾ ಬರುವ ಗೃಹಿಣಿ ನಿಶ್ಚಲನೂ ಸಸ್ಮಿತನೂ ಆದ ನನ್ನನ್ನು ದುರದುರನೆ ನಿಟ್ಟಿಸುತ್ತಾಳೆ. ಮಕ್ಕಳು ಚಿಲಿಪಿಲಿಗುಟ್ಟುತ್ತಾ ಶಾಲೆಗೆ ತೆರಳುವುದಕ್ಕೆ ಸನ್ನಾಹಗೊಂಡಿವೆ. ಕಾಗೆ ನಿರ್ಭಯವಾಗಿ ನನ್ನ ಮುಂದಿರುವ ಸಂಡಿಗೆಗಳ ಮೊರಕ್ಕೆ ಕೊಕ್ಕನಿಕ್ಕುತ್ತಾ ಹರಿಸೇವೆಯ ದಾಸಯ್ಯಗಳಂತೆ ಕುಣಿಯುತ್ತಿದೆ. ನಲ್ಲಿಯಲ್ಲಿ ನೀರು ವೃಥಾ ಪ್ರವಹಿಸುತ್ತಿದೆ; ನನಗೆ ತೊರೆಯ ಕನಸು. ನನ್ನ ಪ್ರಜ್ಞೆಯಿನ್ನೂ ಇರುಳಿನ ಮಡಿಲಿನಿಂದಿಳಿದಿಲ್ಲ. ನನಗೆ ಈ ಸೂರ್ಯಪ್ರಭೆ ಹೊರಗು, ಅದರ ಪ್ರಭಾವಕ್ಕೆ ನಾನಿನ್ನೂ ಒಳಗಾಗಿಲ್ಲ. ಆದುದರಿಂದ ಅದರ ಸೂಕ್ಷ್ಮಗಳನ್ನು ಸಾಕ್ಷಿಯಂತೆ ಪರಿಕಿಸಬಲ್ಲೆ. ಈ ಎಲ್ಲ ಚಲನೆಗಳಿಗೂ ಚರ್ಯೆಗಳಿಗೂ ಕಾರ್ಯಕಾರಣ ಸಂಬಂಧವುಂಟು. ಅವು ಅವನ್ನು ಅವು ಅವನ್ನಾಗಿ ಪೃಥಕ್ಕರಿಸಿ ಆಯಾ ಕರ್ಮಪ್ರವೃತ್ತಿಯಲ್ಲಿ ತೊಡರಿಸುವುದು ಈ ಪ್ರಭೆಯ ಕೆಲಸ. ಈಗ ಈ ಲೋಕವನ್ನು ವ್ಯಾಪಿಸಿರುವ ಪ್ರತ್ಯಕ್ಷಾನುಮಾನನಿಷ್ಪನ್ನವಾದ ಅರಿವು ಈ ಪ್ರಭೆಯಿಂದ ಪ್ರವಹಿತವಾದದ್ದು—ಮದ್ಯದಿಂದ ಮತ್ತತೆ ಹೇಗೋ ಹಾಗೆ. "ಇದು ಏಕೆ ಹೀಗೆ?" "ಇದು ಇದರಿಂದ, ಇದಕ್ಕೋಸ್ಕರ, ಹೀಗೆ." ಉದ್ಧತನಾದ ನಿರಂಕುಶನ ಶಾಸನದಂತೆ ಅಥವಾ ದೈವಾವಿಷ್ಟನಿಂದ ಪ್ರವೃತ್ತವಾದ ಶಾಸ್ತ್ರದಂತೆ, ಅಕ್ಷದುಗ್ಧಪ್ರಜ್ಞೆ ಈಗ ವಿಶ್ವ ರಹಸ್ಯವನ್ನು ಮುಗ್ಧಗೊಳಿಸಲು ಯತ್ನಿಸುತ್ತಿದೆ. ನನಗೆ ಕಣ್ಣೇಕೆ ಬಂದಿತು? ಬೆಳಕು ಬೇಕೆಂದಿತು, ಅದರಿಂದಾಗಿ; ತೇಜೋ ವಿಷಯಗಳ ಪೌರೋಹಿತ್ಯಕ್ಕೆ. ವಿಷಯಗಳು ಮೂಡಿದವೆಲ್ಲಿಂದ? ಭೂಮಿಯಿಂದ. ಭೂಮಿ ಎಲ್ಲಿಂದ? ಸೂರ್ಯನಿಂದ. ಬೆಳಕೆಲ್ಲಿಂದ? ಅಲ್ಲಿಂದಲೇ, ಸೂರ್ಯನಿಂದಲೇ! ಪ್ರಭಾಕರನಿಂದಾದ ವಿಷಯವೃಂದವನ್ನು, ಪ್ರಭಾದತ್ತ ಚಕ್ಷುವಿನಿಂದ, ಪ್ರಭೆಯ ಸಹಾಯವಶಾತ್ ಪ್ರತ್ಯಕ್ಷ ಸಿದ್ಧಿ! ಪ್ರತ್ಯಕ್ಷದಿಂದ ಅನುಮಾನ—ಅನುಮಾನದಿಂದ ವಿಜ್ಞಾನ—ವಿಜ್ಞಾನ ಭೂಯಿಷ್ಠವಾದ ಆಧುನಿಕ ಜಗತ್ತಿಗೆ ನಿರಂಕುಶಾಧಿಪತಿ ಆ ಜಗತ್ತಿನ ಋತಪ್ರವರ್ತಕನಾದ ಈ ಅಹಸ್ಕರ. ತಾನೆ ಬೆಳಕು, ತಾನೆ ಕಣ್ಣು,

ಬೆಳಗುತ್ತಿರುವ ವಿಷಯ ಕೂಡ ತಾನೆ; ಇವುಗಳೊಡನೆ ನಮ್ಮರಿವಿನ ನಿಲುವಿನಲ್ಲಿ ತಾನಾಡುವ ಆಟಕ್ಕೆ ಸ್ವಯಂಪ್ರೇರಿತವಾದ ನಿಯಮಗಳು ಬೇರೆ! ಯೋಗಿಯ ಸಮಾಧಿ, ಸಾಮಾನ್ಯರ ಸುಷುಪ್ತಿಯ ಸೌಖ್ಯಯೋಗ, ಕವಿ ಮತ್ತು ಭಕ್ತರ ಆನಂದಯೋಗ, ಈ ಸ್ಥಿತಿಗಳ ಹಂತದಲ್ಲಿ ಕುಳಿತು ಮರವೆಯ ರಾಣಿ ನಿದ್ದೆ ಹಗಲಿನ ಈ ಮಾಯಾವಿಯನ್ನು ನಗದೆ ಏನು ಮಾಡಿಯಾಳು? ಇದೊಂದು ತೆರದ ಇರವು, ಇದಕ್ಕೊಂದು ಅರಿವು, ಇವುಗಳ ಹೊಂದಾವಣೆಗೆ ಈ ಋತಗಳು—ಈ ಋತಗಳನ್ನು ಕಂಡು ಹಿಡಿಯುವ ಅಜ್ಜಿ ಮುಟ್ಟುವಾಟದಲ್ಲಿ ವಿಜ್ಞಾನ ತೊಡಗಿದೆ! ಈ ಗದ್ದಲವೆಲ್ಲಾ ಅದರ ಪಕ್ಷದ ಘೋಷ—"ನಮ್ಮ ಹಕ್ಕಿ ಬಿಟ್ಟೆನೋ ಬಿಟ್ಟೆ, ನಿಮ್ಮ ಹಕ್ಕಿ ಮುಚ್ಚಿಕೊಳ್ಳಿರೋ ಮುಚ್ಚಿಕೊಳ್ಳಿ."

ಆದರೆ ಇರುಳು ಹಗಲಿನಲ್ಲಿ ತನ್ನ ಹಕ್ಕಿಗಳನ್ನು ಮುಚ್ಚಿಕೊಳ್ಳುವ ಮಾಟದ ಬೆರಗೇ ಬೆರಗು. ಆದರ ಒಂದು ಹಕ್ಕಿ ನನ್ನರಿವಿನಲ್ಲಿ ಮರೆಗೊಂಡಿದೆ ಎಂಬ ಸಂಗತಿ ಯಾರಿಗಾದರೂ ಗೊತ್ತಿದೆಯೆ? ಈ ಗೂಹನಕೌಶಲದಿಂದ ಈ ಆಟ ಚೆನ್ನಾಗಿದೆ; ಎದುರು ಪಕ್ಷದ ಚಾತುರ್ಯ ಕಕ್ಕಾಬಿಕ್ಕಿಯಾಗಿದೆ. ಅದು ತುಂಟ ಹಕ್ಕಿ. ತಾನು ಇರುವುದನ್ನು ತಿಳಿಸಿಯೂ ತನ್ನನ್ನು ಪತ್ತೆಮಾಡಲಾರದಿರುವಂತೆ ಪರಪಕ್ಷವನ್ನು ಕೋಟಲೆಗೊಳಿಸುವ ಸ್ವಭಾವ ಅದರದು. ಅದು ಇದ್ದಕ್ಕಿದ್ದ ಹಾಗೆಯೇ "ಆಹಾಹಾ ಚೆಲುವು, ಚೆಲುವು, ಸುಂದರ, ಸುಂದರ" ಎಂದು ಕೂಗಿಡುತ್ತದೆ. ಅದನ್ನು ಮರೆಸುವ ಹಂಬಲದಲ್ಲಿ ನಾನು, ನನ್ನ ನೆರೆಯವರಿಗೆ ಗರಿಕೆಯ ತುದಿಯ ಮೇಲೆ ಮಿನುಗುತ್ತಿರುವ ಇಬ್ಬನಿಯ ಹರಳನ್ನು ತೋರಿ, "ಅದು ಸುಂದರ" ಎನ್ನುತ್ತೇನೆ. ಅವರು ನಿಜವೆಂದು ನಂಬಿ ಸುಮ್ಮನಾಗುತ್ತಾರೆ. ಯಾವುದಾದರೊಂದು ಕಾರಣ ಹೇಳದಿದ್ದರೆ ಅವರಿಗೆ ತೃಪ್ತಿಯಿಲ್ಲ, ನನಗೂ ತೃಪ್ತಿಯಿಲ್ಲ. "ಎಲ್ಲವೂ ಒಂದೇ, ಎಲ್ಲರೂ ಸಮಾನರು, ಎಲ್ಲರನ್ನೂ ನಡೆಸತಕ್ಕಂಥ ಚೈತನ್ಯವೊಂದೇ; ಅದನ್ನು ತಿಳಿಯುವ ಅನುಭವಜ್ಞಾನವೂ ಒಂದೇ; ಈ ತೋರಿಕೆಯೆಲ್ಲಾ ಭ್ರಮೆ; ಕರಣ ವಿಷಯಗಳೆಂದು ಈ ಜಗತ್ತನ್ನು ಬೇರ್ಪಡಿಸಿ ನೋಡತಕ್ಕದ್ದೇ ಅಹಂಕಾರದ ಸ್ವಭಾವ; ಅದೇ ವ್ಯಕ್ತಿತ್ವ ಎನ್ನಿಸಿಕೊಳ್ಳತಕ್ಕದು; ಇದು ಹಗಲಿನ ಚೇಷ್ಟೆ, ಆದರ ಆಟದ ರೀತಿ ಹೀಗೆ; ಆದರೆ ವಸ್ತುಸ್ಥಿತಿ ಹೀಗಲ್ಲ; ಎಲ್ಲ ಒಂದೇ. ಒಂದೇ ಒಂದೇ" ಮತ್ತೊಂದು ಇರುಳಿನ ಹಕ್ಕಿ ಮಹಾ ಚೈತನ್ಯವೊಂದರ ಮರೆಯಲ್ಲಿ ನಿಂತು ಈ ರೀತಿ ಮೊರೆಯುತ್ತದೆ. "ಶುನಿಚೈವ ಶ್ವಪಾಕೇಚ ಪಂಡಿತಾಸ್ಸಮದರ್ಶಿನಃ" ಎಂಬ

ಗೀತಾಚಾರ್ಯನನ್ನು ಅದಕ್ಕೆಯೇ ಜಗತ್ತು ಕೃಷ್ಣನೆಂದು ಕರೆಯಿತು. ಕೃಷ್ಣನೆಂದರೆ ಹಗಲಿನಲ್ಲಿ ಇರುಳಿನ ಮಾಯೆಯನ್ನು ಹರಿಯಗೊಡುವವನು. "ಈ ಜಗತ್ತೆಲ್ಲಿದೆ? ಇಲ್ಲ. ನಾವರಿಯುವುದೆಲ್ಲಾ ಅಸತ್; ಶೂನ್ಯವೊಂದೇ ಸತ್." ನಿಶಾದತ್ತ ಸುಷುಪ್ತಿಯ ಆನಂದದ ಮರೆಯಿಂದ ಈ ಲೋಕವನ್ನು ನೋಡುವವನ ಮನಃಸ್ಥಿತಿಯಿದು; ಜಗತ್ತು ಬುದ್ಧನಾಗುವುದು ಈ ಸುಷುಪ್ತಿಯ ಅವಸ್ಥೆಯಲ್ಲಿ—ಅಥವಾ ಸ್ವ-ಪ್ರಯತ್ನದಿಂದ ನಿಶೆಯನ್ನು ಸಾಕ್ಷಾತ್ಕರಿಸಿಕೊಳ್ಳುವವನ ತುರೀಯಾವಸ್ಥೆಯಲ್ಲಿ. ಹಾಗೆಯೇ, "ಶರಣ್ಯನೊಬ್ಬನೇ, ನಮ್ಮ ಸರ್ವಸ್ವವನ್ನೂ ಅಲ್ಲಿ ನ್ಯಾಸವಿಟ್ಟರೆ ಸುಖ—ಆತನಾರು ಶ್ಯಾಮಸುಂದರನಲ್ಲದೆ" ಎಂಬ ಭಕ್ತನ ಉದ್ಗಾರವೋ—ಅದೂ ಈ ಇರುಳಿನ ಅಧಿದೇವತೆಯ ಒಂದು ಕೊರಲಲ್ಲವೇ? ವಿಷಯವನ್ನು ನಿರಾಕರಿಸಿ, ಸರ್ವಸಮತೆಗಿಳಿದು, ಸರ್ವನ್ಯಾಸ ಪ್ರಪತ್ತಿಯನ್ನು ಪ್ರತಿದಿನವೂ ಅನುಷ್ಠಾನಕ್ಕೆ ತರದ ಜೀವಿಯುಂಟೆ? ಈ ಅನುಷ್ಠಾನದಲ್ಲಿ ಸ್ವಲ್ಪ ನ್ಯೂನತೆಯಿದ್ದರೂ ಆತನಿಗೆ ಸುಖವುಂಟೇ? ಅಂಥವನ ಹಗಲೆಂಥದು—ಇರುಳೆಂಥದು? ಈ ಧ್ಯೇಯ ಸಿದ್ಧಾಂತಗಳೆಲ್ಲ ನಿಶಾದತ್ತಪ್ರಜ್ಞೆಯಿಂದ ಸಮುದ್ಭೂತವಾದುವು. "ಸೋಹಮಹಮಾನಂದೀ" "ತತ್‌ಸತ್" ಎಂಬುದು ಅವರ ಧ್ಯಾನಮಂತ್ರ. ಇದನ್ನು ಪ್ರಚಾರಕ್ಕೆ ತಂದ ಜ್ಞಾನಿಗಳಿಗೆ, ಸಿದ್ಧರಿಗೆ, ಭಕ್ತರಿಗೆ ಹಗಲಿನ ಮಾಯೆ ತಟ್ಟದು. ಹಾಗೂ ತಾರ್ಕಿಕರಿಗೂ, ವಿಜ್ಞಾನಿಗಳಿಗೂ, ಔದ್ಯೋಗಿಗಳಿಗೂ, ರಾಜಕಾರಣಿಗಳಿಗೂ ಇರುಳಿನ ಮಾಯೆ ತಟ್ಟದು. ಇವೆರಡರ ಸಂಧಿ ವೇದಾಂತಿಗಳಲ್ಲಿ, ಭಾಷ್ಯಕಾರರಲ್ಲಿ, ಕವಿಗಳಲ್ಲಿ, ಕಲೆಗಾರರಲ್ಲಿ. ಇವೆರಡರ ಕಣ್ಣುಮುಚ್ಚಾಲೆಯಾಟಕ್ಕೂ ಈ ಜನಗಳ ಅರಿವಿನ ಆಟದ ಬಯಲೇ ನೆರವು. "ನಮ್ಮ ಹಕ್ಕಿ ಬಿಟ್ಟೆನೋ ಬಿಟ್ಟೆ. ನಿಮ್ಮ ಹಕ್ಕಿ ಮುಚ್ಚಿಕೊಳ್ಳಿರೋ ಮುಚ್ಚಿಕೊಳ್ಳಿ." ಹುಡುಕುವಾಟ ಹಗಲಿನದೀಗ—ಇರುಳು ತನ್ನ ಹಕ್ಕಿಗಳನ್ನು ಮುಚ್ಚಿಟ್ಟುಕೊಂಡು ಈ ಆಟವನ್ನು ಚುರುಕಿನಿಂದ ನಡೆಸಬೇಕಾದ ಕಾಲ.

ಈ ಮಧ್ಯಸ್ಥರಲ್ಲೂ ಕೆಲವರಿಗೆ ಹಗಲು ಪ್ರಬಲಿಸುತ್ತಿರುವ ಪ್ರಭಾತದಲ್ಲಿ ಒಲವು, ಮತ್ತೆ ಕೆಲವರಿಗೆ ಇರುಳು ಬಲಿಯುತ್ತಿರುವ ಸಂಜೆಯಲ್ಲಿ ಅನುರಕ್ತಿ. ಸಂಜೆಗೊಲಿವವರ ಪೈಕಿ ನಾನೊಬ್ಬ.

ಈಗ ಸಂಜೆ. ಮೆಲ್ಲಮೆಲ್ಲನೆ ತೊಟ್ಟುತೊಟ್ಟಾಗಿ ರುಚಿ ನೋಡಿನೋಡಿ ಈ ದಿವಾಪ್ರಭೆಯನ್ನು ಹೇಗೆ ಪಾನಮಾಡುತ್ತಿದ್ದಾಳೆ ಈ ನಿಶಾಭಗವತಿ! ಆ

ಬಟ್ಟಲಲ್ಲಿ ಉಳಿಯುವ ಅವಶೇಷಗಳಂತೆ ತಾರೆಗಳು ಕಾಣುತ್ತಿವೆಯಲ್ಲವೆ? ಈಗ ಎಲ್ಲರಿಗೂ ಒಳಗೆ ಬೆಳಕು, ಹೊರಗೆ ಕತ್ತಲು. ಸಮಸ್ತ ಚೈತನ್ಯವನ್ನೂ ಮೂಲಪ್ರಜ್ಞೆಯಲ್ಲಿ ಅದ್ದಿ ತೆಗೆಯಬೇಕೆಂದೇ ಈ ಯಾಮಿನೀ ದೇವತೆ ಯಾಸೆಯೋ? ಮೊದಲು ಕಣ್ಣು, ಆಮೇಲೆ ಕಿವಿ, ಬಳಿಕ ರಸನೆ, ಅನಂತರ ಘ್ರಾಣ, ಕೊನೆಗೆ ಸ್ಪರ್ಶ—ಹೀಗೆ ಒಂದು ಕರಣ ಅಸ್ತವಾಗಿ, ಮತ್ತೊಂದು ಪ್ರಜ್ವಲಿಸಿ, ಕೊನೆಗೆ ಎಲ್ಲವೂ ಶಾಂತವಾಗುವಂತೆಯೂ ಇರವು ಆತ್ಮಾರಾಮವಾಗಿ ಶ್ಯಾಮಸುಂದರನಲ್ಲಿ ಲಯಿಸುವಂತೆಯೂ ಈಕೆ ಏರ್ಪಡಿಸುತ್ತಾಳಲ್ಲವೆ, ಈ ಕೃಷ್ಣ ಸಹೋದರಿ? ಕೋಟಿ ಕೋಟಿ ಹಗಲುಗಳನ್ನು ಬೆಳಗಬಲ್ಲ ಈ ತಾರಗೆಗಳನ್ನು, ತ್ರಿಮೂರ್ತಿಗಳನ್ನು ಶಿಶುಭಾವಕ್ಕಿಳಿಸಿ ತೊಟ್ಟಿಲಲ್ಲಿ ತೂಗಿದ ಅನಸೂಯೆಯಂತೆ, ಹೇಗೆ ತೂಗುತ್ತಿದ್ದಾಳೆ ಈ "ರಾತ್ರಿಯೆಂಬ ಧಾತ್ರಿ". ಇವಳ ಮಾಯೆಯ ಮುಂದೆ ಹಗಲಿನದೆಂಥ ಮಾಯೆ?

ಚಕ್ಷುರ್ಲೋಕವಳಿಯಿತು. ಮರ, ಗಿಡ, ಬಳ್ಳಿ, ಬೇಲಿ, ಬಟ್ಟೆ, ಬಿಡಾರವೆಲ್ಲವೂ ಗುಪ್ಪೆ ಗುಪ್ಪೆಯಾಗಿ ಬಿದ್ದಿರುವ ನಿದ್ದೆಯ ರಾಶಿಯಂತೆ ಕಾಣಬರುತ್ತಿವೆ. ಶ್ರೋತ್ರ ಪರಿಧಿಯಲ್ಲಿ ಜಗತ್ತು ತೇಂಕಾಡ ಹತ್ತಿದೆ. ಒಂದೊಂದಾಗಿ ತನ್ನ ಉಪಾಧಿಗಳನ್ನೆಲ್ಲಾ ನನ್ನ ಜೀವ ಕಳಚಿಡತೊಡಗಿ ಆರಾಮವಾಗುತ್ತಿದೆ. ಇನ್ನು ಮೇಲೆ ನಿದ್ದೆ. ಚಿಂತೆಗಳ ವೇಷದಲ್ಲಿ ಬರುವ ಹಗಲನ್ನು ಅಟ್ಟಿದರೆ ತೀರಿತು—ಅನನ್ಯ ಶರಣತೆ ನನಗೆ ತಾನಾಗಿಯೇ ಪ್ರಾಪ್ತವಾಗುತ್ತದೆ. ಹಾಸಿಗೆಯ ಮೇಲೆ ಮೈಯನ್ನು ಈಡಾಡುವುದು ಎಷ್ಟೊಂದು ಸುಖ. ಮಹಡಿಯ ಮೇಲಕ್ಕೆ ಕೈ ದೀವಿಗೆ ಹಿಡಿದು ಹತ್ತುತ್ತಿರುವವರ ಹಿಂಬದಿಯಲ್ಲಿ ನುಗ್ಗುವ ನೆರಳಂತೆ ಸುಂದರ ಸ್ವರ ಸ್ವಪ್ನಗಳ ನರುಬೆಳಕಿನಲ್ಲಿ ಮೇಲೇರುತ್ತಿರುವ ಚಿತ್ತದ ಹಿಂಬದಿಯಲ್ಲಿ ನನ್ನಿರವನ್ನು ಆಕ್ರಮಿಸುತ್ತಾ ಆಕ್ರಮಿಸುತ್ತಾ ಈ ಸರ್ವದುಃಖೋಪಶಮನಕರೀ ನಿದ್ದೆ ಹೇಗೆ ನುಗ್ಗುತ್ತಿದ್ದಾಳೆ....ನಾನೆಲ್ಲಿ....ಎಲ್ಲಿ....

* * *

ಕಾ-ಕಾ-ಕಾ-ಬೆಳಕು ಹರಿಯಿತು. ನೀನು ತಂದೆ, ನೀನು ಮಗ, ನೀನು ಗಂಡ, ನೀನು ನೌಕರ, ನೀನು ಋಣಿ, ಇಕೊ ನಿನ್ನ ಕಂತೆ, ಇಕೊ ನಿನ್ನ ಬೊಂತೆ, ಎಂದು ಒಂದೊಂದಾಗಿ ನನ್ನ ಬಟ್ಟೆಗಳನ್ನು ನನಗೆಸೆದು ಇರುಳೆನ್ನ ಕೈಬಿಟ್ಟಳು. ಈ ಕೌದಿಯನ್ನು ಹೊದೆದೇಳುವ ನನ್ನದು ಎಂಥ ವಿಚಿತ್ರ ವೇಷ.

ಇದೆಂಥ ಮಾಯೆ!

ಹಿಂದು-ಮುಂದು

ನಡೆಯುತ್ತಿರುವ ಮನುಷ್ಯನ ಕಾಲುಗಳಲ್ಲಿ ಯಾವುದು ಹಿಂದು ಯಾವುದು ಮುಂದು ಹೇಳಬಲ್ಲಿರಾ ? ಈ ದಿನ ಈ ವಿಷಯದಲ್ಲಿ ನನಗೆ ಭ್ರಮೆಯಾಗಿ ನಿರ್ಧಾರಕ್ಕೆ ಬರೋಣವೆಂದು ಅಷ್ಟು ದೂರ ನಡೆದುದಾಯಿತು. ಈಗ ಈ ಹೆಜ್ಜೆ ಮುಂದು, ಇನ್ನೊಂದು ಕ್ಷಣಕ್ಕೋ ಆ ಹೆಜ್ಜೆಯೇ ಮುಂದು. ನಡೆವಾಗ ಹೆಜ್ಜೆ ಹಿಂದು ಮುಂದು ; ನಿಂತಾಗಲೋ ? ಸಮ ! ನೀ ಹಿಂದು ತಾ ಮುಂದು ಎಂದು ಜನ ಹೋರಾಡುತ್ತಿರುವಾಗ ಆ ಜನಾಂಗ ನಡೆಯ ಹತ್ತಿದೆ ಎಂದು ಊಹಿಸಬಹುದಲ್ಲವೆ?

ಮುಂದುಹಿಂದಿನ ಹೊಂದಾವಣೆಯಿಂದಲೇ ಇಂದು ನಡೆಯುತ್ತಿದೆ ಎಂದಮೇಲೆ ಹಿಂದುಮುಂದಿನ ಜಗಳವೇಕೆ ಎಂದು ಒಂದೊಂದು ವೇಳೆ ಎನ್ನಿಸುತ್ತದೆ, ನಿಜ. ಮುಂದಾದುದು ಹಿಂದೆ ಬಿದ್ದು ಅಲ್ಲಿಯೇ ನಿಂತರೂ ನಡೆಯಿಲ್ಲ, ಮುಂದಾದುದರ ನೆರವಿನಿಂದ ಹಿಂದಾದುದು ಮುಂದೆ ಬಾರದಿದ್ದರೂ ನಡೆಯಿಲ್ಲ, ಎರಡೂ ಸಮವಾದರೂ ನಡೆಯಿಲ್ಲ. ಇವುಗಳ ಅವಿರತವಾದ ಹಾಗೂ ಪರಸ್ಪರ ಅವಲಂಬನ ರೂಪವಾದ ಸ್ಪರ್ಧೆಯಿಂದಲ್ಲವೆ ಪ್ರಗತಿ ?

ಸ್ಪರ್ಧೆಯಿಲ್ಲದೆ ನಡೆಯಿಲ್ಲ ; ನಡೆಯಿಲ್ಲದೆ ನಿಟ್ಟಿಲ್ಲ ; ನಿಟ್ಟಿಲ್ಲದೆ ನನಸಿಲ್ಲ. ಇವಿಲ್ಲದಿರುವಾಗ ಇರವಿಗೆ ದಣಿವು ಅಥವಾ ಜಾಡ್ಯ, ಅಥವಾ ಕನವರಿಕೆ ಅಥವಾ ನಿದ್ರೆ. ಈಗ ನಮ್ಮ ದೇಶ ಎಚ್ಚತ್ತಿದೆ. ಅದರ ತುಂಬ ಗದ್ದಲ, ಪಕ್ಷ ವಿಪಕ್ಷ ಪ್ರತಿ ಪಕ್ಷಗಳ ಉದ್ಗಾರಗಳನ್ನು ಕೇಳಿ ಹರ್ಷಗೊಳ್ಳದ ಭಾವುಕರಾರು ? ಈ ಪೈಪೋಟಿಗಳು ಹಿರಿಯರಿಗೆ ಕಳವಳವನ್ನು ತರಬಹುದು, ಆದರೆ ಯುವಕರಿಗೆ ಇವು ಹುರುಪನ್ನು ಕೊಡುತ್ತವೆ. ತರುಣ ಭಾರತ ಎಚ್ಚತ್ತು ನಡೆಯಹತ್ತಿದೆ. ಈ ನಡೆಗೊಂದು ನಿಟ್ಟಿದೆ. ಅದು ಸರ್ವಸಮೃದ್ಧಿ ಎಂಬ ನಿಟ್ಟು. ಎಲ್ಲ ಪಕ್ಷಗಳೂ ಈ ಏಕ ಧ್ಯೇಯವನ್ನೇ ಉಗ್ಗಡಿಸುತ್ತಿವೆ. ಧ್ಯೇಯದ ಉಗ್ಗಡಣೆಯಷ್ಟೇ ಸ್ಪಷ್ಟವಾಗಿ ಅದನ್ನು ನಡೆಸುವ ಉಪಾಯ ಉಪಕರಣಗಳ ಉಗ್ಗಡಣೆಗಳು ನಮ್ಮ ಕಿವಿಯನ್ನು ಮುಟ್ಟುತ್ತಿಲ್ಲ. ಉಪಕರಣಗಳಿಲ್ಲದೆ ಹುರುಡನ್ನು ನಡೆಸುವುದೆಂತು ? ಹುರುಡಿಲ್ಲದೆ ನಡೆಯೆಂತು ? ಹುರುಡುಗಟ್ಟಿ ನಡೆದು ನಿಟ್ಟನ್ನು ತಲಪಿದ ಮೇಲಲ್ಲವೆ ನಡೆನಿಂತು ಸಮಸ್ಥಿತಿಗೆ ಸಲ್ಲುವುದು ? ನಡೆವಾಗ ಹಿಂದಾದುದು ಮುಂದಾಗುವುದೂ,

ಮುಂದಾದುದು ಹಿಂದಾಗುವುದೂ ತಪ್ಪದು. ನಡೆನಿಂತರೆ, ಆಗ ಸಮಾನತೆ, ಅಂದರೆ ಸ್ತಬ್ಧಸ್ಥಿತಿ!

ಹಾಗೆಯೇ ಆಲೋಚಿಸಿದರೆ, ದ್ವಂದ್ವವಿರದೆ ಬದುಕು ಸಾಗಲಾರದು ಎನ್ನಿಸುತ್ತದೆ. ನಡೆಗೆ ಸಾಧ್ಯವಾಗಲೆಂದೇ ಕಾಲು ಎರಡಾಗಿ ಕವಲೊಡೆದು ಒಂದನ್ನೊಂದು ಸ್ಪರ್ಧಿಸುವ ರೀತಿಯನ್ನು ಜೀವಶಕ್ತಿ ನಿರ್ಮಿಸಿಕೊಂಡಿದೆ ಎಂದ ಮೇಲೆ, ಎಲ್ಲ ಧ್ಯೇಯಗಳೂ ತಾವು ಜಾಗೃತವಾಗಿ ತಮ್ಮ ನೆಲೆಗೆ ಸಂಚಾರಗೊಳ್ಳಲು ಪರಸ್ಪರ ಅವಲಂಬಿಗಳಾದರೂ ಸ್ಪರ್ಧಿಷ್ಣುಗಳಾದ ಉಪಾಂಗಗಳನ್ನು ಪಡೆದುಕೊಳ್ಳುವುದಕ್ಕೆ ಹವಣಿಸುತ್ತಿವೆ ಎಂದು ನಾವೇಕೆ ಊಹಿಸಬಾರದು? ಈಗ, ಸ್ವಾಸ್ಥ್ಯ ಅಥವಾ ಭದ್ರತೆ ಎಂಬುದನ್ನು ಉದಾಹರಣೆಗಾಗಿ ತೆಗೆದುಕೊಳ್ಳೋಣ. ಹಿಂಸೆ ಮತ್ತು ಅಹಿಂಸೆ ಅದರ ಉಪಕರಣಗಳು ಎನ್ನಬಹುದು. ಪರಸ್ಪರ ವಿರುದ್ಧಗಳಾದರೂ ಒಂದರ ಸಹಾಯವನ್ನು ಇನ್ನೊಂದು ಅಪೇಕ್ಷಿಸುತ್ತಾ ಹಿಂಸೆಯಾಗಲಿ ಅಹಿಂಸೆಯಾಗಲಿ ನಾ ಹಿಂದು ತಾ ಮುಂದು ಎಂದುಕೊಂಡು ಯಾವುದೂ ಅಲ್ಲೆ ನಿಂತುಬಿಡದ ತೆರದಲ್ಲಿ ನಡೆಯುತ್ತಿದ್ದರೆ ತಾನೇ ದೇಶ ಸ್ವಾಸ್ಥ್ಯದ ನಿಟ್ಟಿನಲ್ಲಿ ನಡೆಯುತ್ತಿದೆ ಎಂದು ನಾವು ಊಹಿಸಬಹುದು? ಇವುಗಳಲ್ಲಿ ಯಾವುದು ಮುಂದಾಗಿ ಅಲ್ಲೆ ನಿಂತರೂ ನಡೆ ಆ ನಿಟ್ಟಿನಲ್ಲಿ ಕುಂಟುತ್ತದೆ, ಇಲ್ಲ ನಿಂತುಹೋಗುತ್ತದೆ. ಇದರ ಹಾಗೆಯೇ ಸಿರಿವಂತಿಕೆ ಎಂಬುದನ್ನು ವಿವೇಚಿಸೋಣ. ಅದು ನಡೆಗೊಳ್ಳಬೇಕಾದರೆ ಲೋಭ ಮತ್ತು ತ್ಯಾಗ ಎಂಬ ಉಪಕರಣಗಳಿಂದ. 'ಕೊಡಿರಿ, ಕೊಟ್ಟು ಬದುಕಿರಿ,' ಎಂಬ ಒಂದೇ ಏಕಪಕ್ಷದ ಕೂಗು ಈ ನಾಡಿನಲ್ಲಿ ಇಂದು ಮೊಳಗುತ್ತಿದ್ದರೆ ಯಾರಿಗೆ ಏನು ಹಿತ? ಅದು ಸಮೃದ್ಧಿಯನ್ನು ಮುಟ್ಟನಿಂತ ಸತ್ಯದೂರವಾದ ಸ್ಥಿತಿಯನ್ನು ನಿರೂಪಿಸುತ್ತದೆಯೇ ಹೊರತು ಆ ಧ್ಯೇಯದಿಂದ ಪ್ರವೃತ್ತವಾಗಿ ಆ ನಿಟ್ಟಿಗೆ ತಲಪುವ ನಡೆಯನ್ನಲ್ಲ. ಹಾಗೆಯೇ, 'ಉಳಿಕೆಯಿಂದಲೇ ಗಳಿಕೆ, ಉಳಿಸಿರಿ, ಉಳಿಸಿಕೊಳ್ಳಿರಿ' ಎನ್ನುವ ಲೋಭದಿಂದ ಪ್ರವೃತ್ತವಾದ ಏಕಮತದ ಉದ್ಗಾರದಿಂದಲೂ ಸಮೃದ್ಧಿಯತ್ತ ನಮ್ಮ ನಡೆ ಸಾಗದು. ಏಕೆಂದರೆ ಇದು ಕಾರ್ಪಣ್ಯದ ಮಾತು. ಸ್ವಾತಂತ್ರ್ಯಕ್ಕೆ ಮೊದಲಿನ ನಮ್ಮ ಕಾಲುಡುಗಿ ನಿಂತ ಸ್ಥಿತಿಗೆ ಇದು ಒಪ್ಪೀತೇ ಹೊರತು ನಮ್ಮ ಕಾಲಮೇಲೆಯೇ ನಾವು ನಿಲ್ಲಬೇಕಾದ ಸದ್ಯದ ಸ್ಥಿತಿಗಲ್ಲ. ಈಗ ಲೋಭ ತ್ಯಾಗಗಳ ಹಿತವಾದ ಸ್ಪರ್ಧೆಯಿಂದ ನಾವು ಸಿರಿವಂತಿಕೆಗೆ ತಲಪಬೇಕಾಗಿದೆ. ಇದೇ ರೀತಿಯಲ್ಲಿ, ಆಸ್ತಿಕ್ಯ ನಾಸ್ತಿಕ್ಯಗಳ ಸಂತತವಾದ

ಹುರುಡಿನಿಂದ ದೈವಭಾವ ಜನದಲ್ಲಿ ಜಾಗೃತವಾಗಿ ನಡೆಗೊಳ್ಳುತ್ತದೆ. ನಂಬುಗೆ ಮತ್ತು ಪರೀಕ್ಷಾ ತರ್ಕಗಳಿಂದ ವಿಜ್ಞಾನ, ಧರ್ಮ ಅಧರ್ಮಗಳ ಸ್ಪರ್ಧೆಯಿಂದ ನೀತಿ, ಪುರಸ್ಕಾರ ತಿರಸ್ಕಾರಗಳಿಂದ ಆತ್ಮಪ್ರತ್ಯಯ, ಜ್ಞಾನಾಜ್ಞಾನಗಳಿಂದ ವಿದ್ಯೆ, ಪುರಾಣ ನವೀನ ಪ್ರೀತಿಗಳಿಂದ ಸಂಸ್ಕೃತಿ, ವಿನಯ ಮತ್ತು ಉಚ್ಛೃಂಖಲಾ ಪ್ರವೃತ್ತಿಗಳಿಂದ ಸ್ವಾತಂತ್ರ್ಯ, ಭಯ ಸಾಹಸಗಳಿಂದ ಕ್ಷೇಮ, ಸತ್ಯಾಸತ್ಯಗಳ ತಿಕ್ಕಾಟದಿಂದ ತತ್ತ್ವ, ಸುಂದರ ಅಸುಂದರಗಳ ಅಹಮಹಮಿಕೆಯಿಂದ ಕಲೆಯ ಆನಂದ—ಇತ್ಯಾದಿ, ಇತ್ಯಾದಿ, ಈ ಪಟ್ಟಿಯನ್ನು ಬೆಳಸುತ್ತಾ ಹೋಗಬಹುದು.

ಆದುದರಿಂದ ರಾಜಕೀಯ ಕ್ಷೇತ್ರದಲ್ಲಿ ದೇಶದ ಹಿತವನ್ನು ಕೋರುವ ಪಕ್ಷ ಪ್ರತಿಪಕ್ಷಗಳ ಘೋಷಣೆಗಳು ಬಗೆಬಗೆಯವೂ ಪರಸ್ಪರ ವಿರುದ್ಧಗಳೂ ಆದಾಗ ಅವು ಪರಾಮರ್ಶಕರ ಕಿವಿಗಳಿಗೆ ಆಹ್ಲಾದವನ್ನು ಕೊಡುತ್ತವೆ; ಎಲ್ಲ ಪಕ್ಷಗಳ ಉಗ್ಗಡಣೆಗಳೂ ಒಂದೇ ಆದಾಗ ಮಾತ್ರ ಮುಂದಿಗೆ ಅಪನಂಬಿಕೆ ಮೂಡತಕ್ಕದ್ದು ನ್ಯಾಯವೇ. ಆ ಪಕ್ಷ ಪ್ರತಿಪಕ್ಷಗಳಲ್ಲಿ ಯಾವುದೂ ಹಿಂದಾಗದಂತೆ ಯಾವುದೂ ಮುಂದಾಗದಂತೆ, ಎಲ್ಲವೂ ಒಂದಾಗದಂತೆಯೂ ಕೂಡ, ಕಾಲಾನುಕಾಲವಾಗಿ ಜಾಗರೂಕತೆಯಿಂದ ಜನ ನಡೆಸಿಕೊಂಡರೆ ಆಗ ಆ ಜನಾಂಗ ಎಚ್ಚೆತ್ತಿರುವ ಜನಾಂಗ. ಆಗ ಅದು ಪ್ರಗತಿಶೀಲ; ಬಾಳುವೆಯ ದಾರಿಯಲ್ಲಿ ದಿಟ್ಟವಾಗಿ ನಡೆದು ನಿಟ್ಟನ್ನು ತಲಪಬಲ್ಲ ಸತ್ವ ಅದಕ್ಕಿದೆ.

ರಾಜಕೀಯದಲ್ಲಿಯೇ ಏಕೆ, ವಿದ್ಯೆ, ಸಂಸ್ಕೃತಿ, ಉದ್ಯೋಗ, ಧರ್ಮ, ಸಂಪ್ರದಾಯ, ಸಾಹಿತ್ಯ, ಕಲೆ, ಇತ್ಯಾದಿ ಕ್ಷೇತ್ರಗಳಲ್ಲೂ ವಿವಿಧ ಘೋಷಣೆಗಳುಳ್ಳ ಅನೇಕ ಪಕ್ಷಗಳನ್ನು ಬೆಳೆಸಿ, ಪೋಷಿಸಿ, ಹುರುಡುಗೊಳ್ಳುವ ಹದಕ್ಕೆ ತಂದು ಬಳಸಿಕೊಳ್ಳುವುದು ನಮಗೆ ಕ್ಷೇಮವಲ್ಲವೆ? ಈ ವೈವಿಧ್ಯವಿಲ್ಲದೆ ಪ್ರಗತಿಯಾಗದು. ಹಲವು ಪಕ್ಷಗಳು ಒಂದೇ ಧ್ಯೇಯವನ್ನು ಉದ್ಘೋಷಿಸುತ್ತಾ ಹೋದರೆ ಅದು ಬರಿಯ ಗುಂಪಿನ ಗದ್ದಲ, ಕಿವಿಗೊಡಲು ತಕ್ಕುದಲ್ಲ.

"ನಮ್ಮ ಧ್ಯೇಯ ದೇಶದ ಭದ್ರತೆ" ಎಂದರೆ ಅದು ಯಾರಿಗೆ ಗೊತ್ತಿಲ್ಲ. "ನಾವು ದೇಶದ ಭದ್ರತೆಯನ್ನು ಸೈನ್ಯ ವಿಸರ್ಜನದಿಂದ ಸಾಧಿಸುತ್ತೇವೆ" ಕೇಳತಕ್ಕ ಕೂಗಿದು. ಗಾಂಧೀಜಿಯವರು ಹೀಗೆ ಉಗ್ಗಡಿಸಲಿಲ್ಲವೇ? "ನಾವು ದೇಶ ರಕ್ಷಣೆಗಾಗಿ ಸೈನ್ಯ ಸಂಗ್ರಹಣದಲ್ಲಿ ನಿರತರಾಗಿದ್ದೇವೆ" ಇದೂ ಸಕಾಲದಲ್ಲಿ ಮನ್ನಿಸತಕ್ಕ ಘೋಷಣೆ. "ನಾಡಿನಲ್ಲಿ ಎಲ್ಲರೂ ವಿದ್ಯಾವಂತರಾಗಬೇಕು. ಅದು

ನಮ್ಮ ಧ್ಯೇಯ." ಇದನ್ನು ಯಾರು ಅರಿಯರು? "ನಾವು ನಮ್ಮ ಈಗಿನ ಶಾಲೆಗಳಲ್ಲಿ ಕಲಿಯುವುದಕ್ಕಿಂತ ಅಲ್ಲಿ ಕಲಿತುದನ್ನು ಮರೆಯುವುದೊಳ್ಳೆಯದು—ಈ ಮರವೆಯಿಂದಲೇ ನಮ್ಮ ವಿದ್ಯಾಬುದ್ಧಿಗಳು ಕುದುರುತ್ತವೆ; ಆದುದರಿಂದ ಸದ್ಯಕ್ಕೆ ನಮ್ಮ ಧ್ಯೇಯ ಶಾಲೆಗಳನ್ನು ತೆರೆಯುವುದಲ್ಲ, ಮುಚ್ಚುವುದು." ಭಲೆ, ಈ ಪಕ್ಷದಲ್ಲಿ ಹುರುಳಿದೆ! ನನ್ನ ಮತ ಅದು! "ಪ್ರತಿಯೊಂದು ತಾಲ್ಲೂಕಿನಲ್ಲಿಯೂ ನಾವು ಕಾಲೇಜುಗಳನ್ನು ತೆಗೆದು ಇಂಗ್ಲೀಷು ವಿದ್ಯೆಯನ್ನು ಹರಡುತ್ತೇವೆ, ನಮಗಿರಲಿ ನಿಮ್ಮ ಬೆಂಬಲ" ಈ ಕೂಗಿಗೂ ಬೆಲೆಕೊಡುವವರುಂಟು, ಕಾಲ ಬಂದಾಗ ನಾವೂ ಕೊಡೋಣ. ಹೀಗೆಯೇ ಸ್ಪಷ್ಟ ಧ್ಯೇಯೋಪಕರಣಗಳ ಘೋಷಣೆಗಳಿಗೆ ಜನ ಕೊಡಬೇಕಾದ ಆಯಾ ಕಾಲಕ್ಕೆ ತಕ್ಕ ಪ್ರೋತ್ಸಾಹ ಪುರಸ್ಕಾರ ತಿರಸ್ಕಾರಗಳಿಂದ ನಾಡ ಸಿರಿ ಸಮೃದ್ಧಿ ಸ್ವಾಸ್ಥ್ಯದತ್ತ ನಡೆಯುತ್ತದೆಯೇ ಹೊರತು ಬರಿಯ ಧ್ಯೇಯ ಘೋಷಣೆಗಳಿಂದಲ್ಲ.

ದೃಷ್ಟಿಯಿಡಬೇಕಾದದ್ದು ಆ ಧ್ಯೇಯ ನಿರ್ವಹಣಕ್ಕಾಗಿ ಆಯಾ ಪಕ್ಷಗಳು ಮಂಡಿಸುವ ಉಪಾಯ ಉಪಕರಣಗಳ ಮೇಲೆ. ಅವು ಎಷ್ಟು ವಿರುದ್ಧವಾಗಿದ್ದರೆ ಅಷ್ಟು ವಿಶ್ವಾಸಾರ್ಹ. ಏಕೆಂದರೆ ಹುರುಡಿಲ್ಲದೆ ನಡೆಯಿಲ್ಲ, ನಡೆಯಿಲ್ಲದೆ ನಿಟ್ಟೊ ಇಲ್ಲ. ಉಪಕರಣಗಳಿಲ್ಲದೆ ಗೊತ್ತು ಗುರಿಯನ್ನರಿಯದ ಪಕ್ಷಗಳನ್ನು ಕಟ್ಟಿಕೊಂಡೇನು? ಈ ವಿಚಾರದಲ್ಲಿ ನಿಮಗೆ ಸಂಶಯಗಳಿದ್ದರೆ ಅನೇಕ ಶತಮಾನಗಳಿಂದಲೂ ಗೆಲುವಿನ ನಿಟ್ಟಿನಲ್ಲಿಯೇ ಸಾಗುತ್ತಿರುವ ಇಂಗ್ಲೆಂಡಿನ ಬಾಳುವೆಯ ಚರಿತ್ರೆಯನ್ನು ಓದಿರಿ. ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಔದ್ಯೋಗಿಕ, ಸಾಹಿತ್ಯಕ ಕ್ಷೇತ್ರಗಳಲ್ಲಿ ಆ ನಾಡಿನವರ ನುಡಿಗಳನ್ನು ಪರಿಶೀಲಿಸಿರಿ. ಅಷ್ಟೇಕೆ ನಮ್ಮ ಭಾರತದ ಸಂಸ್ಕೃತಿ ಇದುವರೆಗೆ ಹೇಗೆ ನಡೆದು ಬಂದು ಬದುಕಿದೆ ಎಂಬುದನ್ನು ವಿವೇಚಿಸಿರಿ. ಇದು ಕಷ್ಟವಾದರೆ, ಎದ್ದು ಅಷ್ಟು ದೂರ ನಡೆದು ಹೋಗಿ ನಿಮ್ಮ ಹೆಜ್ಜೆಗಳನ್ನು ಗಮನಿಸಿರಿ. ಒಂದನ್ನೊಂದು ನೆಮ್ಮಿಕೊಂಡೇ ಹಿಂದುಮುಂದಾಗುತ್ತಾ ಹುರುಡಿನಿಂದ ಅವು ಮುಂದುವರಿವ ಬೆರಗನ್ನು ನೋಡಿರಿ; ಇಂಥ ಅಂಗಗಳನ್ನು ಪಡೆದು ಈ ಗತಿಯನ್ನು ನಡೆಸುವ ಜೀವಶಕ್ತಿಯ ಚಲನೇಚ್ಛೆಗೆ ಮೋಹಗೊಂಡು, ನಿಮ್ಮ ಧ್ಯೇಯಗಳನ್ನೂ ಅವನ್ನು ನಡೆಗೊಳಿಸುವ ಉಪಾಂಗಗಳನ್ನೂ ಅವನ್ನು ಹುರಿದುಂಬಿಸಿ ಹುರುಡಿಸುವಂತೆ ಮಾಡುವ ಉಪಾಯಗಳನ್ನೂ ಚಿಂತನೆ ಮಾಡಿರಿ. ಆ ಚಿಂತನೆಯ ಫಲವಾಗಿ ಜನಪ್ರಗತಿಯಾಗಲಿ.

ಓಟಿನ ಓಟ

"ನಿನ್ನ ದಾರಿ ಅತ್ತ ನನ್ನ ದಾರಿ ಇತ್ತ" ಎಂದು ಬೆನ್ನಿಗೆ ಬೆನ್ನಂಟಿಸಿ ನಿಂತು ಬಿರ್ರನೆ ಹೊರಟವರು ಸ್ವಲ್ಪ ಸಮಯದ ಮೇಲೆ ಮುಂದಲೆಗಳು ಬೋರೆಯಾಗುವ ಹಾಗೆ ಡಿಕ್ಕಿ ಹೊಡೆದು ಮುಖಾಮುಖಿಯಾಗಿ ನಿಲ್ಲಬೇಕಾದರೆ ಭೂಮಿ ಗುಂಡಾಗಿರ ಬೇಕಲ್ಲವೆ ? ಆಕಾಶ ಗುಂಡಗೆ, ಭೂಮಿ ಗುಂಡಗೆ, ಸೂರ್ಯಚಂದ್ರರೂ ಗುಂಡಗೆ, ಗ್ರಹಗಳೂ ಗುಂಡಗೆ ; ಇವುಗಳ ಹಾಗೆ ರಾಜಕೀಯ ಕ್ಷೇತ್ರವೂ ಗುಂಡಗೇ ಇದೆಯೇನೋ. ಎಲ್ಲ ದೇಶಗಳೂ ಅವುಗಳಲ್ಲಿನ ಆಳುವ ಪಕ್ಷಗಳೂ ಪ್ರತಿಪಕ್ಷಗಳೂ ಸಹ, ತಮ್ಮ ತಮ್ಮ ನಾಡಿನ ಜನಗಳನ್ನು ದಷ್ಟಪುಷ್ಟರಾಗಿ, ಎಂದರೆ, ಗುಂಡಗೆ, ಮಾಡುವುದರಲ್ಲಿ ಆಸಕ್ತವಾಗಿವೆ. ಬೇರೆ ಬೇರೆ ದಾರಿ ಹಿಡಿದ ರಷ್ಯಾ ಅಮೆರಿಕಾಗಳು ಈಗ ಮುಖಾಮುಖಿಯಾಗಿ ನಿಂತಿರುವುದು ರಾಷ್ಟ್ರಧ್ಯೇಯಗಳೂ ವೃತ್ತಗಳೆಂಬುದನ್ನೇ ಸಾರುತ್ತದೆ. ಮುಖಾಮುಖಿಯಾಗಿ ನಿಂತವರು ಕಾಳಗವನ್ನಾದರೂ ಮಾಡಬಹುದು, ಇಲ್ಲ ಕೈಕೈ ಕುಲುಕಿ ಗೆಳೆಯರಾದರೂ ಆಗಬಹುದು, ಇಲ್ಲ ಮೋರೆ ಮೋರೆಯನ್ನು ಓರೆಯಾಗಿ ನೋಡಿ ತಮ್ಮ ತಮ್ಮ ದಾರಿಯನ್ನು ತಾವು ಹಿಡಿಯಲೂಬಹುದು ; ಹೇಗಾದರೂ ಒಬ್ಬರನ್ನೊಬ್ಬರು ಸಂಧಿಸದೆ ವಿಧಿಯಿಲ್ಲ. ಭಾರತೀಯ ರಾಜಕೀಯ ವಲಯದಲ್ಲಿ ಈಗ ಅಂಥ ಸಂಧಿಕಾಲವೊದಗಿದೆ. ಬೀದಿಯ ತುಂಬ ಓಟಿನ ಗದ್ದಲ.

ಈ ಗದ್ದಲ ಕೇಳಿದಾಗ ನನಗೇಕೋ ರೇಶಿಮೆ ಹುಳದ ನೆನಪು ಬರುತ್ತದೆ. ಅದಕ್ಕೆ ರೆಕ್ಕೆಗೊಂಡು ಹಾಯಾಗಿ ಹೂವಿಂದ ಹೂವಿಗೆ ಹಾರಾಡಬೇಕೆಂಬಾಸೆ ; ಇದರ ಸನ್ನದ್ಧತೆಗಾಗಿಯೇ ಅದು ತನ್ನೊಡಲ ನೂಲಿಸಿಂದಲೇ ತನಗೊಂದು ಕ್ಷೇಮಕ್ಷೇತ್ರವನ್ನು ನಿರ್ಮಿಸಿಕೊಳ್ಳಹತ್ತಿದೆ. ಪ್ರಜೆಗೆ ತನ್ನ ಓಟು ಅಂಥ ರೇಶಿಮೆಯ ಎಳೆ, ಅದರಿಂದ ತಾನು ನಿರ್ಮಿಸುವ ಸರ್ಕಾರ ತನ್ನ ಕ್ಷೇಮಕ್ಷೇತ್ರವೆಂದು ಅದರೆಣಿಕೆ ; ಕುದಿಯುವ ನೀರಿನ ಅರಿವು ಅದಕ್ಕಿಲ್ಲ. ಜನರೇಕೆ ತಮ್ಮ ಬಲೆಯನ್ನು ತಾವೇ ಹೆಣೆದುಕೊಂಡು ಅದರಲ್ಲಿ ಸಿಕ್ಕಿಬೀಳುವುದಕ್ಕೆ ಇಷ್ಟು ಸಂಭ್ರಮಗೊಳ್ಳುತ್ತಾರೋ ನನಗೆ ತಿಳಿಯದು. ಬೇಡುವವನು ಈಗ ವಾಮನ ; ಮುಂದೆ ತಲೆಯ ಮೇಲೆ ಕಾಲಿಟ್ಟು ತುಳಿಯುವವನು ಅವನೇ ; ಈಗ ಯಾಚಕನಾಗಿರು

ವವನು ಮುಂದೆ ರಾಜ. ಇಬ್ಬರಿಗೂ ಪರದುಃಖದ ಅರಿವಿಲ್ಲ ಎಂದು ಸಂಸ್ಕೃತದ ಸುಭಾಷಿತವೊಂದು ತಿಳಿಸುತ್ತದೆ. ಆದುದರಿಂದ ಸರ್ಕಾರದಿಂದ ಜನಗಳ ದುಃಖೋಪಶಮನವಾಗುತ್ತದೆ ಎಂಬುದು ಬರಿಯ ಭ್ರಾಂತಿ; ಋಷಿಗಳೇ ಆಳಲಿ, ರಾಜ ರಾಮನಾದರೂ ಆಗಲಿ ಜನಕನಾದರೂ ಆಗಲಿ, ಆಳಿಸಿಕೊಳ್ಳುವುದು ಸುಖವಿಲ್ಲ. ಆದರೆ ಓಟು ಕೊಡಿ ಎಂಬವನು ನನ್ನನ್ನು ನಿಮ್ಮ ಅರಸನನ್ನಾಗಿ ಮಾಡಿಕೊಳ್ಳಿ ಎನ್ನುತ್ತಾನೆ! ಬೇಡುವವರಿಗೆ ಇಲ್ಲ ಎನ್ನುವುದು ನಮ್ಮ ಹಿರಿಮೆಗೆ ತಕ್ಕುದಲ್ಲ. ಆದರೆ ನಾವು ಭಿಕಾರಿಗಳಾಗುವಷ್ಟು ಕೊಡಬಾರದು, ಅಷ್ಟೇ ಇದರ ರಹಸ್ಯ. ಜನತೆ ಪ್ರಭುಶಕ್ತಿ ತಮ್ಮಲ್ಲಿ ಸಾಕಷ್ಟು ಉಳಿಯುವಂತೆ ಬ್ಯಾಂಕ್ ಬ್ಯಾಲೆನ್ಸ್ ಅನ್ನು ನೋಡಿಕೊಂಡು ದಾನ ಮಾಡುವುದು ಶ್ರೇಯಸ್ಕರ. ತನ್ನೊಡಲ ನೂಲಿನಿಂದ ರೇಶ್ಮೆ ಹುಳಕ್ಕೆ ಆತಂಕವೇ ಹೊರತು ಕಣಜದ ಹುಳುವಿಗಲ್ಲ. ಪ್ರಜೆಗಳು ಕಣಜದಂತಿರುವುದು ಲೇಸು. ತಮ್ಮ ನಾಡಿನಲ್ಲಿ ಪ್ರಜಾಪ್ರಭುತ್ವವನ್ನು ನಡೆಸಲು ಅಂಥ ಜನಸಮುದಾಯವೇ ದಕ್ಷ. ಹೊಳಪಿಲ್ಲದ, ಪುಡಿನೂಲಿನ, ಆದರೆ ತನ್ನ ಕ್ಷೇಮಕ್ಕೆ ಅನುಕೂಲವಾದ, ಸರ್ಕಾರವನ್ನು ತನ್ನೊಳಗಿನಿಂದ ತಾನು ರಚಿಸಬಲ್ಲುದೇ ಭಾರತಪ್ರಜೆ? ಅದೀಗ ಈಗಿನ ಪ್ರಶ್ನೆ.

ಯೋಗಿಗೆ ಹೇಗೆ ತನ್ನ ಮೈಯೋ ಹಾಗಿರಬೇಕು ಸರ್ಕಾರ, ಮೇಲ್ಮೆಗೆಳಸುವ ಸ್ವಾತಂತ್ರ್ಯಪ್ರಿಯ ಜನಕ್ಕೆ. ಮೈಗೆ ಮೋಹಗೊಳ್ಳುವ ಮನುಷ್ಯ ಹೇಗೆ ತನ್ನ ಶ್ರೇಯಸ್ಸನ್ನು ಸಾಧಿಸಿಕೊಳ್ಳಲಾರನೋ ಹಾಗೆ ಯಾವ ಎಂಥ ಸರ್ಕಾರಕ್ಕಾದರೂ ಮೋಹಗೊಳ್ಳುವ ಮನುಷ್ಯ ಯಾವ ಉನ್ನತಿಯನ್ನೂ ಪಡೆಯಲಾರ. ತನ್ನ ಶರೀರವನ್ನು ತನ್ನ ಇಚ್ಛೆಗೆ ಪಳಗಿಸಿಕೊಳ್ಳುವುದೂ ಒಂದು ಮಹಾ ವಿದ್ಯೆಯೇ. ದೇಹ ಅರೋಗವಾಗಿಯೂ ದೃಢವಾಗಿಯೂ ಕಷ್ಟಸಹಿಷ್ಣುವಾಗಿಯೂ ಹಗುರವಾಗಿಯೂ ಇರಬೇಕು; ತಕ್ಕ ಅನ್ನ, ತಕ್ಕ ಪಾನ, ತಕ್ಕ ಉಡಿಗೆ ತೊಡಿಗೆಗಳು, ತಕ್ಕ ಶ್ರಮ ಮತ್ತು ವಿಶ್ರಾಂತಿ ಇವು ಅದನ್ನು ಒಳ್ಳೆಯ ಹದದಲ್ಲಿಡುತ್ತವೆ. ಹಾಗೆಯೇ ಪ್ರಜೆ ತನ್ನ ಸರ್ಕಾರವೆಂಬ ಮೈಯನ್ನು ತನಗನುಕೂಲವಾಗುವಂತೆ ಪೋಷಿಸಬೇಕು, ದುಡಿಸಬೇಕು, ದಣಿಸಬೇಕು, ದಂಡಿಸಬೇಕು. ಬೇಕಾದರೆ ಪ್ರಕೃತಿ ಚಿಕಿತ್ಸಕರನ್ನು ಕೇಳಿ, ಸುಡು ಸುಡು ಬಿಸಿನೀರಿನಲ್ಲಿ ಮೈಯನ್ನು ಮೀಯಿಸಿ ಮರುಕ್ಷಣ ತಣ್ಣಗೆ ನೀರಿನಲ್ಲಿ ಅದ್ದಿದರೆ ಅದು ಬಲು ಹುರುಪುಳ್ಳದ್ದಾಗುತ್ತದೆಯಂತೆ. ದಿವಾನ್ ಶೇಷಾದ್ರಿಐಯ್ಯರ್ ಅವರು ದಿನವೂ ಹಾಗೆ

ಮಾಡುತ್ತಿದ್ದಂತೆ! ಹಾಗೆ ನಾವು ನಮ್ಮ ಸರ್ಕಾರವನ್ನೂ ಬಿಸಿನೀರಿನಲ್ಲಿ ಅದ್ದಿ ತಣ್ಣೀರಿನಲ್ಲಿ ಮುಳುಗಿಸಲು ಹಿಂಜರಿಯಬಾರದು. ನಮಗೆ ಬೇಕಾದುದು ಆಲಸ್ಯ ಕಾತರಗಳಿಲ್ಲದ ಸುದೃಢವಾದ, ವಿದ್ಯಾವಿನಯಭೂಷಿತವಾಗಿ ಯಾವ ಮೋಹಕ್ಕೂ ಒಳಗಾಗದೆ ಸದಾ ಜಾಗೃತವಾಗಿರುವ ಅಹಂಕಾರ ಗರಳರಹಿತವಾದ ಸರ್ಕಾರ. ಇಂಥ ಶರೀರಸದೃಶವಾದ ಆಡಳಿತವನ್ನು ರಚಿಸಿಕೊಳ್ಳುವ ಮತ್ತು ಸರ್ಪದಂತೆ ಆಗಾಗ ತನ್ನ ಪೊರೆಯನ್ನು ಕಳೆದುಕೊಂಡು ಹುರುಪನ್ನು ಗಳಿಸಿ ಕೊಳ್ಳುವ ಜಾಣತನ ನಮಗಿದೆಯೆ? ಈ ಓಟನ ಗದ್ದಲ ನಮಗಿರಬಹುದಾದ ಅಲ್ಪ ಸ್ವಲ್ಪ ಕೌಶಲವನ್ನೂ ಅದನ್ನು ಕುದುರಿಸುವ ಅವಧಾನವನ್ನೂ ಕೆಡಿಸುತ್ತಿದೆ. ತರಬೇತಿಲ್ಲದ ಸೈನ್ಯವನ್ನು ಸೆರೆಕುಡಿಸಿ ರಣರಂಗಕ್ಕೆ ಅಟ್ಟುವಂತೆ ಪಕ್ಷವಿಪಕ್ಷಗಳ ಅರ್ಥವಿಲ್ಲದ ಧ್ಯೇಯ ಘೋಷಣೆಗಳೂ ಡಂಗುರಗಳೂ ನಮಗೆ ಬುದ್ಧಿಭ್ರಮಣೆ ಯನ್ನು ತಂದು ಓಟನ ಬೂತುಗಳಿಗೆ ನಮ್ಮನ್ನಟ್ಟುತ್ತಿವೆಯೋ ಎನ್ನುತ್ತೇನೆ.

ಆದರೆ ಈ ಪಕ್ಷಗಳು ತೋರಿಕೆಗೆ ಎಷ್ಟೇ ವಿರುದ್ಧವಾಗಿ ಕಂಡರೂ ಒಂದು ವೃತ್ತಕ್ಕೆ ಪೋಣಿಸಿಕೊಂಡು ಭ್ರಮಿಸುತ್ತಿರುತ್ತವೆ ಎಂಬುದನ್ನು ನಾವು ಕಂಡು ಕೊಂಡಿದ್ದೇವೆ. ಅವು ಗೋಜಿಕೊಂಡರೆ ಅಷ್ಟು ಸ್ವತಂತ್ರರಾಗುವುದಕ್ಕೆಬಯ ಸುವ ನಮ್ಮಂಥವರಿಗೆ ಎಷ್ಟೋ ಲೇಸು. ವಿಧಾನಮಂಡಲದಲ್ಲಿ ಎಲ್ಲರೂ ಏಕ ಮುಖವಾಗಿರುವುದು ನಮ್ಮ ವಿಪತ್ಕಾಲಗಳಲ್ಲಿ ಒಳ್ಳೆಯದೇ ಹೊರತು ನೆಮ್ಮದಿಯ ಕಾಲದಲ್ಲಲ್ಲ. ಜನಕ್ಕೆ ಪ್ರಭುಶಕ್ತಿ ತಮ್ಮಲ್ಲಿಯೇ ಹೆಚ್ಚಾಗಿ ಉಳಿಯಬೇಕೆಂಬಾಸೆ ಯಿದ್ದರೆ ವಿಧಾನಮಂಡಲದಲ್ಲಿ ಅಜ್ಞ-ತಜ್ಞರ ಗೊಂದಲವೆಬ್ಬಿಸುವುದೊಂದೇ ಮಾರ್ಗ; ಈ ಗದ್ದಲಕ್ಕೆ ಆ ಗೊಂದಲವೇ ಮದ್ದು. ಇಲ್ಲದಿದ್ದರೆ ಈ ಕ್ಷಿಪ್ರಕಾರೀ ಯುಗದಲ್ಲಿ ಸ್ವತಂತ್ರವಾಗಿಯೂ ನೆಮ್ಮದಿಯಾಗಿಯೂ ಬದುಕುವುದು ಯಾರಿಗೂ ಕಷ್ಟ. ಬ್ರೇಕಿಲ್ಲದ ಕಾರಿನಲ್ಲಿ ಪ್ರಯಾಣ ಮಾಡಲು ಯಾರು ಬಯಸುತ್ತಾರೆ? ಆದುದರಿಂದ ನಿಮ್ಮ ಓಟು ಯಾರಿಗೆ? ಗೊಂದಲಿಗರಿಗೆ!

ಜಯ ಹಿಂದ್, ಜಯ ಜನತೆ.

ಅಸ್ತ-ಉದಯ

ಈಗ ಭಾರತದಲ್ಲಿ ಬಹೂದಯದ ಸಮಯ. ಹಾಗಾದರೆ ಈ ವೇಳೆಯೆಂಥದು? ಹಗಲೋ ಇರುಳೊ? ಹಗಲಾದರೆ ಆಕಾಶಕ್ಕೆಲ್ಲ ರವಿಯೊಬ್ಬ; ಇರುಳಾದರೆ ಬಾನಿನ ತುಂಬ ನಕ್ಷತ್ರಗಳು! ಎಂಥ ಆಶ್ಚರ್ಯವಿದು,—ಏಕೋದಯ ಬಹೂದಯವನ್ನು ಘೋಷಿಸುತ್ತಾ ವೈದೋರಿ ಅವುಗಳ ಅಸ್ತವನ್ನೇ ಸಾಧಿಸುತ್ತದೆ! ಬಹೂದಯದ ವೇಳೆಯಲ್ಲೋ, ಏಕಮೇವಾದ್ವಿತೀಯನಾದ ರವಿ ಮುಳುಗಿಯೇ ಮುಳುಗಬೇಕು. ಅಸ್ತವಿಲ್ಲದೆ ಉದಯವಿಲ್ಲ. ಇದು ಪ್ರಕೃತಿಯೊಂದು ಲೀಲೆ.

ಒಂದೊಂದು ಅಸ್ತದಲ್ಲಿ ಒಂದೊಂದು ಉದಯವನ್ನು ಕಂಡು ಆಲೋಚನಾ ಕ್ಷೇತ್ರದಲ್ಲಿ ಗುರುತಿಸಿ ಪಟಗತ ಮಾಡುವ ಸಮೀಕ್ಷಣ ಚತುರರಿಗೆ ನಮ್ಮಲ್ಲಿ ಕೊರತೆಯಿಲ್ಲ. ಬಹೂದಯವಾಗಬೇಕಾದರೆ ಯಾವ ಯಾವವು ಮುಳುಗಿಹೋಗ ತಕ್ಕವು? ಪಾಶ್ಚಾತ್ಯರ ಅಸ್ತದಿಂದ ಪೌರಸ್ತ್ಯೋದಯ; ಕೌಲೀನರ ರಾಜ್ಯಭಾರ ವ್ಯವಸ್ಥೆಯ ಅಸ್ತದಿಂದ ಔದ್ಯೋಗಿಕರ ಉದಯ; ಔದ್ಯೋಗಿಕರ ಅಸ್ತದಿಂದ ಕಾರ್ಮಿಕರ ಉದಯ; ಹೃದಯಾಸ್ತದಿಂದ ಬುಧ್ಯುದಯ; ಆಶ್ರಮಿಕಾಸ್ತದಿಂದ ನಾಗರಿಕೋದಯ; ಮತ ಸಮಾಪ್ತಿಯಿಂದ ಧರ್ಮೋದಯ; ವರ್ಣ ನಿರಸನ ದಿಂದ ವರ್ಗೋದಯ; ವರ್ಗ ನಿರಾಕರಣದಿಂದ ಸಾಮಾನ್ಯತೆಯ ಉದಯ–ಹೀಗೆ ಅವರವರೊಲವಿನಂತೆ ಈ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು. ಈ ಉದಯಾಸ್ತಗಳ ಖಂಡನ ಮಂಡನಗಳಿಂದ ತಮ್ಮ ತಮ್ಮ ಬುದ್ಧಿಯ ಪ್ರಖರತೆಯನ್ನು ಪ್ರದರ್ಶಿಸಲೂಬಹುದು. ಅಂತೂ ಉದಯಕ್ಕೆ ಹಿಗ್ಗದ, ಅಸ್ತಕ್ಕೆ ತಲ್ಲಣಗೊಳ್ಳದ ಹೃದಯಗಳಿಲ್ಲ. ಈಗಣ ಬಹೂದಯ ಯಾವ ಮಹಾಸ್ತದ ಕಂಬನಿಯ ಕಡಲಿನಲ್ಲಿ ನಮ್ಮನ್ನು ಅದ್ದುತ್ತದೋ ಎಂದು ಅಧೀರ ಹೃದಯರು ಪರಿತಪಿಸುವುದು ಸಹಜ.

ಇದು ಸಂದಿಗ್ಧ ಸಮಯ. ಈಗ ಭಾರತದಲ್ಲಿ ಇರುಳ ತುಂಬ ನಕ್ಷತ್ರಗಳು. ಸ್ವತಂತ್ರರಾದ ಪ್ರಜೆಗಳೇ ತೇಜೋರಜೋ ರಾಶಿ, ಅವರಿಂದ ಸಿಡಿದೊಡೆಯುವ ಸಭ್ಯರೇ ನಕ್ಷತ್ರಗಳು, ವಿವಿಧ ಪಕ್ಷಗಳೇ ತಾರಾ ಪುಂಜಗಳು. ಇವುಗಳನ್ನು ನಿರೀಕ್ಷಿಸುತ್ತಾ ನಿರೀಕ್ಷಿಸುತ್ತಾ ಮಹದಾನಂದ ಪಡುತ್ತಿರುವ ಭಾವುಕರು ಪ್ರಶಾಂತವಾದ ನಿಶೆಯಲ್ಲಿ ವಿಶ್ರಾಂತರಾಗಿದ್ದಾರೆ. ಅವರ ಚಿತ್ತ ಈ ಸಭ್ಯರ ಮೆರುಗಿಗೆ ಬೆರಗು

ಗೊಂಡಿದೆ. ಕೆಲ ತೀಕ್ಷ್ಣಮತಿಗಳು ತಮ್ಮ ದೂರದರ್ಶಿಗಳನ್ನು ಅತ್ತ ಕಡೆ ತಿರುಗಿಸಿ ಉಲ್ಕಾಪಾತ ಶಿಲಾಪಾತಗಳನ್ನೂ ಧೂಮಕೇತುಗಳನ್ನೂ ಊಹಿಸ ತೊಡಗಿದ್ದಾರೆ. ಈಗ ಭಾರತದಲ್ಲಿ ಬಯಲು ತುಂಬ ಬೆಳಕಿಲ್ಲ; ಇರಳು ತುಂಬ ನಕ್ಷತ್ರಗಳು. ಹೀಗೆ, ತಮಸ್ಸೂ ವಿಜೃಂಭಿಸಿರಲು, ತಾವೂ ವಿಜೃಂಭಣೆಯಿಂದ ಬೆಳಗುತ್ತಿರುವ ಈ ದೂರದ ಚುಕ್ಕೆಗಳು ಸಾಕೆ, ಅಥವಾ ಆ ತಮಸ್ಸನ್ನೂ, ಈ ಚುಕ್ಕಿಗಳನ್ನೂ ನುಂಗಿ ಬೆಳಗುವ ಒಬ್ಬ ಖರಕರನ ಉದಯ ಬೇಕೆ?

ಆದರೆ, ಒಂದು ಮುಳುಗಿದಲ್ಲದೆ ಮತ್ತೊಂದು ಏಳದೆಂಬ ಸಿದ್ಧಾಂತದ ಪೇಚಿಗೆ ನಾವೇಕೆ ಸಿಕ್ಕಿ ನರಳಬೇಕು? ನಮಗೆ ಬೇಕಾದುದು ಸರ್ವೋದಯ. ಗ್ರೀಷ್ಮದಲ್ಲಿ ಇರುಳು ಚೆನ್ನು. ಮಾಗಿಯಲ್ಲಿ ಹಗಲು ಚೆನ್ನು. ಸ್ವಾತಂತ್ರ್ಯದ ಉದಯ ಅನೇಕರ ಸಣ್ಣಪುಟ್ಟ ಸುಖ ಸಂಮೋದಗಳನ್ನು ನುಂಗಿರಬಹುದು; ನಮಗದು ನಿಜವಾಗಿಯೂ ದುಃಖಾಂತವಾದುದು. ಗಾಂಧೀ ರವಿ ಅಸ್ತನಾದರೂ ನೆಹ್ರೂ ಚಂದ್ರ ನಮ್ಮ ನಭದಲ್ಲಿ ಬೆಳಗುತ್ತಿದ್ದಾನೆ; ಶಾಖವಿಲ್ಲದಿದ್ದರೂ ನರುಬೆಳಕಿದೆ; ಹಳ್ಳ ತಿಟ್ಟುಗಳು ಯಥಾಪ್ರಕಾರವಿದ್ದರೂ ಸಮದ ತೋರಿಕೆಯಿದೆ. ಆಕಾಶದಲ್ಲಿ ತಾರೆಗಳು ವಿಪುಲವಾಗಿ ತೋರದಂತೆ ಬೆಳುದಿಂಗಳು ಅವುಗಳನ್ನು ಪ್ರಭಾವಿಸಿದೆ. ಶಿಶಿರ ಕಳೆದು ವಸಂತ ಬರಬರುತ್ತಾ ಇದರ ಆಹ್ಲಾದ ಹೆಚ್ಚಬಹುದು. ಭಾರತ ಭಾಗ್ಯವಿಧಾತ ಈ ಸುಧಾಂಶುವಿನ ಮೂಲಕ ನಮ್ಮ ಸುಖೋದಯದ ಪೈರುಗಳನ್ನೆಲ್ಲ ಪೋಷಿಸುತ್ತಾ ಇದ್ದಾನೇನೋ. ಈ ನಂಬಿಕೆಯಲ್ಲಿ ನಾವು ನಮ್ಮ ನಮ್ಮ ಸ್ವಾಭಿಮಾನವನ್ನು ಆದಷ್ಟು ಅಸ್ತ ಮಾಡಿಕೊಂಡು ದೇಶಾಭಿಮಾನಕ್ಕೆಡೆಗೊಡುತ್ತಾ, ಸ್ವಾಹಂಕಾರ ಖಂಡನೆಯಿಂದ ಜನಾಂಗದ ಅಹಂಸತ್ತ್ವವನ್ನು ಕುದುರಿಸುತ್ತಾ ಪರಸ್ಪರ ಸದ್ಭಾವನೆಯಿಂದ ವರ್ತಿಸಿ ಸರ್ವೋದಯ ಲೋಕಬಾಂಧವನ ಉದಯವನ್ನು ನಿರೀಕ್ಷಿಸುವುದು ಸಂಗತವಲ್ಲವೆ?

ತಲೆಯೋ ಹೊಟ್ಟೆಯೋ!

ಒಳ್ಳೆಯ ಲೇಖನವೊಂದನ್ನು ಬರೆಯಬೇಕೆಂದು ಹವಣಿಸುವ ಯಾವ ಲೇಖಕನ ಕೈ ತಾನೆ ತಲೆಯಮೇಲಕ್ಕೆ ಹೋಗದು? ತಲೆಗೆ ಕೈಯಿಡದವನ ಲೇಖನವನ್ನು ಓದಿ ತಾನೆ ಏನು ಪ್ರಯೋಜನ? ಆಲೋಚನಾ ತರಂಗಗಳು ತಲೆಯಿಂದ ಕೈಗಿಳಿದು ಲೇಖನಿಯ ಮೊನೆಯಿಂದ ಕಾಗದದಮೇಲೆ ಉರುಳುವಂತೆ ಮಾಡುವುದೂ ಒಂದು ಕಲೆಯೇ ಸರಿ. ಮೊದಲು ಶಿರದಮೇಲೆ ಕೈಯಾಡಿಸಿ, ಹಣೆಯನ್ನು ತಿಕ್ಕಿ, ಎಡಗೈಯ ನಡುಬೆರಳು ತೋರುಬೆರಳುಗಳನ್ನು ಗಲ್ಲಕ್ಕೂ ಕೆನ್ನೆಗೂ ನಡುವಣ ಗುಳಿಯಲ್ಲಿ ನೆಟ್ಟು, ತೊಡೆಗೆ ಮೊಳಕೈಯೂರಿ, ಬಲಗೈಯಲ್ಲಿ ಲೇಖನಿ ಹಿಡಿದು ಕಾಗದದಮೇಲೆ ಕೂರಿಸಿದರೆ ಹೇಳಬೇಕಾದದ್ದು ಕಂಟದ ತುದಿಗಿಳಿದರೂ ಇಳಿಯಿತೇ, ಅದೃಷ್ಟವಿದ್ದರೆ. ಹೀಗೆ ಮಾಡಬೇಕಾದರೆ ಹೆಗಲಿನಮೇಲೆ ತಲೆ ಇರಬೇಕಾದುದೂ ಆವಶ್ಯಕ. ತಲೆ ಹೆಗಲಿನ ಮೇಲಲ್ಲದೆ ಮತ್ತೆಲ್ಲಿದ್ದೀತು ಎಂದು ಕೇಳುವಿರೇನೋ. ಆ ವಿಷಯದಲ್ಲಿ ನನಗೆ ಸಂದೇಹ ಬಂದಿದ್ದರಿಂದಲೇ ಈ ಬರಹಕ್ಕೆ ತೊಡಗಿ ಮೊದಲು ತಲೆಯಮೇಲೆ ಕೈಯಾಡಿಸಿದೆ.

ನಿಜವಾಗಿ ನನ್ನ ಹೆಗಲಿನಮೇಲೆ ನನ್ನ ತಲೆಯಿದ್ದ ಸಮಯಗಳು ಬಹಳ ವಿರಳ ಎಂದು ನನಗೀಗ ಅನ್ನಿಸಹತ್ತಿದೆ. ಈ ವಿಷಯದಲ್ಲಿ ಮಿಕ್ಕವರ ಭಾವನೆ ಏನೋ ಕಾಣೆ. ಗತ್ತಿನಿಂದ ಎದೆಯನ್ನು ಚಾಚಿ ತಿರುವಲಾರದ ಕೊರಲಿನ ಮೇಲೆ ಒಂದು ಠೀವಿಯಲ್ಲಿ ತಲೆಯನ್ನು ಮೆರಸುತ್ತಾ ಮೇಲೆಯಾಗಲಿ ಅಕ್ಕಪಕ್ಕಗಳನ್ನಾಗಲಿ ನೋಡದೆ ಸೌಧಗಳಲ್ಲಿನ ಕೈಸಾಲೆಗಳಲ್ಲಿ ತಿರುಗಾಡುವ ಸ್ತ್ರೀ ಪುರುಷ ರಾಷ್ಟ್ರಕರಿಗೆ ತಮ್ಮ ತಲೆ ತಮ್ಮ ಸ್ಕಂಧಗಳಮೇಲೆ ಸ್ಥಿರವಾಗಿ ನಿಂತಿರುವುದರಲ್ಲಿ ಸಂದೇಹ ವಿನಿತಿರಲಾರದು. ಭ್ರಮೆಗೊಳಗಾಗಿರುವವರೆಗೂ ಭ್ರಮೆಯೇ ಪ್ರಮೆ. ನನ್ನ ಸ್ನೇಹಿತರೊಮ್ಮೆ ಹೇಳಿದಂತೆ, ಬಂಗಾರದೊಡನೆ ಗೀಲೀಟೂ ತಾನೂ ಬಂಗಾರವೆಂದುಕೊಂಡೇ ನಡೆಯುತ್ತಲೇ ಇರುತ್ತದೆ. ಯಾರಿಗೆ ತಲೆಯಿದೆ ಯಾರಿಗಿಲ್ಲ ಎಂದು ನಿಖರವಾಗಿ ಹೇಳುವ ತಲೆ ತಾನೆ ಎಲ್ಲಿದೆ?

ಆದರೆ, ತಲೆನೋವೆಂದು ತಲೆಯಮೇಲೆ ಕೈಯಿಟ್ಟಾಗ ಮಾತ್ರ ತನಗೆ ತಲೆಯಿದೆ ಎಂಬ ಪರಿವೆ ಎಲ್ಲರಿಗೂ ಬರುವುದು ಸಹಜ. ಈ ಕಾಲದಲ್ಲಿ ಯಾರಿಗೆ ತಲೆ

ನೋವಿಲ್ಲ? ಅದೊಂದು ಬಹು ವ್ಯಾಪಕವಾಗಿರುವ ವ್ಯಾಧಿ. ಬೀಡಿ ಬೆಂಕಿಪೊಟ್ಟಣ ಕಡ್ಡಿ ಪುಡಿಗಳ ಚಿಲ್ಲರೆ ಅಂಗಡಿಗಳಲ್ಲೂ ಆಸ್ಪ್ರೋ ಮಾತ್ರೆಗಳು ದೊರೆಯಬೇಕಾದರೆ ಈ ಜಗತ್ತಿನಲ್ಲಿ ತಲೆನೋವು ಎಷ್ಟು ಹರಡಿರಬೇಕು, ಆಲೋಚಿಸಿರಿ. ಅದೊಂದರಿಂದಲೇ ಈಗ ಸಾಮಾನ್ಯವಾಗಿ ಎಲ್ಲರಿಗೂ ತಮಗೆ ತಲೆಯಿದೆ ಎಂಬ ಅರಿವಾಗುತ್ತಿರುವುದು. ನಮ್ಮ ಶರೀರದಲ್ಲಿ ಯಾವುದಾದರೂ ಅಂಗ ಅಸ್ವಸ್ಥವಾದಾಗಲೇ ಅದಕ್ಕೆ ಪ್ರಾಮುಖ್ಯ. ತಲೆನೋವು ಬಂದಾಗಲೇ ತಲೆ ನಮಗೆ ಪ್ರಮುಖಾಂಗ; ಇಲ್ಲದಿದ್ದ ವೇಳೆಯಲ್ಲಿ ಅದೊಂದು ಉದರೋಪಾಂಗ, ಅಷ್ಟೆ. ಅದಕ್ಕೆ ತನ್ನದೇ ಆದ ವಿಶಿಷ್ಟ ಅಸ್ತಿತ್ವವಿಲ್ಲ. ಅದು ತಾನೂ ಒಂದು ಸ್ವತಂತ್ರಾಂಗ ಅಂದುಕೊಂಡಾಗಲೆಲ್ಲ ನಮಗೆ ತಲೆನೋವು! ಯಾವುದೋ ಒಂದು ಅದಮ್ಯ ಪ್ರಕೃತಿ ಶಕ್ತಿ ನಮ್ಮೆಲ್ಲರ ತಲೆಗಳನ್ನೂ ನಮ್ಮ ಹೊಟ್ಟೆಯೊಳಕ್ಕೆ ಅದುಮುತ್ತಿರುವಂತೆ ನನಗೆ ತೋರಹತ್ತಿದೆ. ಹೀಗಿಲ್ಲದಿದ್ದರೆ ನಮ್ಮ ಕಛೇರಿಗಳಲ್ಲಿನ ಸಿಬ್ಬಂದಿಗಳಲ್ಲೇಕೆ ಇಷ್ಟು ಆಲಸ್ಯ ಅತೃಪ್ತಿ, ಅಧಿಕಾರ ವರ್ಗದವರಿಗೆ ತಂತಮ್ಮ ಕರ್ತವ್ಯಗಳಲ್ಲಿ ಇಷ್ಟು ಬೇಸರ ಧೋರಣೆ, ಕಾರ್ಖಾನೆಗಳಲ್ಲೇಕೆ ಎಲ್ಲರ ಮುಖಗಳಲ್ಲೂ ಇಷ್ಟು ಶುಷ್ಕ ಜಡತೆ, ಸಭೆಗಳಲ್ಲೇಕೆ ಇಷ್ಟು ನಿಸ್ಸಭ್ಯತೆ, ಶಾಲೆಗಳಲ್ಲೇಕೆ ಗುರು ಶಿಷ್ಯರಿಬ್ಬರಲ್ಲೂ ಪಾಠ ಪ್ರವಚನಗಳಲ್ಲಿ ಅನಾಸ್ಥೆ, ಕಲಾಶಾಲೆಗಳಲ್ಲೇಕೆ ನಿರಾನಂದ, ರಾಷ್ಟ್ರೋತ್ಸವಗಳಲ್ಲಿ ನಿರುತ್ಸಾಹ, ಎಲ್ಲರಿಗೂ ಏನೋ ಒಂದು ತರದ ನಿಸ್ಸುಖಭಾವ, ನಿಸ್ತೇಜಸ್ಕತೆ, ಕಾರ್ಪಣ್ಯ? ಇವರಲ್ಲಿ ಯಾರೊಬ್ಬರ ಅಂಗಗಳೂ ತಂತಮ್ಮ ಸ್ವಭಾವಕ್ಕೆ ತಕ್ಕ ಸಂಸ್ಕಾರ ಪಡೆದು ಸ್ವ-ಕುಶಲವೃತ್ತಿಯಲ್ಲಿ ನಿರತವಾಗಿ ತಮತಮಗೆ ವಿಶಿಷ್ಟವಾದ ಕರ್ತವ್ಯಗಳನ್ನು ನಿರ್ವಹಿಸುತ್ತಿಲ್ಲ; ಅಂಥ ಅವಕಾಶಗಳನ್ನೂ ಪಡೆಯುತ್ತಿಲ್ಲ. ಆದರಿಂದ ಈ ಅಸ್ವಸ್ಥತೆ. ಎಲ್ಲರೂ ಎಲ್ಲೆಲ್ಲಿಯೂ ಉದರಮುಖರು.

ಮುಗ್ಧ ಮತದಾರ ವರ್ಗ ರಾಜ್ಯಯಂತ್ರನಿರ್ವಾಹಕರ ತಲೆಗಳನ್ನು ಅವರ ಭುಜದ ಮೇಲಿರಗೊಡುವುದಿಲ್ಲ; ಹೊಟ್ಟೆಯೊಳಕ್ಕೆ ನೂಕುತ್ತಿದೆ. ಈ ಮಂಡಲದವರ ಕೈಗಳು ತಮ್ಮ ಕೈಕೆಳಗಿನವರ ತಲೆಯನ್ನು, ಈ ಕೆಳಗಿನವರು ತಮ್ಮ ಕೈಗೆ ಅಳವಟ್ಟವರ ತಲೆಗಳನ್ನು, ಅವರೋ ತಮ್ಮ ಪ್ರಭಾವಕ್ಕೆ ಸಿಕ್ಕಿದವರ ಶಿರಗಳನ್ನು; ಕೊನೆಗೆ ಯಾರ ಬಾಹುಸ್ಫುರಣಗಳಿಂದ ಉಚ್ಚ ಸ್ಥಾನದಲ್ಲಿರುವವರ ತಲೆ ಉದರಮುಖವಾಗಿದೆಯೋ ಅವರ, ಎಂದರೆ, ಶ್ರೀ ಸಾಮಾನ್ಯರ ತಲೆಗಳನ್ನೇ ಈ ಕೊನೆಯ ಹಂತದವರು ಅದುಮುತ್ತಾ ಈ ಚಕ್ರ ಪೂರ್ಣಗೊಳ್ಳುತ್ತಿದೆ. ಒಬ್ಬರ ತಲೆಯನ್ನು

ಅವರ ಹೊಟ್ಟೆಯೊಳಕ್ಕೆ ಮತ್ತೊಬ್ಬರು ತುರುಕುವುದರಲ್ಲೇ ನಿರತರು. ಇದೊಂದು ಮೋಹಕ ದೃಶ್ಯ. ಯಾರಿಂದ ಯಾರೂ ಬಿಡಿಸಿಕೊಳ್ಳುವ ಹಾಗಿಲ್ಲ.

ಹೀಗೆ ತಮ್ಮ ಪ್ರಕೃತಿಗೆ ವಿರುದ್ಧವಾಗಿ ರಾಜತಂತ್ರಜ್ಞರು, ವಿದ್ವಾಂಸರು, ಕವಿಗಳು, ಶಿಲ್ಪಿಗಳು, ಕಲೆಗಾರರು, ಸಂಗೀತಜ್ಞರು, ಶಾಸಕರು, ನಿಯಂತ್ರಕರು, ಗುರುಗಳು, ವಿದ್ಯಾರ್ಥಿಗಳು, ಸಭ್ಯರು, ಸಂಘಗಳು, ತಮ್ಮ ತಲೆಗಳಲ್ಲಿ ಆ ವಿಶ್ವ ಚೈತನ್ಯ ಹದುಗಿಸಿಟ್ಟಿರುವ ತಮತಮಗೆ ವಿಶಿಷ್ಟವಾದ ಅದ್ಭುತ ಕೌಶಲಗಳನ್ನು ಅದುಮಿಟ್ಟು, ತಂತಮ್ಮ ತಲೆಗಳನ್ನು ತಂತಮ್ಮ ಹೊಟ್ಟೆಯೊಳಕ್ಕೆ ನೂಕುತ್ತಿರುವುದೂ ನೂಕಲು ಬಿಡುವುದೂ ಎಂಥ ಘೋರದೃಶ್ಯ! ನಮ್ಮ ನಾಡು ಇಂಥ ಕಬಂಧಗಳಿಂದಲೇ ತುಂಬಿರುವಂತೆ ನನಗೆ ಕಾಣಹತ್ತಿದೆ. ನಾನೂ ಇಂಥ ಒಬ್ಬ ಕಬಂಧ. ನನ್ನ ತೀರ್ಥರೂಪರೇನೋ ತಮ್ಮ ಹೆಗಲ ಮೇಲೆ ತಮ್ಮ ತಲೆಯನ್ನಿರಿಸಿಕೊಂಡಿದ್ದರು. ಹಿರಿಯರ ಪುಣ್ಯ. ಉದರಕ್ಕೆ ಅಷ್ಟಾಗಿ ಗಮನಕೊಡದೆ ಆ ಅಂಗವನ್ನು ಸ್ವತಂತ್ರವಾಗಿ ಬೆಳಸಿದುದರ ಕಷ್ಟಕಾರ್ಪಣ್ಯ ಅವರಿಗೆ ಗೊತ್ತಿತ್ತು. ತಮ್ಮ ಪಾಡನ್ನೇ ತಮ್ಮ ಮಕ್ಕಳಿಗೂ ಯಾರು ಬಯಸುತ್ತಾರೆ! ಆದುದರಿಂದ ಬಾಲ್ಯದಲ್ಲಿಯೇ ನನ್ನ ತಲೆಯನ್ನು ನನ್ನ ಹೊಟ್ಟೆಯೊಳಕ್ಕೆ ತುರುಕುವ ಯಂತ್ರಾಗಾರದ ವಶಕ್ಕೆ ನನ್ನನ್ನೊಪ್ಪಿಸಿಬಿಟ್ಟರು. ಅಂದಿನಿಂದ ಅದು ವಂಶಾನುಗತ ಸ್ವಭಾವವನ್ನು ಅನುಸರಿಸಿ ಮೇಲಕ್ಕೂ ಸಾಮಾಜಿಕ ಮತ್ತು ಸಾಂಸ್ಕಾರಿಕ ಪರಿಸ್ಥಿತಿಗಳನ್ನು ಅನುಸರಿಸಿ ಕತ್ತಿನ ಕೆಳಕ್ಕೂ ಜಗಿದಾಡಹತ್ತಿದೆ.

ಜನ ತಮ್ಮ ತಲೆಯನ್ನು ತಮ್ಮ ಕೊರಲಿನ ಮೇಲಿರಿಸಿಕೊಳ್ಳುವುದೊಂದು ತಪಸ್ಸೇ ಸರಿ. ಅದರ ಫಲ ರಸಿಕತೆ, ವೈದಗ್ಧ್ಯ, ಸದ್ಗೃಹಸ್ಥ ಜೀವನ, ತೇಜಸ್ವಿತೆ, ಗಾಂಭೀರ್ಯ, ಸ್ವತಂತ್ರ ಜೀವನ, ಮತ್ತು ಅದರ ಹೊಣೆಯನ್ನು ಹೊರಲು ತಕ್ಕ ಅವಕಾಶಗಳನ್ನು ಕಲ್ಪಿಸುವ ವಿದ್ಯಾಪೂರ್ಣವೂ ಸುಸಂಸ್ಕೃತವೂ ಮೌಲ್ಯಾನುವರ್ತಿಯೂ ಆದ ಸಮಾಜದ ರಚನೆ. ಆದರೆ ಆಗಿನ ನಮ್ಮ ಆಳರಸರ ಹವಣಿಕೆಯೇ ಬೇರೆ. ಅವರಿಗೆ ಹೊಟ್ಟೆಯಲ್ಲಿ ತಮ್ಮ ತಲೆಯನ್ನು ಹದುಗಿಸಿಕೊಂಡು, ಬಿದ್ದೆಡೆಯೇ ಬಿದ್ದು, ಹೊಟ್ಟೆಯಲ್ಲೇ ತಮ್ಮೇಕಾಕ್ಷಿಯನ್ನು ತಿರುವುತ್ತಾ, ತಮ್ಮ ಹಸಿವೆಗಳನ್ನು ಅಡಗಿಸಿಕೊಳ್ಳಲು ಅವಕಾಶವಿದ್ದೆಡೆಗಳಲೆಲ್ಲ ತೋಳುಗಳನ್ನು ಚಾಚುತ್ತಾ, ಸಿಕ್ಕಿದ್ದನ್ನು ಬಾಚುತ್ತಾ ಬಾಳು ಹೊರೆಯುತ್ತಿರುವ ಕಬಂಧಗಳಿಂದ ನಮ್ಮ ಸಮಾಜ ತುಂಬಿರಬೇಕೆಂಬುದೇ ಆಸೆ. ಎಲ್ಲ ಜೀವಿಗೂ ಹೊಟ್ಟೆ ಪ್ರತಿಷ್ಠಿತಾಂಗ, ಬಹು

ಕಾಲದ್ದು ; ತಲೆಯೋ ಆಧುನಿಕ, ನವ್ಯ ಆಗುಂತಕ. ಉದರದ ದುರ್ದಮ್ಯವಾದ ಆಕರ್ಷಣ ಶಕ್ತಿಗಿದುರಾಗಿ ತಲೆ ಎಂತು ಸೆಟೆದು ತನ್ನಷ್ಟಕ್ಕೆ ತಾನೆ ನಿಲ್ಲಬಲ್ಲುದು ? ಈ ರಹಸ್ಯವನ್ನು ನಮ್ಮ ಸ್ವಾತಂತ್ರ್ಯಹರರು ಬಲ್ಲರು. ಅದು ಆಗಿನ ಮಾತು ; ಅದು ಈಗಿನ ಮಾತೂ ಆಗಬೇಕೇ. ನಮ್ಮ ದುರದೃಷ್ಟ !

ಈ ಕಬಂಧಾಕೃತಿ ಘೋರವಾದದ್ದು ; ನಡೆಯಲಾಗದೆ ನಿಡಿದಲ್ಲದ ತೊಡೆಗಳು, ಒಂದು ಮಟ್ಟದಲ್ಲಿ ವರ್ತುಲಾಕಾರವಾಗಿ ಸುತ್ತುತ್ತಿರುವ ನಿಡಿದಾದ ತೋಳು ಗಳು, ಹೊಟ್ಟೆಯು ಗವಿಯಂಥ ಬಾಯಿ, ಅದರಲ್ಲಿ ಕೋರೆಹಲ್ಲುಗಳು ಹೊರ ಚಾಚಿವೆ. ಮಲಗಿದ್ದಲ್ಲಿ ತೋಳುಗಳನ್ನು ಆಡಿಸುತ್ತಾ, ಸಿಕ್ಕಿದ್ದನ್ನು ಕಬಳಿಸುವ ವೃತ್ತಿ ಅದಕ್ಕೆ. ಇರುವ ಜಾಗ ಕಿರಿದು, ಸಿಕ್ಕುವ ಅನ್ನ ಅಲ್ಪ, ಬಾಹು ಪ್ರಸ್ಫಾರಣ ಮಾತ್ರ ಈ ಎಲ್ಲ ಕಬಂಧಗಳಿಗೂ ಅನಲ್ಪ. ನಾಡಿನ ಸಂಘಸಭೆ ಕೂಟಗಳಲ್ಲಿ ನಮಗೆ ಆಗಾಗ ಕೇಳಿಬರುವ ಘೋಷಗಳು ಈ ಮುಗ್ಧ ದುರ್ವಿದಗ್ಧ ಉದರೈಕ ಚಕ್ಷುಗಳ ಕ್ಷುತ್ತೃಷ್ಣಾರ್ತ ಘೋಷ ಹಾಗೂ ಬಾಹುಸ್ಫುರಣಗಳಲ್ಲದೆ ಮತ್ತೇನು ?

ಆದರೆ ಕಬಂಧಸ್ಥಿತಿ ಮನುಷ್ಯನಿಗೆ ಅಸಹಜಸ್ಥಿತಿ. ತಮ್ಮ ತಲೆ ತಮ್ಮ ಹೆಗಲ ಮೇಲಿರಬೇಕೆಂಬ ಹವಣಿಕೆ ಎಲ್ಲರಲ್ಲೂ ಇದ್ದೇ ಇದೆ. ಆ ಸಂತೋಷ ಯಾರಿಗೆ ಬೇಡ ? ತನ್ನ ತಲೆಯನ್ನು ತನ್ನ ಹೊಟ್ಟೆಯಿಂದ ಬಿಡಿಸಿಕೊಳ್ಳಲಾರದ ಜನಾಂಗ ಎಂದಿಗಾದರೂ ಈ ಲೋಕದಲ್ಲಿ ತಲೆಯೆತ್ತಿ ಹೇಗೆ ನಿಂತೀತು. ಈಗ ತಾನೆ ಮುಕ್ತ ರಾಗಿರುವ ನಮಗೆ ಪುನಃ ಈ ಶಾಪ ಯಾರಿಂದ ಯಾವ ಪಾತಕಕ್ಕಾಗಿ ಪ್ರಾಪ್ತ ವಾಯಿತೋ ಕಾಣೆ. ರಾಮಾಯಣದಲ್ಲಿ ಬರುವ ಕಬಂಧ ಪೂರ್ವದಲ್ಲಿ ಗಂಧರ್ವ ನಾಗಿದ್ದ, ನಡುವೆ ಉದರಮುಖನಾಗಿ ಸ್ವಲ್ಪಕಾಲವಿದ್ದ, ಕೊನೆಗೆ ರಾಮನಿಂದ ಹತನಾಗಿ ಪುನಃ ಗಂಧರ್ವಸ್ವರೂಪವನ್ನು ಪಡೆದು ಸ್ವಸ್ಥನಾದ. ನಮ್ಮದೂ ಹಾಗೆಯೇ ಎಂದು ತೋರುತ್ತದೆ. ನಮ್ಮದು ನಿಜವಾಗಿ ತೇಜಃಪೂರ್ಣವಾದ ಬಾಳು—ಈಗ ಕಬಂಧರಾಗಿದ್ದೇವೆ. ಈ ಶಾಪ ಕಳೆದ ಮೇಲೆ ಪುನಃ ಕಳೆ ಬಾಳು ನಮ್ಮದು. ನಮ್ಮ ತಲೆಯನ್ನು ನಮ್ಮ ಹೊಟ್ಟೆ ತನ್ನೊಳಕ್ಕೆ ಸೆಳೆದುಕೊಂಡಾಗ ಕಬಂಧರು ; ಈ ಸೆಳವನ್ನು ತಪ್ಪಿಸಿಕೊಂಡು ನೇರ ನಿಂತಾಗ ಗಂಧರ್ವರು, ದೇವಾಂಶ ಸಂಭೂತರು ! ಅದೆಂದಾಗುತ್ತದೋ ಕಾಣೆ. ನಾವು ನಮ್ಮ ನಮ್ಮ ತಲೆ ಗಳನ್ನು ನಮ್ಮ ನಮ್ಮ ಕರುಳಿನ ಪಾಶದಿಂದ ಬಿಡಿಸಿಕೊಂಡಾಗ ಎನ್ನಲೇ ? ಇದಕ್ಕೆ ನಿಡುಗಾಲ ಬಹು ಕಷ್ಟವಾದ ತಪಸ್ಸುಬೇಕು. ಎಲ್ಲದಕ್ಕೂ ಮೊದಲು,—ತೋರ

ಗಾಣಿಕೆಗೆ ನಮ್ಮ ಗೌರವ ಪ್ರತಿಷ್ಠೆಗಳು ಎಂಥವೇ ಇರಲಿ,—ನಮಗೆ ಕಬಂಧರಾಗುವ ಶಾಪ ಪ್ರಾಪ್ತವಾಗಿದೆ ಎಂಬರಿವು ಮೂಡಬೇಕಲ್ಲ; ಈ ಶಾಪದರಿವಾಂತು ಪರಿತಪಿಸುವುದು ಈ ತಪಸ್ಸಿನ ಮೊದಲ ಘಟ್ಟ. ಎರಡನೆಯ ಘಟ್ಟ, ತಮ್ಮ ತಲೆಯನ್ನು ಯಾವಾಗಲೂ ಎಂಥ ಸಂದರ್ಭಗಳಲ್ಲೂ ತಮ್ಮ ಕೊರಲಿನಮೇಲೆಯೇ ಇರಿಸಿಕೊಂಡವರ ಸಂತತ ವಿನಮ್ರಸ್ಮರಣೆ. ತಮ್ಮ ತಲೆಯನ್ನು ತಮ್ಮ ಉದರದಿಂದ ಬಿಡಿಸಿಕೊಂಡು ನಮ್ಮ ತಲೆಯನ್ನೂ ಅದರ ಸೆಳೆತದಿಂದ ತಪ್ಪಿಸಿ ಉದ್ಧರಿಸಿ ಸ್ವಸ್ಥಾನದಲ್ಲಿ ಪ್ರತಿಷ್ಠಿಸಿದ ಧೀರರಿಗೆ ನಮ್ಮ ನಾಡಿನಲ್ಲಿ ಎಂದೂ ಕೊರತೆಯಿಲ್ಲ. ಅಂಥವರು ಯಾರೆಂಬುದನ್ನು ವರ್ಣಿಸಬೇಕೇ ? ಸಂತರು, ಸಾಧುಗಳು, ಯೋಗಿಗಳು, ಧ್ಯೇಯ ಸಂಪನ್ನರು, ನಿಸ್ಪೃಹ ಸಂಯಮಿಗಳು, ಕರ್ತವ್ಯ ತತ್ಪರರು, ಸತ್ಯನಿಷ್ಠರರು, ಪ್ರೇಮಪ್ರಚುರರು, ಜಗದಾನಂದ ವರ್ಧನನಿಷ್ಠರು. ಇಂಥವರ ಸ್ಮರಣೆ ಯಾರಿಗೆ ತಾನೆ ಹರ್ಷವನ್ನು ತರುವುದಿಲ್ಲ ? ನಮ್ಮ ತಲೆ ನೇರಕ್ಕೆ ನಿಂತಿದೆ ಎಂಬುದಕ್ಕೆ ನಾವು ನಮ್ಮ ಕರ್ತವ್ಯಗಳಲ್ಲಿ ಪಡುವ ಸ್ವಾಸ್ಥ್ಯ ಸಮಾಧಾನ ಮತ್ತು ತೇಜಸ್ವಿತೆಗಳೇ ಸೂಚನೆ.

ಸ್ವಕರ್ಮಾಸಕ್ತಿ, ಫಲದಲ್ಲಿ ನಿರಾಸಕ್ತಿ : ಇದೊಂದು ತರದ ಆಧ್ಯಾತ್ಮ ವಿದ್ಯೆಯ ಶಿಕ್ಷೆ. ಇದನ್ನು ಕಲಿಯಲು ಮನೆ ಮನೆಗಳೇ ಶಾಲೆಗಳು, ಜನ ಜನವೇ ಗುರು. ಒಂದು ಜನಾಂಗ ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು, ಬೇರೆ ಉಪಾಯವೇ ಇಲ್ಲ. ಇದು ಮಾತ್ರ ನಿಶ್ಚಯ "ಸಾ ವಿದ್ಯಾ ಯಾ ವಿಮುಕ್ತಯೇ" ಹೊಟ್ಟೆಯ ಸೆಳೆವಿನಿಂದ ನಮ್ಮ ತಲೆಯನ್ನು ಬಿಡಿಸಿಕೊಳ್ಳುವ ವಿದ್ಯೆಯೇ ವಿದ್ಯೆ : ಯಾವ ಪುರುಷನ ತಲೆ ಆತನ ಉದರದಲ್ಲಿ ಅವುಕಿರದೆ ಹೆಗಲಮೇಲೆ ಕಲಶವಾಗಿ ಹೊಳೆಯುತ್ತಿದೆಯೋ ಆತನೇ ಗಣ್ಯ. ಅದು ಅವನವನ ಪುಣ್ಯ.

ನೋಟುಗಳ ನೋಟ

ಕೆಲಸವಿಲ್ಲದಾಗ ಜೇಬಿಗೆ ಕೈಹಾಕಿ ಚಿಲ್ಲರೆಯನ್ನೂ ನೋಟುಗಳಿದ್ದರೆ ಅವನ್ನೂ ಎಣಿಸುತ್ತಾ ಕಾಲ ಕಳೆಯುವುದು ನನ್ನ ಪದ್ಧತಿ. ಈ ದಿನವೂ ಹಾಗೆಯೇ ಮಾಡಿದೆ. ಎಲ್ಲ ತರದ ನೋಟುಗಳೂ ಇಂದು ಕೈಗೆ ಸಿಕ್ಕಿವೆಯಲ್ಲ, ಇದೊಂದು ಸುಯೋಗವೇ ಸರಿ. ಅಲ್ಲದೆ ಎಷ್ಟೊಂದು ಚಿಲ್ಲರೆ ನಾಣ್ಯಗಳು! ಈ ಬಿಡಿಕಾಸು ಗಳೇಕೆ ಬಂದು ಸೇರಿಕೊಂಡವೋ. ಈ ವಿಣಚಂಭಟ್ಟರುಗಳು ಬೆರಳುಸಂದಿಯಲ್ಲೇ ಜಾರಿ ಹೋಗುತ್ತವೆ. ಕೆಳಕ್ಕೆ ಬಿದ್ದರೆ ಸದ್ದು ಮಾಡುವಂಥ ನಾಣ್ಯ ಈಗೆಲ್ಲಿದೆ? ರೂಪಾಯಿಗಳ ಯೋಗ್ಯತೆಯನ್ನು ಕೂಡ ಈಗ ಮಿಡಿದು ನೋಡುವಂತಿಲ್ಲ. ಇವನ್ನೆಲ್ಲ ಬೇರೆ ಜೇಬಿಗೆ ಇಳಿಬಿಡೋಣ ; ನೋಟುಗಳನ್ನೆಣಿಸೋಣ.

ಒಂದು ಎರಡು ಐದು ಹತ್ತು ನೂರು—ಒಂದೊಂದು ರಖಮ್ಮಿಗೆ ಒಂದೊಂದಿದೆ ಇವೊತ್ತು! ಎಲ್ಲಕ್ಕೂ ಸಾಮಾನ್ಯವಾದ ಸಂಕೇತ ಕಂಬದ ಮೇಗಣ ಮೂರು ಸಿಂಹಗಳು, ಒಂದೊಂದು ದಿಕ್ಕಿಗೆ ಒಂದೊಂದು. ನಾಲ್ಕನೆಯದರ ಮುಖ ಕಣ್ಣಿಗೆ ಕಾಣದು. ಎಲ್ಲವೂ ಒಂದಕ್ಕೊಂದಕ್ಕೆ ತೆಕ್ಕೆ ಬಿದ್ದು ಗುರುಗುಟ್ಟುತ್ತಿವೆ, ಒಂದು ಕಿರಿದಗಲದ ದುಂಡುಕಂಬದ ಮೇಲೆ ನಿಂತು. ಪಾಪ, ಇವು ಕೆಳಕ್ಕೆ ಹಾರಿದರೆ ನಮಗೇನು ಗತಿ ಎನ್ನುವಂತಿಲ್ಲ ಅವುಗಳ ಸ್ಥಿತಿ. ಸಿಂಹಗಳು ಸ್ವೇಚ್ಛೆಯಾಗಿ ಕಾಡಿನಲ್ಲಿ ಅಲೆದಾಡುವುದು ಒಳ್ಳೆಯದೋ ಹೀಗೆ ಕಂಬವೇರಿ ಒಂದಕ್ಕೊಂದಕ್ಕೆ ತೆಕ್ಕೆ ಬಿದ್ದು ಸರ್ಕಸ್ಸಾಡುವುದು ಒಳ್ಳೆಯದೋ ಹೇಳುವುದು ಕಷ್ಟ. ಹಾಗೆ ಅವುಗಳನ್ನು ಅಲ್ಲಿ ಕೂರಿಸಿರುವವನು ಅಶೋಕ ಚಕ್ರವರ್ತಿಯಾದುದರಿಂದ ಒಳ್ಳೆಯದಕ್ಕೇ ಇರಬೇಕು. ಅಂತೂ ಅವುಗಳ ಸ್ಥಿತಿಯನ್ನು ಕಂಡು ಯಾವ ಸಿಂಹವೂ ಕರುಬುವಂತಿಲ್ಲ. ಅಲ್ಲಿ ಅವು ಗುರುಗುಟ್ಟಿದರೆ ಗುರುಗುಟ್ಟಿಕೊಳ್ಳಲಿ, ಯಾರಿಗೇನು?

ನಮ್ಮ ನಾಣ್ಯಗಳ ಮೇಲೂ ನೋಟುಗಳ ಮೇಲೂ ಈ ಪಂಚಾನನಗಳು ಸ್ತಬ್ಧಮುಗ್ಧವಾಗಿ ಕುಳಿತಿರುವುದು ನಮ್ಮ ಪ್ರಗತಿರಥದ ಮೇಲಲ್ಲವೆ? ಅಗೋ ನೋಡಿ, ಅವುಗಳ ಕೆಳಗೆ ಒಂದು ಕುದುರೆ ಓಡುತ್ತಿದೆ, ಅದರ ಹಿಂದೆ ಒಂದು ಚಕ್ರವುರುಳುತ್ತಿದೆ, ಹಿಂದೆ ಗೂಳಿಯೊಂದು ಅದನ್ನು ದಬ್ಬುತ್ತಿದೆ. ದಬ್ಬುತ್ತಿದೆಯೋ, ಅಥವಾ ಹಿಂದೆ ಸುಮ್ಮನೆ ಮೆರವಣಿಗೆ ಬರುತ್ತಿದೆಯೋ? ಅಥವಾ ಇವೆಲ್ಲ ಒಂದ

ನ್ನೊಂದು ಅಟ್ಟಿಸಿಕೊಂಡು ಬೌಡಾಯಿಸುತ್ತಿವೆಯೋ? ಬಸವನಲ್ಲಿ ಏಕೋ ವೇಗ ಕಾಣುತ್ತಿಲ್ಲ, ಶ್ರಮ ಕಾಣುತ್ತಿದೆ. ಅದು ಚಕ್ರವನ್ನೂ ಕುದುರೆಯನ್ನೂ ತಳ್ಳ ಬೇಕೇನೋ. ಒಂದು ರೂಪಾಯಿನ ನೋಟಿನಲ್ಲಿ ಅದರ ವೇಷ ವಾಸಿ. ಐದು ರೂಪಾಯಿ ನೋಟಿನ ಚಕ್ರದ ಭಾರ ಹೆಚ್ಚು. ಗೂಳಿಗೂ ಅದನ್ನು ನೂಕುವುದು ಪ್ರಯಾಸವೆಂದೇ ತೋರುತ್ತಿದೆ. ಆ ಕುದುರೆ, ಆ ಚಕ್ರ, ಆ ಗೂಳಿ ಎಷ್ಟೇ ಜೋರಾಗಿ ಓಡಿದರೂ ಬಂದಲ್ಲಿಗೇ ಬರುತ್ತವಲ್ಲ; ಒಂದು ಹೆಜ್ಜೆಯೂ ಮುಂದಿಡಲಾರವಲ್ಲ! ವಿಶ್ವದ ರಚನೆಯೇ ಪ್ರಗತಿಗೆ ವಿರುದ್ಧವಾಗಿದೆ; ಎಲ್ಲ ದುಂಡು. ಯಾವುದು ಎಷ್ಟು ವೇಗದಿಂದ ಸಾಗಿದರೂ ಬಂದಲ್ಲಿಗೇ ಬರಬೇಕು. ನಮ್ಮ ನಾಣ್ಯದ ಪ್ರಗತಿ ಚಕ್ರವೂ ಹಾಗೆಯೇ. ಮೇಲೆ ಸಿಂಹಗಳು ಸುಮ್ಮನೆ ಕುಳಿತಿರುವುದೂ ಒಂದೇ, ಕೆಳಗೆ ಇವು ಹೀಗೆ ಧಾವಿಸುತ್ತಿರುವುದೂ ಒಂದೇ. ಆಶ್ಚರ್ಯ ಆಶ್ಚರ್ಯ, ಎರಡೂ ಪ್ರಗತಿ ಯನ್ನು ಅಲ್ಲಗಳೆವಂಥವೇ ಆಗಿವೆ! ಎಷ್ಟು ನೋಟುಗಳೋಡಿದರೂ ನಾಡು ಮಾತ್ರ ನಿಂತಲ್ಲಿಯೇ ನಿಂತಿದೆ, ಒಂದು ಹೆಜ್ಜೆ ಕೂಡ ಮುಂದುವರಿಯುವಂತಿಲ್ಲ ಎಂಬುದರ ಸಂಕೇತಗಳೇನು ಇವು?

ಒಂದು ರೂಪಾಯಿ ನೋಟಿನ ಮುಖವನ್ನು ನೋಡಿಯಾಯಿತು; ಇನ್ನು ಅದರ ಬೆನ್ನುಕಡೆ ಏನಿದೆ ನೋಡೋಣ. ಇದೊ, ರೂಪಾಯಿ ನಾಣ್ಯದ ಮುದ್ರೆಯ ಚಹರೆ. ಅಲ್ಲಿ ಹಿಂದಿನಂತೆ ಹುಲಿಯಿಲ್ಲ; ಹುಲುಸಿನ ಗೋಧಿಯ ತೆನೆಗಳಿವೆ. ನಮ್ಮ ದಕ್ಷಿಣ ಇಂಡಿಯಾದವರು ಈ ಚಿಹ್ನೆಗೇಕೆ ರೊಚ್ಚೆಯೆಬ್ಬಿಸಲಿಲ್ಲವೋ. ಇದು ಉತ್ತರದ ಧಾನ್ಯವಾಯಿತಲ್ಲ! ಬತ್ತದ ತೆನೆ, ರಾಗಿಯ ತೆನೆ, ಜೋಳದ ತೆನೆ— ಇವಲ್ಲವೆ ನಮ್ಮಲ್ಲಿ ಚಲಾವಣೆಯಲ್ಲಿರುವ ನಾಣ್ಯಗಳಲ್ಲೂ ನೋಟುಗಳಲ್ಲೂ ಮೆರೆಯಬೇಕಾದುದು. ಇವಿಲ್ಲದಿದ್ದರೆ ಇಂಗ್ಲಿಷ್ ರಾಜನ ತಲೆಯೇ ಇರಲೆಂದು ಗೋಧಿತೆನೆಯ ನೋಟುಗಳನ್ನು ನಾವೇಕೆ ಕಾಮನಹಬ್ಬದಲ್ಲಿ ಸುಟ್ಟುಹಾಕ ಲಿಲ್ಲವೋ ಕಾಣೆ. ಈಗ ಈ ಕಿಡಿ ಹಾರಿಸಿದ್ದೇನಲ್ಲ, ನೋಡೋಣ, ಇದು ಯಾವ ಬಣವೆಯನ್ನು ಸುಡುತ್ತದೆ.

ಒಂದು ರೂಪಾಯಿನ ನೋಟಿನಲ್ಲಿ ಮತ್ತೊಂದು ವಿಶೇಷವುಂಟು. ಸರ್ಕಾರ ಇದರ ವಿಚಾರದಲ್ಲಿ ಯಾವ ಹೊಣೆಯನ್ನೂ ಹೊತ್ತಂತೆ ಕಾಣುವುದಿಲ್ಲ. ಅಷ್ಟಕ್ಕೂ ಈ ಅಲ್ಪಕ್ಕೆ ಯಾರ ಹೊಣೆ ತಾನೆ ಬೇಕು.

ಎರಡು ರೂಪಾಯಿ ನೋಟಿನ ಅಂತಸ್ತೇ ಬೇರೆ. ಅದು ಬರಿ ನೋಟಲ್ಲ—

ಪ್ರಾಮಿಸರಿ ನೋಟು—ನ್ಯೈಸಾಲಪತ್ರ! ನಿನಗೆ ನಾನು ಋಣಿ ಎನ್ನುತ್ತಾನೆ ನಮ್ಮ ಧಣಿ! ನಮಗೆ ಈ ನೋಟಿನಲ್ಲಿ. ನೋಟಿನ ಬಣ್ಣ ಕಾವಿಗೆಂಪು. ಹಿಂದೆ ಒಂದು ಹೆಬ್ಬುಲಿ ಬಾಯಿತೆರೆದು ಕೋರೆದಾಡೆ ತೋರಿ ಗುರುಗುಟ್ಟುತ್ತಿದೆ. ಮರದ ಕೆಳಗೊಂದು ಹೆಣ್ಣು ಸಿಂಹ ನಿಮಿರಿನಿಂತಿದೆ. ಒಂದು ಮುಖದಲ್ಲಿ ವಿನಯ ಪ್ರದರ್ಶನ, ಮತ್ತೊಂದರಲ್ಲಿ ಭಯ ಪ್ರದರ್ಶನ! ಇನ್ನು ಐದು ರೂಪಾಯಿನ ನೋಟ ಹೇಗಿದೆಯೋ ನೋಡೋಣ.

ಕಣ್ಣಿಗಿಂಪಾದ ಎಳೆಹಸಿರು ಬಣ್ಣದ ನೋಟಿದು. ಇದು ನೂರು ರೂಪಾಯಿ ನೋಟಿನ ವೇಷವನ್ನು ತಾಳಲು ಹವಣಿಸುತ್ತಿದೆಯೋ ಏನೋ ಕಾಣೆ. ಮುಂಭಾಗದ ಸಿಂಹದ ಮುಖ ಮನುಷ್ಯನನ್ನು ಹೋಲುತ್ತಿದೆಯಲ್ಲ. ಮನುಷ್ಯನ ಮುಖ ಒಳ್ಳೆ ಸಿಂಹದಂತಿದೆ ಎನ್ನುವ ಮಾತಿನಲ್ಲೇನೋ ಅಂದವಿದೆ; ಆದರೆ ಸಿಂಹದ ಮುಖ ಮನುಷ್ಯನ ಹಾಗಿದೆ ಎಂದರೋ? ಅದೂ ಒಂದು ಚೆಂದವೋ ಏನೋ. ಈ ನೋಟೂ ಒಂದು ನ್ಯೈಸಾಲಪತ್ರ; ಇದರಿಂದಲೂ ಸರ್ಕಾರಕ್ಕೇ ಸಾಲ ಕೊಡಬಲ್ಲ ಸೆಟ್ಟಿತನ ನಮಗೊದಗುತ್ತದೆ. ಇರಲಿ, ಇದಕ್ಕೆ ನಮ್ಮ ಬೆನ್ನನ್ನು ನಾವು ತಟ್ಟಿಕೊಂಡು, ಇದರ ಬೆನ್ನನ್ನು ತಿರುಗಿಸಿ ನೋಡೋಣ. ಭಲೆ, ಹುಲ್ಲುಗಾವಲಿನಲ್ಲಿ ಹುಲ್ಲೆಗಳು! ಎರಡು ಮೂರು ನಿರ್ಭಯವಾಗಿ ಮಲಗಿವೆ; ಮತ್ತೆರಡು ಕಾವಲು ನಿಂತಿವೆ. ದೂರದಲ್ಲಿ ಸಿಂಹಿಣಿಯೊಂದು ಹೊಂಚು ಕಾಯುತ್ತಿದೆ. ಇತ್ತ ಹುಲ್ಲೆ, ಅತ್ತ ಸಿಂಹ; ಎರಡರಲ್ಲಿ ನಾವಾವುದನ್ನೂ ಬೇಡ ಎನ್ನುವಂತಿಲ್ಲ. ಇನ್ನು ಹತ್ತು ರೂಪಾಯಿ ಯಾವ ಸಂಕೇತಗಳನ್ನು ಹೊತ್ತಿದೆಯೋ.

ಇದೂ ಕೂಡ ಪಂಚರಂಗೀ ನೋಟು. ಉದ್ದಗಲ ಸ್ವಲ್ಪ ನೋಡುವಂತಿದೆ. ಇದೂ ಒಂದು ನ್ಯೈಸಾಲದ ಪತ್ರ. ಓಡಲು ಹೊರಟಿರುವ ಚಕ್ರದ ಮೇಲೆ ಮೂರು ಸಿಂಹಗಳು ಎಂದಿನಂತೆ ಗುರ್ರನೆ ಕೂತಿವೆ. ಹಿಂದೆ ತಿರುಗಿಸಿ ನೋಡಿದರೆ, ದೃಶ್ಯಾವಳಿ ಬೇರೆ. ಸಮುದ್ರ, ಅದರ ಮೇಲೆ ಹಾಯಿದೋಣಿ! ಜಹಜಲ್ಲ. ಅದರ ಪಟಗಳ ತುಂಬ ಗಾಳಿ ತುಂಬಿ ಅವು ಉಬ್ಬಿವೆ. ಅದು ನಮ್ಮ ಕರೆಬಿಟ್ಟು ಎತ್ತಲೋ ಹೊರಡುವ ದೋಣಿ. ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದಿನದು. ಅದರಲ್ಲಿ ಆಧುನಿಕ ವೈಜ್ಞಾನಿಕ ವಸ್ತುಗಳೇನೂ ಇರವು. ಬರಿ ಕಚ್ಚಾ ಸಾಮಾನುಗಳನ್ನೊಯ್ಯುವ ದೋಣಿ, ಅಷ್ಟೆ. ಎಣ್ಣೆ ಬೀಜಗಳು, ಸೆಣಬು, ಹತ್ತಿ, ಟೀ, ಕಾಫಿ ಇತ್ಯಾದಿ ದಳಿತ ಜನದ ದುಡಿಮೆಯ ಸರಕುಗಳು. ನಿಜ, ನಿಜ, ಬಡವರೇ ಭಾರತದ

ಸಂಪತ್ತು. ದಲಿತರ ಕೈಯಿ, ದೈಯುಳ್ಳವರ ಬಾಯಿ. ಪರದೇಶಗಳಿಂದ ಪ್ರತಿಯಾಗಿ ಬರುವ ಸರಕುಗಳೆಲ್ಲ ಬುದ್ಧಿವಂತರ ಮಾಲುಗಳೇ. ನಮ್ಮಲ್ಲಿ ಬುದ್ಧಿವಂತರೇ ಇಲ್ಲವೋ ಹೇಗೆ ? ಸುಮಾರು ಇನ್ನೂರು ವರ್ಷಗಳಿಂದ ಅವರ ತಯಾರಿ ನಡೆಯು ತ್ತಿದ್ದರೂ ಹೊಗೆಜಹಜಿನಲ್ಲಿ ನಮ್ಮ ರಪ್ತುಗಳು ಹೊರಡುವ ಕಾಲ ತುಂಬ ದೂರವುಳಿದಂತಿದೆ. ಅಥವಾ ನಮ್ಮ ನೌಕೆಯನ್ನು ನಡೆಸಲು ನಾವಿನ್ನೂ ನಮ್ಮ ಸ್ವಂತ ಶಕ್ತಿಯನ್ನು ಉತ್ಪಾದಿಸಿಕೊಳ್ಳಲಾಗದೆ ಹೊರಗಣ ಗಾಳಿಗಳನ್ನೇ ಅವ ಲಂಬಿಸಿದ್ದೇವೋ ? ದೋಣಿಯ ಕೆಳಗೆ ಸಿಂಹವಂತೂ ಮೊದಲಿನಂತೆಯೇ ಬೇಟೆಗೆ ಹೊಂಚುತ್ತಿದೆ. ಇದರಿಂದ ನಾವು ತಪ್ಪಿಸಿಕೊಳ್ಳುವ ಹಾಗಿಲ್ಲ, ಒಂದು ರೂಪಾಯಿನ ದರ್ಜೆಗಿಳಿದ ಹೊರತು. ಅಂತೂ ಬೆಣ್ಣೆಯನ್ನು ಹಾಯಿ ದೋಣಿಯಲ್ಲಿ ಕಳಿಸಿ ಬಂದೂಕವನ್ನು ಜಹಜಿನಲ್ಲಿ ತರಿಸುವ ವ್ಯವಹಾರ ಹತ್ತು ರೂಪಾಯಿನ ಚಹರೆಯಲ್ಲಿ ಹೊಳವು ಹಾಕಿದೆ.

ಇನ್ನು ನೂರು ರೂಪಾಯಿ ನೋಟಿನ ಮುಖ ಹೇಗಿದೆಯೋ ಅದನ್ನೂ ನೋಡಿಯೇ ಬಿಡೋಣ. ಇದರಲ್ಲಿ ಎರಡು ರಖಮಿದೆ. ಒಂದರ ಬಣ್ಣ ಐದು ರೂಪಾಯಿನ ಹಸುರು, ಮತ್ತೊಂದರದು ಹತ್ತು ರೂಪಾಯಿನ ಪಂಚರಂಗೀ. ಹಸುರು ನೋಟಿನ ಹಿಂದೆ ಒಂದು ದೊಡ್ಡ ಕಾಡು, ಅದರಲ್ಲಿ ಎರಡು ಸಲಗಗಳು ; ಒಂದು ಸುಮ್ಮನೆ ನಿಂತಿದೆ, ಮತ್ತೊಂದು ಘೀಂಕರಿಸುತ್ತಿದೆ ಪದ್ಮ ಸರೋವರದ ಕೆರೆ ಯಲ್ಲಿ. ನೋಟ ತುಂಬ ಸ್ವಾರಸ್ಯ. ಕೆಳಗೆ ಯಥಾಪ್ರಕಾರ ಸಿಂಹ, ಅಲ್ಲ, ಸಿಂಹಿಣಿ, ನಿಮಿರಿ ನಿಂತಿದೆ. ನೇರಿಳೆಬಣ್ಣದ ನೋಟಿನಲ್ಲಿ ಅಣೆಕಟ್ಟು, ಕೆಳಗೆ ವಿದ್ಯುದಾಗಾರ. ಕಟ್ಟೆಯಲ್ಲಿ ನೀರು ನಿಂತಿದೆ. ಅದು ಆನೆಕಾಡನ್ನು ಮುಳುಗಿಸಿತೋ ಏನೋ ? ಅಥವಾ ಭಾರತ ತನ್ನ ನೈಸರ್ಗಿಕತೆಯನ್ನು ಕಳೆದುಕೊಂಡು ನಾಗರಿಕವಾಗುವುದು ಈ ನೂರು ರೂಪಾಯಿಗಳ ಅಂತಸ್ತಿನಲ್ಲೋ ? ಏನದರ ಸಂಕೇತ ? ಇದರ ಹರಿ ದಾಟದಲ್ಲಿ ನಾಡೇ ಕಾಡನ್ನು ನುಂಗುತ್ತಿದೆಯೋ ಕಾಣೆ.

ಸರಿಯೇ, ಅಷ್ಟಕ್ಕೂ ಈ ನೋಟುಗಳೊಂದರಲ್ಲೂ ಮನುಷ್ಯನ ಮುಖವೇ ಕಾಣದೇಕೆ ? ನಿಜ, ನಿಜ, ಬಡವರೇ ಭಾರತದ ಸಂಪತ್ತು ! ಬ್ರಿಟಿಷರ ಕಾಲದಲ್ಲಿ ಹುಲಿಯಿತ್ತು ನಿಶ್ಚಯ ; ಆದರೆ ರಾಜನ ಚಹರೆಯೂ ಇತ್ತಲ್ಲ. ಈಗ ಬರಿ ಸಿಂಹ, ಸಿಂಹಿಣಿ, ಆನೆ, ಹುಲ್ಲೆ, ಕಾಡು, ಕಡಲು, ಮಿಂಚಿನ ಮನೆ, ಹೊಂಚುವ ಹುಲಿ. ಹಾಯಿ ದೋಣಿಯಲ್ಲಿ ಕೆಲವು ಮಾನವರ ನೆರಳುಗಳನ್ನು ಕಂಡಹಾಗಿತ್ತು, ಅಷ್ಟೆ.

ನಮ್ಮೀ ನೋಟುಗಳಲ್ಲಿ ಇನ್ನೂ ವನ್ಯಮೃಗಗಳೇ ಎದ್ದು ಕಾಣುತ್ತವಲ್ಲ. ಇವಕ್ಕೆ ಮಾನವೀಯತೆ ಬರುವುದೆಂದಿಗೆ ?

ಅಂತೂ ನಮ್ಮ ನೋಟುಗಳು ನಮ್ಮಿಂದಿನ ರಾಜಕೀಯ ಮತ್ತು ಆರ್ಥಿಕ ಸ್ಥಿತಿಯ ನೈಜಚಿತ್ರವನ್ನೇ ಕೊಡುವಂತಿವೆ. ಈ ಸಂಕೇತಗಳನ್ನು ಕಲ್ಪಿಸಿದವರು ನಿಜವಾಗಿ ರಸಿಕರು. ಆದರೆ ನಮಗೇಕೆ ಈ ಎರಡು, ಐದು, ಹತ್ತು ರೂಪಾಯಿಗಳ ಗೊಡವೆ ? ತೆನೆಮೇಗಣ ಹಕ್ಕಿಗಳು ನಾವು ; ನಮಗೆ ಒಂದು ರೂಪಾಯಿನ ನೋಟುಗಳೇ ಕ್ಷೇಮಸ್ಥಾನ. ಜೇಬಿಗೆ ಕೈ ಹಾಕಿದಾಗ ಅವು ಸಿಕ್ಕುತ್ತಿದ್ದರೆ ಸಾಕು. ಅಷ್ಟಕ್ಕೂ, ಬ್ಯಾಂಕಿಗೆ ಹಾಕಿದ ಮೇಲೆ ಈ ಭಯಂಕರ ನೋಟುಗಳೆಲ್ಲ ಬರಿ ರೂಪಾಯಿಗಳಾಗಿಬಿಡುತ್ತವೆ! ಅಲ್ಲಿ ನಮ್ಮ ಲೆಕ್ಕವೇರಲಿ. ನೀರು ಮಡುಗಟ್ಟಿ, ಬೆಳಕು ಹರಿದು, ಹುಲುಸು ತೆನೆ ಗಾಳಿಯಲ್ಲಾಡಲಿ.

ಕಳಕಳಿಸೀತು ದೀಪಾವಳಿ

ದೀಪಾವಳಿ ಬರುತ್ತಿದೆ. ಈ ಹಬ್ಬಕ್ಕೆ ಆದಷ್ಟು ಕಳೆಗೊಡಬೇಕೆಂದು "ಪ್ರಜಾ ವಾಣಿ"ಗೆ ಆಸೆ. ಈ ಕಾಲದಲ್ಲಿ ಈ ಆಸೆ ಸಹಜ. ಜಗತ್ತಿನಲ್ಲಿ ಬೇಸರ ಹೆಚ್ಚುತ್ತಿದೆ ಯೆಂದೂ, ಆದರದ ತೋರಿಕೆಯಿಂದಲೂ, ಸೋದರತೆಯ ವಾಚಾಳತನದಿಂದಲೂ ಇದು ಹರಿಯುವುದಿಲ್ಲವೆಂದೂ ಅನೇಕರ ಮತ.

ಇಂಥ ಅಭಿಪ್ರಾಯವುಳ್ಳವರ ವಯಸ್ಸಿನ ಪರಿಮಿತಿ ಎಷ್ಟಿರಬಹುದು ಎಂಬು ದನ್ನು ತಿಳಿದುಕೊಳ್ಳಲು ನನಗೆ ಆಸ್ಥೆ ; ಬಹುಶಃ ಅದು ನಲವತ್ತಕ್ಕೆ ಮೀರಿರ ಬಹುದು. ನಲವತ್ತರವರೆಗೂ ಆಸೆ ಎಳೆತನದಲ್ಲೇ ಇರುತ್ತದೆ ; ಅದನ್ನು ಮೀರಿದರೆ ಅದು ಬಲಿಯುತ್ತದೆ. "ನ ಜಾತು ಕಾಮಃ ಕಾಮಾನಾಂ ಉಪಭೋಗೇನ ಶಾಮ್ಯತಿ" ಎಂದವನು ಪೂರ್ವ ವಯಸ್ಸಿನವನಲ್ಲ—ಮುದಿಮನಸ್ಸಿನ ಯಯಾತಿ. ಈ ಆಶಾಪ್ರೌಢರ ಜಗತ್ತಿಗೂ ತರುಣ ಜಗತ್ತಿಗೂ ಸಾಮಾನ್ಯವಾಗಿ ಸಾಮರಸ್ಯ ವಿರುವುದಿಲ್ಲ. ಆದುದರಿಂದಲೇ ವೃದ್ಧರಿಗೆ ಸ್ವಾರಸ್ಯದ ನೆನಕೆ ಮಾತ್ರ ಉಳಿದು ಲೋಕ ಬೇಸರವಾಗುತ್ತದೆ. ಇಂಥ ಮುದುಕರಿಗೆ ಎಳಮೆಯನ್ನು ತರುವುದ ರಿಂದಲೇ ಈಗ ಈ ಲೋಕದಲ್ಲಿ ವೃದ್ಧವಾಗುತ್ತಿರುವ ಬೇಸರಿಕೆ ತೊಲಗುತ್ತದೆಂದು ಕೆಲವರ ಹಾಗೂ ನನ್ನ ಖಚಿತವಾದ ಅಭಿಪ್ರಾಯ.

ಈ ಎಳಮೆಯನ್ನು ತರುವುದಕ್ಕೆ ಅನೇಕ ಮಾರ್ಗಗಳುಂಟು. ಒಂದು ಚ್ಯವನ ಪ್ರಾಶ ಲೇಹ್ಯ ಪ್ರಾಶನ ; ಅಥವಾ ಇತ್ಯಾದಿ ವೈದ್ಯ ವಿಧಾನಗಳು. ಈ ಉಪಾಯ ದಿಂದ ಒಂದು ಅಪಾಯ ಪ್ರಾಪ್ತವಾಗಬಹುದು. ಮುದಿಯರಿಗೆ ಮದುವೆಯ ಹುಚ್ಚು ಹುಟ್ಟಿ ಪ್ರವರ್ಧಮಾನಕ್ಕೆ ಬಂದಿರುವ ಅವರ ಮಕ್ಕಳಿಗೆ ಆರ್ಥಿಕ ವಾಗಿಯೂ ಸಾಮಾಜಿಕವಾಗಿಯೂ ತೊಂದರೆಗಳೊದಗಬಹುದು. ಇವಕ್ಕಿಂತ ಸಮೀಚೀನವಾದ ಉಪಾಯಗಳೂ ಇವೆ.

ಮೊದಲನೆಯದಾಗಿ ಅಂಥ ವಯಸ್ಸು ಮೀರಿದವರನ್ನು ಅಪ್ಪ, ಅಜ್ಜ, ತಾತ, ಮಾವ ಎಂದು ಕರೆಯುವುದಕ್ಕೆ ಬದಲು "ಅಣ್ಣ" "ಅತ್ತಂಬಿ" ಎಂದು ಕರೆದರೆ ಅವರ ವಯಸ್ಸು ಎಷ್ಟೋ ಹಗುರವಾಗುತ್ತದೆ. (ಇದು ಈಗ ಸಾಧಾರಣವಾಗಿ ಜಾರಿಯಲ್ಲಿದೆ ಎನ್ನಿ.) ಅಲ್ಲದೆ, ವಯಸ್ಸಿಗೆ ಬಂದು ಸ್ವತಂತ್ರರಾಗಿದ್ದರೂ ಮನೆ

ಮಕ್ಕಳು ಪ್ರತಿಯೊಂದು ಬಾಬಿನಲ್ಲೂ ಅವರಿಗೆ ಹಿರಿಯರೆಂದೆನಿಸಿಕೊಂಡಿರುವವರ ಸಲಹೆಯನ್ನು ಕೇಳುವಂತೆಯೂ ಅಪ್ಪಣೆಯನ್ನು ಪಾಲಿಸುವಂತೆಯೂ ನಟಿಸುವುದು ಮತ್ತೊಂದು ಉಪಾಯ. ನನಗೆ ಪರಿಚಿತರೊಬ್ಬರ ವಯಸ್ಸು ಸುಮಾರು ಅರವತ್ತಿರಬಹುದು—ಮೊದಲ ನೋಟಕ್ಕೆ ಹಾಗೆ ಕಾಣುತ್ತದೆ—ಆದರೆ ಮಾತೆತ್ತಿದರೆ ಅವರು "ನಮ್ಮ ಯಜಮಾನರನ್ನು ಕೇಳಬೇಕು" ಎನ್ನುತ್ತಾರೆ. ಅದನ್ನು ಕೇಳಿದ ಕ್ಷಣ ಅವರ ವಯಸ್ಸು ಅರ್ಧಕರ್ಧ ಇಳಿದು ಹೋಗುವಂತೆ ಥಟ್ಟನೆ ತೋರಿ ಬೆರಗಾಗುತ್ತದೆ ನನಗೆ. ಇಂಥ ಮಗನನ್ನು ನೋಡುತ್ತಾ ನೋಡುತ್ತಾ ತನ್ನ ವಯಸ್ಸಿನ ಜ್ಞಾನವನ್ನೇ ಮರೆತು ಇವರ ಅಪ್ಪ ನೂರರ ಮಿತಿಯನ್ನು ಮೀರಿದರೆ ಆಶ್ಚರ್ಯವೇನಿಲ್ಲ. ವಯಸ್ಸಾಗಿರುವವರಿಗೆ ಅವರ ವಯಸ್ಸಿನ ನೆನಪನ್ನು ತಪ್ಪಿಸಬೇಕಾದರೆ ಅವರೆದುರಿಗೆ ನಾವು ಮಕ್ಕಳಂತೆ ನಟಿಸುವುದೊಂದು ಸಮೀಚೀನವಾದ ಉಪಾಯ. ಆದರೆ ನಟನೆಯೂ ಒಂದು ಕುಶಲ ಕಲೆ; ಸುಲಭವಾಗಿ ಬರತಕ್ಕದ್ದಲ್ಲ. ಮತ್ತು ಈ ನಟನೆಗೆ ಸಹಜತೆಯ ಭ್ರಮೆ ಬರಬೇಕಾದರೆ ಬಹುಕಾಲ ಬೇಕಾಗುತ್ತದೆ,—ಅದು ಸ್ವಭಾವವಾಗಿಯೇ ಪರಿಣಮಿಸುವಷ್ಟು ಕಾಲ. ಈಗಿನ ತರುಣ ತರುಣಿಯರು ಈ ನಿಷ್ಠೆಗೆ ಒಪ್ಪುವ ಸಂಭವ ಕಡಿಮೆ. ಅದಕ್ಕೆ ಪುರುವಿನ ಔದಾರ್ಯಬೇಕು.

ಮತ್ತೊಂದು ಮಧ್ಯಸ್ಥ ವಿಧಾನವೇನೆಂದರೆ, ಕೆಲವು ನಿರ್ದಿಷ್ಟ ದಿನಗಳಲ್ಲಿ ತಮ್ಮ ಹಿರಿಯರ ಬಾಲ್ಯ ಯೌವನಗಳಲ್ಲಿ ಜಗತ್ತು ಹೇಗಿತ್ತೋ ಅದನ್ನು ಅವರ ಮಾತು ಕತೆಗಳಿಂದ ಊಹಿಸಿ ಅದರ ಪುನರ್ನಿರ್ಮಾಣಕ್ಕೆ ತೊಡಗುವುದು. ಇದೂ ಅಷ್ಟು ಸುಲಭವಾದ ಕೆಲಸವಲ್ಲ. ಕ್ಷಣಕ್ಷಣಕ್ಕೂ ಲೋಕದ ಪರಿಸ್ಥಿತಿ ಬದಲಾಗುತ್ತಿದೆ. ಈಗ ನಿಂತಿರುವವರೇ ನಡೆದೋಡುವವರೇ ಹೆಚ್ಚು; ಕುಳಿತವರನ್ನು ಕಾಣುವುದು ಅಪೂರ್ವ. ಲಂಡನ್, ನ್ಯೂಯಾರ್ಕ್, ಮಾಸ್ಕೋ, ಮೆಕ್ಕಾ, ಟೋಕ್ಯೋ, ಪ್ಯಾರಿಸ್, ಪೀಕಿಂಗ್—ಹೀಗೆ ಯಾವಾಗಲೂ ಪ್ರವಾಸ ಹೊರಟವರಂತೆ, ಅಧ್ವಶ್ರಮವನ್ನು ಗಣಿಸದವರಂತೆ, ಅಧ್ವಾನ್ನದಲ್ಲೇ ಆಸಕ್ತರಾದಂತೆ ನಮ್ಮ ತರುಣ ತರುಣಿಯರು ನಮ್ಮ ನಗರಗಳಲ್ಲಿ ಕಾಣಬರುತ್ತಾರೆಯೇ ಹೊರತು ಮನೆಯಲ್ಲಿ ನಿಲ್ಲತಕ್ಕವರಂತೆ ಕಾಣಬರುತ್ತಿಲ್ಲ. ಈ ಪರಿಸ್ಥಿತಿಯಲ್ಲಿ ಪ್ರಾಚೀನ ಸಂಸ್ಕೃತಿಯ ಅಭಿಜಾತ ಲಕ್ಷಣವನ್ನು ಅಭಿನಯಿಸುವುದು ಕುಶಲ ಕಲೆಯಷ್ಟು ಕಠಿಣ. ಓಲೆ, ಬಳೆ, ಕುಂಕುಮಗಳಲ್ಲಿ ಹೆಣ್ಣು ಮಕ್ಕಳಿಗೆ ವೈರಾಗ್ಯವೇರ್ಪಡುತ್ತದೆಯೆಂದು ಹತ್ತು ವರ್ಷಗಳ ಕೆಳಗೆ ಯಾರಿಗಾದರೂ ಊಹಿಸುವುದಕ್ಕಾದರೂ

ಸಾಧ್ಯವಾಗಿತ್ತೇ? ಅಂದಿನ ಜಗತ್ತನ್ನು ಇಂದು ನಿರ್ಮಿಸುವ ಕರ್ಮ ರಂಗಸ್ಥಲ ನಿರ್ಮಾಣದ ನೈಪುಣ್ಯವನ್ನು ಕೋರುತ್ತದೆ.

ಆದರೆ ಈ ಕಾಲದಲ್ಲಿ ನಟಿಸುವುದೆಂದರೆ ಎಲ್ಲರಿಗೂ ಪ್ರೀತಿ. ಈಗ ಅದು ಒಂದು ವರ್ಗಕ್ಕಾಗಲಿ ಒಂದು ಜಾತಿಗಾಗಲಿ ವಿಶಿಷ್ಟವಾಗಿಲ್ಲ, ಸಾರ್ವತ್ರಿಕವಾಗಿದೆ. ಅದರಲ್ಲೂ ತರುಣ ತರುಣಿಯರಿಗೆ ನಟನಟಿಯರಾಗಬೇಕೆಂಬ ಉತ್ಕಟಾಭಿಲಾಷೆ ಈಗಿರುವಷ್ಟು ಹಿಂದೆ ಯಾವಾಗಲೂ ಇದ್ದಿರಲಾರದು. ದೀಪಾವಳಿಯ ದಿನ ಪ್ರತಿಯೊಂದು ಮನೆಯೂ "ಹಾಲಿವುಡ್" ಆಗಬೇಕೆಂದು ನನ್ನ ಆಸೆ. ಅಲ್ಲಿನ ಸಾಮಾಜಿಕರು ಆಯಾ ಮನೆಯ ಹಿರಿಯರಾಗಲಿ; ನಟನಟಿಯರು ಆಯಾ ಮನೆಯ ತರುಣ ತರುಣಿಯರಾಗಲಿ, ಆ ದಿನದ ಮಟ್ಟಿಗಾದರೂ.

ಈ ನಾಟಕಕ್ಕೆ "ಸಹಜತೆ" ಎಂದರೆ ರಸದೇರುವೆ ಪ್ರಾಪ್ತವಾಗಬೇಕಾದರೆ ಪಾತ್ರಗಳೆಲ್ಲರೂ ತಮ್ಮ ಸಮಸ್ತ ಕೌಶಲವನ್ನೂ ತೋರಬೇಕಾಗುತ್ತದೆ. ಆಗ ತಾನೆ ಮದುವೆಯಾಗಿರುವ ತರುಣಿಯರು ತಮ್ಮ ಕಂಗಳಿಗೆ ತಮ್ಮ ಗಲ್ಲವನ್ನು ನೋಡುವ ಕಲೆಯನ್ನು ಕಲಿಸಬೇಕು. ಈ ಅಧೋದೃಷ್ಟಿ ಮತ್ತು ತುಟಿಗಳ ಕೊನೆಯಲ್ಲಿ ಕುಳಿ ಬೀಳಿಸುವಷ್ಟು ಮಾತ್ರ ಮಿದುನಗೆ—ಇವುಗಳನ್ನು ತರುವುದಕ್ಕೆ "ಮೈಸೂರು ಮಲ್ಲಿಗೆ"ಯ ವಧುಗಳಿಗೆ ಮಾತ್ರ ಸಾಧ್ಯವಾಗಿತ್ತು ಒಂದಾನೊಂದು ಕಾಲದಲ್ಲಿ. ಇವು ಈಗ ಕಲಿಯಬೇಕಾದ ಕಲೆಯಾಗಿ ಪರಿಣಮಿಸಿವೆ,—ಸತತಾಭ್ಯಾಸದಿಂದ ಮಾತ್ರ ಲಭಿಸತಕ್ಕ ಮಿಲಿಯನ್ ಡಾಲರ್ ಸ್ಮೈಲ್ ಇದು. ದೀಪಾವಳಿಯ ದಿನ ಈ ಸ್ಮಿತದ ಪ್ರದರ್ಶನ ಬಹುವಾಗಿ ನಡೆಯಬೇಕಾಗುತ್ತದೆ. ಹಿರಿಯರಿಗೆ ಕಾಲಬದಲಾಯಿಸಿಲ್ಲ ಎಂಬ ಮಂಕು ಬರಬೇಕಾದರೆ, ಸೆರಗಿರುವ ಸೀರೆ ಆರು ಗಜಗಳಾದರೂ ಇದ್ದರೆ ವಾಸಿ,—ಕಾಲಿಗೆ ಗೊಲಸು, ಬೈತಲೆಗೆ ಚುಟ್ಟಿ, ಮೂಗಿಗೆ ಬುಲಾಕು, (ಇದನ್ನು ಅವರವರ ಇಚ್ಛೆಗೆ ಬಿಟ್ಟಿದೆ, ತಮಿಳರಿಗೆ ವಿಶಿಷ್ಟವಾದ ಒಡವೆ ಇದಾದದ್ದರಿಂದ), ನೆಟ್ ನಾಟ್ ಅಲ್ಲದ ನಿಡುಜಡೆ, (ಅದರ ನಡುವೆ ಜಡೆ ಬಿಲ್ಲೆ, ಈ ತುದಿಗೆ ನಾಗರ, ಆ ತುದಿಗೆ ಕುಚ್ಚು ಇದ್ದರೆ ಪರಿಕರ್ಮ ಚೆನ್ನಾಗುತ್ತದೆ), ಮುಡಿಗೆ ಜಾಜಿಹೂವು, ಮುಖಕ್ಕೆ ತಿಲಕ, ಕಿವಿಗೆ ಓಲೆ ಮತ್ತು ಜುಮುಕಿ, ಕೆನ್ನೆಗೆ ಅರಿಸಿನ, ತುಟಿಗೆ ನಗೆ, ನಡೆಗೆ ಮೆಲುಪು ಇತ್ಯಾದಿ ಇತ್ಯಾದಿ.

ಹಿರಿಯ ಮುತ್ತೈದೆಯರು ಅಲಂಕರಿಸುವ ರೀತಿಗೆ ನವವಧುಗಳು ಒಪ್ಪಿದರೆ ಅವರಿಗೆ ತಕ್ಕ ರಂಗಪರಿಕರ್ಮ ಸುಲಭವಾಗಿ ದೊರೆಯುತ್ತದೆ. ಹಾಗೆಯೇ ತರು

ಣರೂ ಇಜಾರವನ್ನು ಕಳೆದು ಹಾಕಿ ಕಚ್ಚೆ ಪಂಚೆಯನ್ನುಟ್ಟು, ಬೇಕಾದರೆ ಷರ ಟನ್ನು ತೊಟ್ಟು, ಮೇಲಕ್ಕೆ ಉತ್ತರೀಯ ಹೊದೆದು, ಕಿವಿಗೆ ಹೂವನ್ನು ಸೆಕ್ಕಿ, ಮುಖಕ್ಕೆ ನಾಮವನ್ನೋ, ಚಿಕ್ಕಿ ಬೊಟ್ಟನ್ನೋ ಇಟ್ಟು, ಮುಂಗುರುಳನ್ನು ತಿದ್ದು ವಾಗ ಬೆರಳಿನ ಉಂಗುರವನ್ನು, ಮೆರೆಸುತ್ತಾ, ತುಟಿಗೆ ಕದವಿಕ್ಕಿ ಸುತ್ತಲೂ ಮುತ್ತುವ ಮಕ್ಕಳಿಗೆ ಸ್ತೈರಣೆಯ ಮಂದಸ್ಮಿತವನ್ನು ತೋರುತ್ತಾ, ಕುಳಿತ ಕೊಠಡಿಯನ್ನು ಬಿಡದೆ ಮಾನದಿಂದಲೂ ಮೌನದಿಂದಲೂ ಇರುವುದೊಳ್ಳೆಯದು. ಹಸೆಯ ಮೇಲೆ ಕೂರೆಂದರೆ ಕೂರತಕ್ಕದ್ದು, ಮೊಳಕಾಲ ಕೆಳಗೆ ತಲೆಯಿಕ್ಕಿ ಮೈ ಕುಗ್ಗಿ ಕುಳಿತ ವಧುವನ್ನು ಕದ್ದು ನೋಡತಕ್ಕದ್ದು, ಆ ದೃಷ್ಟಿ ಧಾಷ್ಟ್ರ್ಯದಿಂದ ಮರಳಿದರೆ ಇದೆಲ್ಲಾ ನಾಟಕವೆಂದು ಮೋದಗೊಳ್ಳತಕ್ಕದ್ದು, ನೀರೆರೆದರೆ ಎರೆಸಿ ಕೊಳ್ಳತಕ್ಕದ್ದು, ಹೋಳಿಗೆ ತಿನ್ನೆಂದರೆ ತಿನ್ನತಕ್ಕದ್ದು, ಅದರಲ್ಲಿ ಒಂದು ವೇಳೆ ತೆಂಗಿನ ಜುಂಗಿದ್ದರೆ ನಗುವ ಮಕ್ಕಳ ಜತೆಗೆ ನಗುತ್ತಾ ನುಂಗತಕ್ಕದ್ದು (ಉಗುಳ ತಕ್ಕದಲ್ಲ)—ಪಪ್ಪ, ಮಮ್ಮ, ಹಬ್ಬಿ, ವಿಪ್ಪಿ ಎನ್ನದೆ ಸಾಧಾರಣವಾಗಿ ಎಲ್ಲರಂತೆ ಇರತಕ್ಕದ್ದು, ವಧುವಿನ ದರ್ಶನಕ್ಕೂ ಸಲಿಗೆಗೂ ಬೆಕ್ಕಿನಂತೆ ಹೊಂಚಾಡತಕ್ಕದ್ದು, ಅತ್ತೆ ಮಾವಂದಿರಿಗೆ ತತ್ತತ್ಕಾಲದಲ್ಲಿ ನಮಸ್ಕರಿಸತಕ್ಕದ್ದು, ದೇವರ ಮನೆಯ ಬಾಗಿಲಲ್ಲಿ ಮಾತ್ರ—ಮಿಕ್ಕ ವೇಳೆಯಲ್ಲಲ್ಲ—ಅಡ್ಡ ಕಟ್ಟುವ ನೆಂಟರೆಲ್ಲರ ಎದುರು ಹೆಂಡತಿಯ ಹೆಸರನ್ನು ಹೇಳತಕ್ಕದ್ದು, ಮಕ್ಕಳಿಗೆ ಪಟಾಕಿ ಮತಾಪುಗಳನ್ನು ಹಂಚಿ ಅವುಗಳೊಡನೆ ಬೆರೆತು ದೀಪಾವಳಿಯನ್ನು ಆಚರಿಸತಕ್ಕದ್ದು—ಇತ್ಯಾದಿ ನೂರಾರು ಸಂವಿಧಾನಗಳನ್ನು ಪರದೇಶಗಳನ್ನು ಮರೆತು ಮನೆಗೆ ಮರಳಿ ಬಂದವರಂತೆ ನಾಜೋಕಾಗಿ ನಟಿಸಿದರೆ ಮಾತ್ರ ಹಿರಿಯರಿಗೆ ಕಾಲ ಕೆಟ್ಟಿತೆಂದೂ, ತಾವು ಏತಕ್ಕೂ ಬೇಡವೆಂದೂ, ಈ ಮನೆ ತಮ್ಮದಲ್ಲವೆಂದೂ, ಈ ನೆಲವೂ ಹೊರ ನಾಡೆಂದೂ ಇತ್ಯಾದಿ ಬೇಸರಗಳು ತೊಲಗಿ ಹಿಂದಿನ ಸ್ವರ್ಣಯುಗ, ಅಂದರೆ ತಾವು ತರುಣತರುಣಿಯರಾಗಿದ್ದಾಗ ತೋರಿದ ವೈಭವದ ಯುಗ ಮರಳಿತೆಂಬ ಭಾವನೆ ಮೂಡಿ ಅವರ ಸಂತಸ ಹೊಮ್ಮಿ ವಯಸ್ಸು ಹಗುರವಾದೀತು. ಹಾಗೂ ದೀಪಾವಳಿ ಕಳಕಳಿಸೀತು.

ಈ ಸಲದ ದೀಪಾವಳಿಯಲ್ಲಿ ಎಲ್ಲರ ಮನೆಯೂ ನಮ್ಮ ತರುಣತರುಣಿಯರಿಗೆ ಇಂಥ "ಜಮಿನಿ" ಸ್ಟೂಡಿಯೋಗಳಾಗಿ ಪರಿಣಮಿಸಿ ಅವರೆಲ್ಲರೂ ಆ ದಿನದ ಮಟ್ಟಿ ಗಾದರೂ ಸಂಪ್ರದಾಯಾಭಿರುಚಿಯನ್ನು ತೋರುವ ತಕ್ಕ ವೇಷ ಭೂಷಣ

ಗಳಿಂದಲೂ ವಿನಯ ವಿಶ್ವಾಸವನ್ನು ತೋರುವ ಲಜ್ಜೆಯಿಂದಲೂ ಭೂಷಿತರಾಗಿ ತಮ್ಮ ನಡೆನುಡಿಗಳ ಚಾತುರ್ಯದಿಂದ ಹಿರಿಯರನ್ನು ನಲಿಯಿಸಿ ತಾವೂ ನಲಿಯು ಲೆಂದು ಹಾರೈಸುವುದು ತಪ್ಪೇ ?

ಧೇನುಕೋಪಾಖ್ಯಾನ

ವಯಸ್ಸು ಹೆಚ್ಚಿದಂತೆಲ್ಲ ಹೊರೆ ಹೆಚ್ಚಾಗುತ್ತದೆ; ಹೊರೆ ಹೆಚ್ಚಿದಂತೆಲ್ಲ ಕತ್ತೆಯ ಜ್ಞಾಪಕ ಬಾರಿ ಬಾರಿಗೂ ಬರುತ್ತದೆ.

ಮುತ್ತನಿಗೆ ಕತ್ತೆಯೊಂದೇ ಸಮಾಧಾನ ತರುವ ವಸ್ತು. ಮೈ ಎಂಥದೇ ಆಗಿರಲಿ ಅದರಲ್ಲಿ ಜೀವಗೂಡಿರುವುದಕ್ಕಿಂತ ಪರಮ ಸುಖ ಮತ್ತೊಂದಿಲ್ಲ ಎನ್ನುವ ಪ್ರಾಣಿ, ಬದುಕಿರುವುದರಲ್ಲೇ ಸ್ವಾರಸ್ಯವನ್ನು ಕಂಡುಕೊಂಡಿರುವ ಜೀವಿ ಅದೊಂದೇ. ಅತ್ಯಾಧುನಿಕ ದರ್ಶನವಾದ ಅಹಮಸ್ಮಿತಾಪಾರಮ್ಯವಾದಕ್ಕೆ ಇದೇ ಅಧಿದೇವತೆ ಎನ್ನಬೇಕು. ಲೋಕ ಕಡೆಗಣಿಸಿದರೇನಂತೆ? ಉಪಯುಕ್ತ ವಸ್ತುವನ್ನು ಮರ್ಯಾದಿಸುವವರಾರು? ಒಂದು ಕಾಲಕ್ಕೆ ಉಪಯೋಗಕ್ಕೆ ಬಂದದ್ದು ಕಾಲಕ್ರಮೇಣ ಅನುಪಯುಕ್ತವಾದರಂತೂ ಅದು ಕಸಕ್ಕಿಂತ ಕಡೆಯಾಗುತ್ತದೆ. ಯಾವುದು ಮೊದಲಿನಿಂದಲೂ ಅನುಪಯುಕ್ತವೋ ಅದಕ್ಕೇ ಕಡೆಯವರೆಗೂ ಪೂಜೆ. ಮುದಿಕತ್ತೆಗೆ ಮೋಟು ಗೋಡೆಯೇ ಗತಿ. ನಮ್ಮ ಮನೆಯಿದಿರು ಅಂಥ ಗೋಡೆಯೊಂದಿದೆ; ಅದನ್ನೊರಗಿಕೊಂಡು ದಿನದಿನ ಕತ್ತೆಯೊಂದು ನಿಲ್ಲುತ್ತದೆ. ಕತ್ತೆಗೆ ಕನಿಕರಿಸಿ ಯಾರೇನು ಮಾಡಲು ತಾನೆ ಸಾಧ್ಯ? ಆದರೆ ಅದಕ್ಕೆ ಕನಿಕರಿಸದಿರುವುದು ತಾನೆ ಎಂತು?

ಅಲ್ಲದೆ ನನಗೂ ಕತ್ತೆಗೂ ಎಳತನದಿಂದಲೂ ಸ್ನೇಹ. ಅದಕ್ಕೆ ನನ್ನನ್ನು ಅಕ್ಷರಾಭ್ಯಾಸ ಕಾಲದಿಂದಲೂ ಹೋಲಿಸಿ ಹಿರಿಯರು ಅದರ ವಿಷಯದಲ್ಲಿ ನನಗೆ ಮಮತೆ ಹುಟ್ಟು ಹಾಕಿದ್ದಾರೆ. ಅದರ ಒಂದು ಕುಡಿಕೆ ಹಾಲು ನನ್ನ ಜೀವದಲ್ಲಿ ಸೇರಿಕೊಂಡಿದೆ. ಅರ್ಧರಾತ್ರಿಯಲ್ಲಿ ಗುಡಿಯಿಂದ ಮನೆಗೆ ಬರುತ್ತಿದ್ದ ನಮ್ಮ ತಾತನನ್ನು ಅದು ಒದ್ದು ಹಾಸಿಗೆ ಹಿಡಿಯುವಂತೆ ಮಾಡಿತು. ಬೈಸಿಕಲ್ ಕಲಿಯುತ್ತಿದ್ದಾಗ ನಡುರಸ್ತೆಯಲ್ಲಿ ಮಲಗಿ ನಾನು ಎಷ್ಟು ಗಂಟೆ ಬಾರಿಸಿದರೂ ದಾರಿ ಬಿಡದೆ ನನ್ನನ್ನು ಬಚ್ಚಲಲ್ಲಿ ಕೆಡವಿ ತಾನು ಹಾಯಾಗಿ ಮಲಗಿಯೇ ಇತ್ತು ಈ ಕತ್ತೆ. ಅದು ನಡುಬೀದಿಯಲ್ಲೋ ತಿಪ್ಪೆಯ ಬೂದಿಯಮೇಲೋ ಹೊರಳಾಡುವುದನ್ನು ನೋಡುವುದೇ ಒಂದು ಸಂಭ್ರಮ ನಮಗೆ. ಅದರ ಧ್ವನಿಯನ್ನು ಕೇಳುವುದೂ ಅದರಂತೆ ನಟಿಸುವುದೂ ನಮಗೆಲ್ಲರಿಗೂ ಒಂದು ದೊಡ್ಡ ವಿನೋದೋತ್ಸವ

ವಾಗಿತ್ತು. ಹೀಗೆ ನಮ್ಮ ಸುಖದುಃಖದಲ್ಲಿ ಬೆರೆತು ಆತ್ಮೀಯವಾಗಿರುವ ಕತ್ತೆ ಈಗ ನಮ್ಮ ಮನೆಯೆದುರಿನ ಮೋಟು ಗೋಡೆಯನ್ನೊರಗಿಕೊಂಡು ಸುಮ್ಮನೆ ಉರಿಬಿಸಿಲಿನಲ್ಲಿ ನಿಂತಿದೆ. ಅಯ್ಯೋ ಪ್ರಾಣಿ. ಒಂದು ನೂರು ದೂರದಲ್ಲಿ ಒಳ್ಳೆ ನೆರಳಿದೆಯಲ್ಲ, ಅಲ್ಲಿ ಹೋಗಿ ನಿಲ್ಲಬಾರದೆ ? ಈ ಬಿರುಬಿಸಿಲಿನಲ್ಲಿ ಯಾವ ಹಿತ ಕಂಡಿದೆಯೋ ಈ ಕತ್ತೆ, ಎಂದುಕೊಂಡೆ ನಾನು ಮನಸ್ಸಿನಲ್ಲಿ.

ಕೆಲವು ಪ್ರಾಣಿಗಳಿಗೆ ದೂರ ಮನಸ್ಪರ್ಶನ ಸಾಮರ್ಥ್ಯವುಂಟೆಂದು ಆಧುನಿಕ ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಈ ಕತ್ತೆಗಂತೂ ಅದು ಉಂಟೆಂಬುದು ನನಗೀ ದಿನ ಸ್ಪಷ್ಟವಾಯಿತು. "ಎಲಾ, ನಿನಗಿಂತ ನಾನು ಅದೆಷ್ಟೋ ಹಳಬ ; ನೀವು ಬುಡಮಟ್ಟ ಹೋದಮೇಲೂ ಈ ಭೂಮಿಯ ಮೇಲೆ ಉಳಿಯತಕ್ಕವನೂ ನಾನೇ. ನನಗೆ ಬುದ್ಧಿ ಹೇಳುವುದಕ್ಕೆ ಬರುತ್ತೀಯಲ್ಲ. ನನ್ನ ಹಿತಾಹಿತ ನನಗೆ ಗೊತ್ತೇ ಹೊರತು ನಿನಗೆ ಹೇಗೆ ತಿಳಿದೀತು ? ನನ್ನ ಬೆನ್ನಿಗೆ ಬಿಸಿಲು ಬೀಳುವುದು ತಾನೇ ಯಾವಾಗ ? ಬೆನ್ನಿಗೆ ನೆರಳು, ಮೂಟಿಗೆ ಬಿಸಿಲು. ಇಷ್ಟು ಗೊತ್ತಾಗಬೇಡವೆ ನಿನಗೆ ?" ಎಂದಿತು ಕತ್ತೆ.

ಕತ್ತೆಯ ನೆಪದಲ್ಲಿ ನಾನೇ ಮಾತಾಡಿಕೊಳ್ಳುತ್ತಿದ್ದೇನೆ ಎಂದು ಯಾರಾದರೂ ಭಾವಿಸಿದರೆ ಅದು ತಪ್ಪಾದೀತು. ನಾವು ನೂರು ಮಾತಿನಲ್ಲಿ ಹೇಳುವುದನ್ನು ಅದು ತನ್ನೊಂದು ಓರೆಗಣ್ಣಿನ ನೋಟದಲ್ಲಿ ತಿಳಿಸುತ್ತದೆ, ಬಾಲವಾಡಿಸಿ ನುಡಿಯುತ್ತದೆ. ಅದರ ಮೌನವೇ ಒಂದು ಭಾಷಣ ; ಅದು ಕಿರಿಚುವುದಕ್ಕೆ ಪ್ರಾರಂಭಿಸಿದರೆ ಅದಕ್ಕೆ ವ್ಯಾಖ್ಯಾನವೇ ಇಲ್ಲ. ಅದು ಸರಿಯೇ, ಆದರೆ ನಗರದಲ್ಲಿ ಕತ್ತೆ ಕಿರುಚುವುದನ್ನು ನಾನು ಕೇಳಿಯೇ ಇಲ್ಲವಲ್ಲ—ಆಶ್ಚರ್ಯ, ಆಶ್ಚರ್ಯ. ಈ ಗಾನದೋಸೆಗಳು ಅದನ್ನು ನಾಚಿಸಿಬಿಟ್ಟವೆಯೋ ? ಅದು ಹೊರಳಾಡಿದ್ದನ್ನೂ ಕಾಣೆ. "ಇಲ್ಲೇನು ಶುಭ ಕಂಡು ಕಿರಿಚಬೇಕು ನಾವು ? ಇಲ್ಲೇನಾದರೂ ಬೂದಿಯಿದೆಯೇ, ಮರಳಿನ ನೆಲ ಇದೆಯೇ, ಗರಿಕೆ ಹಸುರಿದೆಯೇ ನಾನು ಉರುಳಾಡುವುದಕ್ಕೆ ? ದಿಕ್ಕೆಟ್ಟವರು ಪಟ್ಟಣಕ್ಕೆ ಬರಬೇಕು, ಅಷ್ಟೇ," ಎಂದಿತು ಕತ್ತೆ ಬಾಲ ಬೀಸಿ, ಓರೆ ನೋಟ ಬೀರಿ. ಎಲೆಲಾ, ಕತ್ತೆ ಕಿರಿಚುವುದು ಶುಭ ಕಂಡಾಗ ಮಾತ್ರವೇ ? ನನಗೆ ಈ ವಿಷಯ ಇದುವರೆಗೂ ತಿಳಿಯದಲ್ಲ. ಆಕೆಯನ್ನಾದರೂ ಕೇಳಿ ತಿಳಿದುಕೊಳ್ಳೋಣ ಎಂದು, "ಲೇ" ಎಂದೆ. ಪೂಜ್ಯರೂ ಪ್ರಿಯರೂ ವಿದ್ವಾಂಸರೂ ಆದ ವೃದ್ಧರೊಂದಿಗೆ ಆಕೆ ಒಳಗೆ ಮಾತನಾಡುತ್ತಾ ಕುಳಿತಿದ್ದವಳು ಹೊರಗೆ ಬಂದಳು. "ಕತ್ತೆ ಯಾವ ಶಕುನಕ್ಕೆ ಬರು

ತ್ತದೆ?" ಎಂದೆ. "ಅದು ಕಿರಿಚಿದರೆ ತುಂಬ ಒಳ್ಳೆಯದು. ಶುಭ ಶಕುನ" ಎಂದಳಾಕೆ. "ಅಹುದು ಅಹುದು, ಕತ್ತೆಯ ಕೂಗಿಗಿಂತ ಒಳ್ಳೇ ಶಕುನವುಂಟೆ? ಕೃಷ್ಣ ಹುಟ್ಟಿದಾಗ ಅರ್ಧ ರಾತ್ರಿಯಲ್ಲಿ ಕತ್ತೆಯೊಂದೇ ಕಿರಿಚಿದ ಪ್ರಾಣಿ." ಎಂದರು ಹೊರಗೆ ಆಕೆಯೊಂದಿಗೆ ಬಂದ ಆ ವೃದ್ಧ ಪಂಡಿತರು. "ನೋಡು, ಆ ಕತ್ತೆ ಸುಮಾರು ಒಂದು ತಿಂಗಳಿಂದ ಇಲ್ಲಿ ನಿಂತಿದೆ, ಒಂದು ದಿನವೂ ಕಿರಿಚಿದ್ದು ಕಾಣೆ." "ಅದೃಷ್ಟ ಕುಲಾಯಿಸಿದ್ದರೆ ತಾನೆ, ನೀವು ಹೊರಕ್ಕೆ ಹೊರಟಾಗ ಅದು ಕೂಗುವುದಕ್ಕೆ?" ಎಂದಳಾಕೆ. ನಿಜ, ಕತ್ತೆಯ ಮೌನಕ್ಕೆ ನನ್ನ ಜಾತಕದ ಅಷ್ಟಕ ವರ್ಗದಲ್ಲಿದೆ ಕಾರಣ. ಗ್ರಹ ಚೇಷ್ಟೆಗೂ ಗಾರ್ದಭಸ್ವನಕ್ಕೂ ಸಂಬಂಧವುಂಟು. ಗ್ರಹ ಬಿಟ್ಟಾಗ ಗಾರ್ದಭ ಕೂಗುತ್ತದೋ ಅಥವಾ ಕೂಗಿದ ಮೇಲೆ ಗ್ರಹ ಬಿಟ್ಟು ಹೋಗುತ್ತದೋ ಇದೊಂದು ಸಮಸ್ಯೆಯಾಗಿದೆಯಲ್ಲ. ಶಕುನಗಳು ತೋರಿದ ಮೇಲೆ ಮಂಗಳಗಳು ಬರುತ್ತವೋ, ಇಲ್ಲ ಶುಭಗಳೊದಗಿದ ಬಳಿಕ ಶುಭ ಶಕುನ ಗಳು ತಲೆದೋರುತ್ತವೋ ಕಾಣೆ. ಶಾಸ್ತ್ರಜ್ಞರದು ಮೊದಲನೆಯ ಪಕ್ಷ; ಆದಿಕವಿ ವಾಲ್ಮೀಕಿಯದು ಎರಡನೆಯ ಪಕ್ಷ; ಬೇಕಾದರೆ ಸುಂದರಕಾಂಡದಲ್ಲಿ ಅತ್ಯಂತ ಚಿಕ್ಕದಾದ ಐದಾರೇ ಶ್ಲೋಕಗಳುಳ್ಳ ಒಂದು ಸರ್ಗವಿದೆ. ಅದನ್ನು ಓದಿರಿ. ಅದರಲ್ಲಿ ಸೀತಾದೇವಿಯ ವಾಮಭಾಗವೆಲ್ಲ ಹೇಗೆ ಅದುರಿತು ಎಂಬುದರ ವರ್ಣನೆ ಇದೆ. ಆಕೆಗೆ ರಾಮದೂತನಾಗಮಿಸಿ ತನ್ನ ಮರದ ರೆಂಬೆಯಲ್ಲಿ ಅಡಗಿ ಕುಳಿತಿರುವ ಶುಭ ಒದಗಿದ ಮೇಲೆ ಈ ಶುಭ ಶಕುನಗಳು ಮೈಯಲ್ಲಿ ಕಾಣಿಸಿಕೊಂಡವು ಎನ್ನುತ್ತಾರೆ ಮಹರ್ಷಿ—ಸಿರಿ ಬಂದ ಮೇಲೆ ಉಪಜೀವಿಗಳೂ ಬರುವ ಹಾಗೆ. ಶಾಸ್ತ್ರ ಪಕ್ಷ ಬೇರೆ. ಋಷಿಪಕ್ಷ ಸುಖದುಃಖಗಳೂ ಶುಭಾಶುಭಗಳೂ ಮನುಷ್ಯನ ಕೋರಿಕೆ ಯಂತೆ ವರ್ತಿಸದೆ ತಮ್ಮ ನೇರಕ್ಕೆ ತಾವು ನಡೆಯುತ್ತವೆ ಎಂದು ಹೇಳಿದರೆ, ಶಕುನ ಗಳು ಶುಭಾಶುಭಗಳನ್ನು ನಿಮ್ಮ ಅಡಿಯಾಳಾಗಿ ಮಾಡುತ್ತವೆ ಎಂದು ಶಾಸ್ತ್ರ ಸಮಯ ಹೇಳುತ್ತದೆ. ಉದಾಹರಣೆಗೆ ನೀವು ಮನೆ ಬಿಟ್ಟು ಹೊರಡುವಾಗ ಕಾಗೆ ಎಡದಿಂದ ಬಲಕ್ಕೆ ಹೋದರೆ—ಇದು ಶುಭಶಕುನವೋ ಅಪಶಕುನವೋ ಸಂದೇಹಕ್ಕಿಟ್ಟುಕೊಂಡಿದೆಯಲ್ಲಾ—ಹಿಂದಿರುಗಿ ಬಂದು, ಸ್ವಲ್ಪ ಹೊತ್ತು ಕುಳಿತು, ಒಂದು ಗುಟುಕು ನೀರು ಕುಡಿದು ಮತ್ತೆ ಹೊರಟರಾಯಿತು. ಹೀಗೆ ಶಾಸ್ತ್ರ ಎಲ್ಲ ದಕ್ಕೂ ಪರಿಹಾರ ಹೇಳುತ್ತದೆ, ಶಾಂತಿ ಕರ್ಮಗಳನ್ನು ವಿಧಿಸುತ್ತದೆ, ಪೌರುಷ ವನ್ನು ದೈವಕ್ಕಿಂತ ಹೆಚ್ಚಿನ ಸ್ಥಾನದಲ್ಲಿ ಕೂರಿಸುತ್ತದೆ. ನಾನು ಪೌರುಷವಾದಿ

ಯಲ್ಲ. ವೇಳೆ ಬಂದಾಗ ಕತ್ತೆ ಕಿರಿಚುವುದನ್ನು ತಪ್ಪಿಸಲು ಯಾರಿಗೆ ತಾನೆ ಸಾಧ್ಯ? ಅದಕ್ಕಾಗಿ ಅಗಸರ ಕೇರಿಯ ಬಳಿ ಸುತ್ತಾಡುವ ಮನುಷ್ಯ ನಾನಲ್ಲ. ಆದರೂ ಕತ್ತೆಯ ಬುದ್ಧಿ ನಾವು ತಿಳಿದಿರುವಷ್ಟು ಮಂದವಲ್ಲ. ಮಂದ್ರದಿಂದ ತ್ರಿಸ್ತರ ತಾರ ಷಡ್ಜದವರೆಗಿನ ಸಮಸ್ತ ಅಪಸ್ವರಗಳನ್ನೂ ತೇಗಿ ತೇಗಿ ಮುಗಿಸುವ ಈ ಪ್ರಾಣಿ ಪುರುಷೋತ್ತಮನವತರಿಸಿದ ಪುಣ್ಯ ಮುಹೂರ್ತವನ್ನು ಗುರುತಿಸಿ ತನ್ನ ಬೃಹದ್ರಾವದಿಂದ ಇಡೀ ನಗರವನ್ನೇ ಎಬ್ಬಿಸತೊಡಗಿತಲ್ಲ! ಅರಮನೆಯ ಪಹರೆಯವರು ಅದನ್ನೇ ಹೊಡೆದು ಮಲಗಿದರೋ ಏನೊ—ಕೃಷ್ಣ ನಿಜವಾಗಿ ಅದೃಷ್ಟಶಾಲಿ, ಆ ಅಂತರದಲ್ಲಿ ಯಶೋದೆಯ ಪಕ್ಕಕ್ಕೆ ನುಸುಳಿಕೊಂಡು ಬದುಕಿದ. ನಮ್ಮ ಕೊಂಬು ಕಹಳೆ ತುತ್ತೂರಿ ಝಲ್ಲರಿ ತಾಳ ಡಮ ವಾದ್ಯಗಳ ಶುಭನಾದಕ್ಕೆ ಇದೇ ಆಕರಧ್ವನಿಯೋ?

ಹೀಗೆ ಆಲೋಚಿಸುತ್ತಿರುವಲ್ಲಿ, ಕತ್ತೆ ಎಂದಿತು: "ಶ್ರೀಕೃಷ್ಣನುದಿಸಿದಾಗ ಮಂಗಳ ತೂರ್ಯವನ್ನು ಮೊಳಗಿಸಿದುದೊಂದೇ ಅಲ್ಲ, ನನ್ನ ಬೆನ್ನಿನ ಮೇಲೆ ಮತ್ತೊಬ್ಬ ಮಹಾತ್ಮನನ್ನೂ ಹೊತ್ತು ಮೆರವಣಿಗೆ ಹೊರಟಿದ್ದೆ, ಗೊತ್ತೆ ನಿನಗೆ?" ನಾನು ಅಜ್ಞಾನವನ್ನು ಸೂಚಿಸಿದೆ. "ಮಹಾತ್ಮ ಏಸುಕ್ರಿಸ್ತ ನನ್ನ ಮೇಲೇರಿಕೊಂಡು ಜರೂಸಲಂ ನಗರದಲ್ಲಿ ಉತ್ಸವ ಹೊರಟ. ಆ ಹಬ್ಬದ ದಿನದ ಅನುಕರಣೆ ಈಗಲೂ ಅಲ್ಲಿ ಪ್ರತಿ ವರ್ಷವೂ ನಡೆಯುತ್ತಿದೆ. ನಿಮ್ಮ ದೇಶದಲ್ಲಿ ಮಾತ್ರ ನಾವು ನಿಕೃಷ್ಟರು, ಅಷ್ಟೇ" ಎಂದಿತು ಕತ್ತೆ. ಈ ಮಾತನ್ನು ಕೇಳಿ ನನಗಾದ ಆನಂದ ಆಶ್ಚರ್ಯ ಅಷ್ಟಿಷ್ಟಲ್ಲ. ವಿಚಿತ್ರ ಪ್ರಪಂಚ; ಇದರಲ್ಲಿ ಯಾರಿಗೆ ಎಲ್ಲಿ ಏತಕ್ಕೆ ಹೇಗೆ ಕೀರ್ತಿ ಪ್ರತಿಷ್ಠೆಗಳು ದೊರೆಯುತ್ತವೋ ಹೇಳಲು ಬರುವಂತಿಲ್ಲ. ಕತ್ತೆಯಲ್ಲಿ ನನಗಿದ್ದ, ಆದರೆ ನಾನು ಬಹಿರಂಗವಾಗಿ ಹೇಳಿಕೊಳ್ಳಲಾಗದ. ಅಭಿಮಾನಕ್ಕೆ ಮೆರಗು ಕೊಟ್ಟಿತು ಈ ಇಬ್ಬರು ಲೋಕಪೂಜ್ಯರಿಗೂ ಅದಕ್ಕೂ ಇರುವ ಸಂಬಂಧ.

"ನಾನು ಎಡವುವುದಿಲ್ಲ, ಮುಗ್ಗರಿಸುವುದಿಲ್ಲ, ಬೆಟ್ಟ ಗುಡ್ಡಗಳೆಂದರೆ ನನಗೆ ಲೆಕ್ಕವೇ ಇಲ್ಲ. ನಿನ್ನ ಮನೆಗೆ ಕಣಿವೆಯ ಮೂಲಕ ವರ್ಷಕ್ಕಾಗುವಷ್ಟು ಬತ್ತವನ್ನು ವರ್ಷವರ್ಷವೂ ಹೊತ್ತಿದ್ದೇನೆ. ನೀನೊಂದು ದಬ್ಬರಿ ಒಳ್ಳೆಯ ನೀರನ್ನು ನನ್ನ ಮುಂದಿಟ್ಟದ್ದೀಯಾ? ನಿನ್ನೊಂದಿಗೆ ಮಾತೇಕೆ?" ಎಂದು ಸುಮ್ಮನಾಯಿತು ಕತ್ತೆ. ನಿಶ್ಚಯ, ಮನುಷ್ಯನಿಗೆ ಅದರ ಉಪಕಾರ ಹೆಚ್ಚು. ನಮ್ಮ ಮೂಟೆಯನ್ನು ಹೊರುವುದಕ್ಕೆಂದೇ ದೇವರದನ್ನು ಸೃಷ್ಟಿಸಿದ್ದಾನೆ ಎಂದುಕೊಂಡು ನಾವು ಅದರ

ಮುಂದೆ ಒಂದು ಹಿಡಿ ಹುಲ್ಲನ್ನೂ ಹಾಕದೆ ದೇವರ ನೈವೇದ್ಯಕ್ಕೆ ಒಂದು ಖಂಡುಗ ಅನ್ನವನ್ನು ರಾಶಿ ಹಾಕುತ್ತೇವೆ. ಒಂದು ನಮಸ್ಕಾರ, ಒಂದು ಬಲಿ, ಒಂದು ಸಲ ನಾಮಸ್ಮರಣೆ ಸಾವಿರ ಪಾಪಗಳನ್ನು ನುಂಗುತ್ತದೆ. ದೇವರಿಲ್ಲದೆ ನಮ್ಮ ಹೃದಯುವನ್ನು ನಾವು ಕಠೋರವಮಾಡಿಕೊಳ್ಳುವುದು ಕಷ್ಟ.

"ಸದ್ಯ ನೀವು ನಮ್ಮನ್ನು ತಿಂದುಹಾಕದೆ ಬಿಟ್ಟಿದ್ದೀರಲ್ಲ, ಅದೊಂದು ದೊಡ್ಡ ಉಪಕಾರ," ಎಂದಿತು ಕತ್ತೆ. "ಅಯ್ಯೋ ಪೆಚ್ಚೆ, ನಮ್ಮ ಮಾಂಸ ಒರಟು, ರುಚಿಯಿಲ್ಲ ಕಣೆ, ಅದಕ್ಕೋಸ್ಕರ ಬಿಟ್ಟಿದ್ದಾರೆ. ಆ ಒಂಟೆಯ ಪಾಡನ್ನು ನೋಡು," ಎಂದಿತು ಈಗದರ ಜತೆಗೆ ಸೇರಿಕೊಂಡು ನಿಂತ ಮತ್ತೊಂದು ಕತ್ತೆ. "ಅಬ್ಬ ಮನುಷ್ಯರ ನಾಲಗೆಗಿಂತ ಕ್ರೂರವಾದದ್ದು ಈ ಸೃಷ್ಟಿಯಲ್ಲೇ ಇಲ್ಲ. ಇದೊಂದರಿಂದ ಎಷ್ಟು ಪ್ರಾಣಿವಂಶಗಳು ನಿರ್ನಾಮವಾಗಿ ಹೋಗಿವೆ. ಮಾಂಸವೊಂದೇ ಅಲ್ಲ, ಒಳ್ಳೆ ದಂತ, ಒಳ್ಳೆ ಕೂದಲು, ಒಳ್ಳೆ ಗರಿ, ಒಳ್ಳೆ ಚರ್ಮ—ಯಾವುದನ್ನೂ ಈ ಪ್ರಾಣಿ ಬಿಡುವುದಿಲ್ಲ. ಸದ್ಯ ನಮಗೆ ಒಳ್ಳೆಯ ಕೂದಲಿಲ್ಲ, ಚರ್ಮವಿಲ್ಲ, ಮಾಂಸವಿಲ್ಲ, ರೆಕ್ಕೆಯಿಲ್ಲ ಪುಕ್ಕವಿಲ್ಲ, ಗಟ್ಟಿ ಮೂಳೆ ಇದೆ, ಸ್ವಂತ ಬುದ್ಧಿ ಇದೆ ಅಷ್ಟೆ," ಎಂದಿತು ಆಗಂತುಕ ಧೇನುಕ.

"ನಿಜ, ನಿಜ, ನಮ್ಮ ಮೂಳೆ ಗಟ್ಟಿಯಾಗಿಲ್ಲದಿದ್ದರೆ ಬಲಿಷ್ಠ ಸಾಂಸನ್ನನಿಗೆ ಅಷ್ಟು ಜನ ಘಾತಕರನ್ನು ಕೊಲ್ಲಲಾಗುತ್ತಿತ್ತೆ?" ಎಂದಿತು ಪ್ರಥಮ ಗಾರ್ದಭ.

ಇದೇನಿದು ಹೊಸ ಕಥೆ? ಇಂದ್ರನಿಗೆ ದಧೀಚಿ ಮಹರ್ಷಿ ತನ್ನ ಬೆನ್ನಮೂಳೆಯನ್ನು ಕೊಟ್ಟು ವಜ್ರಾಯುಧದ ನಿರ್ಮಾಣಕ್ಕೆ ಸಹಾಯಕನಾದ. ಕತ್ತೆಯ ಮೂಳೆಗೂ ಮಹರ್ಷಿಯ ಮೂಳೆಯಷ್ಟು ಪ್ರಭಾವವೇ?

"ಬೇಕಾದರೆ ದೇವರ ಪುಸ್ತಕವನ್ನು ಓದು. ನಮ್ಮ ಹೆಗಲ ಮೂಳೆಯನ್ನು ಎತ್ತಿಕೊಂಡು ಆ ಪರಮ ಬಲಿಷ್ಠ ಸಾವಿರ ಜನ ದೈವದ್ರೋಹಿಗಳನ್ನು ಕೊಂದ. ನಿಮ್ಮ ಇಂದ್ರ ಒಬ್ಬ ಅಸುರನನ್ನು ಹೊಡೆದ. ಯಾರ ಮೂಳೆ ಹೆಚ್ಚು?"

ನಾನು ನಿರುತ್ತರನಾದೆ.

"ಇಷ್ಟಕ್ಕೆ ನಮ್ಮ ಮಹಿಮೆ ತೀರಲಿಲ್ಲ," ಎಂದಿತು ಬಂದ ಕತ್ತೆ. "ಈಜಿಪ್ಟಿನಲ್ಲಿ ಕ್ಲಿಯೋಪಾತ್ರ ಎಂಬ ರಾಣಿಯಿದ್ದಳು. ತುಂಬ ಸುಂದರಿ. ಅವಳ ಮೂಗು ಸ್ವಲ್ಪ ಚಿಕ್ಕದಾಗಿದ್ದರೆ ಪ್ರಪಂಚದ ಚರಿತ್ರೆ ಬೇರೆಯಾಗುತ್ತಿತ್ತು ಎಂದು ಯಾವನೋ ಒಬ್ಬ ನಿಮ್ಮಲ್ಲಿ ಹೆಸರುವಾಸಿಯಾದವನು ಹೇಳಿದ್ದಾನಂತೆ. ಏನೂ

ತಿಳಿಯದ ಆಸಾಮಿ. ಅವಳ ರೂಪಕ್ಕೆ ಆ ಸೆಳತ ಬಂದದ್ದು ನಮ್ಮ ಹಾಲಿನ ಮಹಿಮೆಯಿಂದ."

"ಆಕೆಗೂ ಎಳವು ಬಂದಿತ್ತೆ, ನಿಮ್ಮ ಹಾಲನ್ನು ಕುಡಿಸುವುದಕ್ಕೆ ?" ಎಂದೆ ನಾನು.

"ಎಳವು ಬರುವುದಕ್ಕೆ ಅವಳಿಗೇನು ಕೇಡು? ಅವಳ ಚರ್ಮದ ಕಾಂತಿ, ಮುಖದ ಹೊಳಪು ಇವಕ್ಕೆ ನಮ್ಮ ಹಾಲು ಕಾರಣ. ಅದರಲ್ಲಿ ಅವಳು ನಿತ್ಯ ಸ್ನಾನ ಮಾಡುತ್ತಿದ್ದಳು. ರೋಮನ್ ಪ್ರಭು ಆಸೆಪಟ್ಟದ್ದು ನಮ್ಮ ಹಾಲಿಂದ ತೊಳೆದ ಅವಳ ಮೈಗೇ ಹೊರತು ಮೂಗಿಗಲ್ಲ." ಎಂದಿತು ಮೊದಲ ಕತ್ತೆ.

"ಹಾಗಾದರೆ ನಾವು ಇಲ್ಲಿ ಹಸುಗಳಿಗೂ ಎಮ್ಮೆಗಳಿಗೂ ಮಾಡುವಂತೆ, ನಿಮ್ಮ ಮರಿಗಳನ್ನು ಸಾಯಗೊಟ್ಟು ಹಾಲು ಕರೆದುಕೊಂಡು ಕೊಳಗಳನ್ನು ತುಂಬು ತ್ತಿದ್ದರೇ ಅವರು ? ನೀವಲ್ಲಿ ಹಿಂಡುಗಟ್ಟಲೆ ಇದ್ದಿರಾ? ಏನು ಕೆಲಸವಿತ್ತು ನಿಮಗಲ್ಲಿ ?"

"ನಮಗಿಷ್ಟವಿಲ್ಲದ ಕೆಲಸವನ್ನು ನಮ್ಮಿಂದ ಮಾಡಿಸಲು ದೇವರಿಗೇ ಸಾಧ್ಯ ವಿಲ್ಲ. ನಮ್ಮ ಬುದ್ಧಿ ನಮ್ಮ ಕೈಲಿರುವವರೆಗೂ ನಮ್ಮ ಮರಿಗಳಿಗೇನು ಭಯ ? ನಾವಲ್ಲಿ ಇರದಿದ್ದರೆ ಅವರ ಗೋರಿಗಳಿಗೆ ಕಲ್ಲನ್ನು ಹೊರುವವರೂ ಎಳೆಯು ವವರೂ ಯಾರು ? ಸತ್ತವರ ಜತೆಗೆ ಇದ್ದವರನ್ನೂ ಹೊತ್ತು ಹಾಕುತ್ತಿದ್ದರಲ್ಲ ಆ ಮೂಢ ಪ್ರಾಣಿಗಳು, ಅಂಥವರನ್ನು ಹೂಳಲು ಬೆಟ್ಟವನ್ನಾದರೂ ಹೊತ್ತೇವು" ಎಂದಿತು ಎರಡನೆಯ ಕತ್ತೆ.

"ಹೌದು ಹೌದು, ನೀವು ಊಹು ಎಂದರಾಯಿತು. ನಿಮಗೆ ಬುದ್ಧಿ ಕಲಿಸು ವುದು ಕಷ್ಟ. ನೀವು ಬಂಧುಪ್ರಿಯರು ; ನಿಮ್ಮ ಮೂರ್ಖತನವನ್ನು ಬಿಡಿಸಲು ಮನುಷ್ಯ ಎಷ್ಟು ದೊಣ್ಣೆಗಳನ್ನು ಮುರಿದಿದ್ದಾನೋ. ಆದರೆ ಅದು ಒಂದಿಷ್ಟೂ ಕಂದಿದಂತಿಲ್ಲ" ಎಂದೆ ನಾನು.

"ನಮ್ಮ ಬುದ್ಧಿ ನಮಗಿರದಿದ್ದರೆ ನಿಮ್ಮೊಂದಿಗೆ ಬದುಕಿರುವುದಕ್ಕಾಗುತ್ತಿತ್ತೆ ?" ಎಂದಿತು ಮೊದಲನೆಯದು.

ನಿಜ. ಕತ್ತೆಯ ಮನಸ್ಸನ್ನು ಬದಲಾಯಿಸುವುದು ದುಸ್ಸಾಧ್ಯವೇ ಸರಿ.

ಈ ವಿಚಾರದಲ್ಲಿ ಈಚೆಗೆ ನಡೆದ ಪ್ರಸಂಗವೊಂದು ನೆನಪಿಗೆ ಸುಳಿದು ಮನಸ್ಸನ್ನು ತುಂಬ ಆಪ್ಯಾಯನಗೊಳಿಸುತ್ತದೆ. ಆಗ ನಮ್ಮ ದೇಶಕ್ಕೆ ಸ್ವಾತಂತ್ರ್ಯ

ಬಂದು ನಮ್ಮ ರಾಜ್ಯ ಜನಪ್ರಿಯ ನಾಯಕರ ಆಡಳಿತದಲ್ಲಿರಲು ಮೊದಲಿಟ್ಟಿತ್ತು. ಜಲಜೀವಿಗಳು ಸ್ಥಳಜೀವಿಗಳಾಗುವುದಕ್ಕೆ ಹೇಗೆ ಕಷ್ಟಪಡುತ್ತವೋ ಹಾಗೆ ಜನಪ್ರಿಯ ನಾಯಕರು ಪ್ರಭುಗಳ ಸ್ಥಾನವನ್ನು ಅಲಂಕರಿಸಲು ಕಿರಿಕಿರಿ ಪಡುತ್ತಿದ್ದರು. ಈ ಕಡೆ ಜನ ಇವರು ನಮ್ಮವರು ಎಂದು ಹಲ್ಲು ಕಿರಿದರೆ, ಆ ಕಡೆ ಅಧಿಕಾರಿ ವರ್ಗದವರು ನಿನ್ನೆ ನಮ್ಮ ಬಂದಿಗಳಾಗಿದ್ದವರಿಗೆ ಇಂದು ನಾವು ವಂದಿಗಳಾಗಬೇಕಲ್ಲ, ಹೇಗೆ ವರ್ತಿಸಿದರೆ ಹೇಗೋ ಎಂದು ಅರ್ಧ ತಿರಸ್ಕಾರ ಅರ್ಧ ಆತಂಕ ಮುಕ್ಕಾಲು ಬಿಂಕ ಹೀಗೆ ಅವರನ್ನು ಪರಿವಾರಿಸಿ ಬರುತ್ತಿದ್ದಾರೆ. ಮಂತ್ರಿಗಳಿಗೂ ಪ್ರಭುತ್ವ ಹೊಸದು. ಆದರೆ ಮೊದಮೊದಲ ದಿನಗಳಲ್ಲಿ ಅವರು ತಮ್ಮ ಜನನಾಯಕತ್ವವನ್ನು ಮೆರೆಸಲು ಹೆಚ್ಚಾಗಿ ಆಸಕ್ತರಾಗಿದ್ದರು. ಜನವೂ ಸಹ ಅವರನ್ನು ಹಾಗೆಯೇ ಭಾವಿಸಿ ಆದರ ತೋರುವುದಕ್ಕೆ ಕಾದಿರುತ್ತಿದ್ದರು. ಅಂಥ ಒಂದು ಪ್ರಸಂಗ. ನೂತನ ಮಂತ್ರಿ ಪದಸ್ಥರು ಊರಿಗೆ ಜಾತ್ರೆ ಕಾಲದಲ್ಲಿ ಮೊದಲು ಭೇಟಿ ಕೊಡುವ ದಿನ. ಚತುಷ್ಪಥದಲ್ಲಿ ಮುಖ್ಯ ಬೀದಿಯನ್ನು ತೆರವು ಮಾಡಿ ಅಡ್ಡ ಬೀದಿಗೆ ಈ ಕಡೆಯಿಂದ ಆ ಕಡೆಗೆ ಹೋಗಲಾಗದಂತೆ ತಡೆಗಟ್ಟಿ ಜನ ಗೋಡೆಯ ಹಾಗೆ ನಿಂತಿದೆ. ಆ ಕಡೆಯಲ್ಲಿ ಒಂದೆರಡು ಕತ್ತೆಗಳು. ಈ ಕಡೆಯಲ್ಲಿ ಒಂದೆರಡು; ಮಧ್ಯೆ ಈ ದ್ವಿಪದ ಕುಡ್ಯ. ಕತ್ತೆಗಳಿಗೆ ಒಂದುಗೂಡಿಕೊಳ್ಳಬೇಕೆಂಬ ಮನಸ್ಸು. ಪಾಪ, ಅವಕ್ಕೆ ಮಂತ್ರಿಗಳು ಬರುತ್ತಿರುವುದು ತಿಳಿಯದು ; ಜನಕ್ಕೆ ಕತ್ತೆಗಳ ಬಯಕೆ ತಿಳಿಯದು. ಈ ಕಡೆಯವು ಆ ಕಡೆಗೆ ನುಸಿದು ಹೋಗಲು ಜನ ಅವಕಾಶ ಕೊಡರು, ಕತ್ತೆಗಳು ಬಿಡವು.

ಆ ದಿನ ಅವುಗಳ ಮೈಮೇಲೆ ಎಷ್ಟು ಕಲ್ಲುಗಳು ಒಡೆದವೋ ಎಷ್ಟು ದೊಣ್ಣೆಗಳು ಮುರಿದವೋ. ಆದರೆ ಹತ್ತು ಗಜ ದೂರದಲ್ಲಿರುವ ಮರುಓಣಿಗೆ ಅವನ್ನು ಓಡಿಸುವ ಹೊತ್ತಿಗೆ ಜನಕ್ಕೆ ಸಾಕಾಗಿ ಹೋಗುತ್ತಿತ್ತು. ಬೆನ್ನು ತಿರುಗಿಸಿದರೆ ಸಾಕು ಪುನಃ ಈ ಕತ್ತೆಗಳು ಯಥಾಸ್ಥಾನದಲ್ಲಿ ಹಾಜರು. ಹೀಗೆ ಸ್ಪರ್ಧೆ ನಡೆಯುತ್ತಿರವಾಗ ಮಂತ್ರಿಗಳು ಆಗಮಿಸಿದರು ; ಜನ ಒಂದು ಕ್ಷಣ ತಮ್ಮ ಗಮನವನ್ನು ಅವರ ಕಡೆಗೆ ತಿರುಗಿಸಿದರು. ಕುಶಾಗ್ರಬುದ್ಧಿಗಳಾದ ಕತ್ತೆಗಳು ಆದೇ ಕ್ಷಣದಲ್ಲಿ ಜನಗಳ ನಡುವೆ ಹಿಗ್ಗಾಮುಗ್ಗ ನುಗ್ಗಿ ಎದುರು ಬೀದಿಯಲ್ಲಿ ನಿಂತಿದ್ದ ತಮ್ಮೊಡನಾಡಿಗಳೊಡನೆ ಕೂಡಿಕೊಂಡು ದೌಡಾಯಿಸಿ ಬಿಟ್ಟವು. ಆ ಕೋಲಾಹಲವನ್ನು ವರ್ಣಿಸಲಸದಳ. ಜನ ಮಂತ್ರಿಗಳನ್ನೂ ಮರೆತು ಈ ವೈಖರಿಯನ್ನು ನೋಡುತ್ತಾ ನಿಂತುಬಿಟ್ಟಿತು.

ಕತ್ತೆಗಳನ್ನು ತಮ್ಮ ಉದ್ದೇಶದಿಂದ ಚಲಿಸುವಂತೆ ಮಾಡುವುದು ಕಷ್ಟ. ನಾನು ಈ ದೃಶ್ಯವನ್ನು ನೆನೆದುಕೊಳ್ಳುತ್ತಾ ಗಾರ್ದಭ ವಿಜಯಕ್ಕೆ ಹರ್ಷಿಸುತ್ತಿದ್ದಾಗ, ಗಂಡು ಕತ್ತೆ ಎಂದಿತು, "ನಮ್ಮಿಂದ ಪಾಠ ಕಲಿಯದಿದ್ದರೆ ನಿಮಗೆ ಸ್ವಾತಂತ್ರ್ಯವೇ ದೊರಕುತ್ತಿರಲಿಲ್ಲ." "ಈ ಮಾತು ಸ್ವಲ್ಪ ಹೆಚ್ಚಾಯಿತಲ್ಲವೇ ?" ಎಂದೆ ನಾನು. "ಉಹು" ಎಂದಿತು ಕತ್ತೆ. "ಹೇಗೆ" ಎಂದೆ ನಾನು. "ನಿಮ್ಮ ಮಹಾತ್ಮ ನಿಮಗೆ ಹೇಳಿದ್ದೇನು ? ಜ್ಞಾಪಿಸಿಕೊ," ಎಂದಿತು ಖರ. ಮಹಾತ್ಮರು ನೂರು ಮಾತು ಹೇಳಿ ಹೋಗಿದ್ದಾರೆ, ಯಾವುದನ್ನು ನೆನೆದುಕೊಳ್ಳುವುದು ಯಾವುದನ್ನು ಬಿಡುವುದು ? ಈಗೊಂದೂ ನೆನಪಿಗೆ ಬಾರದಲ್ಲ, ಎಂದು ಸುಮ್ಮನಿದ್ದೆ ನಾನು. "ಯಾಕೆ, ಜ್ಞಾಪಕಕ್ಕೆ ಬರಲಿಲ್ಲವೇ—ದುಡಿತಕ್ಕೂ ಬಡಿತಕ್ಕೂ ಅಂಜಬೇಡಿ, ನಿಮ್ಮ ಬುದ್ಧಿ ನಿಮ್ಮ ಕೈಲಿರಲಿ—ಇಷ್ಟೇ ಅಲ್ಲವೆ ಆತ ಹೇಳಿದ್ದು ?"

"ನಿಜ, ನಿಜ, ಇದಕ್ಕಿಂತ ಆತ ಹೆಚ್ಚು ಹೇಳಿದ್ದು ಕಾಣೆ." ಎಂದೆ ನಾನು, ಅದರ ತಿಳಿವಳಿಕೆಗೆ ಮೆಚ್ಚಿ.

"ಹಾಗಾದರೆ ನಮ್ಮಿಂದಲೇ ಪಾಠ ಕಲಿತಿರಬೇಕು ಆತ. ನಾವಲ್ಲದೆ ಮಿಕ್ಕಾವ ಜಂತು ಈ ವಿದ್ಯೆಯನ್ನು ಕಲಿಸೀತು ? ನಿಮಗೆ ಸ್ವರಾಜ್ಯ ದೊರೆತದ್ದೂ ಈ ಗುಣ ದಿಂದ," ಎಂದಿತು ಆ ದಿಟ್ಟ ಧೇನುಕ. ನಾನು ವಿಸ್ಮಯದಿಂದ ಮೂಕನಾದೆ. ದಿಟ, ಮಹಾತ್ಮರಂತೆ ದುಡಿದವರಾರು, ಬಡಿತಗಳನ್ನು ತಿಂದವರಾರು? ಆದರೂ ಸ್ವಬುದ್ಧಿಯನ್ನೂ ನಿಷ್ಠೆಯನ್ನೂ ಬಿಡದೆ ಇದ್ದವರೂ ಯಾರು ? ಅವರೂ ಅವರ ಅನುಯಾಯಿಗಳೂ ಪೆಟ್ಟು ತಿಂದು ಪಟ್ಟು ಹಿಡಿದಿದ್ದರಿಂದಲ್ಲವೇ ನಮಗೀ ವೈಭವ ದೊರೆತಿದ್ದು ? ಎಲೆಲಾ ಗಾರ್ದಭ, ತತ್ವ ಕಂಡವ ನೀನು. ನಿನ್ನನ್ನು ಮೂರ್ಖ ನೆನ್ನುವುದು ತಪ್ಪು—ನಿನ್ನದು ಸ್ವನಿಷ್ಠೆ, ಇಲ್ಲ, ಸ್ವಾತ್ಮಸ್ವೈರಿತಾನಿಷ್ಠೆ, ಅದಮ್ಯ ಪ್ರತ್ಯೇಕತಾ ಯೋಗ—ಮೂವರು ಮಹಾಪುರುಷರನ್ನು ನಿನ್ನ ಗುಣಗಳ ಬುಟ್ಟಿಗೆ ಹಾಕಿಕೊಂಡು ಬಿಟ್ಟೆಯಲ್ಲ. ನೀನು ದೇವರ ಕಡೆಯವನೇ ಸರಿ, ಎಂದೆ ನಾನು.

"ದೇವರ ಕಡೆಯೊಂದೇ ಅಲ್ಲ; ದೆವ್ವದ ಕಡೆಗೂ ಇದ್ದೇವೆ," ಎಂದಿತು ಗಂಡು ಕತ್ತೆ.

"ಹ್ಞಾ. ಇದೇನು ಹೊಸ ಪುರಾಣ, ನಿನ್ನದು!" ಎಂದೆ ನಾನು.

"ಹೊಸದೇನಲ್ಲ, ಹಳೆಯ ಪುರಾಣವೇ. ನಾವಿಲ್ಲದಿದ್ದರೆ ದೆವ್ವ ಬದುಕುತ್ತಲೇ

ಇರಲಿಲ್ಲ. ಬೇಕಾದರೆ ತಿಳಿದವರನ್ನು ಕೇಳು ಹೇಳುತ್ತಾರೆ. ಇಲ್ಲದಿದ್ದರೆ ದೇವರ ಪುಸ್ತಕವನ್ನು ಓದು," ಎಂದಿತು ಖರ.

"ಏನು ಕಥೆ, ಸ್ವಲ್ಪ ಹೇಳಬಾರದೇ," ಎಂದೆ ನಾನು, ನಿಜವಾದ ಕುತೂಹಲವನ್ನು ತೋರಿ.

"ನೋಡು, ಈ ನೆಲ ಇದೆಯಲ್ಲ, ಇದಕ್ಕಿಂತ ಒಳ್ಳೆ ಜಾಗ ಮತ್ತೊಂದಿಲ್ಲ. ಆದರೆ ಇಲ್ಲಿಗೆ ಎಲ್ಲಿಂದಲೋ ನೀರು ಬಂತು, ಬಂತು. ಬಂತು, ಎಲ್ಲ ಮುಳುಗಿಹೋಯಿತು. ಎಲ್ಲ ಪ್ರಾಣಿಗಳೂ ಮುಳುಗಿ ಸಾಯತೊಡಗಿದವು. ಆಗ ನ್ಹೋವ ಎಂಬ ದೇವರ ಕಡೆಯವನು ಒಂದು ತೆಪ್ಪ ತಂದ, ರಖಮುವಾರು ಜಾತಿಗೆರಡರಂತೆ ಎಲ್ಲ ಮೃಗ ಪಕ್ಷಿಗಳನ್ನೂ ಅದಕ್ಕೇರಿಸಿದ. ದೆವ್ವಕ್ಕೆ ಮಾತ್ರ ಅವಕಾಶ ಕೊಟ್ಟಿರಲಿಲ್ಲ. ನಾವಿದ್ದ ಜಾಗ ಇನ್ನೂ ಮುಳುಗಿರಲಿಲ್ಲ. ಮುಳುಗುವವರೆಗೂ ನಮಗೂ ಭಯವಿಲ್ಲ. ಆ ತೆಪ್ಪವೋ ತುಂಬಿಹೋಗಿತ್ತು. ಇನ್ನೂ ಸ್ವಲ್ಪ ಹೊತ್ತು ಭೂಮಿಯಮೇಲಿರೋಣ ಎನ್ನಿಸಿತು ನಮಗೆ. ನ್ಹೋವನಿಗೆ ಆತುರ ಹೆಚ್ಚು—"ಹತ್ತಿರಿ ಹತ್ತಿರಿ" ಎಂದ. ನಾವು ಉಹು ಒಲ್ಲೆ ಎಂದು ಮಲಗಿಯೆ ಬಿಟ್ಟೆವು ನಮ್ಮನ್ನು ಕದಲಿಸುವುದಕ್ಕೆ ಅವನಿಗಾಗುತ್ತದೆಯೇ? ದೊಣ್ಣೆ ತೆಗೆದುಕೊಂಡು ನನಗೋ ಅದಕ್ಕೋ ಕಾಣೆ ಎರಡು ಬಿಗಿದು, 'ದೆವ್ವ, ದೋಣಿಗೇರುತ್ತೀಯೋ ಇಲ್ಲವೋ, ಎಂದು ಕಿರಿಚಿದ. ಅದುವರೆಗೂ ಹೊರಗಡೆ ಪ್ರವೇಶ ದೊರೆಯದೆ ಕಾದಿದ್ದ ದೆವ್ವ ಆ ಮಾತು ಕೇಳಿದ ಕ್ಷಣ ತೆಪ್ಪದೊಳಕ್ಕೆ ತೂರಿಕೊಂಡಿತು. ನಾವೂ ಯಥಾ ಸಾವಕಾಶವಾಗಿ ಏರಿಕೊಂಡೆವು. ನಾವಿಲ್ಲದೆ ದೆವ್ವ ಆ ಪ್ರಳಯದಲ್ಲಿ ಉಳಿಯುತ್ತಿತ್ತೆ, ಹೇಳು ನೋಡೋಣ." ಎಂದಿತು ಕತ್ತೆ.

"ಹಾಗಾದರೆ, ದೆವ್ವವನ್ನು ಉಳಿಸಿದವರೂ ನೀವೇ?" ಎಂದೆ ಬೆರಗಿನಿಂದ ನಾನು. ದೆವ್ವವಿಲ್ಲದೆ ಬರಿ ದೇವರಿರುವ ಲೋಕ, ಅದೆಂಥ ನೀರಸ ಪ್ರಪಂಚ—ಆಗ ನಮ್ಮ ವಿದ್ಯೆಗಳಿಗೂ ಮತಗಳಿಗೂ ಗತಿಯೇನು? ದುಃಖತ್ರಯಾಭಿಘಾತವಲ್ಲವೆ ಸಕಲ ಜಿಜ್ಞಾಸೆಗಳಿಗೂ ಮೂಲ? ದೆವ್ವವಿಲ್ಲದಿದ್ದರೆ ಈ ತಾಪತ್ರಯಗಳಿಗೇ ಕೊಡಲಿಪೆಟ್ಟು ಬೀಳುತ್ತದೆಯಲ್ಲ. ಆತನಿಲ್ಲದಿದ್ದರೆ ಕಾವ್ಯವೆಲ್ಲಿ, ಕತೆಯೆಲ್ಲಿ, ದೈವಜ್ಞರೆಲ್ಲಿ, ದೇವೋಪಾಸಕರೆಲ್ಲಿ, ಜಿಜ್ಞಾಸುಗಳೆಲ್ಲಿ? ದೆವ್ವವಿಲ್ಲದೆ ದೈವವಿಲಾಸವನ್ನು ಗುರುತಿಸುವವರಾರು? ಲೋಕ ಸ್ವಾರಸ್ಯವಾಗಿರುವುದಕ್ಕೆ ದೇವರ ಪ್ರತಿಸ್ಪರ್ಧಿ ದೆವ್ವ ಕಾರಣ. ದೆವ್ವದುಳಿವಿಗೆ, ಪ್ರಳಯ ಕಾಲದಲ್ಲೂ ತನ್ನ ಬುದ್ಧಿಯನ್ನು ಬಿಡದ

ಕತ್ತೆ ಕಾರಣ. ಭಲೆ ಗಾರ್ದಭ, ಎಂದುಕೊಂಡೆ ನಾನು.

ಎದುರು ಕಡೆಯ ಕತ್ತೆಯ ಬಿಳಿ ಮುಸುಡಿ ಸ್ವಲ್ಪ ನಗುವಂತೆ ತೋರಿತು. ಹೆಣ್ಣು ಗಂಡನ್ನು ಓರೆಗಣ್ಣಿಂದ ನೋಡುತ್ತಿತ್ತು. ಗಂಡು ಅದರ ಕತ್ತನ್ನು ಮೃದುವಾಗಿ ಕಚ್ಚುತ್ತಿತ್ತು. ಬಿಸಿಲೋ ಹುರಿಯುವಂತಿತ್ತು. ಇದೇನು ಹೆಣ್ಣು ಗಂಡಿನ ಮುಸುಡಿಯ ಮೇಲೆ ಒದೆಯುತ್ತಿದೆಯಲ್ಲ—ಏನು ಅವಜ್ಞತೆ ನಡೆಸಿತದು? ಈ ಪಾದತಾಡನಕ್ಕೆ ಆ ಗಂಡು ಅಂಜಿದಂತೆ ಕಾಣಲಿಲ್ಲ. ಒದೆ ತಿಂದಷ್ಟೂ ಅನುವರ್ತನೆಯೂ ಸ್ನೇಹವೂ ಹೆಚ್ಚಿದಂತಿದೆ. ವಾತ್ಸ್ಯಾಯನ ಋಷಿ ಈ ತೆರದ ಧೇನುಕ ಪ್ರಣಯದಿಂದಲೂ ಸ್ವಾರಸ್ಯವನ್ನು ಎತ್ತಿಕೊಂಡು ತನ್ನ ಕಾಮಸೂತ್ರದಲ್ಲಿ ಹೆಣೆದುಕೊಂಡಿದ್ದಾನೋ? ಇದೇನು ಈ ಕತ್ತೆ ಜಯದೇವನ ಮಾತನ್ನೇ ಆಡುತ್ತಿರುವಂತಿದೆಯಲ್ಲ. 'ಕತ್ತೆಯಿಂದ ಕಲಿಯಬೇಕಾದುದು ಬೇಕಾದಷ್ಟಿದೆ, ಸೊಮ್ಮಿಲ್ಲದ ಹಮ್ಮಿನವರು ಈ ಕತ್ತೆಯ ಬಾವುಟವನ್ನು ಹಾರಿಸಬಹುದು,' ಎಂದು ನಾನು ಎನ್ನುವಷ್ಟರಲ್ಲಿ, ಆ ಗಂಡು ಕತ್ತೆ ಒಂದು ಸಲ ನನ್ನತ್ತ ನೋಡಿ, "ಸೊಮ್ಮುಳ್ಳ ಅಮೇರಿಕಾ ದೇಶದ ಒಂದು ಪ್ರಬಲ ಪಕ್ಷದವರ ಬಾವುಟದಲ್ಲಿ ಯಾರ ಚಿತ್ರವಿದೆ, ನೋಡು" ಎಂದು ಹೇಳಿ, ಹೆಣ್ಣಿನೊಡನೆ ಧಾವಿಸಿತು. ಸಿರಿಗೆ ನೆಲೆಯಾಗಿರುವ ಅಮೇರಿಕಾದಲ್ಲಿ ಧೇನುಕಧ್ವಜ ವಿಜೃಂಭಿಸುತ್ತಿದೆಯೋ! ನಾನು ಬೆರಗಾದೆ.

ಶ್ರೀಸಾಮಾನ್ಯ

ಈಗ ಸಾಮಾನ್ಯನೇ ನಮ್ಮ ಪ್ರಭು—ಇದು ಆತನ ರಾಜ್ಯ ಎಂಬ ಸೊಲ್ಲು ಎಲ್ಲೆಲ್ಲೂ ಮೊಳಗುತ್ತಿದೆ. ರಾಜನೆಂದರೆ ಆತನನ್ನು ನೋಡಲು ಎಲ್ಲರೂ ಆಸೆ ಪಡುವುದು ಸ್ವಾಭಾವಿಕ. ಆದರೆ ಆತನನ್ನು ಪತ್ತೆ ಮಾಡುವುದೇ ಕಷ್ಟವಾಗಿದೆ. ಶ್ರೀಮಾನ್ ಸಾಮಾನ್ಯನಾರು—ಆತ ಎಲ್ಲಿದ್ದಾನೆ—ಅವನ ವೈಶಿಷ್ಟ್ಯವೇನು, ಅವನಿಗೂ ಅಸಾಮಾನ್ಯನಿಗೂ ಇರುವ ವೈಲಕ್ಷಣ್ಯವೆಲ್ಲಿದೆ? ಬಹಳ ವರ್ಷಗಳಿಂದ ಇದನ್ನು ಆಲೋಚಿಸುತ್ತಿದ್ದೇನೆ. ಆದರೆ ತೋಚದು. ಯಾವ ವ್ಯಕ್ತಿಯಾದರೂ ಸರಿಯೆ ನನಗೆ ಸಾಮಾನ್ಯನ ಹಾಗೆ ತೋರುವುದೇ ಇಲ್ಲ; ದೇವರು ಆತನಿಗೆ ಸ್ವಲ್ಪ ಗಮನಕೊಟ್ಟು ಸೃಷ್ಟಿಸಿದಂತೆಯೇ ಕಾಣುತ್ತದೆ. ನಮ್ಮ ಮನೆಗೆ ಭಿಕ್ಷಕ್ಕೆ ಆಗಾಗ ಒಬ್ಬ ದಾಸಯ್ಯ ಬರುತ್ತಾನೆ. ಬಲಗೈಯಲ್ಲಿ ಶಂಕು ಎಡಗೈಯಲ್ಲಿ ಜಾಗಟೆ. ಜಾಗಟೆಯನ್ನು ಒಂದು ತ್ರಿಶ್ರಗತಿಯಲ್ಲಿ ಬಾರಿಸುತ್ತ ಆತ ಶಂಖದಲ್ಲಿ ಒಂದು ತರದ ಓಂಕಾರನಾದವನ್ನು ಸುಮಾರು ಎರಡು ಮೂರು ನಿಮಿಷಗಳ ಕಾಲ ಹೊರಡಿಸುತ್ತಾನೆ. ಅದನ್ನು ಕೇಳಿದ ಕಿವಿಗೆ ಬೇರೊಂದು ರುಚಿಸದು. ಸಂಗೀತದ ಪಲುಕುಗಳೆಲ್ಲ ಅಪ್ರಯೋಜಕ ಅದರ ಮುಂದೆ—ಇದು ಹೊನ್ನು, ಅವು ಗುನ್ನಾಂ ಪಟ್ಟೆಯ ತುಣುಕುಗಳು. ಹೀಗೆ ನಮ್ಮ ಮನಸ್ಸನ್ನು ನಿರ್ಮಲೋಲ್ಲಾಸದಿಂದ ತುಂಬುವ ಆ ಮನುಷ್ಯನನ್ನು ಸಾಮಾನ್ಯ ಎಂದು ಹೇಳಲಾಗುತ್ತದೆಯೇ? ಹೀಗೆ ಅನೇಕರ ವಿಷಯದಲ್ಲಿ ಸಾಮಾನ್ಯತಾ ಭ್ರಮೆ ನನಗೆ ಅವರವರ ವಿಶಿಷ್ಟ ವ್ಯಕ್ತಿಮೆಯಿಂದ ತೊಲಗಿ ಹೋಗಿದೆ. ಹಾಗೆ ನೋಡಿದರೆ ನನ್ನಲ್ಲಿ ನನಗೇನೂ ವೈಶಿಷ್ಟ್ಯ ಕಾಣುವುದಿಲ್ಲ. ಆದುದರಿಂದ ನಾನೇ ಶ್ರೀಸಾಮಾನ್ಯ ಎಂಬ ಖಚಿತವಾದ ತಿಳಿವಳಿಕೆಗೆ ಬಂದುಬಿಟ್ಟಿದ್ದೇನೆ. ನನ್ನ ಮನೆಯವರೂ, ನೆರೆಹೊರೆಯವರೂ, ಸಹೋದ್ಯೋಗಿಗಳೂ, ಪದವೀಧರರೂ, ಪ್ರತಿಷ್ಠಾವಂತರೂ ಇದನ್ನು ಗಳಿಗೆಗಳಿಗೆಗೂ ಸ್ಥಿರಪಡಿಸುತ್ತಿದ್ದಾರೆ; ಈ ಸ್ಥಿರೀಕರಣದಲ್ಲಿ ನಾನೂ ಸಹ ಏನೂ ಹಿಂದೆ ಬಿದ್ದಿಲ್ಲ. ನಗರದ ದೊಡ್ಡ ರಸ್ತೆಗಳ ಮಗ್ಗುಲಿಗೆ ಸೊಂಟದೆತ್ತರಕ್ಕೆ ಹಾಕಿರುವ ಕಲ್ಲುಗೋಡೆಯ ಹಾಸುಗಲ್ಲಿನ ಮೇಲೆ ಮಧ್ಯಾಹ್ನದ ಹೊತ್ತು ಕುಳಿತುಕೊಂಡು ಗಾಂಧೀಬಾದಾಮಿಯನ್ನು ಅರ್ಥಾತ್ ನೆಲಗಡಲೆಕಾಯನ್ನು ಹೊಟ್ಟು ಬಿಡಿಸಿ ತಿನ್ನಲು ನನಗಾಸೆ.

ಅದೇ ಗೋಡೆಯ ಮೇಲೆ ಸ್ವಲ್ಪ ದೂರದಲ್ಲಿ ಪರಂಗಿಹಣ್ಣು, ಸೌತೇಕಾಯಿ, ಸೀಬೆ ಹಣ್ಣು, ಟೊಮಾಟೋ ಇತ್ಯಾದಿಗಳನ್ನು ಒಂದು ಗಾಜಿನ ಡಬ್ಬದಲ್ಲಿರಿಸಿಕೊಂಡು ಚೂಪಾದ ಚೂರಿಯಲಗಿನಲ್ಲಿ ಮೋಜಾಗಿ ಹೆರೆದು ಕತ್ತರಿಸಿ ಉಪ್ಪು ಕಾರವನ್ನು ಹಚ್ಚಿಕೊಡುವ ವ್ಯಾಪಾರಿಯ ಹತ್ತಿರ ವ್ಯವಹರಿಸಲೂ ನಾನು ಹಿಂದು ಮುಂದು ನೋಡಿನು. ಕರಗದ ಗುಂಪಿನಲ್ಲಿ ಕರಗಿಹೋಗಲು ನನಗುತ್ಸಾಹವಿನ್ನೂ ಹಿರಿಲ್ಲ. ನಗರದ ಬಸ್ಸಿನಲ್ಲಿ ಕುಳಿತರೆ ಪ್ರಾಯಶಃ ನನ್ನ ಮಗ್ಗುಲನ್ನು ಅರಸಿಕೊಂಡು ಬರುವವನು ಶ್ರೀ ಸಾಮಾನ್ಯ. ಅಲ್ಲಿ ಮುಂದಿನ ಸೀಟಿನಲ್ಲಿ ಠೀವಿಯಿಂದ ಯೂರೋಪಿನವನ ಹಾಗೆ ಉಟ್ಟು ತೊಟ್ಟು ಕುಳಿತಿರುವವನ ಮಗ್ಗುಲಲ್ಲಿ ಜಾಗವಿದ್ದರೂ ಅಲ್ಲಿಗೆ ಹೋಗುವೊಲ್ಲ; ನನ್ನ ಪಕ್ಕದ ಇರುಕಿಗೇ ಬರಲು ಹವಣಿಸುತ್ತಾನೆ. ಈ ಊರಿನಲ್ಲಿ ದಾರಿ ಕೇಳುವ ಹಳ್ಳಿಗನು ಹತ್ತಿರ ನಿಂತಿರುವ ಠಾಕ್‌ಠೀಕ್ ಪುರುಷನನ್ನು ಕೇಳದೆ ನನ್ನನ್ನೇ ಏಕೆ ಕೇಳಬೇಕು? ನನ್ನಲ್ಲಿ ಆತ ತನ್ನಲ್ಲಿರುವ ಸಾಮಾನ್ಯತೆಯನ್ನು ಗುರುತಿಸಿಯೇ ಅಲ್ಲವೆ? ಕೋರ್ಟು ಕಚೇರಿ ಆಸ್ಪತ್ರೆಗಳನ್ನು ಕಂಡರೆ ನನಗೂ ಆತನಷ್ಟೇ ಭಯ. ಕ್ಲಬ್ಬುಗಳಲ್ಲಿ ನನಗೆ ಸದರವೂ ಇಲ್ಲ. ಪ್ರವೇಶವೂ ದೊರೆಯುದು. ಕಾಫಿ ಹೋಟಲಿಗೆ ಹೋದರೆ ಪ್ರಾಯಶಃ ಮಾಣಿ ನನಗೆ ಪಿಂಗಾಣಿ ಬಟ್ಟಲಿನಲ್ಲಿ ಕಾಫಿಯನ್ನು ತಂದಿರಿಸನು, ಗಾಜಿನ ಲೋಟವೇ ನನ್ನ ಪಾಲಿಗೆ; ಅದೇ ನನ್ನ ಮಗ್ಗುಲಲ್ಲಿ ಶ್ರೀಮಂತಠೀವಿಯಲ್ಲಿರುವ ಮನುಷ್ಯನಿಗೆ ಅದೇ ಮಾಣಿ ಪಿಂಗಾಣಿ ಕಪ್ಪು ಸಾಸರುಗಳಲ್ಲಿ ಆ ಮಹಾಪಾನೀಯವನ್ನು ಬಡಿಸಬೇಕೇ? ನನ್ನ ಜುಬ್ಬದ ತೋಳಿನಂಚಿನಲ್ಲೋ, ಕತ್ತಿನ ಪಟ್ಟಿಯಲ್ಲೋ ಕೋಟಿನ ಗುಂಡಿಯಲ್ಲೋ, ಬೋಳುತಲೆಯಲ್ಲೋ, ಅಥವಾ ಹಣೆಯಲ್ಲೋ, ಸಾಮಾನ್ಯತೆಯ ಕುರುಹು ಅಚ್ಚಳಿಯದೆ ಕೆತ್ತಿರಬೇಕು. ಯಾರು ನೋಡಿದರೂ ಗುರುತಿಸುವಹಾಗೆ.

ಹೀಗೆ ನಾನೊಬ್ಬ ಸಾಮಾನ್ಯ ಎಂದು ಆ ತನದಲ್ಲಿ ಹಾಯಾಗಿ ರಾಜನ ಹಾಗೆ ಇದ್ದುಕೊಂಡಿರಬೇಕಾದರೆ ಸ್ಟೇಟ್ ಟೀಪಾರ್ಟಿಗೆ ಇದ್ದಕ್ಕಿದ್ದ ಹಾಗೆಯೇ ಒಂದೊಂದು ಸಲ ಆಮಂತ್ರಣಪತ್ರಿಕೆ ರಾಜಲಾಂಛನದೊಡನೆ ಬಂದುಬಿಡುತ್ತದೆ. ಮನೆಯವರಿಗೆ ಏನೋ ಸಿರಿಬಂದಷ್ಟು ಸಂತೋಷ. ಅಷ್ಟಗಲದ, ಅಷ್ಟುದ್ದದ, ಅಷ್ಟು ಮಂದವಾದ ದಂತದಂಥ ಹಾಲುಕಾಗದರಟ್ಟಿನಲ್ಲಿ ಈ ಸ್ವರ್ಣಾಂಚಿತ ರಿಬ್ಬನ್ ವಿಭೂಷಿತ ಆಹ್ವಾನಪತ್ರಿಕೆಯನ್ನು ಕಂಡು ನನಗೂ ಆಶ್ಚರ್ಯ—ನಾನೂ

ಅಸಾಮಾನ್ಯನೇ ? ಇದು ದಾರಿತಪ್ಪಿ ಬಂದಿರಬಹುದೆಂದು ಎರಡು ಮೂರುಸಲ ವಿಳಾಸವನ್ನು ನಾನು ನೋಡಿದ್ದುಂಟು–ಜತೆಗೊಂದು ಕಾರುಪಾಸು ಬೇರೆ–ಭಲೆ ಕಾಂಪೌಂಡು ಗೋಡೆಯು ಕುಡ್ಯವಾಹನನನ್ನೂ, ಕ್ಷೌರಿಕನು ಕನಿಕರದಿಂದ ಉಳಿಸಿರುವ ಜುಟ್ಟುಗನನ್ನೂ, ಬಸ್ಸಿಗೆ ಕ್ಯೂ ಕಾಯುವ ಈ ಮಹಾರಥಾಶ್ರಯನನ್ನೂ ಅವರು ಏನೆಂದುಕೊಂಡರೋ. ಇರಲಿ, ಯಾವ ಸಾಮಾನ್ಯನಿಗೆ ಅಸಾಮಾನ್ಯನಾಗಬೇಕೆಂಬಾಸೆಯಿಲ್ಲ, ತನ್ನ ಮನೆಯವರ ಮಟ್ಟಿಗಾದರೂ? ಆಗ ಡ್ರೆಸ್ಸನ್ನು ಹವಣಿಸಿಕೊಳ್ಳುವುದೇ ಒಂದು ದೊಡ್ಡ ಸಡಗರ. ಜುಬ್ಬವನ್ನೂ ಟೋಪಿಯನ್ನೂ ಇಸ್ತ್ರಿಮಾಡಿಸಿರುವುದಿಲ್ಲ, ಉಟ್ಟ ಪಂಚೆಯ ಬಿಳುಪು ಸಾಲದು, ಆಮೇಲೆ ಟ್ಯಾಕ್ಸಿಗಾಗಿ ಮುಡುಪಿನ ಡಬ್ಬಗಳನ್ನೆಲ್ಲ ಶೋಧಿಸಿ ಅಷ್ಟಿಷ್ಟು ರೂಪಾಯಿಗಳನ್ನು ಹವಣಿಸಿಕೊಳ್ಳಬೇಕಾಗುತ್ತದೆ. ಸೌಧದ ತೋರಣಬಾಗಿಲಿನಲ್ಲಿ ಇಳಿದರೆ ನಿಮಗೆ ವೈಭವದ ಸ್ವಾಗತ ದೊರೆಯುತ್ತದೆ. ಸರ್ಕಾರದ ಮುಖ್ಯಕಾರ್ಯದರ್ಶಿಯವರೂ ಸಹ (ಇವರು ಸದ್ಯಕ್ಕೆ ನಿಮಗೆ ಅಪರಿಚಿತರು—ಪರಿಚಿತರಾಗಿದ್ದರೆ ನಿಮಗೆ ಆಮಂತ್ರಣವೇ ಬರುತ್ತಿರಲಿಲ್ಲ) ಬಗ್ಗಿ ನಮಸ್ಕರಿಸಿ ಒಳಕ್ಕೆ ದಯಮಾಡಿಸಿರೆಂದು ಸನ್ನೆಗೈಯುತ್ತಾರೆ. ಅಭ್ಯಾಸವಿಲ್ಲದ ನಿಮಗೆ ಆ ಶಿಷ್ಟ ಶಿಕ್ಷಿತ ವಿನಯ ನಟನೆ ದಂಗುಬಡಿಸುತ್ತದೆ. ಒಳಕ್ಕೆ ಹೋದಮೇಲೆ ಆ ದೃಶ್ಯಬೇರೆ. ಅಲ್ಲಿ ನಿಮಗೆ ಪ್ರಾಯಶಃ ತಿಳಿದವರಾರೂ ಕಣ್ಣಿಗೆ ಬೀಳುವುದಿಲ್ಲ. ಬಿದ್ದರೂ ನಿಮ್ಮ ಸಹವಾಸ ಅವರ ಮಾನಕ್ಕೆ ಕಡಮೆ. ದಿವ್ಯ ವಸ್ತ್ರಾಲಂಕಾರ ಭೂಷಿತರಾದ ಗಂಡಸರೂ ಹೆಂಗಸರೂ ನಿಮ್ಮ ಕಡೆ ತಮ್ಮ ಕೂರ್‌ನೋಟವೆಸೆದು, ಇವನೇಕೆ ಇಲ್ಲಿ ಬಂದ—ಇದು ಡೆಮಾಕ್ರೆಸಿಯ ವೈಭವ—ಶಿಸ್ತಿಲ್ಲ, ಮರ್ಯಾದೆಯಿಲ್ಲ, ಔಚಿತ್ಯವಿಲ್ಲ—ಎಂದುಕೊಳ್ಳುವ ಆ ಮೌನದ ಮಾತು ನಿಮ್ಮ ಕಿವಿಯಲ್ಲಿ ರಣರಣಿಸುತ್ತದೆ. ನಿಮಗೆ ಯಾರನ್ನು ಮಾತಾಡಿಸಬೇಕು, ಎಲ್ಲಿ ಕೂರಬೇಕೆಂಬುದೇ ಗೊತ್ತಾಗುವುದಿಲ್ಲ. ನೀವು ಸೀಟಿಗೆ ತಡಕಾಡುವುದರಲ್ಲೇ ನಿಮ್ಮ ಸಾಮಾನ್ಯತೆ ಎಲ್ಲರಿಗೂ ವಿಶದವಾಗಿಬಿಡುತ್ತದೆ. ಅ-ಸಾಮಾನ್ಯರಾಗಿದ್ದರೆ ಆ ಮೊದಲಸಾಲಿನ ಕುಸುಮಾಲಂಕೃತ ಫಲಭರಿತ ಮೇಜಿನ ಹಿಂದಿನ ಮೆತ್ತನೆ ಕುರ್ಚಿಯ ಮೇಲೆ ನೀವೇಕೆ ಹೋಗಿ ಕೂರಲಿಲ್ಲ? ಕೂತಿದ್ದರೆ ಯಾರು ತಡೆಯುತ್ತಿದ್ದರು ? ಸಾಮಾನ್ಯತೆಗೆ ಭೀರುತೆಯೂ ಒಂದು ಚಿಹ್ನೆ. ನೀವೊಂದು ಖಾಲಿ ಮೇಜನ್ನು ಆರಿಸಿ ಒಂದು ಅಭುಕ್ತಮೂಲೆಯಲ್ಲಿ ಕುಳಿತುಕೊಳ್ಳುತ್ತೀರಿ. ಅಲ್ಲಿಗೆ ಒಬ್ಬರಿಬ್ಬರು ಅಸಾಮಿಗಳೂ ಬರಬಹುದು. ಆದರೆ ನೀವು ಯಾರೆಂದೂ ಯಾವ

ದರ್ಜೆಯವರೆಂದೂ ತಿಳಿದಕೂಡಲೇ ಅವರು ಯಾವುದೋ ಒಂದು ನೆಪ ಹೇಳಿ ನಿಷ್ಕ್ರಮಿಸುತ್ತಾರೆ. ಕೊನೆಗೆ ನಿಮ್ಮ ಜತೆಗುಳಿವವರು ಅವರಿವರನ್ನು ಪುಸಲಾಯಿಸಿ ದಾಕ್ಷಿಣ್ಯದಿಂದ ಆಹ್ವಾನವನ್ನು ಗಿಟ್ಟಿಸಿಕೊಂಡಿರುವ ಸಾಮಾನ್ಯರೇ. ಅವರೂ ಸಹ ನಿಮ್ಮತ್ತ ಗಮನಕೊಡರು. ಏಕೆಂದರೆ ವರ್ಗದವರ ನಡೆಗಳನ್ನು ನಿಟ್ಟಿಸಿ, ನುಡಿಗಳನ್ನು ಆಲಿಸುತ್ತಾ, ಅವರ ಚರಿತೆಗಳನ್ನು ಚರ್ಚಿಸುತ್ತಾ, ಅವರ ಅಂತಸ್ತು ಐಶ್ವರ್ಯಗಳನ್ನು ಅನೇಕವೇಳೆ ತೆಗಳುತ್ತಾ ಕೆಲವುಸಲ ಹೊಗಳುತ್ತಾ ಅತ್ತಲೇ ತಮ್ಮ ಗಮನವನ್ನೆಲ್ಲ ಇರಿಸುತ್ತಾರೆ ಆ ಸ್ವಾಮಿಗಳು. ಅಲ್ಲಿಯೂ ನಿಮಗೆ ವಿವಿಕ್ತತೆ ತಪ್ಪುವುದಿಲ್ಲ. ಡವಾಲಿಗರೂ ಇದೊಂದು ಕರ್ಮ ಎಂಬಂತೆ ನಿಮಗೆ ಕಾಫಿ ಸುರಿದರೂ ಸುರಿದರೇ ಅತ್ತ ಸರಿದರೂ ಸರಿದರೇ. ಕಾಣಿಕೆ ಡಬ್ಬಿಗಳನ್ನು ಖಾಲಿಮಾಡಿದುದೂ ಹುಡುಗರನ್ನು ಬೈದಾಡಿದುದೂ ಗರಿಬಟ್ಟೆಗಳಿಗಾಗಿ ಸಡಗರಿಸಿದುದೂ ವೃಥಾ ಆಯಿತೆಂಬ ಕೊರಗಿನಿಂದ ನೀವು ಮನೆ ಸೇರುತ್ತೀರಿ. ಆದರೆ ಮನೆಯವರಿಗೆ ನಿಮ್ಮ ವರ್ಣನೆಯೇ ಬೇರೆಯಾಗಿರುತ್ತದೆ. ಪಾಪ, ನಿಜವನ್ನು ಹೇಳಿ ಅವರ ಮುಖದಮೇಲೂ ಏಕೆ ತಣ್ಣೀರೆರೆಚಬೇಕು ? ಇಷ್ಟಾದರೂ ಈ ಅನುಭವದಿಂದ ನಿಮಗೆ ಬುದ್ಧಿಬಂದಿತೆಂದೂ ಮುಂದೆ ಎಂದೂ ಇಂಥ ಆಮಂತ್ರಣಗಳನ್ನು ಮನ್ನಿಸುವುದಿಲ್ಲವೆಂದು ಆಣೆ ಇಟ್ಟುಕೊಂಡಿದ್ದನ್ನು ನೀವು ಮುರಿಯುವುದಿಲ್ಲವೆಂದೂ ಹೇಳಲಾರೆ—ಏಕೆಂದರೆ ವರ್ಗದವನಿಗೆ ಸಾಮಾನ್ಯತೆಯಲ್ಲಿ ಎಷ್ಟು ತಿರಸ್ಕಾರವಿದೆಯೋ ಶ್ರೀ ಸಾಮಾನ್ಯನಿಗೆ ವರ್ಗಕ್ಕೇರುವುದರಲ್ಲಿ ಅಷ್ಟು ಪುರಸ್ಕಾರವಿದೆ. ಈ ದೊಡ್ಡಸ್ತಿಕೆಯ ದಾಸಯ್ಯತನವನ್ನು ನಮ್ಮ ಸ್ವಾತಂತ್ರ್ಯವನ್ನೇ ಕೊಟ್ಟು ಕೊಂಡುಕೊಂಡು ಸಾವಿರಾರು ವರ್ಷಗಳಿಂದ ಬೆಳಸಿಕೊಂಡು ಬಂದಿದೇವಲ್ಲ ; ಇಷ್ಟು ಅಮೋಘವಾದ ಐಶ್ವರ್ಯವನ್ನು ಹೇಗೆ ಬಿಟ್ಟುಕೊಡುವುದು ?—ಮತ್ತೊಂದು ರಾಷ್ಟ್ರಾಹ್ವಾನ, ಮತ್ತಷ್ಟು ಸಡಗರ, ಮತ್ತಷ್ಟು ಪ್ರತ್ಯೇಕತೆ, ಮತ್ತೆ ನಿರ್ವೇದ, ಇವು ಪುನರಾವರ್ತಿಸಿ ನೀವು ಯಾವ ವರ್ಗಕ್ಕೆ ಸೇರಿದವರೆಂಬುದನ್ನು ದೃಢಗೊಳಿಸುತ್ತವೆ.

ನೀವು ಏನೇ ಎನ್ನಿ, ರಾಜನೆನ್ನಿ, ಸಾಂರಾಟನೆನ್ನಿ, ಸರ್ಕಾರವೇ ನಿಮ್ಮ ಸೇವಕನೆಂದು ಎಷ್ಟೇ ಪುಸಲಾಯಿಸಿ, ನಮ್ಮೀಗಿನ ಶ್ರೀಸಾಮಾನ್ಯನಿಗೆ ತನ್ನ ಸಾಮಾನ್ಯತೆಯಲ್ಲಿ ಇಷ್ಟವೇ ಇಲ್ಲ. ತಮ್ಮ ಮೇಲುಗಾರಿಕೆಯನ್ನು ಯಾವ ವಿಧದಿಂದಲಾದರೂ ತೋರಿಸಿಕೊಳ್ಳಬೇಕೆಂಬ ಆಸೆ ಜನಸಾಮಾನ್ಯಕ್ಕೇ ಅಂಟಿಕೊಂಡಿರುವಂತಿದೆ.

ಆದಕ್ಕಾಗಿಯೇ ಸಾಮಾನ್ಯ ಗಂಡ ತನ್ನ ಹೆಂಡತಿಯನ್ನು ಹೊಡೆದೋ ಮಕ್ಕಳನ್ನು ಬೈದೋ ಬಡಿದೋತನ್ನ ಪ್ರಾಧಾನ್ಯವನ್ನು ಮೆರೆಸುತ್ತಾನೆ. ಕೆಲವು ಸಂಸಾರಗಳಲ್ಲಿ ಇದು ತಿರುಗುಮುರುಗಾಗುವುದೂ ಇದೇ ಕಾರಣದಿಂದಲೇ. ಜಾತಿ ಮತ ಮಡಿ ಮೋಹಗಳು ಭಾರತದಲ್ಲೇ ಏಕೆ ನೆಲಸಬೇಕು ? ಕೆಲಸಕ್ಕೆ ಬಾರದವರ ಶ್ರೇಷ್ಠತಾ ಕಾಮದಿಂದ ಅಲ್ಲವೆ ? ಕೆಲವರಿಗೆ ಪೊಟ್ಟಣಕ್ಕೆ ಕಟ್ಟಿರುವ ರೀಲಿನ ದಾರವೂ ಸಹ ಮೈಲಿಗೆ—ಮೈಲಿಗೆ ಮುಟ್ಟಾದರೆ ಬಾಯಿಂದ ಹೊರಡುತ್ತವೆ ದುಸ್ಸಹ ದುರ್ಗಂಧ ಶಬ್ದಗಳು. ಕೆಲಸಾಮಾನ್ಯರಿಗೆ ಪೀಠದ ದೊಡ್ಡಸ್ತಿಕೆ, ಕೆಲವರಿಗೆ ವಸ್ತ್ರಗಳದು, ಮತ್ತೆ ಕೆಲವರಿಗೆ ಲಾಂಛನಗಳದು. ಕೆಲಸಾಮಾನ್ಯರನ್ನು ಊಟಕ್ಕೂ ತಾಂಬೂಲಕ್ಕೂ ಹತ್ತುಸಲ ಕರೆಯಬೇಕು. ಗುಂಪಿಗೆ ಸೇರದಿರುವುದೇ ಕೆಲವರ ದೊಡ್ಡಸ್ತಿಕೆ. ಮಕ್ಕಳನ್ನು ಹೊಡೆದಷ್ಟೂ ಅಟ್ಟಿಕೊಂಡಷ್ಟೂ ಉಪಾಧ್ಯಾಯ ಸಾಮಾನ್ಯರಿಗೆ ಊರೊಟ್ಟಿನಲ್ಲಿ ಪ್ರಾಶಸ್ತ್ಯ; ಪೆಟ್ಟಿಗೆಗೆ ಮೊಳೆಗಳನ್ನು ಬಡಿಯುವ ಹಾಗೆ ಅವರು ಅಕ್ಷರಗಳನ್ನೂ ಲೆಕ್ಕಗಳನ್ನೂ ಎಳೆಯರ ತಲೆಗೆ ಬಡಿದೇ ಬಡಿಯುತ್ತಾರೆ. ಇವೆಲ್ಲ ವಿಶಿಷ್ಟರೆನಿಸಿಕೊಳ್ಳುವ ಉನ್ಮಾದದ ಲಕ್ಷಣ—ಅವರು ಸುಸಂಸ್ಕೃತರಲ್ಲ, ಕೋಮಲ ಹೃದಯರಲ್ಲ ಎಂದು ಯಾರೂ ಹೇಳುವಹಾಗಿಲ್ಲ. ಆಶ್ಚರ್ಯ ಆಶ್ಚರ್ಯ, ಪದವಿ ಪ್ರತಿಷ್ಠೆಗಳು ಸಾಮಾನ್ಯ ಮನುಷ್ಯನಿಗೆ ಬಂದಾಗ ಎಷ್ಟು "ನಿಲುಭಾರ" ಅವನಿಗೆ! ಕತ್ತೇ ತಿರುಗದು, ಕಣ್ಣುಗಳು ನೆಟ್ಟಗಾಗುತ್ತವೆ, ತುಟಿಗಳು ಬಿಗಿಯುತ್ತವೆ, ಆತನ ಕೈಗಳು ಕೀಲುಗೊಂಬೆಗಳಂತೆ ಆಗಿಬಿಡುತ್ತವೆ; ಮೊದಲು ಸ್ವೇಚ್ಛೆಯಿಂದಲೂ ನೈಜವಿನಯದಿಂದಲೂ ನಿಮಗೆ ನಮಸ್ಕಾರವನ್ನು ಸೂಚಿಸಿದ ಕೈಗಳು ಇದ್ದಕ್ಕಿದ್ದಹಾಗೆಯೇ ಸೆಟೆತುಕೊಂಡು ನೀವು ನಿಮ್ಮದನ್ನೆತ್ತಿ ಅದಕ್ಕೆ ಚಲನವನ್ನು ಕೊಟ್ಟಾಗ ಮಾತ್ರ ಸಡಿಲವಾಗಿ ನಿಮ್ಮನ್ನು ಅನುಕರಿಸುತ್ತವೆ. ಇಲ್ಲವಾದರೆ ಸ್ತಬ್ಧವಾಗಿಯೇ ಇದ್ದುಬಿಡುತ್ತವೆ. ಶ್ರೀ ಸಾಮಾನ್ಯ ಹೀಗೆ ಶ್ರೀಮಂತಿಕೆಯ ಹಿಡಿತಕ್ಕೆ ಸಿಕ್ಕಿದಾಗ ಆತನ ಮೈ ವಾತಗ್ರಸ್ತವಾಗುವುದೋ ಏನೋ ಎಂದೆನಿಸುತ್ತದೆ ನಮಗೆ. ನನ್ನನ್ನು ಕಂಡರೆ ನಗೆಮೊಗದಿಂದ ಮಾತಾಡಿಸಿ ಗೌರವವನ್ನು ಸೂಚಿಸಿದ ಮನುಷ್ಯನೊಬ್ಬ ನನ್ನ ಪಕ್ಕದಲ್ಲಿ ಅರ್ಧಗಂಟೆಯ ಕಾಲ ಬಸ್ಸಿಗೆ ಕಾದು ನಿಂತಿದ್ದರೂ ನನ್ನತ್ತ ತಿರುಗುವೊಲ್ಲ, ಮಾತನಾಡಿಸುವೊಲ್ಲ; ನಾನು ಈತ ಬೇರೆ ಮನುಷ್ಯ ಎಂದೇ ತಿಳಿದುಕೊಂಡು ಸುಮ್ಮನಾದೆ—ಆಮೇಲೆ ವಿಚಾರಿಸಿದರೆ ಅವನು ಅದೇ ಆಸಾಮಿಯೆಂದೂ ಆದರೆ ಆಗ ತಾನೇ ಗೆಜೆಟೆಡ್

ಪದವಿಗೆ ಏರಿದನೆಂದೂ ತಿಳಿಯಿತು. ಈಗ ನೆನೆದುಕೊಂಡರೆ, ಆತನ ವೇಷವೂ ಬದಲಾಯಿಸಿತ್ತು—ನೆಕ್‌ಟೈ ಕಟ್ಟಿಕೊಂಡಿದ್ದ ಮತ್ತು ತೋಳಿನ ಸಂದಿಯಲ್ಲಿ ಹ್ಯಾಟನ್ನಿರಿಸಿಕೊಂಡಿದ್ದ—ಈ ವಸ್ತ್ರಲಾಂಛನಗಳಿಂದ ನಾನು ತಿಳಿದುಕೊಳ್ಳ ಬೇಕಾಗಿತ್ತು—ಆದರೆ ಈ ಮಂಕುಬುದ್ಧಿಗೆ ಅದು ಹೊಳೆಯಲಿಲ್ಲ.

ಲಾಂಛನಗಳ ಮಾತು ಬಂದಿತಲ್ಲ, ಈಗ ಮತ್ತೊಂದು ವಿನೋದಾಂಶ ನೆನಪಿಗೆ ಬರುತ್ತದೆ. ನನ್ನೊಂದು ಹುದ್ದೆಯಲ್ಲಿ ನನಗೆ ಕತ್ತರಿ ಚಾಕು ಗೋಂದು ಪಿನ್ನು ಗಾಜಿನಗುಂಡು ಶಾಯಿರಬ್ಬರು ಕೆಂಪು-ನೀಲಿ ಸೀಸದಕಡ್ಡಿ ಮುಂತಾದ ಸಾಮಗ್ರಿಗಳು ಆವಶ್ಯಕವಾಗಿ ಬೇಕಾಗಿದ್ದವು. ಅವುಗಳಿಲ್ಲದೆ ಕೆಲಸವೇ ಜರಗು ತ್ತಿರಲಿಲ್ಲ. ಅವನ್ನು ತರಿಸಿಕೊಳ್ಳಬೇಕಾದರೆ ನನಗೆ ಸಾಧ್ಯವೇ ಆಗಲಿಲ್ಲ. ಅವೆಲ್ಲ ಅಧಿಕಾರಲಾಂಛನಗಳು ! ನನಗಿದು ಗೊತ್ತಿರಲಿಲ್ಲ. ನನ್ನ ದರ್ಜೆ ದೈವವಶಾತ್ ಏರಿದಮೇಲೆ ಒಂದು ದಿನ ಇದ್ದಕ್ಕಿದ್ದಹಾಗೆಯೇ ಹರಿದ್ವಸ್ತ್ರಾವೃತವಾಗಿ ಪ್ರಸನ್ನ ವಾಗಿರುವ ಮೇಜಿನ ಮೇಲೆ ಇವೆಲ್ಲ ಓರಣಗೊಂಡಿದ್ದವು. ಆದರೆ ದರ್ಜೆ ಏರಿದ್ದ ರಿಂದ ಇವುಗಳ ಉಪಯೋಗ ನನಗೆ ಅಷ್ಟಾಗಿ ಬೇಕಿರಲಿಲ್ಲ. ಈ ಪದಾರ್ಥಗಳನ್ನು ನೋಡಿಯೇ ಅಂತಸ್ತನ್ನು ಗುರುತಿಸಬಹುದು. ಇವೇ ಸಾಮಾನ್ಯನನ್ನೂ ವಿಶಿಷ್ಟ ನನ್ನೂ ಪ್ರತ್ಯೇಕಿಸುವ ಎಲ್ಲೆಗೆರೆಗಳು. ನಮ್ಮ ದೇಶದಲ್ಲಿ ಇದೊಂದು ಸ್ವಾರಸ್ಯ. ನೈಷ್ಕರ್ಮ್ಯ ಸಿದ್ಧಿಗೆ ಅಧಿಕಾರದ ನಿಚ್ಚಣಿಗೆಯೇ ದಾರಿ. ನಮ್ಮ ದೇಶದಲ್ಲಿ ಅಂತಸ್ತಿಗೆ ಪ್ರಾಶಸ್ತ್ಯವಿರುವಷ್ಟು ಉಪಯುಕ್ತತೆಗಲ್ಲ ಎಂಬುದು ನನಗಾಗ ಮನ ದಟ್ಟಾಯಿತು. ಏಕೆಂದರೆ ಒಂದುದಿನ ಮದರಾಸಿನ ಅಮೆರಿಕನ್ ಕಾನ್ಸುಲೇಟಿಗೆ ನಾನು ಹೋಗಬೇಕಾದ ಪ್ರಸಂಗ ಬಂದಿತು. ಅಲ್ಲಿ ನೋಡಿದಾಗ ಸಾಮಾನ್ಯ ನೆನ್ನದೆ ಅಧಿಕಾರಿ ಎನ್ನದೆ ಎಲ್ಲರಿಗೂ ಪ್ರಶಸ್ತವಾದ ದೊಡ್ಡಮೇಜು, ತಿರುಗು ಮೆತ್ತೆಕುರ್ಚಿ, ಬೇಕಾದ ಸಾಮಾನುಗಳು, ಕೆಲಸಕ್ಕೆ ಹುಮ್ಮಸ್ಸು ಕೊಡುವ ಪರಿಸರ ಇವೆಲ್ಲ ಇದ್ದವು. ಆದರೆ ಅಮೇರಿಕಾ ಕೆಲಸಗಾರರ ಸೀಮೆ ; ವರಂಪೆರೀ ಸ್ವಾಮಿಗಳದಲ್ಲವಲ್ಲ.

ಮೇಲುಗಾರಿಕೆಗೆ ಮತ್ತೊಂದು ಲಕ್ಷಣವಿದೆ : ಅದಷ್ಟು ಜಾಗವನ್ನು ಆಕ್ರಮಿಸುವುದು. ರೈಲಿನ ಮೂರನೆಯ ತರಗತಿಯಲ್ಲೂ ಬಸ್ಸುಗಳಲ್ಲೂ ಕುಳಿತು ಕೊಳ್ಳುವ ಶ್ರೀಮಂತನಾದ ಶ್ರೀಸಾಮಾನ್ಯನಿಗೆ ಒಬ್ಬನಿಗೆ ಮೂವರ ಜಾಗಬೇಕು. ಕೊಡುವ ಹಣ ಎಲ್ಲರಿಗೂ ಒಂದೇ ಪ್ರಮಾಣದ್ದಾಗಿದ್ದರೂ ಸಾಮಾನ್ಯ ಮನುಷ್ಯ

ಇವರಿರುವ ಗಾಡಿ ಸೇರಿದಾಗ ನೆಲದ ಮೇಲೆ ಹುದುಗಿಕೊಂಡೋ ಅಥವಾ ನಿಂತು ಕೊಂಡೋ ಇರಬೇಕಾಗುತ್ತದೆ. Masses ಗೂ Classes ಗೂ ಇರುವ ವ್ಯತ್ಯಾಸವನ್ನು ಜನ ತಮ್ಮ ತಮ್ಮ ವಶದಲ್ಲಿಟ್ಟುಕೊಳ್ಳುವ ಸ್ಥಳಾವಕಾಶಗಳಿಂದ ನಿರಕ್ಕಾಗಿ ಅಳೆದುಬಿಡಬಹುದು. ಈ ಸ್ಥಳಾಕ್ರಮಣಕ್ಕೆ ಅವರು ಜೀವಂತವಾಗಿರ ಬೇಕೆಂಬ ನಿಯಮವೇನೂ ಇಲ್ಲ. ದಿಲ್ಲಿಯ ಸುತ್ತಮುತ್ತ ಗೋರಿಗಳು ಆಕ್ರಮಿಸಿ ಕೊಂಡಿರುವಷ್ಟು ಜಾಗವನ್ನು ಯಾವ ಸ್ಥಿತಿವಂತರೂ ಪಡೆದಿಲ್ಲ. ಕೆಲವು ಅಧಿಕಾರ ಮಂದಿರಗಳಲ್ಲಿ ಅನೇಕ ವಿಸ್ತಾರವಾದ ಸುಸಜ್ಜಿತ ಕೊಟಡಿಗಳು ವರ್ಷದಲ್ಲಿ ಕೆಲವು ದಿನಗಳ ಹೊರತು ಮಿಕ್ಕ ಹೊತ್ತೆಲ್ಲ ಖಾಲಿಯಾಗಿಯೇ ಇವೆ. ಆದರೆ ಗುಮಾಸ್ತರು ಕೆಲಸ ಮಾಡುವ ಜಾಗಗಳೊ ಕಾಲೂರಲೂ ಸ್ಥಳವಿಲ್ಲದಷ್ಟು ಕಿಷ್ಕಿಂಧವಾಗಿವೆ. ಐದು ಜನ ಕೂರಬಹುದಾದೆಡೆಯಲ್ಲಿ ಹತ್ತು ಜನ ಇರುಕಿಕೊಂಡಿದ್ದಾರೆ. ಅದು ನಿಜವಾಗಿ ಒಂದು Mass. ಅನೇಕ ಅರಮನೆಗಳೂ ಸೌಧಗಳೂ ಬಹುಕಾಲ ಬರಿದಾಗಿಯೇ ಇರುತ್ತವೆ. ಬರಿದಾಗಿವೆ ಎಂದರೆ ಅಷ್ಟು ನಿಜವಾದ ಮಾತಾಗು ವುದಿಲ್ಲ. ಇಂಥ ಜಾಗವೊಂದಕ್ಕೆ ಹೋಗಿ ಒಂದು ಒಳ್ಳೆಯ ಕುರ್ಚಿಯಮೇಲೆ ದಣಿ ವನ್ನಾರಿಸಿಕೊಳ್ಳಲು ನಾನು ಹವಣಿಸಿದೆ. ಬಿಲ್ಲೆಯ ಜವಾನ ಆರ್ಭಟಿಸಿಕೊಂಡೇ ಬಂದ. ಏನಾಯಿತಪ್ಪ ಎಂದೆ. ದೊಡ್ಡವರ ಪೀಠ—ಅಲ್ಲಿ ಕೂರುವುದೇ ಎಂದ. ನಿಜ, ದೊಡ್ಡವರು. ಗಾಳಿಯಂತೆ. ತುಂಬ ವ್ಯಾಪ್ತಿಯುಳ್ಳವರು. ಇದ್ದರೂ ಅಷ್ಟೆ, ಇಲ್ಲದಿದ್ದರೂ ಅಷ್ಟೆ, ಅವರ ಜೀವ ನೆಲವನ್ನು ಬಿಟ್ಟೋಡುವುದೇ ಇಲ್ಲ ; ಅಲ್ಲಲ್ಲೇ ಅಲೆದಾಡುತ್ತಾ ನಮ್ಮನ್ನು ಬೆದರಿಸುತ್ತಲೇ ಇರುತ್ತದೆ. ಇಂಥ ಜೀವಗಳ ಹಿಡಿತಕ್ಕೆ ಪಾತ್ರನಾಗಿ ಪಾಪ ಶ್ರೀಸಾಮಾನ್ಯನೂ ಸಹ ಪ್ರತಿಷ್ಠಿತನಂತೆಯೇ ನನ್ನಂಥವರ ಮೇಲೆ ಕಠಿಣವಾಗಿ ವರ್ತಿಸುತ್ತಾನೆ. ಇಲ್ಲದಿದ್ದರೆ ನಮ್ಮಲ್ಲಿ ಯಾರು ಡವಾಲಿ ಹಾಕುತ್ತಿದ್ದರು, ಬೆಳ್ಳಿ ಕಟ್ಟಿಗೆಯನ್ನೂ ಕೊಡೆ ಚವರಿಗಳನ್ನೂ ಹಿಡಿಯುತ್ತಿದ್ದರು, ಜರಿ ರುಮಾಲನ್ನು ಸುತ್ತಿ ಕರಿ ನಿಲುವಂಗಿಯ ಮೇಲೆ ಜರಿಸೊಂಟಪಟ್ಟಿಯನ್ನು ಕಟ್ಟಿ ಮುಜರೆ ಮಾಡುತ್ತಿದ್ದರು? ಒಬ್ಬ ಮನುಷ್ಯನಿಗೆ ಇನ್ನೊಬ್ಬ ಮನುಷ್ಯ ಹೀಗೆಲ್ಲ ಮಾಡುತ್ತಿರುವುದನ್ನು ನೋಡಿದರೆ ಯಾರಿಗೆ ತಾನೆ ಇಬ್ಬರಿಗೂ ಅಯ್ಯೋ ಎನಿಸುವುದಿಲ್ಲ. ನಾನಂತೂ ಹೀನಾಯಪಟ್ಟುಕೊಳ್ಳುತ್ತಿದ್ದೆ. ಆದರೆ ಒಬ್ಬ ಶ್ರೀ ಸಾಮಾನ್ಯ ಮತ್ತೊಬ್ಬ ಶ್ರೀಸಾಮಾನ್ಯನನ್ನು ಮೇಲಕ್ಕೇರಲು ಸುಲಭವಾಗಿ ಬಿಡನು. ಅದಕ್ಕೇ ಆತ ಹುಟ್ಟಾ ಶ್ರೀಮಂತನಿಗೆ ಅಷ್ಟು ಪ್ರಾಶಸ್ತ್ಯ ಕೊಡುವುದು.

ವರ್ಗದವರ ಹೆಣಗಾಟವೆಲ್ಲ ಈತನ ಕಪಿಮುಷ್ಟಿಯಿಂದ ತಮ್ಮನ್ನು ಬಿಡಿಸಿಕೊಳ್ಳು ವುದರಲ್ಲೇ ನಿರತವಾಗಿರುವಂತಿದೆ. ಇಂಥ ಪ್ರಯತ್ನಗಳಲ್ಲಿ ಕೆಲವನ್ನು ಮೇಲೆ ಹೇಳಿದ್ದೇನೆ. ಮತ್ತೊಂದನ್ನು ಹೇಳಲು ಮರೆತೆ. ಅದು ಭಾಷೆಯ ವಿಷಯ.

ನಾವು ಕನ್ನಡ ಜನ, ಕನ್ನಡ ನಮ್ಮ ಭಾಷೆ, ಶ್ರೀಸಾಮಾನ್ಯನ ಮಾತು. ವರ್ಗದವರೂ ಮತ್ತು ವರ್ಗಕ್ಕೆ ಸೇರಬೇಕೆಂಬ ಕಾಂಕ್ಷೆಯುಳ್ಳವರು ಯಾರೂ ಈ ಭಾಷೆಯನ್ನು ಪುರಸ್ಕರಿಸುವುದನ್ನು ಕಂಡಿದ್ದೀರಾ ? ಇದು ಸಾವಿರ ವರ್ಷಗಳಿಂದ ಕೃಷಿಗೊಂಡಿರುವ ಭಾಷೆ, ಶ್ರೇಷ್ಠ ಕವಿಗಳಿಂದ ಭೂಷಿತವಾದುದು, ಉಚ್ಚ ಸಂಸ್ಕೃತಿಯ ಸಾರವನ್ನೊಳಗೊಂಡಿದೆ, ಇದರಲ್ಲಿ ಎಂಥ ಜ್ಞಾನವನ್ನಾದರೂ ಕೂರಿಸಬಹುದು, ಇದರಿಂದ ಯಾವ ಶಾಸ್ತ್ರವನ್ನಾದರೂ ಕಲಿಸಬಹುದು, ಯಾವ ತತ್ತ್ವವನ್ನಾದರೂ ಜಿಜ್ಞಾಸಿಸಬಹುದು ಎಂದು ಮುಂತಾಗಿ ನೀವೇನೇ ಹೇಳಿರಿ, ಇದನ್ನು ಕಡೆಗಣಿಸುವುದು ನಿಮ್ಮ ದೇಶ ಭಕ್ತಿಗೂ ಹಿರಿಮೆಗೂ ಕುಂದು ಎಂದು ಬೇಕಾದರೂ ಎನ್ನಿರಿ, ಇದರತ್ತ ನಮ್ಮ ಮಹತ್ತ್ವಾಕಾಂಕ್ಷಿಗಳು ಗಮನಕೊಡು ವುದಿಲ್ಲ. ಏಕೆ ? ಜನಜಂಗುಳಿಯಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳುವುದರಲ್ಲೆ ಅವರೆಲ್ಲರಿಗೂ ಆಸೆ. ಜನರಲ್ಲಿ ಏನಿದೆ ? ವಿದ್ಯೆಯಿಲ್ಲ ಬುದ್ಧಿಯಿಲ್ಲ, ಉದ್ಯಮವಿಲ್ಲ ಉದ್ಯೋಗವಿಲ್ಲ—ಬರಿ ಕಾರ್ಪಣ್ಯ, ಗೋಳು, ಗೋಗರೆತ. ಸಾವಿರಾರು ವರ್ಷ ಗಳಿಂದ ಅನೇಕ ಕೆಲಸಕ್ಕೆ ಬಾರದ ನಿವಾಸಿಗಳನ್ನು ಹೊರೆದು ದಣಿದು ಕಂಗಾಲಾದ ಜನ—ಇವರ ಭಾಷೆಯನ್ನು ನಾವಾಡಿದರೆ ನಮಗೂ ಈ ಕಾರ್ಪಣ್ಯ ಸಾಂಕ್ರಾಮಿಕ ಹಬ್ಬುತ್ತದೆ—ನಾವು ಈ ಸಂಪರ್ಕದಿಂದ ಆದಷ್ಟು ದೂರವಿರುವುದೊಳ್ಳೆಯದು, ಇವರ ಮಾತು ನಮಗೇಕೆ ಎನ್ನುತ್ತದೆ ವರ್ಗಾಕಾಂಕ್ಷೆಯ ಜನ. ಈ ಜನರನ್ನು ತಯಾರಿಸಿ ನೆಲೆಗೊಳಿಸುವ ಕೋರ್ಟು ಕಚೇರಿ ಕಾಲೇಜುಗಳಲ್ಲಿ ಅದಕ್ಕೆಯೇ ಕನ್ನಡಕ್ಕೆ ಕಾಲೂರಲು ಅವಕಾಶ ಈವರೆಗೂ ದೊರೆತಿಲ್ಲ, ಅದರ ಪರವಾಗಿ ಒಂದು ವಿರೋಧಕ್ಕೂ ಇದೇ ಕಾರಣ.

ಪಾಶ್ಚಾತ್ಯ ಪುರಾಣದ ಒಂದು ಕತೆಯಲ್ಲಿ ಒಂದು ಗೂಳಿ ಬರುತ್ತದೆ. ಅದರ ಬಾಲ ಹಿಡಿದುಕೊಂಡರೆ ಏಳು ಕಡಲನ್ನು ದಾಟಿಸಿ ಅಪೇಕ್ಷಿತ ಸ್ಥಳಕ್ಕೆ ಮುಟ್ಟಿಸು ತ್ತದೆ. ಗೆದ್ದೆತ್ತಿನ ಬಾಲವನ್ನು ಹಿಡಿಯುವ ನಮ್ಮ ವಿಶಿಷ್ಟಜನಕ್ಕೆ ಇಂಗ್ಲಿಷ್ ಗೂಳಿಯ ಬಾಲವೇ ಭವತರಣ ಸಾಧನವಾಗಿದೆ. ಪಾಪ, ಬಾಲವನ್ನು ಕೊಡವಿ ಯಾವ ಕಡಲಿನಲ್ಲಿ ಬೀಳಿಸುತ್ತದೋ ಅದು. ಈ ಸಾಹಸಕ್ಕೂ ಈ ಮೂಢ

ವಿಶ್ವಾಸಕ್ಕೂ ಮುಖ್ಯಕಾರಣ ವರ್ಗಾರೋಹಣಾಪೇಕ್ಷೆ—ಸಾಮಾನ್ಯನ ಸಾಮಾನ್ಯತಾ ವಿಮುಖತೆ. ಕಪ್ಪುಗೌನುಗಳನ್ನು ಬಾವಲಿಹಕ್ಕಿಗಳಂತೆ ಹಾರಾಡಿಸುತ್ತಾ ಮೇಜನ್ನು ಕುಟ್ಟಿ ಪುಸ್ತಕಗಳನ್ನು ಬಡಿದು ಯಾರಿಗೂ ತಿಳಿಯದ ಮಾತುಗಳನ್ನು ಮಂತ್ರಗಳಂತೆ ಬಾಯಿಯಲ್ಲಿ ಉಚ್ಚರಿಸುತ್ತಾ ಭೂತಗಳನ್ನು ಬಿಡಿಸುವ ಮಂತ್ರವಾದಿಗಳಂತಲ್ಲವೆ ವರ್ಗದ ಜನರ ನಡತೆ? ಈ ರೀತಿಯ ವಿಶಿಷ್ಟ ವೇಷ ಭೂಷಣಗಳ ವಿಶಿಷ್ಟ ಭಾಷೆಯ ವಿಶಿಷ್ಟಜನ ಸಾಮಾನ್ಯ MASS ಅನ್ನು ತನ್ನ ಪ್ರಭುವೆಂದೊಪ್ಪಿಕೊಳ್ಳುವುದಕ್ಕೆ ತುಂಬ ಕಷ್ಟಪಡುತ್ತಿರಬೇಕು. ಈ ಶ್ರೀಮಂತ ನಟರಿಂದ ಭೂಷಿತವಾದ ಸಭಾಭವನಗಳಲ್ಲಿ ಶ್ರೀಸಾಮಾನ್ಯನ ನಂಟನಾದ ಮಹಾತ್ಮ ಗಾಂಧಿ ತನ್ನ ದಿವ್ಯಹಾಸವನ್ನು ಬೀರುತ್ತಿದ್ದರೆ ಅದು ಅವರಿಗೆ ವಿಕಟವೆಂದು ತೋರಿದರೂ ನನ್ನಂಥವನಿಗೆ ತುಂಬ ರಂಜಕವೆನಿಸುತ್ತದೆ. ಒಂದುಕಾಲಕ್ಕೆ ಅದು ನಮ್ಮನ್ನು ಋಜುವಾಗಿ ಮಾಡಿದರೂ ಮಾಡೀತೇ.

ಆದರೆ ಶ್ರೀಸಾಮಾನ್ಯ ವರ್ಗದವರು ಭಾವಿಸಿರುವಷ್ಟು ನಿಕೃಷ್ಟನಲ್ಲ. ನಾನು ಆ ವರ್ಗಕ್ಕೆ ಸೇರಿದವನೆಂದು ಎಂದೂ ನಿಟ್ಟುಸಿರಿಟ್ಟಿಲ್ಲ. ಅದರಲ್ಲಿ ನಮ್ಮಂಥವರಿಗೆ ಬೇಕಾದ ಕೆಲವು ಸೌಕರ್ಯಗಳಿವೆ, ಸ್ವಾತಂತ್ರ್ಯಗಳಿವೆ. ರಷ್ಯದವನಷ್ಟು ವರ್ಗ ದ್ವೇಷಿ, ಅಮೇರಿಕದವನಷ್ಟು ಕಸಬುದಾರ ಪ್ರೇಮಿ, ಇಂಗ್ಲೆಂಡಿನವನಷ್ಟು ಪ್ರಾಚೀನ ಸತ್‌ಪರಂಪರಾನಿಷ್ಠ, ಫ್ರೆಂಚಿನವನಷ್ಟು ಸ್ವೋಪಜ್ಞ ಸ್ವೈರಿತಾಪ್ರಿಯ, ಇಟಲಿಯವನಷ್ಟು ಲಾಲಿತ್ಯಮಾರ್ದವಾಭಿಲಾಷಿ, ಜಪಾನಿಯವನಷ್ಟು ಪ್ರಗಲ್ಭ ಸಂಯಮಿತ ಸೌಂದರ್ಯಾಭಿಕಾಂಕ್ಷಿಯಾಗಬೇಕೆಂದು ನನಗೆ ಇಷ್ಟ. ಈ ದೇಶಗಳ ಜನಸಾಮಾನ್ಯದಲ್ಲೇ ಈ ವಿಶಿಷ್ಟ ಗುಣಗಳಿವೆ. ಇವೆಲ್ಲ ದೇಶಗಳಲ್ಲೂ ಸಾಮಾನ್ಯನಿಗೂ ವಿಶಿಷ್ಟನಿಗೂ ಪರಕೀಯರೆನಿಸುವಷ್ಟು ಯಾವ ಪ್ರತ್ಯೇಕತೆಯೂ ಏರ್ಪಟ್ಟಿಲ್ಲ. ಒಬ್ಬನ ಸತ್ವ ಮತ್ತೊಬ್ಬನ ಸ್ವತ್ತು. ನನಗೆನ್ನಿಸುತ್ತದೆ, ನಮ್ಮ ಭಾರತೀಯ ಸಾಮಾನ್ಯನಲ್ಲಿ ಇವಿಷ್ಟು ಗುಣಗಳೂ ಜತೆಗೆ ಸಹನೆ ಸಹಾನುಭೂತಿಗಳೂ ಭ್ರೂಣಾವಸ್ಥೆಯಲ್ಲಿವೆಯೆಂದು; ವರ್ಗದವರಲ್ಲಿ ನಿಷ್ಕ್ರಮಿಸುತ್ತಿವೆಯೆಂದು. ಹಿಂದಿನ ನಮ್ಮ ಋಷಿಗಳೆಲ್ಲ ಶ್ರೀ ಸಾಮಾನ್ಯರೇ, ಅವರು ಅರಣ್ಯವಾಸಿಗಳಾಗಿ ಅನ್ನಪಾನವಸ್ತ್ರಾಶ್ರಯಗಳಲ್ಲಿ ಸಾಮಾನ್ಯ ಜನರಂತೆಯೇ ಇದ್ದುಬಿಟ್ಟರು. ಭಕ್ತರೆಲ್ಲರೂ ಸಾಮಾನ್ಯ ಜನರಲ್ಲೇ ಹುಟ್ಟಿ ಬದುಕಿ ಸತ್ತವರು. ಮತ ಪ್ರವರ್ತಕರೂ ಅಷ್ಟೆ. ನಮ್ಮ ನಗರಗಳ ಇಂದಿನ ಸಂಪತ್ತೆಲ್ಲ ಶ್ರೀಸಾಮಾನ್ಯನ

ಹೆಗಲನ್ನೇ ಆಶ್ರಯಿಸಿದೆ. ಬೇಕಾದರೆ ರಫ್ತಿನ ಪಟ್ಟಿಯನ್ನು ಓದಿ. ಆತ ದುಡಿದ ಕಾಫಿ, ಟೀ, ಕಲ್ಲು, ಮಣ್ಣು, ಎಣ್ಣೆ ಬೀಜ, ತೊಗಲು, ತೊಗಟೆಗಳನ್ನು ಮಾರಿ ಯಲ್ಲವೆ ನಮ್ಮ ವರ್ಗದ ನಾಯಕರು ತಮ್ಮ ಕಾರು, ವಾಚು, ರೇಡಿಯೋ, ಟ್ರಾನ್‌ಸಿಸ್ಟರ್, ಸ್ಕೂಟರ್ ಅಥವಾ ಎಣ್ಣೆಗುದುರೆ ಮುಂತಾದ ನವ್ಯ ಭೋಗ ಗಳನ್ನು ದೊರಕಿಸಿಕೊಳ್ಳಬೇಕಾದರೆ ? ನಮ್ಮ ವಿದ್ಯಾವಂತ ವರ್ಗದ ಜನ ಆತನ ಮೇಲೆ ಹೇರಿಕೊಳ್ಳುವುದನ್ನು ಕಲಿತಿದ್ದಾರೆಯೇ ಹೊರತು ಆತನ ಉತ್ತಮಾಂಗ ವಾಗಿ ಮೆರೆಯುವುದನ್ನಲ್ಲ. ಅದು ಈ ದೇಶದ ದೊಡ್ಡ ದುರಂತ. ವರ್ಗದ ಜನ ಮತ್ತು ಸಾಮಾನ್ಯಜನ ಒಬ್ಬರ ಕಳೆಯನ್ನು ಮತ್ತೊಬ್ಬರು ಕಳೆಯುವುದರಲ್ಲಿ ತಾವು ಕಲಿತ ವಿದ್ಯವನ್ನೆಲ್ಲ ವೆಚ್ಚಮಾಡುತ್ತಿರುತ್ತಾರೆಯೇ ಹೊರತು, ಪರಸ್ಪರ ತೇಜೋ ವರ್ಧಕರಾಗಿಲ್ಲ. ವರ್ಗದ ಜನ ನಮ್ಮ ಶ್ರೀ ಸಾಮಾನ್ಯ ಪ್ರಭುವಿಗೆ ಯಾವ ವಿಧ ದಲ್ಲೂ ಇದುವರೆಗೆ ಸಹಾಯಕರಾಗಿಲ್ಲ. ಆದರೆ ಆತ ಸ್ವಾವಲಂಬಿ, ಎಂದಿಗೂ ನಿಸ್ಸಹಾಯ, ವರ್ಗದ ಸೃಷ್ಟಿಸ್ಥಿತಿಲಯಗಳಿಗೆ ಆತನೇ ಮೂಲ ಪ್ರಕೃತಿ. ಆತನನ್ನು ಕಡೆಗಣಿಸಿದರೆ ನಾವು ಕೆಟ್ಟೇವು, ನಮ್ಮ ಸ್ವಾತಂತ್ರ್ಯವೂ ಬಹುಕಾಲ ಉಳಿಯು ವುದಿಲ್ಲ. ಎಲ್ಲ ಬಗೆಯಿಂದಲೂ ನಮ್ಮ ಪ್ರತ್ಯೇಕತೆಗಳನ್ನು ಮುರಿಯಬೇಕು, ನಮ್ಮ ಸತ್ವ ಸಕಲ ವರ್ಗದ ಜನಗಳಲ್ಲೂ ಪರಿಚಲಿಸುತ್ತಾ ಎಲ್ಲರ ಕಳೆಯನ್ನೂ ಕುದುರಿಸು ವಂತಿರಬೇಕು. ಶ್ರೀಸಾಮಾನ್ಯನಿಂದ ವಿಶಿಷ್ಟನಿಗೆ ಹುಮ್ಮಸ್ಸೂ, ವರ್ಗದವನಿಂದ ಸಾಮಾನ್ಯನಿಗೆ ತೇಜಸ್ಸೂ ಪ್ರವಹಿಸುತ್ತಿರಬೇಕು. ಯಾರೂ ಯಾರಿಗೂ ಮುಖ ಕೆಡಿಸಬಾರದು. ಕೌಶಲಕ್ಕೂ ಶೀಲಕ್ಕೂ ಶಕ್ತಿಸಾಮರ್ಥ್ಯಗಳಿಗೂ ದಕ್ಷತೆಗೂ ಧೈರ್ಯ ಸಾಹಸಗಳಿಗೂ ಸಹಜವಾಗಿ ಜನ ಪ್ರೇಮ ಗೌರವಗಳನ್ನು ನೀಡುತ್ತದೆ. ಇದು ಸಕಲ ತೇಜೋವರ್ಧಕ ವ್ಯಾಪಾರ. ನಮ್ಮ ನಾಡು ಏಳೂ ಹನ್ನೊಂದ ಕ್ಕಿಂತ ಮುಂಚಿನ ಶತಮಾನಗಳಲ್ಲಿ ಸಂಪದ್ಭರಿತವಾಗಿ ಜಗತ್ತಿನ ಕಣ್ಣನ್ನು ಕೋರೈಸುತ್ತಿದ್ದಾಗ ನಮ್ಮ ಜನಸಮುದಾಯದಲ್ಲಿ ಇಂಥ ಸತ್ವ ಪರಿಚಲನವಿತ್ತು. ಅದು ಮುರಿದಾಗ ನಮ್ಮ ದೇಶ ಬಿದ್ದು ಹೋಯಿತು. ಅದನ್ನು ಸ್ಮರಿಸೋಣ. ಜನನಾಯಕ ನೆಪೋಲಿಯನ್ನಿನ ಏಳಿಗೆಯನ್ನೂ ಸಾರ್ವಭೌಮ ನೆಪೋಲಿ ಯನ್ನಿನ ಪತನವನ್ನೂ ನಾವು ನೆನಪಿಗೆ ತಂದುಕೊಳ್ಳೋಣ. ಕಪಿಗಳ ಸ್ನೇಹಿತ ರಾಮನನ್ನೂ ಗೊಲ್ಲರ ಹುಡುಗ ಕುಚೇಲನ ಸ್ನೇಹಿತ ಶ್ರೀಕೃಷ್ಣನನ್ನೂ ಸ್ಮರಿ ಸೋಣ. ಹಾಗೂ ಚರ್ಚಿಲ್ಲನ ತೇಜಸ್ಸು ಸಾಮಾನ್ಯನಲ್ಲೂ ಸ್ಫುರಿಸಿದ್ದು ಈ ಸತ್ವ

ಪರಿಚಲನ ಆ ದೇಶದಲ್ಲಿದ್ದುದರಿಂದಲೇ ಎಂಬುದನ್ನು ಮರೆಯದಿರೋಣ. ಈ ಸತ್ವಪರಿಚಲನವನ್ನು ಕುದುರಿಸುವ ಏಕೈಕ ಸಾಧನವಾದ ಶ್ರೀಸಾಮಾನ್ಯನ ವಾಣಿಯನ್ನು ವರಿಸೋಣ. ಆಗೀಗ ನಾವು ನಮ್ಮ ದಾಸ್ಯಮನೋವೃತ್ತಿಯನ್ನು ಕಳೆದುಕೊಂಡು ಗಂಡಾಳುಗಳಾಗುತ್ತೇವೆ. ಆಗೊಬ್ಬರು ಮತ್ತೊಬ್ಬರನ್ನು ನೈಜ ಮರ್ಯಾದೆಯಿಂದ ಕಾಣಲು ಕಲಿಯುತ್ತೇವೆ. ಅಂಥ ಸಮಾಜದಲ್ಲಿ ಭಾಳಬೇಕೆಂದು ನನಗಾಸೆ. ಅದುವರೆಗೆ ನಾನು ಶ್ರೀಸಾಮಾನ್ಯನಾಗಿಯೇ ಉಳಿದಿರುತ್ತೇನೆ, ವರ್ಗದವರ ಗೋಷ್ಠಿ ಬೇಡ. ಈಗಿನ ಯುದ್ಧ ಜನಸಾಮಾನ್ಯರನ್ನೂ ವಿಶಿಷ್ಟರನ್ನೂ ಕೂಡಿಸಿ ಬೆಸಗೆಹಾಕುವ ದಿವ್ಯಾಗ್ನಿ, ಭವಿಷ್ಯ ಭಾರತದ ಪಾವನ ಪಾವಕ. ನಮ್ಮ ಯೋಧರೂ ಯೋಧಪತಿಗಳೂ ಗೆಲ್ಲಲಿ. ವರಿಷ್ಠಾನುದೀಪ್ತ ಶ್ರೀ ಸಾಮಾನ್ಯ ಗೆಲ್ಗೆ, ಜನಸತ್ವಂ ಸರ್ವರೊಳಂ ಪರಿಚಲಿಸುಗೆ.ನಾಡು ಬಾಳ್ಗೆ.

ಯುಗಾದಿ

ಎಂದಿನಂತೆ ಇಂದೂ ಯುಗಾದಿ ಬಂದಿದೆ. ದೇಶದಂತೆ ಕಾಲವೂ ಗುಂಡಾಗಿಯೇ ಇದೆಯೋ ಏನೋ. ಮೊದಲೆಲ್ಲಿಂದ ಹೊರಟಿತೋ ಅದೇ ಜಾಗಕ್ಕೆ ಬರುವುದು, ಅಲ್ಲಿಂದ ಪುನಃ ಪ್ರಾರಂಭಿಸುವುದು—ಇದೊಂದು ಕುರುಡು ಗಾಣದೆತ್ತಿನ ತಿರುಗಾಟ—ಇದೇ ಯುಗಾದಿ. ಇದರ ಹೆಸರು ಕ್ರೋಧಿ.

ಹೆಸರಿಗೆ ತಕ್ಕಂತೆಯೇ ಇದರ ಪ್ರಭಾವವೂ ಇರಬೇಕೆಂಬುದೇನೂ ನಿಯಮವಿಲ್ಲ. ಕ್ರೋಧಿಯಾಗುವುದಕ್ಕೆ ನಿಜವಾದ ತಾಖತ್ತು ಬೇಕು. ನಮ್ಮ ಕೋಪವೆಲ್ಲ 'ಬಡವನ ಕೋಪ ದವಡೆಗೆ ಮಾರಿ' ಎಂಬಂತೆ. ನಮ್ಮದಿನ್ನೂ ಯಾರ ಮೇಲೂ ಕೆಂದುವಂಥ ಕೋಪ ಅಲ್ಲ—ಅಥವಾ ಹಸುಗಳು ದೊಡ್ಡಿಯಲ್ಲಿ ಒಮ್ಮೊಮ್ಮೆ ತಿವಿದಾಡುವ ಹಾಗೆ ನಾವೂ ಆಗಾಗ ತಿವಿದಾಡಬಹುದು. ಅಂತೂ ಕ್ರೋಧಿ ಬಂದು ಈ ಬೆಳಿಗ್ಗೆ ಎದ್ದಕ್ಷಣ ನಮಗೆ ಬೇವು ಬೆಲ್ಲ ತಿನ್ನಿಸಿದ.

ನಮ್ಮ ಹಿರಿಯರು ನಮಗೆ ಈ ಶುಭದಿವಸ ಬೇವನ್ನೂ ಜತೆಗಿಷ್ಟು ಬೆಲ್ಲವನ್ನೂ ಯಾಕೆ ತಿನ್ನಿಸುತ್ತಾರೋ ಕಾಣೆ. ಒಂಟೆಗೆ ಬೇವು ಇಷ್ಟ, ಆನೆಗೆ ಬೆಲ್ಲ ಇಷ್ಟ. ನಮ್ಮನ್ನು ಒಂಟೆಯ ದರ್ಜೆಗಿಳಿಸಿ ಆನೆಯ ದರ್ಜೆಗೇರಿಸುವುದರ ರಹಸ್ಯವೇನು? ಒಂಟೆಯ ಹಾಗೆ ಮರುಳುಕಾಡಿನಲ್ಲೂ ಆನೆಯ ಹಾಗೆ ಹೇರಡವಿಯಲ್ಲೂ ಬದುಕುವುದನ್ನು ಕಲಿತುಕೋ ಎಂದಿರಬಹುದು. ಈ ಹಬ್ಬದಲ್ಲೇನೋ ಉಪ್ಪರದ ಆಹಾರಕ್ಕೇ ಹೆಚ್ಚು ಪ್ರಾಶಸ್ತ್ಯ; ಅದರ ಕಹಿಯನ್ನು ಕಡಮೆಮಾಡುವುದಕ್ಕೆ ಮಾತ್ರ ಬೆಲ್ಲ. ಪ್ರಾಶನ ಮಂತ್ರವೂ ಬೇವಿಗೇ ಮಣೆ ಹಾಕುತ್ತದೆ—ಬೆಲ್ಲ ತುಪ್ಪಗಳ ಮಾತನ್ನೇ ಎತ್ತುವುದಿಲ್ಲ.

> ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯ ಚ
> ಅಪಮೃತ್ಯು ವಿನಾಶಾಯ ನಿಂಬ ಕಂದಳ ಭಕ್ಷಣಂ.

ಸಿಹಿಯುಣ್ಣುವುದರಿಂದ ನಿನಗೆ ಫಾಯಿದೆ ಕಡಮೆ—ಕಹಿಯುಣ್ಣುವವರಿಗೇ ಬದುಕು ಎನ್ನುತ್ತದೆ, ಈ ಶ್ಲೋಕ. ಬಾಳಿನಲ್ಲಿ ಬೇವನ್ನುಂಡು ಜೀರ್ಣಿಸಿಕೊಳ್ಳಬಲ್ಲವರೇ ಶತಾಯುಗಳು, ವಜ್ರಕಾಯರು, ಐಸಿರಿಯುಳ್ಳವರು, ಮತ್ತು ಯಮ

ನಿಗೂ ಸಮಯವನ್ನು ಕಲಿಸತಕ್ಕವರು. ನಮ್ಮ ದೇಶದಲ್ಲಿ ಸಿನಿಮಾ ಇತ್ಯಾದಿ ಅನೇಕ ಕಾರಣಗಳಿಂದಾಗಿ ತಪಸ್ಸು ಕ್ಷೀಣಿಸುತ್ತಿರುವುದನ್ನು ಕಂಡರೆ ಯಾರಿಗೆ ತಾನೆ ಎದೆ ನಡುಗುವುದಿಲ್ಲ? ನಮಗೆ ಶತ್ರುಗಳು ಸುತ್ತಲೂ ವೃದ್ಧಿಸುತ್ತಾ ಕಹಿಯುಣಿಸಲು ತೊಡಗಿರುವುದೊಂದು ಶುಭ ಎನ್ನಬೇಕು. ಅವರ ಕಿರುಕುಳವೇ ನಮಗೆ ಯುಗಾದಿಯ ಬೇವಿನ ಚಿಗರು—ಪೌರುಷಪುಷ್ಟಿಕ. ನಮ್ಮ ಆಯು ರಾರೋಗ್ಯಐಶ್ವರ್ಯಾದಿಗಳು ಹೆಚ್ಚುವಂತೆ ಮಾಡತಕ್ಕವರು ಈ ನಮ್ಮ ನೆರೆ ಹೊರೆಯ ವೈರಿಗಳು, ಮತ್ತು ಮಿತ್ರರಂತೆ ನಟಿಸುತ್ತಾ ಈಗ ಮುಸುಕು ತೆಗೆಯು ತ್ತಿರುವ ಧೂರ್ತರು. ಅವರಿಂದ ನಾವು ಸ್ವಾವಲಂಬನವನ್ನು ಕಲಿಯುತ್ತೇವೆ, ಗಟ್ಟಿಮುಟ್ಟಾಗಲು ಯತ್ನಿಸುತ್ತೇವೆ, ಜಾಡ್ಯವನ್ನೂ ಅಂತಸ್ತಾಪಗಳನ್ನೂ ಕಿತ್ತೊಗೆದು ಉತ್ಸಾಹಸಂಪನ್ನರಾಗುತ್ತೇವೆ. ಎಲ್ಲರೀತಿಗಳಲ್ಲೂ ನಾವು ನಮ್ಮ ಹಳೆಯ ಗವಿಗಳಿಂದ ಹೊರಬಂದು ಆಧುನಿಕ ಜಗತ್ತಿನಲ್ಲಿ ಗಣ್ಯರೆನಿಸುವುದಕ್ಕೆ ನಮ್ಮನ್ನು ತಯಾರುಮಾಡುವವರು ನಮಗೆ ಬೇವನ್ನು ತಿನ್ನಿಸುತ್ತಿರುವ ಈ ಜನ. ಅವರಿಗೂ ಒಳ್ಳೆಯದಾಗಲಿ. ಹೊಸವರ್ಷದಾದಿಯ ಈ ಶುಭ ದಿನದಲ್ಲಿ ಯಾರಿಗೂ ನಾವು ಕೇಡನ್ನೆಣಿಸತಕ್ಕವರಲ್ಲ.

ಇನ್ನು ಪಂಚಾಂಗಶ್ರವಣ? ಯಾರಿಗೆ ಬೇಕೀಗ ಪಂಚಾಂಗಶ್ರವಣ? ಈ ಬಡವರಿಗೆ ಎಂದೂ ದುರ್ದಿನವೇ—ಸಿರಿವಂತರಿಗೆ, ಅದರಲ್ಲೂ ವ್ಯಾಪಾರಿಗಳಿಗೆ, ಎಂದೂ ಶುಭಗಳಿಗೆಯೇ. ಆದರೂ ಸಂಪ್ರದಾಯವನ್ನೇಕೆ ಮುರಿಯೋಣ. ಈ ವತ್ಸರಕ್ಕೆ ಶನಿಯೇ ಮಹಾರಾಜ. ಒಳ್ಳೆಯದೊಳ್ಳೆಯದು—ಆತನಿಗೆ ಈಗ ನಡೆಯುವಷ್ಟು ಪೂಜೆಪುರಸ್ಕಾರ ಮತ್ತಾವ ದೇವರಿಗುಂಟು? ರಾಜರಿಗೂ ತಿರಿಯುವ ಹೊತ್ತುಬಂತು ಎಂಬುದಕ್ಕೆ ಈತ ಬೀದಿ ಬೀದಿಯಲ್ಲೂ ಭಿಕ್ಷುಕರ ಕೈಯಲ್ಲಿ ಮೆರೆಯುವುದೇ ಸಾಕ್ಷಿ. ಈತನಿಗೆ ಚಂದ್ರ ಮಂತ್ರಿ—ಎಲ್ಲವನ್ನೂ ತಣ್ಣಗೆಮಾಡುವ ಸ್ವಭಾವದವನು. ಈ ವೇಗಯುಗದಲ್ಲಿ ಇಂಥ ಶಾಂತನ ಮಂತ್ರಿತ್ವವೂ ಒಳ್ಳೆಯದೇ. ಮಿಕ್ಕವರ ಮಾತು ನಮಗೇಕೆ?—ಸ್ವಸ್ತಿಪ್ರಜಾಭ್ಯಃ —ಆದರೆ ಶ್ರವಣಾಂತ್ಯದಲ್ಲಿ ಪಾನಕವುಂಟು, ರಸಾಯನವುಂಟು, ಕೋಸುಂಬರಿ ಯುಂಟು. ಪಾನಕಕ್ಕೂ ರಸಾಯನಕ್ಕೂ ಒಂದು ಅಪೂರ್ವ ವಸ್ತು ಈಗ ದೊರೆತಿದೆ. ಅದು ಮಿಣಿಕೆ ಹಣ್ಣು. ಈಗೀಗ ಯುಗಾದಿ ಬಂದುದಕ್ಕೆ ಸಾರ್ಥಕ. ಮಾಗಿ ಎಂದಿಗೆ ಮುಗಿಯುತ್ತದೆ ಹೇಳಿ ನೋಡೋಣ? ಮಿಣಿಕೆ ಹೊಳೆಯ

ಮರಳಂಚಿನ ಮೇಲೆ ಹೊರಳಾಡಿ ನಗರದ ಪೇಟೆಗಳಲ್ಲಿ ಧುಮುಧುಮನೆ ಧುಮುಕಿದಾಗ! ಇಂಥ ಮಿಣಿಕೆಗೆ ಒಂದು ಮಿನುಗು ನುಡಿಬೇಡವೆ?

ಮಿಣಿಕೆ

ಇದಿಗೋ ಹೊಳೆಯಂಚಿನ ಮಿಣಿಕೆ
ಇದು ನಗರದ ಬೀದಿಯೊಳಿಣಿಕೆ
ಮಧುವೈತಂದ
ಎನುತಿರುವಂದ
ಜಗ ಹೊಸತೆನಿಪುದು ಮನಕೆ.

ನುಣ್ಣಮರಳಿನೊಳು ಹೊರಳುವ ಹಣ್ಣೇ
ತಣ್ಣನೆ ಬಾ ಬಾ ಕೈಗೆ
ಪಣ್ಣಿಸಿರುವ ನೆಲಗಟ್ಟಿನ ರೋಡಿನ
ಟಾರಿನ ಬೇಸರ ಸಾಯ್ಗೆ.

ಬೇರೆಡೆ ಕಾಣದ ಎನಿತು ರುಚಿಗಳನು
ನಾಲಗೆಗೆರೆವೆಯೆ ಎಲೆ ಫಲವೇ
ಆಹ ಎಂಬುದು ಮನ ತನ್ನೊಳಗಾಗಲು
ಸೃಷ್ಟಿಯೆ ಪರಿಚಲಿಸುವ ಪರಿವೆ.

ಈ ತಿರೆ ನಮ್ಮದು ಎನ್ನುವಂದದೊಳೆ
ದುಮುದುಮು ಧುಮುಕುವೆ ಗಳಿಗೆ
ಬಲುರೂಪಿನ ಬಲುಬಣ್ಣದ ಬಳಗದ
ಎಲ್ಲೂ ನಿಮ್ಮದೆ ಮೆರವಣಿಗೆ.

ಬೇಕು ನಿನಗೆ ಬೆಲ್ಲದ ಪರಿಚರಿಕೆ
ನಿನ್ನ ಕಂಡರೆಮುಗಿಲ್ಲದ ನೀರಡಿಕೆ
ಕೆಡಿಸುವೆ ಪಂಚಾಂಗದ ತೂಕಡಿಕೆ
ನಿನಗಾಗಿಯೆ ಜನದೀ ಸ್ಪರ್ಧಿಕೆ.

ಮಾಯದ ಮಿಣಿಕೆ
ನೀನಿಳೆಗಿಣಿಕೆ
ನಮಗದೆ ಸುಗ್ಗಿಯ ಹೊಸ ಗಳಿಕೆ
ಮರಳಿಮರಳಿ ನೀನೆನಿತೆಮಗಿತ್ತರು
ಅರೆಕೊರೆಯಾಗದು ನಿನ್ನುಳಿಕೆ!

ಮೋಡ-ಮಿಂಚು

ಆಷಾಢ ಶುದ್ಧ ಪ್ರಥಮೆ—ಎಲ್ಲ ನಿತ್ಯ ಬೇಸರದ ದಿನಗಳಂತೆ ಇದೂ ಸರಿದು ಹೋಗಬೇಕೆ? ಮಹೋತ್ಸವ ದಿನವಲ್ಲವೆ ಇದು? ಮನುಷ್ಯನ ನೆನಪು ಇಷ್ಟು ಮಂದಗಾಮಿಯೆ? ಈಗಿಗೆ ಹದಿನೈದು ಶತಮಾನಗಳಿಗೂ ಹಿಂದೆ ಬೆಟ್ಟದ ತುದಿಯಲ್ಲಿ ನಿಂತು ಕವಿಯೊಬ್ಬ ತಪ್ಪಲಿನ ದಿಬ್ಬಗಳೊಡನೆ ಗುದ್ದಾಡುತ್ತಿದ್ದ ಒಂದು ಕರಿ ಮೋಡವನ್ನು ಕಂಡ; ಆಗೊಂದು ರಸಪ್ರವಾಹ ಹೊರಟಿತು. ಅದರಿಂದ ಸೌಂದರ್ಯತೃಷೆಯುಳ್ಳ ಎಷ್ಟೋ ಜೀವಗಳು ತಣಿದಿವೆ, ಈಗಿಗೂ ಹಲವಾರು ಜೀವಗಳು ತಣಿಯುತ್ತಿವೆ. ಆ ಮೋಡ ಮುಪ್ಪಿಲ್ಲದ್ದು ಸಾವಿಲ್ಲದ್ದು—ನಮ್ಮೆಲ್ಲರ ಪ್ರಣಯ ಸಂದೇಶವನ್ನು ಅದು ಹೊತ್ತಿದೆ. ಈಗ ನಮ್ಮ ಬಾನಿನಲ್ಲಿ ಅದೇ ಆಡುತ್ತಿದೆ. ಅದಕ್ಕೆ ನಾವು ಕುಸುಮಾಂಜಲಿಯನ್ನು ಈ ದಿನ ಸಮರ್ಪಿಸಬೇಡವೆ? ಎಂಥ ಮರೆವು!

ಮೋಡಗಳನ್ನು ತಲೆಯೆತ್ತಿ ನೋಡುವುದು ಒಂದು ತರದ ಅನುಭವ, ಮಲೆಯನ್ನೇರಿ ನಮ್ಮ ಕಾಲಿನ ತಳದಲ್ಲಿ ಅದರ ಆಟಗಳನ್ನು ಕಾಣುವುದು ಮತ್ತೊಂದು ಅನುಭವ. ನಂದಿಯ ಬೆಟ್ಟವನ್ನೇರಿ ಕೈಯೆಡೆಯ ಕೋಡುಗಳಲ್ಲಿ ಮಲೆಯುವ ಮೋಡವೊಂದಕ್ಕೆ ನಾವಿಂದೇಕೆ ವನಕುಸುಮಗಳ ಅರ್ಘ್ಯವನ್ನೆರೆಯಬಾರದು? ಅಷ್ಟು ರಸಿಕತೆಗೆ ಇದು ಕಾಲವಲ್ಲ, ನಿಜ. ಕಾಣದ ದೇವರಿಗೆ ಹಲುಬುವ ಕೃಪಣ ಜೀವರನ್ನು ನೆನೆದು ನಲಿಯುವ ಕಾಲವಿದು—ಉಸಿರುಸಿರಿನೊಳಗೆ ಚೆಲುವಿನೈಸಿರಿಯನ್ನು ತುಂಬಿಕೊಂಡು ನಲಿಯುವ ಶ್ರೀಮಂತಜೀವರ ಕಾಲವಲ್ಲ. ಅನುಕೂಲವಿದ್ದಿದ್ದರೆ ನಾನೀದಿನ ವಿಮಾನದಲ್ಲಿ ಗಗನಕ್ಕೆ ಹಾರಿ ಜಾಜಿಹೂವಿನ ಅರಳುಗಳನ್ನು ಮುಗಿಲೊಂದರ ಮೇಲೆ ಚೆಲ್ಲುತ್ತಿದ್ದೆ. ವೈಮಾನಿಕರಿಗೆ ಇಂಥ ಕೃತಜ್ಞತಾ ಕಲ್ಪಗಳು ಮನಸ್ಸಿಗೆ ಹೊಳೆಯುತ್ತವೋ ಇಲ್ಲವೋ ಕಾಣೆ. ಖೇಚರರಾದರೂ ನಾವು ಮನುಷ್ಯಗಂಧರ್ವರಾಗಬೇಕಾದರೆ ಬಹುಕಾಲ ಬೇಕು. ಅದರಲ್ಲೂ ನಾಗರಿಕರಿಗೆ ಮೋಡಗಳನ್ನು ಕಂಡರೆ ಪ್ರೇಮ ಹುಟ್ಟುವುದು ಸ್ವಲ್ಪ ಕಷ್ಟ. ಅವರ ಆರ್ಥಿಕ ಪರಿಸ್ಥಿತಿ ಮುಗಿಲನ್ನವಲಂಬಿಸಿಲ್ಲ. ಬಿಸಿಲ ಬೇಗೆ ಹೆಚ್ಚಿದ ಒಂದೆರಡು ದಿನಗಳಲ್ಲಿ ಅದು ಅವರ ಮನಸ್ಸಿಗೆ ಹಿತವಾಗುತ್ತದೆ—ಬಳಿಕ ಅದೊಂದು ಮುಜಗರ.

ಆದರೆ ನಗರದಲ್ಲಿ ಬಹುಕಾಲದಿಂದ ಇದ್ದರೂ ನಾನು ನಾಗರಿಕನಾಗಿಲ್ಲ. ನನಗೆ ಮೋಡಗಳನ್ನು ಕಂಡರೆ ತುಂಬ ಆಸೆ—ಆಸೆಯೊಂದೇ ಅಲ್ಲ, ಅಚ್ಚರಿ. ಅದು ಅನಿಲದಂತಿದೆ, ಅನಿಲವಲ್ಲ; ಘನದಂತಿದೆ, ಆದರೆ ತೇಲುತ್ತದೆ; ಅದರ ಬಣ್ಣ ಕರಿದು, ಆದರೆ ಜಲಬಿಂದುಗಳೋ ಮುತ್ತಿನ ಮಣಿಗಳು! ಕೆಳಗೆ ಅಗಾಧವಾದ ಸಮುದ್ರ —ಮೇಲೆ ಆಕಾಶದಲ್ಲಿ ಅದರ ಫಲ ಹೇಗೆ ತೊಂಗುತ್ತಿದೆ, ಈ ಚಮತ್ಕಾರವನ್ನು ನೋಡಿದಿರಾ! ಅದರ ರಸವನ್ನು ಹೀರದೆ ಈ ಜೀವ ಬದುಕಿರಬಲ್ಲುದೇ?

ಎಷ್ಟೇ ನಿಂತಹಾಗೆ ತೋರಿ ನಮಗೆ ಎಷ್ಟು ಮಂಕನೆರಚಿದರೇನು, ಈ ಭೂಮಿಯೊಂದು ತಿರಿಯುವ ದಾಸಯ್ಯ. ಅಂತರಿಕ್ಷದಲ್ಲಿ ತಾನು ಆಯಾ ನೆಲೆಗೆ ಹೋಗಿ ತಿರುಪೆ ಬೇಡಿದ ಹೊರತು ಅದಕ್ಕೆ ತನಗೆ ಬೇಕಾದುದಾವುದೂ ದೊರೆಯದು. ಫಾಲ್ಗುಣ ಬಂದಹೊರತು ಅದಕ್ಕೆ ಮಿಣಿಕೆ-ಜಾಂ-ಕರ್ಬೂಜಾದಿಗಳು ಸಿಕ್ಕವು. ಚೈತ್ರ ವೈಶಾಖಗಳಲ್ಲಿ ಮಾವಿಗೆ, ಜ್ಯೇಷ್ಠದಲ್ಲಿ ನೇರಿಳೆಗೆ, ಶ್ರಾವಣದಲ್ಲಿ ಸೀಬೆಗೆ, ಆಶ್ವಯುಜ ಕಾರ್ತೀಕಗಳಲ್ಲಿ ಮೋಸುಂಬಿಗೆ, ಮಾಘ ಫಾಲ್ಗುಣಗಳಲ್ಲಿ ಕಿತ್ತಳೆಗೆ ಅದು ಕಾಯಬೇಕು. ಮಂಜು ಬೇಕಾದರೆ ಮಾಗಿಯಲ್ಲಿ, ಮುಂಬೆಳಗು ಬೇಕಾದರೆ ಬೇಸಗೆಯಲ್ಲಿ, ಉರಿಬಿಸಿಲು ಬೇಕಾದರೆ ಗ್ರೀಷ್ಮ ಭಾದ್ರಪದಗಳಲ್ಲೆ. ಅದಕ್ಕೆ ಮಲ್ಲಿಗೆ ಜಾಜಿ-ಸಂಪಿಗೆ-ಸೇವಂತಿಗೆಗಳೂ ಬೇಕು ಬೇಕಾದಾಗ ಸಿಕ್ಕುವ ಪದಾರ್ಥಗಳಲ್ಲ. ಮೋಡಗಳೂ ಅಷ್ಟೆ—ಅವಕ್ಕೆ ಸಮಯವನ್ನು ಕಾಯಬೇಕು. ಅದು ಆಷಾಢ ಶ್ರಾವಣಗಳು ಭೂದೇವಿಯ ಜಳಕದ ನೆಲೆಗಳೆನ್ನಲೆ? ಅಥವಾ ಸೃಷ್ಟಿಕೇಂದ್ರದಲ್ಲಿ ನೆಲದ ಮೇಗಣ ಜೀವಕ್ಕೆ ಮನ್ನಣೆಯಿತ್ತು ಅದನ್ನು ಸಿಂಹಪೀಠದಲ್ಲಿ ಕೂರಿಸಿ ಪ್ರತಿವರ್ಷವೂ ಅಭಿಷೇಚಿಸುತ್ತಿದೆಯೋ ಚತುಸ್ಸಾಗರಗಳ ತೀರ್ಥಜಲವನ್ನು ಮೇಘಕುಂಭಗಳಲ್ಲಿರಿಸಿ ಪ್ರಕೃತಿ? ಏಕೆಂದರೆ ಮಳೆಯಿಂದ ನೀರಮೇಗಣ ಜೀವಕ್ಕಲ್ಲದೆ ಮತ್ತಾವುದಕ್ಕೆ ಪ್ರಯೋಜನ?

ಹಿರಿಯರು ನೀರಿಗೆ ಜೀವನವೆಂಬ ಸರಿಯಾದ ಹೆಸರನ್ನೇ ಇಟ್ಟಿದ್ದಾರೆ. ಹಿಮಾಲಯದ ನದಿಗಳನ್ನು ಬಿಟ್ಟರೆ ಮಿಕ್ಕವಕ್ಕೆಲ್ಲ ಮುಗಿಲ ನೀರೇ ಆಸರೆ. ಶ್ರುತಿಗಳು ಕೂಡ ಹಿಂದಿನ ಕಾಲದಲ್ಲಿ ಶ್ರಾವಣ-ಪುಷ್ಯದ ಅವಧಿಯಲ್ಲಿ ಉಪಾಕರ್ಮ-ಉತ್ಸರ್ಜನಾದಿ ವಿಧಿಗಳ ಮೂಲಕ ತಮ್ಮ ಉಳಿಗಾಲವನ್ನು ಕಾಣುತ್ತಿದ್ದವು. ಅದು ನಿಗಮಾಗಮ ಜೀವನಕಾಲ. ಲೋಕೋದ್ಧಾರಕ್ಕಾಗಿ ಕೃಷ್ಣ ಹುಟ್ಟಿದ್ದು ಮಳೆಗಾಲದಲ್ಲಿ, ಗೌರಿ ಗಣೇಶರು ಬರುವುದೂ ಮಳೆಗಾಲದಲ್ಲಿ. ಎಷ್ಟೊಂದು

ಹೊಳೆಗಳು ಎಷ್ಟು ಹಗುರವಾಗಿ ಆಕಾಶದಲ್ಲಿ ತೇಲುತ್ತಿವೆ! ಅವುಗಳ ನಗೆಯು ಹೊಳವೋ ಮಿಂಚುಗಳೋ? ಯಾವ ಅಮುಂಗಳದೊಡನೆ ಹೋರಾಡಲು ಅವು ಗರ್ಜಿಸುತ್ತವೆ, ಗುಡುಗುತ್ತವೆ, ಆರ್ಭಟಿಸುತ್ತವೆ? ಆದರೆ ಅದು ಮುಂಚೂಣಿಯ ತರುಣಭಟರ ಆರ್ಭಟ. ಮೂಲಬಲಕ್ಕೆ ಈ ಪ್ರದರ್ಶನ ಬೇಕಿಲ್ಲ. ಬಿಸಿಲನ್ನು ಬಿಡಿಸಿ ಈ ಏಳುಬಣ್ಣದ ವರಣ ಮಾಲೆಯನ್ನು ಈ ವರುಣಕುಮಾರನಿಗೆ ಯಾವ ದೇವಸ್ತ್ರೀ ಹಾಕಿದ್ದಾಳೆ? ಕಾಳಿದಾಸ ವಾಲ್ಮೀಕಿಗಳು ಕಂಡ ಈ ಮೋಡಗಳು ಈಗ ಹುಟ್ಟಿದವೆಂಬಂತೆ ನಮ್ಮ ಕಂಗಳನ್ನು ಕೊಳ್ಳುತ್ತವೆಯಲ್ಲ ಆಶ್ಚರ್ಯ–ಆಶ್ಚರ್ಯ–ಕಾಲ ಇವುಗಳ ಕಾಲಿನ ಕೆಳಗೆ ತೂರಿಹೋಗುತ್ತದೋ ಹೇಗೆ? ಅಥವಾ ಇವುಗಳನ್ನು ನೋಡುವ ನಾವೂ ಅಜರಾಮರರೋ!

"ಮೋಡವನ್ನು ಕಂಡರೆ ಸುಖಿಗಳೂ ಅಸುಖಿಗಳಾಗುತ್ತಾರೆ" ಎಂದ ಕವಿಯ ಮಾತು ನಿಶ್ಚಯ. ಅದು ಯಾವುದೋ ಒಂದು ಅನಿರ್ವಚನೀಯವಾದ ಕೊರತೆಯನ್ನು ನಮ್ಮ ಮನಸ್ಸಿನಲ್ಲೆಬ್ಬಿಸಿಬಿಡುತ್ತದೆ; ಮನುಷ್ಯನ ಜೀವ ತುಂಬ ಮಿತಿಗಳುಳ್ಳದ್ದು ಎನ್ನಿಸುತ್ತದೆ, ಇಂದಿಗಿಂತ ಅಂದು ಚೆನ್ನು ಎನ್ನುತ್ತದೆ, ಕಾಂತಾಲಿಂಗನದಲ್ಲೂ ವಿರಹದ ಬೇಗೆಯೆಸಳನ್ನು ತರುತ್ತದೆ, ಮನೆವಳನಾದ ಗೃಹಸ್ಥನಿಗೆ ಬಯಲಿನ ತಿರುಗಾಟ ಸೊಗಸೆನ್ನಿಸುತ್ತದೆ, ಬಯಲ ತಿರುಕನಿಗೆ ಮನೆಯ ಒಲೆಯ ಮುಂದೆ ಬೆಚ್ಚನೆ ಕೂರುವ ಸುಖದ ಕನಸನ್ನು ಕಟ್ಟುತ್ತದೆ, ಬೆಳ್ಳನೆಯ ಬಿಸಿಲನ್ನು ತಾನು ತಲೆಯಲ್ಲಿ ಸೂಡಿಕೊಂಡು ವಿಷಾದದ ನೀಲಚ್ಛಾಯೆಯನ್ನು ನಮ್ಮ ಮೇಲೆ ಚೆಲ್ಲುತ್ತದೆ, ಗ್ರೀಷ್ಮದಲ್ಲಿ ಶಿಶಿರದ ನಡುಕವನ್ನು ತರುತ್ತದೆ—ಮತ್ತೆ ತುಸ ಕಾಲ ಅತ್ತ ಸರಿದು ಬಿಸಿಲ ಚುರುಕನ್ನು ಮುಟ್ಟಿಸುತ್ತದೆ. ನೆಲಕ್ಕೆ ನೆರೆಗಳನ್ನು ತಂದು ಹಾವಳಿಯೆಬ್ಬಿಸುತ್ತದೆ. ಜೀವವನ್ನು ಉಳಿಸಲು ಬರುವುದಕ್ಕೆ ಈ ಪ್ರಳಯದ ಎಳಸಿಕೆಯೇಕೆ? ಆಗತಾನೆ ಸಿರಿಯನ್ನು ಕಂಡ ಸಾಲಗಾರ ಸಾಹುಕಾರರ ಆಸೆಯನ್ನು ಕೆರಳಿಸಿ ಅವರ ಕಣ್ಣಿನಿಂದ ತಟಕ್ಕನೆ ತಪ್ಪಿಸಿಕೊಳ್ಳುವ ಹಾಗೆ, ಕಾಣುತ್ತಿದ್ದಂತೆಯೇ ಎತ್ತಲೋ ಚೆದರಿ ಹೋಗಿಬಿಡುತ್ತದೆ. ಇಲ್ಲವೇ ಬಿರುಸಾಗಿ ಬಂದು, ಕೊಚ್ಚೆ, ಕೆಡಹಿ, ಹಣದ ಮೆಕ್ಕಲನ್ನು ಅದೃಷ್ಟಶಾಲಿಗಳ ಮನೆಗೆ ತಂದು ಹಾಕುತ್ತದೆ. ಮೋಡ ನಿಯಮವಂತನಾದರೂ ನೆಚ್ಚುವಂಥವನಲ್ಲ. ಅದು ಗಗನ ವಿಹಾರಿ, ಗಾಳಿಯ ನಂಟ. ಬೆಂಕಿಯನ್ನು ಕಾರಿ ತಂಪನ್ನೆರಚುವ ಅದರ ಈ ಸ್ವೈರಿತೆಯನ್ನು ಅರಿತೇ ಆ ಯಕ್ಷ ಆ ದೈನ್ಯಯಾಚನಾಸ್ವರವನ್ನು ತನ್ನ ಕೊರಲಲ್ಲಿ ತಂದುಕೊಂಡ ಪುಷ್ಪಾಂಜಲಿಯೆತ್ತಿ.

ಭೂಮಿಯ ಅನಿವಾರ್ಯವಾದ ಸಂತತ ಪರಿಭ್ರಮಣ, ನೀರಿನ ಸಾಗರ-ಮೇಘ-ನದೀ ಪರಿಚಲನ, ವಸಂತ-ವರ್ಷ-ಶಿಶಿರಗಳ ನಿರಂತರಾವರ್ತನ, ಶೈಶವ-ಬಾಲ್ಯ ತಾರುಣ್ಯಗಳ ಬಿಡುವಿಲ್ಲದ ಕೊಕ್ಕಾಟ (ಜರಾಮರಣಗಳು ವೈಯಕ್ತಿಕವಾದವು ಬಿಡಿ, ಸೃಷ್ಟಿಶಕ್ತಿಗೆ ಇವುಗಳಲ್ಲಿ ಆಸಕ್ತಿಯಿಲ್ಲ)—ಈ ಸಂತತ ಚಕ್ರಚಾಲನ ಜಾಲದಲ್ಲಿ ಮನಸ್ಸು ಸಿಕ್ಕಿಕೊಂಡರೆ ದಡ ತಲಪುವುದು ಕಷ್ಟ. ಎಲ್ಲವೂ ಗುಂಡು ಗುಂಡಾಗಿ ದಿಕ್ಕಿಲ್ಲದೆ ಅಲೆಯುವುದೇ ಈ ವಿಶ್ವದ ರೂಢಿಯೇನೋ. ಆದರೆ ಹೊರಗೆ ಮೋಡಗಳು ಕವಿದು ಮಳೆ ಜೋರೋ ಎಂದು ಸುರಿಯುತ್ತಿರುವಾಗ, ತುಪ್ಪ ಸವರಿದ ಹುರುಳಿ ಹಪ್ಪಳ ಕೈಗೆ ಬರುವುದು ತಡವಾದಾಗ, ಇಂಥ ಚಿಂತೆಗಳು ಅನಿವಾರ್ಯ. ಹಾಳುಗೋಡೆ ಉರುಳಿದರೇನು, ಕತ್ತೆ ನೆನೆದರೇನು, ಬಸ್ಸುಗಳು ರಸ್ತೆಯಂಚಿನ ರೇಷ್ಮೆಜರಿಸೀರೆಗಳಿಗೆ ಚಿರ್ರನೆ ಕೆಸರೆರಚಿದರೇನು, ಮಳೆ ಸುರಿದೇ ಸುರಿಯುತ್ತದೆ. ಸುರಿಯದಿದ್ದರೆ ನಮಗೆ ಗತಿಯೇ ಇಲ್ಲ. ಸದ್ಯಕ್ಕೆ ನಮ್ಮ ತಲೆಯ ಮೇಲೊಂದು ಸೂರಿದೆ. ಒಳಗೆ ಬೆಂಕಿಯ ಕೆಂಡ ಕಳಕಳನೆ ಉರಿಯುತ್ತಿದೆ. ಮಳೆಗಾಲ, ಧ್ಯಾನಯಜ್ಞವರ್ಧನಕಾಲ. ಸಂತೋಷ ಬೇಕೆಂಬ ವ್ರತಿಗಳಿಗೆ ಒಳ್ಳೆ ಸಮಯವಿದು. ವಿಜ್ಞಾನಿಗಳ ಹಾಗೆ ಪ್ರಕೃತಿಯ ಮೇಲೆ ಕತ್ತಿಮಸೆಯುವವರು ನಾವಲ್ಲ; ಅದನ್ನು ತಾಯಂತೆ ವಾತ್ಸಲ್ಯದಿಂದ ಕಾಣುವವರು, ದೇವಿಯಂತೆ ಪೂಜಿಸುವವರು. ವರಕವಿಗಳ ಪ್ರೇಮವನ್ನು ತಳೆದಿರುವ ಮೋಡವೂ, ಮಳೆಯೂ ಪರಮೇಶ್ವರನ ಪ್ರತೀಕಗಳು. ಆದುದರಿಂದ ತೋಯಾತ್ಮಕನಾದ ವಿಶ್ವನಿಗೆ ನಮ್ಮ ನಮಸ್ಕಾರವನ್ನು ಸಲ್ಲಿಸಿ ಜಪದ ನೆಪದಲ್ಲಿ ಒಲೆಯ ಹತ್ತಿರಕ್ಕೆ ಸರಿಯೋಣ:

ಯಸ್ಯ ಕೇಶೇಷು ಜೀಮೂತಾ ನದ್ಯಸ್ಸರ್ವಾಂಗ ಸಂಧಿಷು |
ಕುಕ್ಷೌ ಸಮುದ್ರಾಸ್ತಿಷ್ಠಂತಿ ತಸ್ಮೈ ತೋಯಾತ್ಮನೇ ನಮಃ ||

ಕವಿ-ಪಂಡಿತ

ಕವಿಗೆ ಪಂಡಿತರಿಂದ ಉಪಕಾರವೇ ಅಪಕಾರವೇ? ಈ ಪ್ರಶ್ನೆ ಕವಿಯನ್ನು ಕಾಡುವಷ್ಟು ಪಂಡಿತರನ್ನು ಕಾಡುವುದಿಲ್ಲ. ಅದೊಂದು ಸೌಲಭ್ಯ ಪಂಡಿತರಿಗೆ. ಪಂಡಿತರ ಬತ್ತಳಿಕೆಯಲ್ಲಿ ಅನೇಕ ಕವಿಬಾಣಗಳಿವೆ; ಅರಣ್ಯವೆಲ್ಲಾ ಉರಿದು ಹೋದರೂ ಬದುಕಿಬಂದ ಸರ್ಪಾಸ್ತ್ರಗಳೂ ಅಲ್ಲಿ ಉಂಟು, ಸಮಯ ಬಂದಾಗ ಸಮಕಾಲೀನ ಕವಿಯ ಮೇಲೆ ಪ್ರಯೋಗಿಸುವುದಕ್ಕೆ. ಆದರೆ ಹಳಗವಿಗಳಿಲ್ಲದೆ ಆಧುನಿಕ ಪಂಡಿತರು ತಮ್ಮ ವೃತ್ತಿಯನ್ನುಗಳಿಸಲಾರರು; ಶಾಸನಗಳನ್ನಾಶ್ರಯಿಸಿರುವ ಪ್ರಾಕ್ತನ ವಿಮರ್ಶ ವಿಚಕ್ಷಣರೂ ಸಹ; ಎಂದರೆ, ಪಂಡಿತರ ನಿರ್ಮಾಪಕರು ಕವಿಗಳು. "ಹುಲಿ ಕುರಿಗಳ ಗೆಯ್ಮೆ" ಎಂಬೊಂದು ಇಂಗ್ಲಿಷ್ ಗಾದೆ ಮಾತುಂಟು. ಇದು ಕವಿ-ಪಂಡಿತ ವ್ಯವಹಾರಕ್ಕೂ ಬಹು ಸಮರ್ಪಕವಾಗಿ ಅನ್ವಯಿಸುತ್ತದೆ. ಆದರೆ ಅವರನ್ನು ಕವಿಹುಲಿಗಳು ಎನ್ನುವುದಕ್ಕಿಂತ ಕವಿಕುರುಬರು ಎಂದರೆ ಮೇಲೇನೋ! ಏಕೆಂದರೆ ಅವರ ಲಾಲನೆ ಪಾಲನೆಗಳಿಲ್ಲದೆ ಯಾವ ಕವಿಯೂ ಬಾಳಲಾರ. ಈ ದೃಷ್ಟಿಯಿಂದ ಪಂಡಿತರು ಕವಿಗಳಿಗೆ ಉಪಕಾರಿಗಳು ಎನ್ನಬಹುದು.

ಆದರೆ ಈ ಉಪಕಾರದ ಮಾತೆಲ್ಲ ಹಳಗವಿಗಳಿಗೆ ಬಹುಹೆಚ್ಚಾಗಿ ಅನ್ವಯಿಸುತ್ತದೆ. ಹಳಗವಿ ಎಂದರೆ ಕಾಲದ ದೃಷ್ಟಿಯಿಂದ ಇಂದಿನ ದಿನಕ್ಕೆ ದೂರವಿದ್ದ ದಿನದ ಕವಿ ಎಂದರ್ಥ. ಈ ದೂರ ಈಗ ದೇಶಕ್ಕೂ ಅನ್ವಯಿಸತೊಡಗಿದೆ. ನಮ್ಮ ಪಂಡಿತರಿಂದ ಆ ದೂರದೇಶದ ಪ್ರಾಚೀನ-ಅರ್ವಾಚೀನ-ಅದ್ಯತನ ಕವಿಗಳಿಗಾಗುವಷ್ಟು ಉಪಕಾರ ಸನಿಯದವರಿಗಾಗದು. ಈ ಉಪಕಾರದ ಪ್ರಶ್ನೆ ಯಾವಾಗಲೂ, ಕಾಲದ್ದಾಗಲಿ ದೇಶದ್ದಾಗಲಿ, ದೂರದ ಪ್ರಶ್ನೆ. 'ಸದ್ಯಂ ವದ್ಯಂ' ಎಂಬುದು ಪಂಡಿತರ ಮಂತ್ರ. ಇದಕ್ಕೆ ಬೇಕಾದರೆ 'ಪಳನೆಯೆ ಹಿರಿಮೆ' ಎಂಬುದನ್ನು ಸೇರಿಸಿ, ಬೇಡವೆನ್ನುವುದಿಲ್ಲ. ಅಂತೂ ಆಧುನಿಕ ಕವಿಗೆ ಅವ ಹಳಸಿದ, (ಬೇಕಾದರೆ ಊರಿದ ಎನ್ನಿ) ಹೊರತು ಪಂಡಿತರಿಂದ ಉಪಕಾರಕ್ಕಿಂತ ಅಪಕಾರ ಹೆಚ್ಚು—ಎನ್ನುವುದು ಈಗ ಸ್ಥಿರವಾಯಿತಷ್ಟೆ.

ಆದರೆ ಕವಿಗಳನ್ನೇ ಆಶ್ರಯಿಸಿರುವ ಪಂಡಿತರಿಗೆ ಆಧುನಿಕರನ್ನು ಕಂಡರೆ ಏಕೆ

ಈ ಉದಾಸೀನ ಭಾವ, ಈ ತಿರಸ್ಕಾರ, ಎಂಬ ಪ್ರಶ್ನೆ ಏಳುತ್ತದೆ. ಇದು ಆಲೋಚಿಸತಕ್ಕ ವಿಷಯ. ಇದು ಪರಸ್ಪರವೋ ಏನು ಎಂಬ ಸಂಶಯವೂ ಮೂಡುತ್ತದೆ. ಪಂಡಿತರು ಕೂಡಿಟ್ಟಿರುವ ಅಥವಾ ಉದ್ಧರಿಸುವ ಕವಿಸೂಕ್ತಿಗಳು ಅದ್ಯತನ ಕವಿಯ ಕಣ್ಣಿಗೋ ಕಿವಿಗೋ ಬಿದ್ದಾಗ ಆತನೆದೆ ಝುಗ್ ಎನ್ನುತ್ತದೆ; ತನ್ನ ಕಳೆದುಹೋದ ಮಾಲೆಲ್ಲ ಆ ಗುಜರಿಯಲ್ಲಿ ಬಿದ್ದಿವೆ—ಎಂಬ ಅನುಭವ ಆತನಿಗೆ ತಟ್ಟುತ್ತದೆ; ತಾನೆಂದೋ ಗಿರವಿಯಿಟ್ಟು ಬಿಡಿಸಿಕೊಳ್ಳಲಾರದೆ ಅವಧಿಮೀರಿ ಮಾರವಾಡಿಯ ಪಾಲಾಗಿ ಕ್ರಮೇಣ ಮರೆತುಹೋದ ಸರಕು ಇವು; ತನ್ನದಲ್ಲವಾದರೂ ತನ್ನವೆ. ಅಬ್ಬ, ಎಂಥ ಕೃತಿಚೋರರು ಈ ಹಳಬರು! ಸೂರ್ಯಚಂದ್ರ ಗಿರಿವನ ನದೀ ಸರಸ್ಸುಗಳೆಲ್ಲ ತಮ್ಮವೇ, ಎಲ್ಲ ರಾಗಭೋಗ ಜುಗುಪ್ಸೆಗಳೂ ತಮ್ಮವೇ ಎಂಬ ವಿಳಾಸ ಬರೆದುಕೊಂಡಿದಾರಲ್ಲ. ನಮಗೂ ಕಣ್ಣಿಲ್ಲವೇ, ಕಿವಿಯಿಲ್ಲವೇ, ಮನೋಬುಧ್ಯಹಂಕಾರಗಳಿಲ್ಲವೇ? ಇವರದೇನು ಹುಜೂರು ನಮ್ಮ ಬಾಯಿ ಕಟ್ಟುವುದಕ್ಕೆ. ಇವರೇಕೆ ನಮ್ಮ ಜೇಬಿಗೆ ಕೈಹಾಕಿ ಎಲ್ಲ ತಮ್ಮದೇ ಎಂದುಕೊಳ್ಳಬೇಕು ಎಂಬ ಕ್ರೋಧ ಉಮ್ಮಳಿಸುತ್ತದೆ ಆತನಲ್ಲಿ. ಆದರೆ ಆತ ನಿಸ್ಸಹಾಯ. ತಾನು ಬಾಯಿಬಿಡುವುದೇ ತಡ, ಪಂಡಿತ ನಗುತ್ತಾನೆ. ತನ್ನ ಅಚ್ಚಹೊಚ್ಚ ಹೊಸ ಅನುಭವ ಕೂಡ ಯಾವನೋ ಒಬ್ಬ ಹಳಬ ಎಂದೋ ತನ್ನಿಂದ ಕದ್ದುಕೊಂಡು ಇವನಲ್ಲಿ ಅಡವಿಟ್ಟ ಮಾಲು! "ಎಲ್ಲ ಕಂಡಿದ್ದೀನಿ ಕಣ್ರಿ ನೀವೆಲ್ಲ ಕಳ್ಳರು" ಎನ್ನುತ್ತಾನೆ ಪಂಡಿತ, ಸೂಕ್ತಿಮುಕ್ತಾಫಲವೊಂದನ್ನು ನವೀನ ಕವಿಯ ಮೇಲೆ ಮಾರೆಸೆದು, ಮಾಲೀಕನ ಮೇಲೆಯೇ ಕಳ್ಳತನ ಹೊರಿಸಿ. ಆತನಿಗೆ ಹೊಸದೆಂಬುದೇ ಇಲ್ಲ, ಆದರೆ ಅದ್ಯತನ ಕವಿಗೋ ಎಲ್ಲವೂ ನವೋನವ ಎಂಬ ಭ್ರಮೆ. ತನ್ನದು ಹೊರತು ಆತನಿಗೆ ಮಿಕ್ಕವರ ಕವಿತೆಯೆಲ್ಲ ಕೆಲಸಕ್ಕೆ ಬಾರದುದು, ಇಲ್ಲವೇ ಎಂದೋ ಯಾರೋ ತನ್ನಿಂದಲೇ ಕದ್ದಮಾಲು. ತನ್ನ ಮಾಲನ್ನು ಈ ಕಳುವಿನಿಂದ ತಪ್ಪಿಸಲು ಆತ ಹುಡುಕುವ ಉಪಾಯಗಳೂ ಬಲು ಚೋದ್ಯವಾಗಿವೆ. ಶಬ್ದಾರ್ಥಛಂದೋಲಂಕಾರಗಳೆಲ್ಲಕ್ಕೂ ಹಳ ದಾರಿ ತಪ್ಪಿಸಿ, ಅವುಗಳ ವೇಷವನ್ನೇ ಮರೆಸಿ, ಪಳುದಾರಿಗಳಲ್ಲಿ ತನ್ನ ಕವಿತೆಯನ್ನು ನಡೆಸಲು ಆತ ನಿರಾತಂಕವಾಗಿ ಯತ್ನಿಸುತ್ತಾನೆ, ಸ್ವತಂತ್ರವನ್ನು ಸ್ಥಾಪಿಸಲು. ಆದರೆ ಅಲ್ಲೂ ಆತ ಸಫಲನಾಗುವುದು ಸುಲಭವಲ್ಲ. ಎಲ್ಲೋ ಯಾರೋ ಮಾಡಿದ್ದನ್ನೇ ಇಲ್ಲೂ ಇವನೂ ಮಾಡುತ್ತಿದ್ದಾನೆ, ಹೊಸದೆಲ್ಲಿ ಬರಬೇಕು ಎನ್ನುತ್ತಾನೆ ಚಾಣಾಕ್ಷ ಪಂಡಿತ, ದೂರದರ್ಶಿ.

ಮತ್ತೊಂದು ವಿಷಯದಲ್ಲೂ ಕವಿಗೂ ಪಂಡಿತನಿಗೂ ಪ್ರಭೇದವುಂಟು. ಕವಿಗೆ ವಿಸ್ಮೃತಿ ಸಹಕಾರಿ, ಪಂಡಿತನಿಗೋ ಸ್ಮೃತಿ. ಕವಿಗೆ ತನ್ನ ಕವಿತೆಯನ್ನೇ ತಾನೆಷ್ಟುಬಾರಿ ಓದಿದರೂ ಹೊಸದಾಗಿಯೇ ಕಾಣುತ್ತದೆ, ಅಷ್ಟೇ ಅಚ್ಚರಿ ಮೂಡುತ್ತದೆ; ಪಂಡಿತನಿಗೆ ಒಂದು ಸಲ ಓದಿ ಮತ್ತೊಂದುಸಲ ಓದಿದರೂ ಅದು ಹಳಸುತ್ತದೆ; ಎಂಥ ಹೊಚ್ಚ ಹೊಸದಾದರೂ ಆತನಿಗೆ ಓದಿದ್ದನ್ನೇ ಪುನಃ ಓದುವ ಬೇಸರ ತರುತ್ತದೆ. ಅಮೃತಸರವೇ ಇರುವಾಗ ಈ ಚವುಳು ನೀರೇಕೆ, ನಮ ಗೇನು ಜಲಕ್ಷಾಮವೇ ಎನ್ನುತ್ತಾನೆ ಆತ. ಕವಿಗೋ ತನ್ನಂದಿನ ಕವಿತೆ ಉತ್ತಮೋ ತ್ತಮ—ಪಂಡಿತನಿಗೆ ಅತ್ಯುತ್ತಮ ಕವಿತೆಯನ್ನು ಕೇಳುವಾಗಲೂ ಅದಕ್ಕಿಂತ ಸಮೀಚೀನವೆಂದು ತೋರುವ ಯಾವುದೋ ಹಳೆಯದೊಂದು ನೆನಪಿಗೆ ಬಂದು ಸದ್ಯದ ಸಂತೋಷಕ್ಕೆ ಮರೆಗಟ್ಟುತ್ತದೆ. ಕವಿ ತನ್ನೊಂದಕ್ಕೆ ಹೊರತು ಮಿಕ್ಕಾವ ಕವಿತೆಯ ನಷ್ಟಕ್ಕೂ ಕಣ್ಣೀರು ಸುರಿಸನು; ಪಂಡಿತನು ಇಂದಿನದಕ್ಕೆ ಹೊರತು ಮಿಕ್ಕಾವ ಹಳೆಯ ತುಣುಕಿಗೆ ಗೆದ್ದಲು ಹತ್ತಿದರೂ ಕೊರಗಿ ಕೃಶನಾಗುತ್ತಾನೆ. ಕವಿಗೆ ಸದ್ಯದ ಪ್ರಪಂಚ ಬಲುಸೋಜಿಗ; ಪಂಡಿತನಿಗೆ ಕಳೆದುಹೋದ ಹಳೆ ಯದೇ ರಂಜಕ. ಕವಿಗೆ ಕಾಲವೆಲ್ಲ ಇಂದಿನದು, ಮುಂದಿನದು; ಪಂಡಿತನಿಗೋ ಹಿಂದಿನದು. ಆತನ ತರ್ಕಸರಣಿಯಲ್ಲಿ, ವರ್ತಮಾನವೋ ಕ್ಷಣಿಕ, ಭವಿಷ್ಯಕ್ಕೆ ಹುಟ್ಟೇ ಇಲ್ಲ (ಏಕೆಂದರೆ ಹುಟ್ಟಿದ ಕ್ಷಣ ಅದರ ಭವಿಷ್ಯತೆಯೇ ಹಾರಿ ಹೋಗುತ್ತದೆ), ಭೂತ ಮಾತ್ರ ಶಾಶ್ವತ, ಅದೊಂದಕ್ಕೆಯೇ ಮುಂಬರಿವು; ಆದರೆ ಕವಿಯೋ ಸ್ವರ್ಣಕ್ಷಣವಾದಿ, ಶಾಶ್ವತದ ಗೊಡವೆ ಅತನಿಗೆ ಬೇಕೇ ಇಲ್ಲ. ಕವಿಯ ನೋಟ ಷಾಪಸಂದ್ ಗಾಡಿಯಲ್ಲಿ ಸಾರಥಿಯ ಪಕ್ಕದಲ್ಲಿ ಕುದುರೆಯ ಪೃಷ್ಠ ತೊಡೆಗೆ ಸೋಕುವಂತೆ ಕುಳಿತುಕೊಂಡು ನೋಡುವ ಮುನ್ನೋಟ. ಪಂಡಿತನಿಗೋ ಕುದುರೆಗೆ ಬೆನ್ನುಮಾಡಿ ಕಾಲನ್ನು ಹಾಯಾಗಿ ಇಳಿಯಬಿಟ್ಟು ಕುಳಿತವನ ಹಿನ್ನೋಟ. ಈ ನೋಟದಲ್ಲಿ ಆತನಿಗೆ ವರ್ತಮಾನ ಕೂಡ ಭೂತದಂತೆಯೇ ಕಾಣುತ್ತದೆ! ಆತನಿಗೆ ಹಿಂದೇ ಮುಂದೋಡುತ್ತಿರು ತ್ತದೆ; ಕವಿಯ ನೋಟಕ್ಕೋ ಮುಂದುಕೂಡ ಹಿಂದು ಹಿಂದಕ್ಕೇ ಓಡಿಬರುವಂತೆ ಕಾಣುತ್ತದೆ. ಪಂಡಿತನಿಗೆ ಹಿಂದೋಡುವುದೇ ಪ್ರಗತಿ, ಪ್ರಗಲ್ಭತೆಯ ಸೂಚನೆ; ಕವಿಗೋ ತದ್ವಿರುದ್ಧ. ಆಧುನಿಕ ಕವಿಯಲ್ಲೂ ಸಹ ಪಂಡಿತ ಎಷ್ಟು ಹಳತನವನ್ನು ಕಾಣುತ್ತಾನೋ ಅಷ್ಟು ಆತನ ಮಮತೆಯ ಪ್ರಮಾಣವೂ ಸಹ ಹೆಚ್ಚುತ್ತದೆ.

ಕವಿಗೋ ಅನುಭವ ಎಷ್ಟು ಹೊಸತಾದರೆ ಅಷ್ಟು ಪ್ರೀತಿ ಅದರಲ್ಲಿ ಅಷ್ಟು ಮೋಹ. ಪಂಡಿತನಿಗೆ ತಾರೆಗಳನ್ನು ಮೆರೆಸುವ ಇರುಳು ಇಷ್ಟ; ಕವಿಗೆ ಮಿಕ್ಕೆಲ್ಲವನ್ನೂ ಮರೆಸಿ ಸನಿಯವನ್ನಷ್ಟೆ ಬೆಳಗುವ ಹಗಲುಬತ್ತಿ ಮೋಹಕ.

ಹೀಗೆ ಕವಿಗೂ ಪಂಡಿತರಿಗೂ ಭೇದಗಳಿದ್ದರೂ ಇಬ್ಬರೂ ಮೇಳೈಸುವ ಕ್ಷೇತ್ರವೂ ನಡುವೆಯಿದೆ. ಕವಿಗೆ ಪಂಡಿತನಾಗಬೇಕೆಂಬಾಸೆ, ಪಂಡಿತನಿಗೂ ಕವಿಯಾಗಬೇಕೆಂಬಾಸೆ ಈ ಮಿಳನ ಕ್ಷೇತ್ರವನ್ನು ರೇಖಿಸುತ್ತದೆ. ಒಬ್ಬನ ಯಶಸ್ಸು ಇನ್ನೊಬ್ಬನಿಗೆ ಕಾಮ್ಯ, ಒಬ್ಬನ ಗೌರವ ಮತ್ತೊಬ್ಬನ ಲೋಭ, ಹೀಗೆ ಏರ್ಪಡುತ್ತದೆ ಈ ಸಂಧಿಕ್ಷೇತ್ರ. ಸರಳವಾದುದನ್ನು ಕ್ಲಿಷ್ಟವಾಗಿಮಾಡಿ ಕವಿ ಪಂಡಿತನಾಗ ಬಯಸುತ್ತಾನೆ. ಈ ಯತ್ನದಲ್ಲಿ ಆತ ಬೃಹನ್ನಿಘಂಟುಗಳನ್ನು ತೊಡೆಗೇರಿಸಿ ಪುಟತಿರುವಿಹಾಕಿ ಶಬ್ದಗಳನ್ನು ಹೆಕ್ಕಿಕೊಳ್ಳುವ ವ್ಯಾಯಾಮದಲ್ಲಿ ತೊಡಗಿ ಉಸಿರುಗಟ್ಟುತ್ತಾನೆ, ಇಷ್ಟೇ ವ್ಯಾಯಾಮವನ್ನು ಓದುಗನಿಗೂ ಕೊಡುತ್ತಾನೆ—ಪಂಡಿತನೆಂಬ ಶ್ಲಾಘನೆಗೂ ಪಾತ್ರನಾಗುತ್ತಾನೆ—ವಿದ್ವತ್ಪ್ರಿಯರಿಂದ. ಪಂಡಿತನೂ ಕವಿತೆಯನ್ನು ರಚಿಸತೊಡಗಿ ಛಂದಸ್ಸಿಗೆ ಬೆರಳೆಣಿಸಿ ತನ್ನ ಸ್ಮೃತಿಯ ಜೇನುಗೂಡನ್ನು ಕೆದಕುತ್ತಾ ಅನೇಕ ಕವಿತೆಗಳ ಜೇನುನೊಣಗಳಿಂದ ಕಚ್ಚಿಸಿಕೊಂಡು ಕೈಯೊದರುತ್ತಾನೆ, ಕೆಲವು ಕವಿಗಳ ಪ್ರಶಂಸೆಗೂ ಪಾತ್ರನಾಗುತ್ತಾನೆ. ಕವಿ ಕೆಟ್ಟು ಪಂಡಿತನಾಗುವುದೂ, ಪಂಡಿತ ಕೆಟ್ಟು ಕವಿಯಾಗುವುದೂ ಈ ನಡುವಂತರದಲ್ಲೇ; ಅವರು ಸ್ನೇಹಿತರಾಗಿ ಕೈಕೈ ಕುಲುಕುವುದೂ ಈ ಮೇಳದಲ್ಲೆ. ನಮ್ಮ ಕನ್ನಡ ಸಾಹಿತ್ಯದ ಮಧ್ಯ ಪ್ರಾಂತವೆಲ್ಲ ಪ್ರಾಯಶಃ ಇಂಥವರ ಕವಿತೆಯಿಂದ ತುಂಬಿ ವಿದ್ಯಾರ್ಥಿಗಳನ್ನು ಶೋಷಿಸುತ್ತಾ ಪಂಡಿತರನ್ನು ಪೋಷಿಸುತ್ತಿವೆ ಎನ್ನಬೇಕು.

ಇಷ್ಟಾದರೂ ಕವಿ ಕವಿಯೇ, ಪಂಡಿತ ಪಂಡಿತನೇ. ಕವಿ ಬಿಟ್ಟು ಹೋದುದು ಪಂಡಿತನ ಸ್ವತ್ತು. ಆದರೆ ಕವಿಗೋ, ಪಂಡಿತ ಕೊಟ್ಟರುಂಟು ಇಲ್ಲದಿದ್ದರಿಲ್ಲ ಉಳಿಗಾಲ.

ಮಂಡೂಕನ ವಟರು

ಮುಂಗಾರು ಮಳೆ ಒಂದು ಹದ ಬಿದ್ದು ಬೆಂದ ನೆಲಕ್ಕೆ ತಂಪೊದಗಿ ಹಳ್ಳದ ತಳ ಕೊಚ್ಚೆಯಾದಾಗ ಆ ತೇವದ ಜಾಗದಲ್ಲಿ ಸಂಜೆ ವೇಳೆಗೆ ಒಂದು ದೊಡ್ಡ ಗದ್ದಲವೇಳುತ್ತದೆ. ಅದೊಂದು ಮಹಾಶಬ್ದ ಪ್ರಪಂಚ, ಪ್ರಮತ್ತಾತ್ತಟೋಪ; ಬಹುಶ್ರುತಿಗಳ ಲಯಬದ್ಧ ಸಂಮರ್ದನವದು. ಆ ತುಮುಲಧ್ವನಿ ಮೊದಮೊದಲು ಕರ್ಕಶವಾಗಿ ತೋರಿದರೂ ಅದರಲ್ಲಿ ಸಾಮರಸ್ಯವಿಲ್ಲದಿಲ್ಲ. ಆ ಪ್ರಚಂಡ ಸಂರಾವವೋ ನಿರರ್ಥವಾದದ್ದು. ಅದರಿಂದ ಲೋಕ ಉದ್ವೇಜಿತವಾಗುವುದಿಲ್ಲ. ಅದು ನಮ್ಮ ಕಿವಿಗೆ ಬಿದ್ದಾಗ ನಮ್ಮ ಮುಖದಲ್ಲಿ ಒಂದು ಮುಗುಳುನಗೆ ಹಾದು ಹೋಗಬಹುದು, ಅಷ್ಟೆ. "ನಾನಿದ್ದೇನೆ, ನಾನಿದ್ದೇನೆ" ಎಂಬ ಧ್ವನಿ ಇಷ್ಟು ಸ್ಫುಟವಾಗಿ ಇಷ್ಟುಸ್ತರಗಳಲ್ಲಿ ಇಷ್ಟು ಸ್ವಚ್ಛಂದ ಸ್ವರೂಪವನ್ನು ಪ್ರಕಟಿಸುತ್ತ ತಾರೋಚ್ಚವಾಗಿ ಮೇಲೆದ್ದು ನಿರ್ಬಾಧವಾಗಿ ತೋರುವುದು ಜಂತು ಪ್ರಪಂಚದಲ್ಲಿ ಮತ್ತೆಲ್ಲಿಯೂ ತೋರಿಬರದು. ಕೂಗುವ ಪ್ರಾಣಿ ಸಣ್ಣದು; ಅದರ ಕೂಗೋ ಬಹು ದೊಡ್ಡದು. ಈ "ನಾನಿದ್ದೇನೆ, ನಾನೂ ಇದ್ದೇನೆ" ಎಂಬ ಬೃಹದ್ರಾವದಲ್ಲಿ "ನೀನೂ ಇದ್ದೀಯೆ" ಎಂಬ ಸಣ್ಣ ನಮ್ರ ಸ್ವರವೂ ಸಹ ಸೇರಲೆಡೆಯಿಲ್ಲ. ಸಮಾನ ಪ್ರಾಣ ಸಂಸ್ಥೆಗಳ ಅಹಮಸ್ಮಿತಾಮೋದ ಮಾತ್ರ ಇಲ್ಲಿ ಸ್ಫುರಿಸುತ್ತಿದೆ. ಬೆಂದನೆಲಕ್ಕೆ ಸ್ವಲ್ಪ ತಂಪು; ಈ ಅಲ್ಪ ಪ್ರಾಣಿಗಳು ತಮ್ಮ ಬಿಡುವಿನ ಉಲ್ಲಾಸದ ಮಹಾಧ್ವನಿಯನ್ನೆತ್ತಲು ಅಷ್ಟೆ ಸಾಕು, "ಸುಭಿಕ್ಷಲೋಕದಲ್ಲಿ ನಾನು ನೆಮ್ಮದಿಯಿಂದೊಂದೇ ಅಲ್ಲ ಕಣ್ಣಸೆಳೆಯುವಂತೆಯೂ ಇದ್ದೇನೆ" ಎಂಬ ನಭಸ್ಪೃಶ ಘೋಷವನ್ನೆಬ್ಬಿಸಲು.

ಈ ಸದ್ದು ನಿರರ್ಥವೆಂದು ಹಿಂದೆ ಹೇಳಿದೆನಲ್ಲವೆ? ಅದು ಆ ಪ್ರಾಣಿಗಳ ದೃಷ್ಟ್ಯಾ ತಪ್ಪು. ಇಂಥ ಸದ್ದನ್ನು ಮಾಡದಿದ್ದರೆ ಅವಕ್ಕೆ ಉಳಿವೇ ಇಲ್ಲ. ಕೂಗೇನೋ ಸ್ವಂತ ಹುಮ್ಮಸ್ಸಿಗೆ ಸಂಬಂಧಪಟ್ಟದ್ದು; ಅದರ ಪ್ರೇರಕ ಶಕ್ತಿ ಮಾತ್ರ ಆ ಮಹಾಮಾಯೆ ಪ್ರಕೃತಿ, ಸುಖದುಃಖಾತೀತೆ, ನಿಸ್ಸಂಭ್ರಾಂತೆ, ಸಂಭ್ರಮ ಜನಕೆ. ಈ ಅಲ್ಪ ಜೀವಿಗಳಲ್ಲಿ ಈ ಮಹಾನಾದ ಆಕೆಯನ್ನು ಮೆರಸುತ್ತಿದೆ. ಜೀವ ಒಂದು ತಲೆಮೊರೆಯಿಂದ ಮುಂದಿನ ತಲೆಮೊರೆಗೆ ಹರಿವ

ಸ್ರೋತೋದ್ಘೋಷವದು. ಕೋಗಿಲೆಗೆ ಕೊರಲು, ನವಿಲಿಗೆ ಸೋಗೆ, ಚಿಟ್ಟೆಗೆ ಬಣ್ಣ, ಭೇಕಕ್ಕೆ ಬೃಹದ್ರಾವ. ಇದು ನನ್ನನ್ನೂ ಸುಮ್ಮನಿರಗೊಡಲಿಲ್ಲ. ಏನು ಸ್ವಾರಸ್ಯ ನೋಡೋಣವೆಂದು ನಾನೂ ಹೊರಗೆ ಹೊರಟೆ.

ಮಳೆಹನಿ ನಿಂತಿದೆ, ಮರದ ಹನಿ ನಿಂತಿಲ್ಲ. ಮೋಡ ಕಾಣದು. 'ಗಗನಸಖಿ' ಯಂತೆ ಸಂಧ್ಯಾಪ್ರಮದೆ ತನ್ನ ಬೆನ್ನಿನಲ್ಲಿ ಬಣ್ಣದ ಸೆರಗನ್ನು ಚೆಲ್ಲಾಡುತ್ತ ಸಾಗುತ್ತಿದ್ದಾಳೆ. ಇನ್ನೇನು ಇರುಳು ಮೂಡುವ ಸಮಯ. ಹವ ತುಂಬ ಸೊಗಸಾಗಿದೆ. ವಯಸ್ಸಾದವರಿಗೆ ತಮ್ಮ ವಯೋಭಾರವನ್ನು ಮರೆಸುವ ಈ ಸಂಜೆ-ಗಾಳಿ ನನ್ನ ಮೈಯನ್ನು ಮನ ಬಂದಂತೆ ಈಗ ಸವರಿ, ಈಗ ಮುಟ್ಟಿ, ಈಗ ಒತ್ತಿ, ಹಾಗೆ ದುಂಡುಮುತ್ತಿಟ್ಟು, ಹೀಗೆ ಕೇದಗೆ ಅಲಗಿನ ಚುರುಕನ್ನು ತಣ್ಣನೆ ಮುಟ್ಟಿಸಿ, ಚಿಣ್ಣನೆ ಹಾರಿ ತನ್ನ ಹುಚ್ಚು ಹುಡುಗಾಟದಲ್ಲಿ ಸ್ನೇಹ ಕಲೆಯ ಪರಿಣತಿಯನ್ನೇ ತೋರುತ್ತಿದೆ. ಇದೆಲ್ಲಿ—ಆ ಫ್ಯಾನ್‌ಗಾಳಿಯ ಏಕಪ್ರಕಾರತೆಯ ಮೊದ್ದುತನವೆಲ್ಲಿ ?

ಹೀಗೆಂದುಕೊಳ್ಳುತ್ತಾ ಕಾಲುದಾರಿಯೊಂದರಲ್ಲಿ ನಡೆಯುತ್ತಿರುವಾಗ ಸದ್ದೇಳುತ್ತಿದ್ದ ಜಾಗ ತಲೆದೋರಿತು. ಅದೊಂದು ದಾರಿಯಂಚಿನ ಹಳ್ಳ. ಅದರ ಆಳ ಸುಮಾರು ಒಂದೆರಡು ಅಡಿಗಳು. ಅದರಲ್ಲಿ ಹೆಜ್ಜೆ ಕೂಡ ಮುಳುಗದಷ್ಟು ನೀರ ಹರವು. ಆ ನೀರಿನ ಬಿಂಕವನ್ನು ಹೇಳಿ ತೀರದು ; ತಾನೊಂದು ದೊಡ್ಡ ಸರಸ್ಸೆಂದೇ ಅದಕ್ಕೆ ಭ್ರಮೆ. ಅದರ ಸುತ್ತಣ ಗಿಡ ಪೊದೆಗಳ ನೆರಳು ಅದನ್ನು ಅಂದಗೊಳಿಸಿದೆ. ಜತೆಗೆ ಒಂದು ದೊಡ್ಡ ತೆಂಗಿನಮರ ತನ್ನ ಪ್ರತಿಬಿಂಬವನ್ನು ಅದರುದ್ದಕ್ಕೂ ಚಾಚಿದೆ. ಆ ಮರದ ನೆರಳಿನ ತುದಿಗೊಂದು ನಕ್ಷತ್ರ ಮಿನುಗುತ್ತಿದೆ. ಆ ನೀರಿನೊಡಲಲ್ಲಿ ಒಡೆಯ ಹತ್ತಿರುವ ತಾರೆಗಳೆಷ್ಟೊಂದು! ಈ ಕ್ಷಣದಲ್ಲಿ ಈ ನೀರು ಯಾವ ಮಾನಸಕ್ಕೆ ಕಡಮೆ ? ಅರಂಗುಲದ ಈ ಜಲ ಅಗಾಧ ಪಾತಾಳದಾಳವನ್ನು ಮೆರೆಸುತ್ತಿದೆಯಲ್ಲ. ಅದರಂಚಿನ ಅದೃಶ್ಯ ಪ್ರಾಣಿಗಳ ಈ ಧ್ವನಿಯೋ ಮುಗಿಲನ್ನೇ ಮುಟ್ಟಿ ಚುಕ್ಕಿಗಳ ಗೆಜ್ಜೆದನಿಯಾಗಿದೆ. ತನ್ನನ್ನು ವೇದದ ಋಷಿಯೊಬ್ಬನು ಬ್ರಹ್ಮಘೋಷಕ್ಕೆ ಹೋಲಿಸಿದ ನೆನಪೇನಾದರೂ ಅದಕ್ಕೆ ಇಂದು ಮೂಡಿದೆಯೋ ? ಇಲ್ಲದಿದ್ದರೆ ಈ ನಾದಕ್ಕೆ ಈ ಹುಮ್ಮಸ್ಸು ಹೇಗೆ ಬರಬೇಕು. ನಾವು ದಿನದಿನವೂ ಮಾಡುವ, ಕೇಳುವ 'ಕಾಲಕ್ಷೇಪ'ಗಳಲ್ಲಿ ಎಷ್ಟೊಂದು ಶ್ರುತಿ ವಾಕ್ಯಗಳೂ ಮಹಾತ್ಮರ ಮಾತುಗಳೂ ಭಾವನೆಗಳೂ ತಮ್ಮ ನೆರಳಾಡಿಸಿ

ಹೋಗುತ್ತಿಲ್ಲ—ನಮಗೇಕೆ ಈ ತಾರೆ ಬಾನಾಡಿಸುವ ಮಳೆಕುಂಟೆಯ ಜಲದ ಮೇಲೆ ಮತ್ಸರ.

ಈ ನಕ್ಷತ್ರನೃತ್ಯಾನುವಾದಕ ಭೇಕರವವೂ ಕೂಡ ವಿಫಲವಾಗಿಲ್ಲ. ಅತ್ತಲೊಂದು ಹೆಣ್ಣು ಕಪ್ಪೆ ಮೆಲ್ಲಗೆ ಕುಪ್ಪಳಿಸುತ್ತಿರುವುದು ನನ್ನ ಕಣ್ಣಿಗೆ ಬೀಳುತ್ತಿದೆ. ಈ ಘೋಷಕ್ಕೆ ಇಷ್ಟೊಂದು ಅಲ್ಪ ಫಲವೇ? ಆದರೆ ಅದು ಕೋರಿದುದೂ ಇಷ್ಟನ್ನೇ ಅಲ್ಲವೆ? ಅಲ್ಲದೆ—ಇಗೋ—ಇದು ನಾನು ಕಾಣುತ್ತಿರುವುದೋ ಇಲ್ಲ ಭ್ರಮೆಯೋ—ಈ ಹುತ್ತದ ಸಂದಿಯಿಂದ ಹಾವೊಂದು ತಲೆಹಾಕಿ ಒಳಗೆ ತನ್ನ ಸುರುಳಿಯನ್ನು ಬಿಚ್ಚುತ್ತಿರುವಂತಿದೆ. ಇನ್ನು ನಾನು ಇಲ್ಲಿ ಸುಳಿದಾಡುವುದು ಲೇಸಲ್ಲ. ಯಾವ ಹುತ್ತದಲ್ಲಿ ಯಾವ ಹಾವಿದೆಯೋ, ಯಾವ ಸದ್ದಿನಲ್ಲಿ ಯಾವ ಮುದ್ದಿದೆಯೋ, ಯಾವ ಮನದಲ್ಲಿ ಯಾವ ಮರುಳಿದೆಯೋ, ಬಲ್ಲವರಾರು?

ಭದ್ರಾವತಿ-ಶೃಂಗೇರಿ

ನಾ ಬಯಸಿದ್ದ ರಜ ಸಿಕ್ಕಿತು. ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬ ಬಗೆ ಮಾತ್ರ ತೋರಲಿಲ್ಲ. ಎರಡು ಮೂರು ದಿನ ಇದ್ದ ಜಾಗದಲ್ಲೆ ಇದ್ದು ಬಿಟ್ಟೆ. ನನ್ನ ಜೊತೆಯವರೆಲ್ಲರೂ ಆಫೀಸುಗಳಲ್ಲಿ ದುಡಿಯುತ್ತಿರುವಾಗ ನಾನು ಮಾತ್ರ ಹಾಯಾಗಿ ಮನೆಯಲ್ಲಿ ಕುಳಿತಿರುವುದೆಂದರೆ ಸಾಮಾನ್ಯವಾದ ಭೋಗವಲ್ಲ. ಆದರೆ ಸುಖಕ್ಕೆ ಹಂಬಲಿಸುವ ಮನಃಪ್ರವೃತ್ತಿ ಕಪ್ಪೆಯಂತೆ ಕುಪ್ಪಳಿಸುತ್ತಿರುತ್ತದೆ; ನನ್ನಂಥವರನ್ನು ಇದ್ದ ಜಾಗದಲ್ಲಿ ಇರಗೊಡುವುದಿಲ್ಲ. ಕೈಯಲ್ಲಿ ಹಣವಿತ್ತು. ನನ್ನ ಸ್ನೇಹಿತರ ಒಂದು ತಂಡ ತಂಗಿದ್ದ ಭದ್ರಾವತಿಗೆ ಮನೋವೇಗದಲ್ಲಿ ಆಸೆ ಹಾರಿತು. ರೈಲಿನ ವೇಗದಲ್ಲಿ ದೇಹ ಅದನ್ನು ಹಿಂಬಾಲಿಸಿತು.

ಭದ್ರಾವತಿಯೇನೋ ಅಷ್ಟು ಹಿತವಾದ ಜಾಗವಲ್ಲ. ಅಲ್ಲಿನ ಮನೋರಂಜನ ವ್ಯಾಪಾರವೆಂದರೆ ಅಗ್ನಿದೇವತೆಯ ಸರ್ಕಸ್. ಆತ ಕಿಡಿಗೆದರುವುದು, ನಿಡು ಸುಯ್ಯುವುದು, ರೇಗಿ ರೇಗಿ ಬೀಳುವುದು, ಹೋ ಎಂದು ಅರಚಿಕೊಳ್ಳುವುದು, ಚಿಟ ಚಿಟ ಎಂದು ಹಲ್ಲು ಕಡಿಯುವುದು, ಕ್ಷಣ ಕ್ಷಣಕ್ಕೂ ಮೈಮುರಿದು ಮೇಲೇರಿ ನೆಗೆದು ಬೀಳುವುದು ಇತ್ಯಾದಿ ಕಾರ್ಯಗಳಿಂದ ತನ್ನ ನಿಸ್ಸಹಾಯಕತೆಯನ್ನು ಪೂರ್ಣರೌದ್ರಸ್ವರೂಪದಲ್ಲಿ ತೋರುವ ಆತನ ಬಗೆಯೇ ಬಗೆ. ಪ್ರಚಂಡ ಪ್ರಭಾವಶಾಲಿ. ಈತನನ್ನು ಇಂತೆಬ್ಬಿಸಿ, ರೇಗಿಸಿ, ಬೋನಿನಲ್ಲಿ ಕೂಡಿಟ್ಟಾಡಿಸಿ, ಗರ್ವಭಂಗಮಾಡಿ ದುಡಿಸಿಕೊಳ್ಳುವ ನಮ್ಮ ಧಾರ್ಷ್ಟ್ಯವನ್ನು ತಾನೇ ಏನು ಹೇಳೋಣ! ಇದನ್ನು ನೋಡಿದಾಗ ಒಂದು ಸಲ ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳೋಣ ಎನ್ನಿಸುತ್ತದೆ. ಮತ್ತೊಮ್ಮೆ ಈತ ನಮ್ಮ ಮೂಲಕವಾಗಿಯೇ ತನ್ನ ಬಿಡುಗಡೆಯನ್ನು ಸಾಧಿಸಿಕೊಂಡು ಪುನಃ ಪ್ರಭಾವಶಾಲಿಯಾಗಿ ಜಗತ್ತಿನ ಎಂದೂ ನಿಲ್ಲಲರಿಯದ ಯುದ್ಧರಂಗಗಳಲ್ಲಿ ನಮ್ಮನ್ನೇ ಧ್ವಂಸಮಾಡಿ ಮುಯ್ಯನ್ನು ಪದೇ ಪದೇ ತೀರಿಸಿಕೊಳ್ಳುವ ರಂಪವನ್ನು ನೆನೆದುಕೊಂಡರೆ ಭಯವಾಗಿ ಮೈ ಜುಮ್ಮೆನ್ನುತ್ತದೆ. "ನಿಮ್ಮಾಸೆಗೆ ಬಿದ್ದೆ—ನಿಮ್ಮ ಅಸೂಯೆಯಲ್ಲಿ ತಿರುಗಿ ಎದ್ದೆ" ಎಂಬ ವಿಕಟಾಟ್ಟಹಾಸ ಆತನದು. ನಾವು ಈಗೀಗ ದಿನವೂ ಆಕಾಶವಾಣಿಗಳಲ್ಲಿಯೂ ಪತ್ರಿಕೆಗಳಲ್ಲಿಯೂ ಕೇಳುವುದೂ ನೋಡುವುದೂ ಇವನ ಈ ಕುಹಕದ ಅಬ್ಬರದ ಹೊಳಲನ್ನೇ ಅಲ್ಲವೆ?

ಭದ್ರಾವತಿಯ ರೌದ್ರವನ್ನು ನೋಡಿದವರಿಗೆ ತಣಿಗೆ ಬೈಲಿನ ಪ್ರಶಾಂತ ಮೌನದ ವೇದನೆ ಅರ್ಥವಾಗುತ್ತದೆ. ಮಾರಿಗೆ ಮಿಾಸಲಾದ ಕೋಣನಂತೆ ಈ ಕಾಡಿನ ಬಗೆ—ಕೋವಿಯಿೀಡಿಗೆ ಮಿಾಸಲಾದ ಹುಲಿಯಂತೆ. ಈ ಕಾಡನ್ನು ನೋಡಿ ನನ್ನಂಥ ಅಳ್ಳೆದೆಯವರು ನಲವನ್ನು ಪಡೆಯುವುದು ಸ್ವಲ್ಪ ಕಷ್ಟ. ವಿಪುಲವಾಗಿ ಮರುಕ ಹುಟ್ಟಿ ನಮ್ಮ ಮನಸ್ಸು ಅಧೀರವಾಗುತ್ತದೆ. ಮುಕ್ತರಿಗೆ ಭವಿಗಳಲ್ಲಿ ಹುಟ್ಟುವ ಅನುಕಂಪದ ಬಗೆ ಇಂಥದಿರಬೇಕು. ತಮ್ಮನ್ನು ಮಾತ್ರ ತಾವು ಕಂಡುಕೊಂಡು ಬಾಳುವಾಸೆಗೆ ಈ ಕಾಡಿನ ಮರಗಳು ಹೋರಾಡುವ ರೀತಿ, ತಳಿರುಸೂಡಿ ಮಲರಿಂದ ಅಲಂಕೃತವಾಗುವ ಬಗೆ, ಮೌನಕ್ಕೆ ಆತ್ಮರಕ್ಷಣೆಗಾಗಿ ಮುಳ್ಳುಮೂಡಿದೆಯೋ ಎಂಬಂತೆ ಗೋವ್ರೋ ಎಂದು ನಮ್ಮನ್ನು ಹೆದರಿಸುವ ಪರಿ, ಹಕ್ಕಿಗಳ ಕಿವಿಸವಿಯಿಂಚರದಿಂದ ಅವು ದನಿಗೊಳ್ಳುವ ಬಗೆ, ಅವುಗಳ ನಿಸ್ಸಹಾಯಕತೆ, ಕ್ರೌರ್ಯ, ನೈಷ್ಠುರ್ಯ, ಲಾಲಿತ್ಯ ಎಲ್ಲವೂ ನಮ್ಮಲ್ಲಿ ಅನೇಕ ಸಂಚಾರಿ ಭಾವಗಳನ್ನೆಬ್ಬಿಸಿ ಕರುಣೆಯಲ್ಲಿ ಮುಗಿಸುತ ವೆ.

ಆಮೇಲೆ ಕೆಮ್ಮಣ್ಣುಗುಂಡಿ—ಅದರೆದೆಯನ್ನು ತೋಡಿ ತೆಗೆದು ಬಯಲಿನಲ್ಲಿ ರಾಶಿ ಹಾಕಿರುವ ಅದಿರಿನ ಗುಡ್ಡ, ಸುತ್ತುತ್ತಿರುವ ಉಕ್ಕಿನ ಹಗ್ಗದ ಮೇಲೆ ಕೊಠಾರೋತ್ಸವದ ಆಳ್ವಾರ್ರುಗಳಂತೆ ಒಂದರ ಹಿಂದೊಂದು ಕೆಳಗಿಳಿದು ಮೇಲೇರುವ ಅದಿರು ತುಂಬಿದ ಬಕ್ಕೆಟ್ಟುಗಳು, ಅವುಗಳ ಲೌಭ್ಯಕ್ಕೆ ಸ್ವಲ್ಪವೂ ಅವಕಾಶಕೊಡದೆ ದರೋಡೆ ಮಾಡುವ ದಾರಿಹೋಕನಂತೆ ರಾಟೆಯ ಪಕ್ಕಕ್ಕೆ ನಿಂತು ಯಂತ್ರವೊಂದು ಈ ಬಕ್ಕೆಟ್ಟುಗಳು ತನ್ನ ಹತ್ತಿರಕ್ಕೆ ಬರುವ ಸಮಯಕ್ಕೆ ಸರಿಯಾಗಿ ಅವುಗಳ ತಲೆಯ ಮೇಲೆ ಹೊಡೆಯಲು, ಅವು ತಲೆ ತಿರುಗಿ ಫಳಕ್ಕನೆ ಮಗುಚಿಕೊಂಡು ತಾವು ತಂದ ಅದಿರನ್ನು ಸುರಿದು ಸುರಿದು ತೆರಳುವ ಮನೋಹರ ದೃಶ್ಯ. ಡಕ್ ಫಳಕ್–ಠಕ್ ಫಳಕ್–ಉಸ್‌ಸ್‌ಸ್–ಝುಗ್ ಝುಗ್ ಝುಗ್–ತಿರುಗಿ ಅದಿರು ಮತ್ತು ಅಡಿಗಬ್ಬು ತುಂಬಿದ ಟ್ರೇನಿನೊಡನೆ ಕಾಡಿನ ಮೂಲಕ, ಇದರ ಆಗಮನಕ್ಕೆ ಆತುರಗೊಂಡು ಓಗುಟ್ಟುವ ಭದ್ರಾವತಿ!

ಆ ದಿನ ರಾತ್ರಿ ಪುನಃ ಉಕ್ಕಿನ ಕಾರ್ಖಾನೆಯಲ್ಲಿ ಕಾದುಕ್ಕಿನ ಕಂಬಿಗಳು ಹಾವಿನಂತೆ ನಯನ ಮನೋಹರವಾಗಿ ಹರಿದಾಡಿದಾಗ, ನಾನು ಖಾಂಡವವನ ದಹನ ಕಾಲದಲ್ಲಿ ತನ್ನ ನೆಮ್ಮದಿಗೆ ಭಂಗತಂದ ಅರ್ಜುನನಿಗೆ ಕೋಪಿಸಿ ಮುಯ್ಯಿ ತೀರಿಸಿಕೊಳ್ಳುವೆನೆಂದು ಶಪಥ ಮಾಡಿದ ಸರ್ಪವನ್ನು ನೆನೆದುಕೊಂಡೆ. ಆ

ಕಾಡು, ಆ ಗುಡ್ಡ, ಈ ಅಗ್ನಿ, ಈ ಸರ್ಪಾಸ್ತ್ರಗಳ ಸುಳಿವು ಇವೆಲ್ಲಾ ನನ್ನ ಮನಸ್ಸಿನಲ್ಲಿ ತಳಮಳವನ್ನೆಬ್ಬಿಸಿದವು. ನಮ್ಮ ಶಾಂತಿಯನ್ನು ನೀವು ಭಂಗಮಾಡಿದೀರಿ, ನಿಮ್ಮ ನೆಮ್ಮದಿಯನ್ನು ನಾವು ಒಂದಲ್ಲ ಸಾವಿರ ತೆರದಲ್ಲಿ ಮುರಿಯುತ್ತೇವೆ ಎಂದು ಅವು ನಮ್ಮನ್ನು ಮೂದಲಿಸುತ್ತಿರುವಂತೆ ನನಗೆ ತೋರಿತು.

ರುದ್ರಭದ್ರಾವತಿಯಿಂದ ಶಿವಮುಗ್ಗ–ಶಿವಮುಗ್ಗೆಯಿಂದ–ಶೃಂಗೇರಿ ಚೆನ್ನವೋ–ಜೋಗ್ ಚೆನ್ನವೋ, ಹೇಳುವುದು ಕಷ್ಟ. ಶೃಂಗೇರಿಯಲ್ಲಿ ಹೊಳೆಯುಂಟು, ಗುಡ್ಡವುಂಟು, ಕಾಡುಂಟು. ಆದರೆ ದೇಗುಲವೂ ಉಂಟು—ಮಠವೂ ಉಂಟು. ಕೆಲವರಿಗೆ ಜೋಗ್ ಜಲಪಾತದ ಭೀಮಸೌಂದರ್ಯದ ಸಾನ್ನಿಧ್ಯ ಸಾಕು, ಮತ್ತೆ ಕೆಲವರಿಗೆ ಶೃಂಗೇರಿಯ ಮಲೆ ಬನ ಹೊನಲುಗಳ ಜತೆಗೆ ಮಠವೂ ಗುಡಿಯೂ ಬೇಕು. ಜೋಗಿಗೆ ಹೋಗುವುದಕ್ಕೆ ನಮಗೊಂದು ನಿಷ್ಕೃಷ್ಟವಾದ ಮನೋಭಾವ ಬೇಕಿಲ್ಲ; ಸಾಮಾನ್ಯವಾದ ವಿನೋದಾಭಿಲಾಷೆ ಇದ್ದರೆ ಸಾಕು. ಅಲ್ಲಿ ಮೂಡುವುದು ವಿಸ್ಮಯ. ಮನಸ್ಸು ದಿವ್ಯಾದ್ಭುತ ದೃಶ್ಯವೊಂದನ್ನು ಕಂಡು ತನ್ನ ಭಾರವನ್ನೆಲ್ಲಾ ಕಳೆದು ಲಗುಬಗೆಯ ಮನೋಭಾವಕ್ಕೆ ಬರುವ ಸ್ಥಿತಿ. ಈ ಎಳೆಯತನ ಯಾರಿಗೆ ಬೇಡ ? ಯಯಾತಿಗೆ ಪುರು ಯೌವನವಿತ್ತಂತೆ ಈ ಜಲಪಾತ ನಮ್ಮ ಮನಸ್ಸಿನ ಮುದಿತನವನ್ನು ಕ್ಷಣಕಾಲ ಕಳೆಯುತ್ತದೆ. ಆದರೆ ಈ ಸ್ಥಿತಿ ಸ್ಥಾಯಿಯಲ್ಲ. ಈ ಮೊದಲಿನ ವಿಸ್ಮಯಭಾವ ಅಳಿದ ಬಳಿಕ ನಾವು ನಮ್ಮ ನಿತ್ಯಕ್ಕಿಳಿಯುತ್ತೇವೆ. ಅಲ್ಲಿ ವಿನೋದಕ್ಕೆಂದು ಗ್ರಾಮ-ಫೋನು ತರುವ ಅನೇಕರುಂಟು. ಈ ಪ್ರಪಾತ ಕೊಂಚ ಹೊತ್ತಿನಲ್ಲಿಯೇ ನಮ್ಮ ದೈನಂದಿನ ಮನೋವೃತ್ತಿಯಾದ ವಿನೋದಕ್ಕೆ ಹಿನ್ನೆಲೆ ಮಾತ್ರವಾಗುತ್ತದೆ. ಪ್ರಕೃತಿಯೇ ಅಷ್ಟು, ಹಿನ್ನೆಲೆ ಮಾತ್ರ. ಜೋಗ್‌ದಲ್ಲಿ ಮೂರು ದಿನವಿದ್ದರೆ ಅದು ಸಾಹಸದ ಮಾತು. ಶೃಂಗೇರಿಯಲ್ಲಿ ಐದು ದಿನ ಬೇಸರವಿಲ್ಲದಿರಬಹುದು. ಮಲ್ಲಿಕಾರ್ಜುನ ಬೆಟ್ಟದಲ್ಲಿ ಒಂದು ದಿನ, ವಿದ್ಯಾಶಂಕರ ದೇವಾಲಯದ ದ್ವಾರಪ್ರದೇಶದಲ್ಲಿ ಒಂದು ದಿನ, ನರಸಿಂಹವನದ ಸ್ನಾನಘಟ್ಟದಲ್ಲಿ ಒಂದು ದಿನ, ಶಾರದಾ ಸಾನ್ನಿಧ್ಯದಲ್ಲಿ ಒಂದು ದಿನ, ಟ್ರಾವೆಲರ್ಸ್ ಬಂಗಲೆಯಲ್ಲಿ ಒಂದು ದಿನ—ಒಂದೊಂದೆಡೆಯಲ್ಲಿ ಒಂದೊಂದು ಅಪೂರ್ವ ಅನುಭವ. ನಾವು ಪ್ರಕೃತಿ ನಿರೀಕ್ಷಣ ಮಾಡುವುದು ಆತ್ಮಸ್ಪಷ್ಟೀಕರಣಕ್ಕೆ. ಆದರೆ ಶೃಂಗೇರಿಯಂಥ ಜಾಗದಲ್ಲಿ ನಮ್ಮಾತ್ಮರಸಕ್ಕೆ ಅನೇಕಾತ್ಮರಸಗಳು ಬಂದು ಸೇರಿ, ರುಚಿ ಅವರವರ ಪ್ರಕೃತಿ

ಯಂತೆ ಬೇರೆ ಬೇರೆ ತರದ್ದಾಗುತ್ತದೆ. ಅಂಥ ಸ್ಥಳಗಳಿಗೆ ಹೋಗುವವರು ವಿನಯದ ಬಗೆಯಲ್ಲಿ ಹೋದರೆ ಅವರ ಶ್ರಮಕ್ಕೆ ತಕ್ಕ ಫಲ ದೊರೆತೀತು ; ಅನುಭವ ಕಟುವಾಗುವುದಿಲ್ಲ. ಗುಡಿಗೂ ಮಠಕ್ಕೂ ಪ್ರವೇಶಿಸುವಾಗ ನಮ್ಮ ಕವಚಗಳನ್ನು ಬಿಚ್ಚಿಡುವಂತೆ ನಮಗೆ ರೂಢವಾದ ಮನೋವೃತ್ತಿಯ ಕವಚವನ್ನೂ ಆತ್ಮದಿಂದ ಕಳಚಿಡಬೇಕು. ಇದು ಕಷ್ಟ. ನಾವಷ್ಟು ಈ ವಿಷಯದಲ್ಲಿ ಕುಶಲರಲ್ಲ. ನಮಗೆ ಶೃಂಗೇರಿ ಒಂದು ರಸದರ್ಶನಶಾಲೆಯಂತೆ ಮಾತ್ರ. ಅಲ್ಲಿನ ಜನ ನಾವು ಅನುಭವಿಸಬೇಕೆಂದಿರುವ ಭಕ್ತಿರಸಕ್ಕೆ ಪೋಷಕ ಪಾತ್ರಗಳಂತೆ ನಾಜೋಕಾಗಿ ವರ್ತಿಸಿದರೆ ಸರಿ, ಇಲ್ಲದಿದ್ದರೆ ಈ ನಾಟಕದ ರುಚಿ ನಮಗೆ ಹತ್ತುವುದಿಲ್ಲ. ಆದರೆ ಬೈಲು ನಾಟಕದಲ್ಲಿ ಪಾತ್ರಗಳು ವೇಷವನ್ನು ಧರಿಸಿರುವಾಗಲೂ ಹೇಗೆ ತಾವು ಆ ಪಾತ್ರಧಾರಿಗಳೆಂಬುದನ್ನು ಮರೆತು ವ್ಯವಹಾರಕ್ಕೆ ಮುಚ್ಚುಮರೆಯಿಲ್ಲದೆ ಇಳಿಯುತ್ತಾರೋ, ಹಾಗೆ ಅವರು ಇಳಿದರೂ ಆ ಆಟದಲ್ಲಿ ಆಸಕ್ತರಾದ ಜನಕ್ಕೆ ಈ ವ್ಯವಹಾರ ರಸಭಂಗ ತರುವುದಿಲ್ಲವೋ ಹಾಗೆಯೇ ನಾವು ಈ ದೇಗುಲದಲ್ಲಿ ಅರ್ಚಕ ಪರಿಚಾರಕ ಪರಿಜನ ಪೌರಜನರು ನಡಸುವ ವ್ಯವಹಾರಗಳನ್ನು ಸಾಮ್ಯ ದೃಷ್ಟಿಯಲ್ಲಿ ಕಂಡು, ಮನಸ್ಸಿಗೆ ಹಚ್ಚಿಕೊಳ್ಳದೆ, ಜೀವಾತ್ಮನು ಪರಮಾತ್ಮನಿಗೆ ಹಂಬಲಿಸಿ ಆ ಹಂಬಲವನ್ನು ಬಗೆಬಗೆಯಲ್ಲಿ ನಿರೂಪಿಸುವ ಪ್ರಯತ್ನವನ್ನು ಮಾತ್ರ ದರ್ಶನಮಾಡುವ ದೃಷ್ಟಿಯಿಂದ ಈ ನಾಟಕವನ್ನು ನೋಡಿದರೆ ರಸವಾದೀತು. ದೇಗುಲದಲ್ಲಿಯಾಗಲೀ ಸಂತಸಾನ್ನಿಧ್ಯದಲ್ಲಾಗಲೀ ಆಗುವ ರಸಾವಿಷ್ಕರಣದ ಸಂತೃಪ್ತಿ ಬರಿಯ ಪ್ರಕೃತಿ ನಿರೀಕ್ಷಣದಿಂದ ಆಗುತ್ತದೆಯೇ ಎಂದು ನನಗೆ ಬಲವಾದ ಸಂದೇಹ. ಏಕೆಂದರೆ ನಮಗೆ ಅತ್ಯಂತ ಮೋಹಕವಾದ ವಸ್ತು ಮಾನವ ಜೀವನ ; ಅತ ಪ್ರಕೃತಿಗತನಾಗಿ ಪ್ರಕೃತಿಯನ್ನು ಅತಿಕ್ರಮಿಸಲೆಳಸುವ ವ್ಯಾಪಾರ. ಮಾನವನು ಅತಿಮಾನುಷಕ್ಕೆಳಸುವ ಈ ಮನಮೋಹಕ ಸಂಕ್ರಾಂತಿ ದರ್ಶನದ ಸಂಕೇತದಂತಿರುವ ಶೃಂಗೇರಿ, ಹೊಳೆಯಂಚಿನ ನರಸಿಂಹವನ, ಶಾರದಾ ಸಾನ್ನಿಧ್ಯ. ವಿದ್ಯಾಶಂಕರ ದೇವಾಲಯ, ಇವುಗಳ ಕಾಪಿಗೋ ಎಂಬಂತಿರುವ ಗುಡ್ಡ ಕಾಡು ಹೊಳೆ—, ನನಗಂತೂ ರಮ್ಯತರವೆನಿಸಿತು ಶೃಂಗೇರಿ!

ಶೃಂಗೇರಿಯಿಂದ ನರಸಿಂಹರಾಜಪುರ—ಅಲ್ಲಿಂದ ಬಯಲು ಸೀಮೆ.

ಬಯಲು ಸೀಮೆಯನ್ನು ಕಂಡು ನನಗೆ ಸಂತೋಷವಾಯಿತೆನ್ನಬೇಕು. ಇಲ್ಲಿ ನೆಲ ಜನದ ಸ್ನೇಹವನ್ನು ಹೆಚ್ಚಾಗಿ ಬಯಸುತ್ತದೆ. ಬೆಟ್ಟಕ್ಕೆ ಬನದ ಭಾರವಿಲ್ಲದೆ

ಜಟಾಭಾರವನ್ನಿಳಿಸಿದ ಪ್ರಮಾಣದಂತೆ ಹಾಯಾಗಿದೆ. ಗಾಳಿ ಹಗುರ. ಸೂರ್ಯನ ಕಿರಣಕ್ಕೆ ಕೋಳಷ್ಟು ಕೂಪ್ರೂ ಹೆಚ್ಚು. ಧೂಳಿ ಹರಡಿ ಮೆಲುನಡೆಗೊಂಡು ಮನೋಹರವಾಗುತ್ತದೆ. ಬನ ಕಡಿಮೆ, ಜನ ಹೆಚ್ಚು. ಮಲೆನಾಡನ್ನು ಬಿಟ್ಟ ಕ್ಷಣ ಬಯಲುಸೀಮೆ ಹಕ್ಕಹಕ್ಕಲಾಗಿ ಕಣ್ಣಿಗೆ ಬಿಕ್ಕೋ ಎಂದು ಕಾಣುತ್ತದೆ ದಿಟ, ಆದರೆ ಇದು ಇಂತು ಕಾಣುವುದು ಒಂದು ಕ್ಷಣ ಮಾತ್ರ. ಸಿರಿವಂತನ ಮಾಡವನ್ನು ಬಿಟ್ಟು ಸ್ನೇಹಿತನ ಮನೆಗೆ ಮರಳಿ ಬಂದರೆ ಹೇಗೋ ಹಾಗೆ, ಮೈಸೂರಿನ ಹತ್ತಿರಕ್ಕೆ ಬರುವಾಗ ನನಗೆ ಮಲೆನಾಡು ಮರೆತುಹೋಯಿತು. ತಿರುಗಿಬರುತ್ತೇನೆಂದು ನಾನು ನನ್ನ ಅಲ್ಲಿನ ಸ್ನೇಹಿತರಿಗೆ ಕೊಟ್ಟ ಮಾತೂ ಮಸಕಾಯಿತು.

ಹೊಕ್ಕುಳು

ಒಂದೆರಡೆಳೆ ಸರಿಗೆಯ ಅರುವೊಳದ ರೇಷ್ಮೆಯಂಚಿನ ಮೇಲುಕೋಟೆಯ ಉತ್ತರೀಯವನ್ನು ಬರಿಮೈಮೇಲೆ ಹೊದೆದು ಕುಳಿತುಕೊಳ್ಳುವುದೆಂದರೆ ನನಗೆ ತುಂಬ ಇಷ್ಟ. ಅದೊಂದು ಭೋಗವೇ ಎನ್ನಬೇಕು. ಈಗಿನವರಿಗೆ ಆ ಸುಖದ ಅರಿವಿಲ್ಲ. ದರ್ಜಿಯವರ ಬಲೆಗೆ ಬೀಳಲು ಬಯಸದವರು ಮಾತ್ರ ಅದನ್ನು ಬಲ್ಲರು. ನಮ್ಮ ಕವಿಗಳ ಕಲ್ಪನೆಯಲ್ಲಿ ಶ್ರೀ ಕೃಷ್ಣನೇನೋ ಉತ್ತರೀಯ ಪ್ರಿಯ. ಆತನ ವಿಶಾಲ ವಕ್ಷಸ್ಥಲವನ್ನು ನೋಡಿಯೇ ಕುಬ್ಜೆ ರಾಜಯೋಗ್ಯವಾದ ಚಂದನ ವನ್ನು ಆತನಿಗೆ ಅರ್ಪಿಸ ಬಯಸಿದಳು. 'ಚಂದನ ಚರ್ಚಿತ ನೀಲಕಲೇವರ ಪೀತ ವಸನ ವನಮಾಲೀ'ಎಂಬ ಜಯದೇವ ಕವಿಯ ಮಾತು ನಿಮ್ಮ ಕಿವಿಗೇನಾದರೂ ಬಿದ್ದಿದೆಯೇ? ಇಂಥ ಚಂದನ ಚರ್ಚೆಯ ಭಾಗ್ಯ ತೆರೆದ ಮೈಯೊಲವಿಲ್ಲದವರಿಗೆ ದುರ್ಲಭ; ಉತ್ತರೀಯಪ್ರಿಯರಿಗೆ ಸುಲಭ. ಇದರಿಂದ ಮತ್ತೊಂದು ಲಾಭ ವುಂಟು; ಬೇಕೆಂದಾಗ ನಿಮ್ಮ ನಾಭಿಯ ದರ್ಶನ ನಿಮಗಾಗುತ್ತದೆ. ಆ ನೋಟ ದಿಂದ ಪ್ರಯೋಜನವಿಲ್ಲದಿಲ್ಲ.

ನಮ್ಮ ಹಿಂದಿನವರು ನಾಭಿಯನ್ನೂ ಒಂದು ಸುಂದರವಾದ ಅಂಗವೆಂದೇ ಭಾವಿಸಿದ್ದರು. 'ಸುಳಿನಾಭಿ'ಯಿಲ್ಲದವರು 'ಸುಂದರ' ಶಬ್ದಕ್ಕೆ ಅರ್ಹರಲ್ಲ ಎಂಬ ಭಾವನೆ ಆಗಿನವರಿಗಿತ್ತು. ಆದರೆ ಪಾಶ್ಚಾತ್ಯರಲ್ಲಿ ಇದರ ವರ್ಣನೆಗೆ ಅಷ್ಟೊಂದು ಪ್ರಾಶಸ್ತ್ಯ ದೊರೆತಂತೆ ಕಾಣಲಿಲ್ಲ—(ಹೆಂಗಸರ ಹಳಗಾಲದ ನಗ್ನಚಿತ್ರಗಳಲ್ಲಿ ಇದಕ್ಕೇನೋ ತುಂಬ ಗಮನ ಕೊಟ್ಟಂತಿದ್ದರೂ ಸಹ). ಈ ಕಾರಣದಿಂದ ನಮ್ಮೀ ಗಿನ ತರುಣರಿಗೂ ಅದರ ಚಂದದ ಅರಿವಿಲ್ಲದಿರುವುದು ಸಹಜ. ಪ್ರಕೃತವೇನೆಂದರೆ. ನಾಭಿಯ ಅಂದವನ್ನು ಬಲ್ಲವರು ಅದನ್ನು ನೋಡುವ ಅಭ್ಯಾಸವುಳ್ಳ ರಸಿಕರಾಗಿರ ಬೇಕೆಂಬುದು. ನಿಮ್ನನಾಭಿತೆ ಸ್ತ್ರೀಯರಿಗೆ ಹೇಗೋ ಹಾಗೆಯೇ ಪುರುಷರಿಗೂ ಭೂಷಣವೇ. ಆದರೆ ನನ್ನ ಹೊಕ್ಕುಳನ್ನು ನಾನು ಸೌಂದರ್ಯ ದೃಷ್ಟಿಯಿಂದ ದೃಷ್ಟಿಸುವುದಿಲ್ಲ. ನನ್ನ ಆಗಿನ ಮನೋಭಾವವೇ ಬೇರೆ.

ಯಾವನಿಗೇ ಆಗಲಿ, ತಾನು ಹುಟ್ಟಿದ್ದು ಜ್ಞಾಪಕವಿದೆಯೇ? "ಗರ್ಭವಾಸಾದಿ ದುಃಖಂ" ಎಂದು ವಿರಕ್ತರೇನೋ ಹೇಳುತ್ತಾರೆ. ಆದರೆ ಅದು ಬರಿ ಅನಿಸಿಕೆ

ಮಾತ್ರ. ಪ್ರಪಂಚದ ಗರ್ಭದಲ್ಲಿ ಬದುಕಿರುವುದು ದುಃಖವೆನಿಸಿದಾಗ ಗರ್ಭವಾಸವೂ ದುಃಖವಾಗಿ ಕಾಣದೆ ಏನು ಮಾಡೀತು? ನಾನು ಬುದ್ಧಿಯೋಡಿಸಿ ನೋಡುವಲ್ಲಿ ಗರ್ಭಿಣಿಗೆ ಕಡುಕಷ್ಟವೇ ಹೊರತು, ಗರ್ಭಸ್ಥ ಶಿಶುವಿಗೆ ಅಲ್ಲಿನಷ್ಟು ನೆಮ್ಮದಿ ಮತ್ತೆಲ್ಲಿಯೂ ಇರಲಾರದೆನಿಸುತ್ತದೆ. ಶಾರೀರಕ ಶಾಸ್ತ್ರವೂ ಇದನ್ನೇ ಸಮರ್ಥಿಸುತ್ತದೆ. ಆದರೆ ನೀನು ಗರ್ಭವಾಸದಲ್ಲಿದ್ದೆ ಎಂದು ಪ್ರಮಾಣಮಾಡಿ ಹೇಳುತ್ತೀಯಾ ಎಂದರೆ ನಾನು ಸ್ವಲ್ಪ ಹಿಂಜರಿಯುತ್ತೇನೆ. ನನಗೆ ಅದರ ಅರಿವು ಸುತರಾಂ ಇಲ್ಲ; ಅದು ಅನುಮಾನವಾಗಿಯೇ ಉಳಿದಿದೆ ನನಗೆ. ನನಗೊಬ್ಬನಿಗೇ ಅಲ್ಲ, ಗೀತಾಚಾರ್ಯನಿಗೂ ಅದೊಂದು ಶಂಕಾಸ್ಪದವಾದ ಸಂಗತಿಯೇ. ಇಲ್ಲದಿದ್ದರೆ ಆತ ಜೀವವನ್ನು ಕುರಿತು 'ಅಜೋ ನಿತ್ಯಶ್ಶಾಶ್ವತೋಽಯಂ ಪುರಾಣಃ। ನ ಹನ್ಯತೇ ಹನ್ಯಮಾನೇ ಶರೀರೇ' ಎಂದು ಏಕೆ ಹೇಳುತ್ತಿದ್ದ? ತನ್ನ ಮೈ ಹುಟ್ಟಿರಬಹುದು, ಆದರೆ ಯಾವನೂ ಅದನ್ನು ಅರಿಯ; ಅದು ಆತನಿಗೆ ಅಂಟಿಕೊಂಡಿರುವ ಜಿರಗೂ ರಹಸ್ಯವೇ. ಜೀವಕ್ಕೆ ಹುಟ್ಟಿನ ಅರಿವೂ ಇಲ್ಲ, ಸಾವಿನ ಅರಿವೂ ಇಲ್ಲ. ಎರಡೂ ಅನುಮಾನಗಳೇ; ಇರುವಿಕೆ ಮಾತ್ರ ಸತ್ಯ. ಅದರ ಪರಿವೆ ಮಾತ್ರ ಉಂಟು ನಮಗೆ, ಪರಿವೆಯಿರುವ ತನಕ. ಹೀಗೆ ನಾನು ಉತ್ತರೀಯ ಹೊದೆದು ಒರಗು ಕುರ್ಚಿಯ ಮೇಲೆ ಕುಳಿತು ಆಲೋಚಿಸುತ್ತ ಎಡಗೆ ಗಲ್ಲವನ್ನು ಒತ್ತಿದಾಗ ಮೆಲ್ಲನೆ, ಗಾಲ್ಫ್ ಚೆಂಡಾಟದಲ್ಲಿ ಹತ್ತಿರದ ಗುಳಿಗೆ ಗೋಲಿಯನ್ನು ಜಾರಿಸುವವನ ಕೌಶಲದಿಂದ, ನನ್ನ ಕಂಗಳು ತಮ್ಮ ನೋಟವನ್ನು ಹೊಕ್ಕುಳಗುಳಿಗೆ ಜಾರಿಸುತ್ತವೆ; ನನ್ನ ವೇದಾಂತ ಹಾರಿ ಹೋಗುತ್ತದೆ.

ಹಾ! ಹೊಕ್ಕುಳಗುಳಿ, ಅದೊಂದು ಪ್ರಪಾತ! ಅದರಲ್ಲಿ ನನ್ನದೆಲ್ಲ ಮುಳುಗಿ ಹೋಗುತ್ತದೆ. ನಿನಗೆ ನಿನ್ನ ಸ್ವಂತದ್ದೇನಿದೆ ಎನ್ನುತ್ತದೆ ಅದು.—ಎಲ್ಲವೂ ದತ್ತವಾದವು, ಮೂರ್ಖ, ಯಾರಿಗೂ ಬೇಡದ ಅಹಂಕಾರ ಮಾತ್ರ ನಿನ್ನದು; ಬೇಕಾದರೆ ಅದನ್ನು ಹೊತ್ತುಕೊಂಡು ಅಲೆ, ದಣಿ, ಕೊರಗು, ಎಂದು ಮೂದಲಿಸುತ್ತದೆ ಈ ಉದರಗರ್ತ. ಅಹುದು. ಅಷ್ಟಕ್ಕೂ ನನ್ನದೆಂದುಕೊಳ್ಳುವುದು ತಾನೇ ಏನಿದೆ ನನ್ನಲ್ಲಿ, ಎಂದು ನಾನು ಒಂದೊಂದಾಗಿ ಎಣಿಸಲು ಪ್ರಾರಂಭಿಸುತ್ತೇನೆ. ಕೈ ಕಾಲು ಕಣ್ಣು ಮೂಗು ಕಿವಿ, ಮನಃ ಪ್ರವೃತ್ತಿ, ಸಂಸ್ಕಾರ ಎಲ್ಲ ಎಲ್ಲ ದತ್ತವಾದವೇ; ಮಾತೃಪಿತೃ ವಂಶಗಳ ಮಹಾಜಟಿಲ ಪ್ರಪಂಚದಿಂದ ನನ್ನ ಎಳಸಿಕೆಗಳೆಲ್ಲ, ಶಕ್ತಿ ಸಾಮರ್ಥ್ಯಗಳೆಲ್ಲ, ಮಿತಿ ದೌರ್ಬಲ್ಯಗಳೆಲ್ಲ, ಸವಿಕಹಿಗಳೆಲ್ಲ ಲೋಕ

ದೊಡನೆ ಸಂಚು ನಡೆಸುತ್ತಾ ನನ್ನಲ್ಲಿ ಮನೆಮಾಳ್ತಿ ಮಾಡುತ್ತಿವೆ. ಅವುಗಳ ಎಳೆತಕ್ಕೆ ಸಿಕ್ಕಿ ತಾರಾಡುವವ ನಾನು. ಅದಷ್ಟು ಕಾಲ ನೀರಿನಲ್ಲಿ ಮುಳುಗಿದ್ದು ದೊಡ್ಡ ಫ್ರೂತ್ಕಾರದೊಡನೆ ಮೇಲೇಳುವ ತಿಮಿಂಗಿಲದಂತೆ ನನ್ನ ಮನಸ್ಸು ಈ ನಿರ್ವೇದದಿಂದ ನಿಡುಸುಯ್ಯುತ್ತ ಮೇಲೇರುತ್ತದೆ ನಾಭಿಯನ್ನು ಬಿಟ್ಟು ಉತ್ತರೀಯದ ಸ್ವರ್ಣಾಂಚಿತ ವಲಿತಗಳ ಆಸರೆಗೆ, ಅಹಂಕಾರದ ಚೇತನವರ್ಧಕ ಕ್ಷೇಮ ಸ್ಥಾನಕ್ಕೆ.

ಆಧುನಿಕ ಸಂಸ್ಕೃತ ನಾಗರಿಕರು ತಮ್ಮ ಹೊಕ್ಕುಳನ್ನು ಅದಷ್ಟು ಮುಚ್ಚಿಕೊಂಡಿರುವುದಕ್ಕೆ ಕಾರಣಗಳಿಲ್ಲದಿಲ್ಲ. ಅದೊಂದು ಅಗ್ನಿಕುಂಡ ; ಅದರಿಂದ ಕಿಚ್ಚೇಳುತ್ತದೆ; ಹಮ್ಮುಬಿಮ್ಮುಗಳು ಉರಿಕಾರುತ್ತವೆ; ಎಷ್ಟೋ ಸೂಕ್ಷ್ಮ ಚೇತನಗಳು ಆ ಸುಳಿಗೆ ಸಿಕ್ಕಿ ಕೊರಗಿನಲ್ಲಿ ಮುಳುಗಿ ಹೋಗುತ್ತವೆ, ಗೋವಿಂದಾ ಜನ್ಮ ಸಾಕುಮಾಡು ಎನ್ನುತ್ತ. ರಾಮ ತನ್ನ ಹೊಕ್ಕುಳನ್ನು ನೋಡಿಕೊಂಡು ರಾವಣ ಹೊತ್ತುಕೊಂಡುಹೋದ ಸೀತೆಯನ್ನು ಬೆಂಕಿಯಲ್ಲಿ ಹಾಯಿಸಿದ, ತಾನೂ ಬೆಂದ ; ಕರ್ಣ ಸೂತಪುತ್ರನೆಂದು ಕೊರಗಿದ, ತಮ್ಮಂದಿರ ಮೇಲೆಯೇ ಎರಗಿದ. ಕುಂತಿ ತನ್ನ ತಾಯೆಂದೂ ತನ್ನ ಹೊಕ್ಕುಳ ಕುಡಿಗೆ ಆಕೆಯೇ ಕಾರಣಳೆಂದೂ ತಿಳಿದ ಬಳಿಕವೂ ಆತ ಸಮಾಧಾನಕ್ಕೆ ಬರಲಿಲ್ಲ: ನನಗೆ ಸಹಜ ಸಂಸ್ಕಾರವನ್ನು ಒದಗಿಸದ ನೀನೆಂಥ ತಾಯಿ—ನಿನಗಿಂತಲೂ ಹಗೆ ನನಗೆ ಯಾರಿದ್ದಾರೆ? ಎಂಬ ಮೂದಲಿಕೆ ಆತನಿಂದ ಹೊರಟಿತು. ಆದರೆ ತಮ್ಮ ತಂದೆ ತಾಯಂದಿರನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ಯಾರಿಗೂ ಇಲ್ಲ. ಮಂಗಳಾಕಾಂಕ್ಷಿಯಾದ ಎಲ್ಲ ದರ್ಶನಗಳ ತಳದಲ್ಲೂ ಈ ಸಾಮ್ಯ ಸೂತ್ರವಿದೆ—ಸಮಸ್ತರೂ ತಮ್ಮ ಹೊಕ್ಕುಳಗುಳಿಯ ವಿಷಯದಲ್ಲಿ ಅಸ್ವತಂತ್ರರೆಂಬ ಸಮತಾಸೂತ್ರ. ಇವುಗಳ ಪರಮಧ್ಯೇಯವೂ ಸಕಲ ಜೀವರೂ ತಮ್ಮ ಅಂತಿಮ ಸ್ವರೂಪವಾದ ಅನಾಭಿತೆಯನ್ನು ಪಡೆದು ರೂಪ ಬಲೈಶ್ವರ್ಯಾದಿಗಳಲ್ಲಿ ಯಾವ ಏರು ಪೇರೂ ಇಲ್ಲದಂತಾಗಬೇಕೆಂದು. ಆದರೆ ತಮ್ಮ ವೈಶಿಷ್ಟ್ಯವನ್ನೂ ಹೆಚ್ಚುಗಾರಿಕೆಯನ್ನೂ ಮೆರೆಸುವವರೂ, ಹಾಗೂ ತಮ್ಮದೇನೂ ತಪ್ಪಿಲ್ಲದೆಯೇ ಕಾರ್ಪಣ್ಯಕ್ಕೂ ಹೀನಾಯಕ್ಕೂ ಸಿಲುಕಿ ವೃಥಾ ನೋಯುವವರೂ ತಮ್ಮ ತಮ್ಮ ಹೊಕ್ಕುಳುಗಳನ್ನು ನೋಡಿಕೊಂಡು ಪ್ರಮತ್ತರಾಗಿಯೋ ವಿಷಾದಾವಿಷ್ಟರಾಗಿಯೋ ತಮ್ಮ ತಮ್ಮ ಜನ್ಮದಾತರನ್ನು ಸ್ವಕರ್ಮದಿಂದಲೇ ಆರಿಸಿಕೊಂಡಂತೆ ಭ್ರಾಂತಿ ಪಡುತ್ತಾರೆ. ಅದಕ್ಕೊಂದು ತರ್ಕ ಸರಣಿ

ಯನ್ನೂ ಸ್ಥಾಪಿಸುತ್ತಾರೆ. ಇಲ್ಲ, ತಮ್ಮ ಹುಟ್ಟಿನ ವಿಷಯದಲ್ಲಿ ತಮ್ಮ ಪಾರ ತಂತ್ರ್ಯಕ್ಕಾಗಿ ಕೊರಗುತ್ತಾರೆ, ಕೆರಳುತ್ತಾರೆ. ಇಂಥವರ ಸಮಾಧಾನಕ್ಕಾಗಿ ಹುಟ್ಟಿತು ಕರ್ಮಸಿದ್ಧಾಂತ, ಬಹು ಜನ್ಮ ಪರಿಕ್ರಮಣ ಸಿದ್ಧಾಂತ, ಆತ್ಮವಿಕಾಸನ ತತ್ತ್ವ. ಈ ತತ್ತ್ವಗಳೆಲ್ಲ ಪ್ರವಹಿಸಿದುದು ಬೇಕೆಂದಾಗ ತಮ್ಮ ನಾಭಿಯನ್ನು ನೋಡಿಕೊಳ್ಳುವ ಸೌಲಭ್ಯ ಹೊಂದಿದ್ದ ನಮ್ಮ ದೇಶಿಗರಿಂದಲೇ ಎಂಬುದು ಮತ್ತೊಂದು ಕೌತುಕದ ಸಂಗತಿ. ಮಿಕ್ಕ ನಾಡವರು ತಮ್ಮ ತಮ್ಮ ಸ್ವಭಾವಸ್ಥಿತಿ ಗತಿಗಳ ವೈಷಮ್ಯಗಳಿಗೆ ತಮ್ಮ ತಮ್ಮ ಕರ್ಮಗಳನ್ನು ದೂರಿಕೊಳ್ಳಲಿಲ್ಲ; ಅದೃಷ್ಟ ವನ್ನು ದೂರಿದರು. ದೇವರ ಕರುಣೆಗೆ ಬೇಡಿದರು. ಅವರಿಗೆ ಜೀವಕ್ಕೆ ಅಜರಾ ಮರತೆಯನ್ನು ಸ್ಥಾಪಿಸಿಕೊಡುವ ಪ್ರಕೃತಿಯ ಒಂದು ಪವಾಡ ಹೊಕ್ಕಳು ಎಂಬ ಭಾವವೂ, ಪ್ರಪಂಚದಲ್ಲಿ ಯಾವುದೂ ಸಾಯದೇ ಎಲ್ಲ ಒಂದಿಲ್ಲ ಒಂದು ರೀತಿ ಯಲ್ಲಿ ಬದುಕಿಯೇ ಇದೆ, ಅದೇ ಒಲವು, ಅದೇ ಸೆಳವು, ಅದೇ ರಾಗ ದ್ವೇಷ ಲೋಭ ಕಾರ್ಪಣ್ಯ ಪ್ರತಿಷ್ಠೆ ದೈನ್ಯ ಭಾವಗಳು ಅಲ್ಪಸ್ವಲ್ಪ ಏರು ಬೀಳುಗಳಲ್ಲಿ, ಸಮತಲವರ್ತಿಯಾದ ಕಡಲ ಕುದಿತದಂತೆ, ಎಂದೂ ಇದ್ದೇ ಇವೆ, ನಾಭಿಸೂಚಿತ ಸಂತತಿಯ ಸಾಂತತ್ಯದಿಂದ ಎಂಬ ತಥ್ಯವೂ ಅಷ್ಟಾಗಿ ಅವರ ಮನಸ್ಸಿಗೆ ಬರಲಿಲ್ಲ. ಏಕೆಂದರೆ ನಾಭಿಯ ದರ್ಶನ ನಮಗಾಗುವಷ್ಟು ಅವರಿಗೆ ಆಗಲಿಲ್ಲ. ಈ ಕರ್ಮ ಜನ್ಮಸಿದ್ಧಾಂತ ತಪ್ಪೋ ಸರಿಯೋ ಹೇಳುವುದು ಕಷ್ಟ. ನಾವು ನಮ್ಮ ಹೊಕ್ಕು ಳನ್ನು ನೋಡಿಕೊಂಡ ಹೊರತು ನಮ್ಮ ಹುಟ್ಟಿನ ಅರಿವನ್ನು ನಾವು ಸ್ವಂತ ಅನು ಭವದಿಂದ ಪಡೆಯೆವು. ಅದನ್ನು ಈ ಕಾಲದ ನಾಗರಿಕ ಪ್ರಕೃತಿಯೇ ಕರುಣೆ ಯಿಂದ ನಮಗೆ ಮರೆಸಿದೆ. ಅದನ್ನು ನೆನೆದುಕೊಳ್ಳುವುದರಿಂದ, ಮಾತಾಪಿತೃ ಪ್ರೀತಿ-ಭಕ್ತಿ (ಕನಿಕರ ಎಂದರೆ ಯುಕ್ತವೋ ಏನೋ ತಾಯ ವಿಷಯದಲ್ಲಿ) ಎಷ್ಟೇ ಇರಲಿ, ನಮಗೆ ಹೀನಾಯವಾಗಿ ನಮ್ಮ ಗರ್ವ ಖರ್ವಿತವಾಗುವುದೂ ತಪ್ಪದು. ಹೊಕ್ಕಳು ನಿಜವಾಗಿ ವಿನಯ ಶಿಕ್ಷಾಗುರು. ನಮ್ಮ ನಿಸ್ಸಹಾಯ ಸ್ಥಿತಿಯನ್ನು ಅದು ಎಲ್ಲ ಪ್ರಕಾರಗಳಲ್ಲೂ ದ್ಯೋತಿಸುತ್ತದೆ. ಎಲ್ಲ ವಿಧದಲ್ಲೂ ಮೆರೆಯಬೇಕೆಂಬ ನಾವು ಅದನ್ನು ನಮ್ಮ ಕಣ್ಣಿಂದ ಮರೆಸಿಡುವುದು ಲೇಸು.ಆಧುನಿಕವೇಷ ಭೂಷಣ ಗಳು ಇದರಲ್ಲಿ ನಮಗೆ ತುಂಬ ಸಹಾಯ ಮಾಡುತ್ತವೆ.ಅದನ್ನು ಮರೆತಷ್ಟೂ,ನಮ್ಮ ತಂದೆ ತಾಯಿಗಳು, (ನಮಗೆ ಪ್ರಯೋಜಕರಾಗಿದ್ದ ಹೊರತು) ನಮ್ಮ ಸ್ಮೃತಿ ಯಿಂದ ಅತ್ತ ಸರಿಯುತ್ತಾರೆ; ಅವರನ್ನು ಮರೆತಷ್ಟೂ ಅಯೋನಿಜರೆಂಬ ಭಾವವೂ

ನಮಗೆ ಮೂಡುತ್ತದೆ. ದೇವರಿಗೂ ಹೊಕ್ಕುಳಿರುವಾಗ ಅದರ ನೆನವಿನಿಂದ ತಪ್ಪಿಸಿ ಕೊಳ್ಳುವುದು ಹೇಗೆ ಎನ್ನುವಿರೇನೋ. ಅದು ಬರಿ ಪುರಾಣದ ಕಲ್ಪನೆ. ಈ ಹೊಕ್ಕುಳ ನೆನವಿನ ಹೊಡೆತದಿಂದ ಪಾರಾಗಬೇಕೆಂದೇ ನಾನು ಈಚೀಚೆಗೆ ಎಂದೂ ನನ್ನ ಮೈ ಬಿಡದ ಒಂದು ಒಳ ಅಂಗಿಯನ್ನು ಧರಿಸುತ್ತಿದ್ದೇನೆ. ಹಮ್ಮಿನಿಂದ ಯಾರನ್ನೂ ಲಕ್ಷಿಸದೆ ಬಾಳಬೇಕೆಂಬಾಸೆಯುಳ್ಳವರೆಲ್ಲರಿಗೂ ತಮ್ಮ ಹೊಕ್ಕುಳಿನ ಸ್ಮರಣೆ ಎಂದರೆ, ತಾವು ಒಬ್ಬ ಹೆಂಗಸಿನ ಗರ್ಭದಲ್ಲಿದ್ದು ಬಹಳ ಕಾಲ ಮಲ ಮೂತ್ರ ಗಳ ಮೇಲೆ ನಿಸ್ಸಹಾಯರಾಗಿ ಒದ್ದಾಡುತ್ತಿದ್ದು ಹೆರವರ ಮರುಕದಿಂದ ಬಾಳ ಹೊತ್ತ ನೆನವು, ತಮ್ಮ ಮೇಧೆ, ರೂಪ, ಸೌಂದರ್ಯ ಸ್ವಭಾವಾದಿಗಳೆಲ್ಲವೂ ತಾವೇ ಕಲ್ಪಿಸಿಕೊಳ್ಳಲಾಗದ ಮತ್ತು ಪರಂಪರಾಗತ ಅದೃಷ್ಟ ಆದರೆ ಕ್ಲಪ್ತಶಕ್ತಿ ಗಳ ಸಾಂಗತ್ಯದಿಂದ ಲಭ್ಯವಾದುವೆಂಬ ಸ್ಮೃತಿ, ಸಲ್ಲದು ; ಅದನ್ನು ಮರೆತಷ್ಟೂ ಲೇಸು. ಆದರೆ ತಮ್ಮ ಅಹಂಕಾರವನ್ನು ತಗ್ಗಿಸಿಕೊಂಡು ವಿನಯ ಕೃತಜ್ಞತಾ ಭಾವಗಳನ್ನು ತಳೆಯ ಬಯಸುವವರೋ, ಆಗಾಗ ನನ್ನ ಹಾಗೆ ಉತ್ತರೀಯ ಹೊದೆದು ತಮ್ಮ ದೃಷ್ಟಿಗಳನ್ನು ತಮ್ಮ ನಾಭಿ ಕುಹರಕ್ಕೆ ಜಾರಿಸಿ, ಅಲ್ಲಿಂದ ಅವನ್ನು ಈ ಪರಮ ಸುಂದರವೂ ಅಭೂತಪೂರ್ವವೂ ಪರಮ ಗಭೀರವೂ ಸನಾ ತನವೂ ನಿತ್ಯನೂತನವೂ ಆದ ಜಗತ್ತಿನಲ್ಲಿ ನಮ್ಮನ್ನು ಬಾಳಗೊಟ್ಟಿರುವ ಎಲ್ಲಕ್ಕೂ ಕೃತಜ್ಞತಾ ನಿವೇದನ ಸೂಚಕವಾಗಿ ಬಾನತ್ತ ಎತ್ತುವುದು ಶ್ರೇಯಸ್ಕರ ವಲ್ಲವೆ ? ಏಕೆಂದರೆ, ಹೊಕ್ಕುಳಲ್ಲಿ ಬಿದ್ದ ನಮ್ಮ ದೃಷ್ಟಿ ನಮ್ಮ ನಮ್ಮ ಜೀವದ ಎಳೆಯನ್ನು ನಾಭಿಯಿಂದ ನಾಭಿಗೆ ಎಲ್ಲಿಯೂ ವಿಚ್ಛಿತ್ತಿ ಹೊಂದದೆ ಕೊಂಡೊಯ್ದು ಒಯ್ದು ಕೊನೆಗೆ ಆ ಆದಿಮೂಲ ಅನಂತಪದ್ಮನಾಭನಲ್ಲೇ ಬಂಧಿಸಿಬಿಡುತ್ತದೆ.

ಮರ

ನಾನು ಬೆಂಗಳೂರಲ್ಲಿ ಬಹುಕಾಲ ವಾಸ ಮಾಡಿದವನು—ಆದರೆ ಅದನ್ನು ಬಿಡುವಾಗ ನನಗೇನೂ ಅಷ್ಟು ವ್ಯಸನವಾಗಲಿಲ್ಲ. ಅದಕ್ಕೆ ಕಾರಣ ನನ್ನ ಸ್ನೇಹಿತ ರಾಗಿದ್ದ ಅನೇಕ ಮರಗಳು ಧ್ವಂಸವಾಗಿವೆ, ಆಗುತ್ತಿವೆ. ಕೆಂಪೇಗೌಡ ರಸ್ತೆಯಲ್ಲಿ ಸಂಜೆ ನಡೆದು ಬರುವುದು ನನಗೊಂದು ಭೋಗವಾಗಿತ್ತು ಹಿಂದೆ. ದೊಡ್ಡ ದೊಡ್ಡ ಮರಗಳು ಆ ಹಾದಿಗೆ ಹಂದರ ಗಟ್ಟಿದ್ದುವು; ಮೇಲೆ ಹೊಂಬಣ್ಣದ ಆಕಾಶ, ಕೆಳಗೆ ನಾನು ನಡೆಯುತ್ತಿದ್ದರೆ ಯಾವುದೋ ಒಂದು ದಿವ್ಯ ವಿವಾಹದ ಚಪ್ಪರದ ಕೆಳಗೆ ಹಾದು ಹೋಗುವಂತಿತ್ತು. ಎಷ್ಟೊಂದು ಹಕ್ಕಿಗಳು ಆಕಾಶಕ್ಕೆ ಕಸೂತಿ ಕಟ್ಟುವಂತೆ ಹಾರಿ ಬರುತ್ತಿದ್ದವು, ಸಂಧ್ಯಾಮಂಗಳವನ್ನು ಆಚರಿಸುತ್ತ. ಎಷ್ಟೋ ವೇಳೆ ನಾನು ಆ ಹಕ್ಕಿಗಳು ಹಾರುವ ಬಗೆಗೆ ಬೆರಗುಗೊಂಡು ನಿಂತಿದ್ದೇನೆ. ಬಿಲ್ಲಿ ನಿಂದ ಬಿಟ್ಟ ಬಾಣಗಳಂತೆ ಅವು ದನಿಗೈಯುತ್ತಾ ಬಿರುಸಾಗಿ ಬರುತ್ತವೆ; ಆ ವೇಗವನ್ನು ಸ್ವಲ್ಪವೂ ಕುಂದಿಸದೆ ಥಟ್ಟನೆ ಮರಗಳ ರಂಬೆಗಳ ಹರವಿನಲ್ಲಿ ಲೀನ ವಾಗಿ ಬಿಡುತ್ತವೆ. ಆಗ ಆ ಮರಗಳು ದೈತ್ಯ ಅಯಸ್ಕಾಂತಗಳಂತೆಯೂ ಈ ಹಕ್ಕಿ ಗಳು ಅಯೋ ರೇಣುಗಳಂತೆಯೂ ನನಗೆ ಕಂಡುಬರುತ್ತಿದ್ದವು. ಅಥವಾ ರಾಮ ಬಿಟ್ಟ ಬಾಣಗಳು ಮರಳಿ ಬತ್ತಳಿಕೆಗೆ ಬಂದು ಸೇರುವಂತೆ ಭಾಸವಾಗುತ್ತಿತ್ತು. ಈಗ ಆ ಭೋಗ ಸಾಧ್ಯವಿಲ್ಲ. ಅಲ್ಲಿ ಜನ, ಜನ, ಜನ; ಈ ಜನಕ್ಕೆ ಮರಗಳ ಪರಿ ವೆಯೇ ಇಲ್ಲ. ಆದರೆ ನನಗೋ ಮರಗಳ ಬೆರಗು ತೀರಿಲ್ಲ. ಮೈಸೂರಿನಲ್ಲೂ ನಾನು ಹಿಂದೆ ಕಂಡಷ್ಟು ಮರಗಳು ಈಗ ಇಲ್ಲ. ಮಾನಸಗಂಗೋತ್ರಿ ಮಾತ್ರ ಅಪವಾದ ಸ್ವರೂಪವಾಗಿದೆ. ಅಲ್ಲಿ ನನ್ನ ಪ್ರಿಯಮಿತ್ರ ಅಶ್ವತ್ಥ ವೃಕ್ಷವೊಂದಿದೆ. ಅದು ನಸು ಗಾಳಿಗೂ ಮೊರೆಯುತ್ತದೆ, ಸೂಕ್ಷ್ಮಭಾವ ಸಂವೇದಿಯಾದ ಕವಿಯಂತೆ. ಸುತ್ತ ಅನೇಕ ಮರಗಳು ಮೊದ್ದು ಮೊದ್ದಾಗಿ ಸದ್ದಡಗಿ ನಿಂತಿರಲು ಈ ಅಶ್ವತ್ಥ ರಾಜ ವೃಕ್ಷ ಮಾತ್ರ ಎಷ್ಟು ನಾದಪೂರ್ಣ! ನಿಜವಾಗಿ ಅದು ದೇವ ವೃಕ್ಷ; ಅಶ್ವತ್ಥಃ ಸರ್ವವೃಕ್ಷಾಣಾಂ ಎಂದು ಭಗವಂತನು ಹೇಳಿಕೊಂಡದ್ದು ಏನೇನೂ ಅತಿಶಯವಲ್ಲ. ಭೂದೇವಿ ದೇವರಿಗೆ ಒಂದು ಸೂರ್ಯಪಾನವನ್ನು ಹಿಡಿದಂತಿದೆ ಆ ಮರ, ಅಷ್ಟು ಅಂದ, ಅಷ್ಟು ಎತ್ತರ, ಅಷ್ಟು ಹರವು.

ಮರಗಳನ್ನು ಕಂಡು ನಾನು ಕರುಬಿದರೆ, ಅವುಗಳ ಒಂದು ಗುಣಕ್ಕಾಗಿ. ಅವು ತಮ್ಮ ನೆಲೆಬಿಟ್ಟು ಒಂದು ಹೆಜ್ಜೆಯೂ ಕದಲವು; ಆದರೆ ಅವಿದ್ದಲ್ಲಿಗೆ ಪ್ರಪಂಚವೇ ಹರಸಿಕೊಂಡು ಬರುತ್ತದೆ. ಈ ಶ್ರೀಮಂತಿಕೆ ಅವುಗಳಿಗೆ ಸ್ವಭಾವವಾಗಿಯೇ ಬಂದ ವರ. ತನ್ನೆಡೆಗೆ ಬರುವವರಿಂದ ಏನನ್ನೂ ಕೋರದೆ ಅವರ ಕೋರಿಕೆಗಳನ್ನು ಮನ್ನಿಸುವ ಸಾಮರ್ಥ್ಯವುಳ್ಳವರಿಗೆ ಮಾತ್ರ ಈ ಯೋಗವುಂಟು, ಈ 'ಸ್ಥಾಣುತೆ'. ಇದ್ದೆಡೆಯೇ ಇರುವುದರಿಂದ ಅದಕ್ಕೆ ಯಾವ ಬೇಸರವೂ ಹತ್ತಿಕೊಂಡಂತೆ ಕಾಣುವುದಿಲ್ಲ. ನಮಗೆ ಹಕ್ಕಿಗಳ ಭಾಷೆ ತಿಳಿದಿದ್ದರೆ ಒಂದು ದೊಡ್ಡ ಮರದ ಕೆಳಗೆ ಕುಳಿತು ಪ್ರಪಂಚದ ವರ್ತಮಾನವನ್ನೆಲ್ಲ ತಿಳಿದುಕೊಳ್ಳಬಹುದು. ಮಧ್ಯಾಹ್ನದಲ್ಲಿ ಬರಿದಾಗಿದ್ದ ಮರಗಳು ಸಂಜೆವೇಳೆಗೆ ಒಂದು ದೊಡ್ಡ ಪಟ್ಟಣವೇ ಆಗಿಬಿಡುತ್ತವೆಯಲ್ಲ! ಮರಗಳು ಹೀಗೆ ಎತ್ತರಕ್ಕೆ ಬೆಳೆದು ಆಶ್ರಯವಾಗಿರದಿದ್ದರೆ ಹಕ್ಕಿಗಳಿಗೆ ರೆಕ್ಕೆ ಮೂಡುತ್ತಿದ್ದವೇ ಎಂದು ಸಂಶಯವೆನಗೆ. ಗಿಳಿ ತನ್ನ ಕೊಕ್ಕಿನ ಕೆಂಪನ್ನು ಆಲದಮರದ ಹಣ್ಣಿನ ಬಣ್ಣದಿಂದಲೂ ತನ್ನ ರೆಕ್ಕೆಯ ಹಸಿರನ್ನು ಎಲೆಯ ಹಸುರಿನಿಂದಲೂ ಕಲಿತಿತೋ ಹೇಗೆ?

ಮರಗಳನ್ನು ಕಂಡರೆ ನನಗೆ ನಿರಂತರವಾಗಿ ಅಚ್ಚರಿ ಮೂಡುವುದಕ್ಕೆ ಮತ್ತೊಂದು ಕಾರಣವಿದೆ. ನಿಜವಾಗಿಯೂ ಅವು ಜೀವದ ಒಂದು ಪವಾಡ. ಅವಕ್ಕೆ ಕಣ್ಣಿಲ್ಲ, ಬಾಯಿಲ್ಲ, ಮೂಗಿಲ್ಲ. ಆದರೂ ಜೀವದ ಮಹೋನ್ನತ ಸ್ವರೂಪ ವೃಕ್ಷಗಳಲ್ಲಿ ಮಾತ್ರ ಗೋಚರಿಸುತ್ತದೆ. ಅವುಗಳಿಗೆ ಬುದ್ಧಿಯಿಲ್ಲ ಎನ್ನುವಹಾಗಿಲ್ಲ. ಅವುಗಳಷ್ಟು ಬೆಳಕಿಗೆ ಹಾತೊರೆಯುವಂಥದು ಮತ್ತೊಂದು ಯಾವುದಿದೆ, ಈ ಪ್ರಪಂಚದಲ್ಲಿ? ವಿಷ್ಣುವಿನ ತ್ರಿವಿಕ್ರಮ ಪಾದದಂತೆ ಬಾನೆಲ್ಲವನ್ನೂ ಆಕ್ರಮಿಸುವ ಅವುಗಳ ಔನ್ನತ್ಯ ಮತ್ತು ಶಾಖಾವಿಸ್ತೃತಿ ತೇಜಸ್ಸಿನ ಈ ಹಂಬಲದ ಫಲವಾಗಿ ಅವಕ್ಕೆ ಲಭಿಸಿತಲ್ಲವೆ? ಸಮುದ್ರ ಲಂಘನ ಕಾಲದಲ್ಲಿ ಸುರಸೆ ಎಂಬ ದೇವತೆ ಹನುಮಂತನಿಗೆ ಅಡ್ಡಗಟ್ಟಿ ಆತನನ್ನು ನುಂಗಲು ಯತ್ನಿಸಿದಾಗ ಆತ ಅವಳಿಗಿಂತ ಜೋರಾಗಿ ಬೆಳೆದು ಕೊನೆಗೆ ಅಣುವಾಗಿ ಅವಳಿಂದ ಪಾರಾಗಿ ಬಂದ ಪವಾಡವನ್ನು ಕಂಡು ಮರುಳಾಗುತ್ತೇವೆ. ಅದೇ ಪವಾಡವನ್ನು ಪ್ರತಿವೃಕ್ಷವೂ ಸಸ್ಯವೂ ನಮ್ಮ ಕಣ್ಣೆದಿರಿಗೇ ದಿನದಿನವೂ ನಡೆಸುತ್ತಿದ್ದರೂ ನಾವೇಕೆ ಲಕ್ಷಿಸುತ್ತಿಲ್ಲ? ಒಂದು ಸಣ್ಣ ಜೀವಾಣು ನೆಲಕ್ಕೆ ಬೀಳುತ್ತದೆ, ಕಣ್ಮರೆಯಾಗುತ್ತದೆ, ಬಳಿಕ ಕೆಲ ಕಾಲವಾದ ಮೇಲೆ ತಾಳು ಕೊಂಬೆ ರೆಂಬೆ ಎಲೆ ಹೂ ಹೀಚು ಹಣ್ಣುಗಳ ಯಕ್ಷಿಣಿ

ನಿಚ್ಚಣಿಗೆಯನ್ನೇರಿ ಸ್ವಸ್ವರೂಪವನ್ನೇ ಪಡೆದು ಸೂರ್ಮಾಡಿಸಿಕೊಂಡು ಮೆರಸುತ್ತ ನೆಲದತ್ತ ನೋಡುತ್ತದೆ. ಬೀಜ ತಾನು ತಾನಾಗಲೆಂದೇ ಈ ಬೃಹತ್ ಪವಾಡ ನಡೆಸಿರುವಂತಿದೆಯಲ್ಲವೆ ಈ ಸಡುಸಂತರದ ಮಹಾವೃಕ್ಷಸ್ಥಿತಿ? ಈ ಅಣು ಬೃಹತ್ ಪ್ರಸ್ಪಂದ ಯಾವ ಮಹಾ ನಾಟ್ಯದ ಛಂದ? ಆದರೆ ಈ ನೃತ್ಯವಿಲ್ಲದೆ ಜಗತ್ತಿನಲ್ಲಿ ಯಾವುದೂ ಬದುಕದು, ಯಾವ ಜೀವ ವಿಕಾಸವೂ ಆಗದು.

ಮರಗಳಿಗೆ ಕರಣಗಳಿಲ್ಲ, ನಿಜ. ಹಾಗೆಂದುಕೊಂಡು ಅವುಗಳಿಗೆ ಬುದ್ಧಿಯಿಲ್ಲವೆಂದು ಅವಜ್ಞತೆ ತೋರಿಸಿದರೆ ಅವು ನಮಗೆ ಬುದ್ಧಿ ಕಲಿಸುತ್ತವೆ. ಒಂದು ದಿನ ನಾನು ಮೋಸಂಬಿಯ ತೊಳೆಗಳನ್ನು ಬಿಡಿಸಿ ತಿನ್ನುತ್ತಿದ್ದೆ. ನಾಲಗೆ ಸಾರ್ಥಕವೆನ್ನಿಸುವಷ್ಟು ರುಚಿ ಅದರಲ್ಲಿತ್ತು. ಹಾಗೆಯೇ ಆಲೋಚಿಸಿದರೆ ಗಿಡಕ್ಕೆ ಈ ತೊಳೆಗಳ ಕುಸುಮಗಳಿಂದ ಅಷ್ಟು ಪ್ರಯೋಜನವಿದ್ದಂತೆ ತೋರಲಿಲ್ಲ. ಸವಿಯ ಬಲ್ಲವರ ಲಂಚಕ್ಕೆಂದೇ ಅದು ಅಷ್ಟು ರಸವನ್ನು ಅಲ್ಲಿ ಹದುಗಿಸಿ ಇಟ್ಟಿರುವಂತೆ ತೋರಿತು. ಆದರೆ ಅದನ್ನು ದೇವಯೋಗ್ಯವೆಂದು ಸವಿಯುತ್ತಿರುವಲ್ಲಿ ನನ್ನ ಹಲ್ಲಿನ ಅರಿತಕ್ಕೆ ಅದರ ಬೀಜವೊಂದು ಅಕಸ್ಮಾತ್ತಾಗಿ ಸಿಕ್ಕಿಬಿಟ್ಟಿತು. ಕಚ್ಚು ಕಹಿ; ಅಸಹ್ಯಕಹಿ. ತೊಳೆಯ ಸಿಹಿಗೂ ಬೀಜದ ಕಹಿಗೂ ಎಷ್ಟೊಂದು ಅಂತರ! ತನಗೆ ಬೇಡವಾದುದರಲ್ಲಿ ಸಿಹಿ ಇಟ್ಟಿತ್ತು ಗಿಡ, ಬೇಕಾದುದರಲ್ಲಿ ಕಹಿ ಇಟ್ಟಿತ್ತು—ಎರಡೂ ತನ್ನುಳಿಕೆಗೆಯೇ! ಆ ಕಹಿ ನನಗೆ ಬುದ್ಧಿ ಕಲಿಸಿಕೊಟ್ಟಿತು, ಗಿಡಕ್ಕೂ ಬುದ್ಧಿಯುಂಟೆಂದು, ಅಪರ ವಿಷಯದಲ್ಲಿ ಮರ್ಯಾದೆ ಮೀರಿ ನಡೆಯಬಾರದೆಂದು. ನಮ್ಮ ರಸನೆಯ ಮರ್ಮ ಅದಕ್ಕೆ ಹೇಗೆ ತಿಳಿಯಿತೋ ಕಾಣೆ.

ಅವು ತಮ್ಮ ರೆಂಬೆಗಳನ್ನು ಹರಡುವ ರೀತಿಗೂ ನಾನು ಬಹುವಾಗಿ ಮೋಹಗೊಂಡಿದ್ದೇನೆ. ನಾವೆಲ್ಲ ರಾಮರಾಜ್ಯಕ್ಕೆ ಹಾತೊರೆಯುವ ಮಂದಿ. ಮರ ಮರ ಎಂದು ಜಪ ಮಾಡಿದರೆ ರಾಮ ರಾಮ ಎಂದಾಗುತ್ತದೆಯಂತೆ ಆ ಜಪ. ನನಗೆ 'ರಾಮ ರಾಮ' ಎನ್ನುವ ಜಪ 'ಮರ ಮರ' ಎಂದಾಗುವುದೇ ಸರಿ ಎಂದು ತೋರುತ್ತದೆ. ರಾಮ ರಾಜ್ಯದಲ್ಲಿ ನಾವು ಬಯಸುವ ಗುಣವೆಲ್ಲ ವೃಕ್ಷದ ಜೀವನ ವ್ಯವಸ್ಥೆಯಲ್ಲಿ ಗೋಚರಿಸುತ್ತದೆ ಕಣ್ಣುಳ್ಳವರಿಗೆ. ನೀರು ನೆಲ ಗಾಳಿ ಬಿಸಿಲುಗಳಿಂದ ತಾನು ಗಳಿಸುವ ಚೇತನ ಶಕ್ತಿಯಲ್ಲಿ ಮರ ತನ್ನ ಜೀವಿಕೆಗಾಗಿ ಶೇಕಡ ೨೦ ರಷ್ಟು ಮಾತ್ರ ವಿನಿಯೋಗಿಸಿಕೊಳ್ಳುತ್ತದೆ; ಮಿಕ್ಕ ಎಂಭತ್ತು ಭಾಗವನ್ನು

ಮಿಕ್ಕವರುಳಿಕೆಗೆ ಮೀಸಲಿಡುತ್ತದೆ. ತಾನು ಗಳಿಸುವುದನ್ನೆಲ್ಲ ತನ್ನ ಸಿಬ್ಬಂದಿಗೆ ವೆಚ್ಚಮಾಡುವ ಬುದ್ಧಿ ಅದಕ್ಕಿಲ್ಲದಿರುವುದರಿಂದ ನಾವು ಬದುಕಿದ್ದೇವೆ, ಏಕೆಂದರೆ ಎಲ್ಲ ಚೈತನ್ಯಕ್ಕೂ ಸರ್ವಥಾ ಬೇಕಾದ ಸಕ್ಕರೆಗೆ ಸಸ್ಯವೇ ಮೂಲಾಧಾರ. ಅದು ತನ್ನ ದುಡಿಮೆಯಾಳಾದ ಪರ್ಣಗಳಿಗೆ ಯಾವೊಂದಕ್ಕೂ ಸೂರ್ಯ ರಶ್ಮಿಯನ್ನು ತಪ್ಪಿಸುವುದಿಲ್ಲ, ಬೇರಿನ ಸಾರವನ್ನು ತಲಪಿಸದಿರುವುದಿಲ್ಲ. ಒಂದೆಲೆಯ ನೆರಳು ಮತ್ತೊಂದರ ಮೇಲೆ ಬೀಳದಂತೆ ಅದು ತನ್ನ ರೆಂಬೆಕೊಂಬೆಗಳನ್ನು ಕೆಳಗೆ ನಿಡಿದಾಗಿಯೂ ಮೇಲೇರುತ್ತಾ ಏರುತ್ತ ಹ್ರಸ್ವಹ್ರಸ್ವವಾಗಿಯೂ ಹರಡುತ್ತಾ ಸುವ್ಯವಸ್ಥಿತ ರೂಪವನ್ನು ತಾಳುತ್ತದೆ. ಅದಕ್ಕೆಯೇ ಮರದೆಲೆಗಳೆಲ್ಲ ಹಸುರಾಗಿವೆ; ದಟ್ಟವಾದ ನೆಳಲು ಕೆಳಗೆ ಬೀಳುತ್ತದೆ. ಸ್ವತಂತ್ರ ಗಣರಾಜ್ಯದಲ್ಲಿ ಒಬ್ಬನ ನೆರಳು ಮತ್ತೊಬ್ಬನ ಮೇಲೆ ಯಾಕೆ ಬೀಳಬೇಕು? ಎಲ್ಲರೂ ತಮ್ಮ ತಮ್ಮ ದುಡಿಮೆಯಲ್ಲಿದ್ದುಕೊಂಡು ತೇಜೋಹೀನರಾಗದೆ ರಾಷ್ಟ್ರದ ಐಶ್ವರ್ಯವನ್ನು ಏಕೆ ವರ್ಧಿಸಬಾರದು? ಆದರೆ ಮರಗಳಿಗೆ ಸಹಜವಾಗಿ ಪ್ರಾಪ್ತವಾಗಿರುವ ಈ ಬುದ್ಧಿವಂತಿಕೆ ನಮ್ಮಲ್ಲಿದ್ದರೂ ಸಹ ಅದು ನಮ್ಮ ನಮ್ಮ ದೊಡ್ಡಸ್ತಿಕೆಯ ಜಡೆಯಲ್ಲಿ ಸಿಕ್ಕಿ ನರಳುತ್ತಿದೆ. ಅದಕ್ಕೆ ವೃಕ್ಷ ಜಪವೊಂದೇ ಮದ್ದು.

ಅಲ್ಲದೆ ತನ್ನ ಬೇರಿಗೆ ನೀರೆಟುಕದಾಗ, ಎಂದರೆ, ಹಿಮಗಾಲದಲ್ಲಿ, ತಮ್ಮ ಜೀವದ್ರವವನ್ನು ರಶ್ಮಿಕ್ರಿಯೆಯಿಂದ ಅಪವ್ಯಯಿಸುವ ಈ ಪರ್ಣಗಳನ್ನೇ ಮರ ನಿರ್ದಾಕ್ಷಿಣ್ಯವಾಗಿ ಹೊರಗಟ್ಟಿಬಿಡುತ್ತದೆ. ಆಗ ಶತಚ್ಛಿದ್ರಗಳು ಮರಕ್ಕೆ ಏರ್ಪಡುವ ಮುನ್ನ ಮೇಣವನ್ನು ಸೃಷ್ಟಿಸಿ ಆ ರಂಧ್ರಗಳನ್ನು ಮುಚ್ಚಿಬಿಡುತ್ತದೆ. ಬೇರಿಗೆ ನೀರಿಳಿದಾಗ ಆ ಮೇಣದ ಕದಗಳನ್ನು ಒಡೆದು ಪುನಃ ಚಿಗುರು ಮೂಡುತ್ತದೆ. ಈ ಜಾಣ್ಮೆಯಿಂದಲೂ ನಾವು ಪಾಠ ಕಲಿಯಬಹುದು. ಈಗ ನಮ್ಮ ಬೇರು ಜಡವಾಗಿರುವಾಗ ಅದರ ಜೀವದ್ರವವನ್ನೇ ಹೀರುವ ಇಂಗ್ಲಿಷ್ ಶಾಲೆಗಳು, ಯಂತ್ರಗಳು, ತಂತ್ರಗಳು, ಋಣ ದ್ರವ್ಯಗಳು ಮುಂತಾದ ದ್ವಾರಗಳನ್ನು ಮುಚ್ಚುವುದು ಕ್ಷೇಮವಲ್ಲವೇ? ಈ ಶೋಷಕ ಪರ್ಣಗಳನ್ನು ಉದುರಿಸುವ ಮರ ಲೇಸಲ್ಲವೆ? ರಾಷ್ಟ್ರ ಜೀವ ಈ ಹಾನಿಯನ್ನು ತಡೆಯಬಲ್ಲುದೇ—ದೇಶವನ್ನು ಕೆಲ ಕಾಲ ಬಂಧಿಸುವುದು ಯೋಗ್ಯವಲ್ಲವೇ—ಆಲೋಚಿಸತಕ್ಕ ವಿಚಾರ. ಬೇರಿಗೆ ನೀರಿನಾಸರೆಯಿರುವವರೆಗೂ ಮರ ಹೊರಗಿನ ಯಾವ ಬೇಗೆಗೂ ಜಗ್ಗದು; ಆಗ ಅದಕ್ಕೆ ಬಿಸಿಲಿನ ಹೊಡೆತ ಎಷ್ಟಿದ್ದರೂ ಹಿತವೇ. ಅದಕ್ಕೇ ವೈಶಾಖದಲ್ಲಿ

ಮರಗಳು ನಾಡೆಲ್ಲ ಬೇಯುತ್ತಿರುವಾಗ ಸುಮ್ಮಾನವಾಗಿ ಹೂತಳೆರ ತಂಪನ್ನು ನೆನೆದು ಧೂರ್ಜಟಿ ಗಂಗೆಯನ್ನು ತನ್ನ ಜಡೆಯಲ್ಲಿ ತಳೆದ ಬೆರಗನ್ನು ನಮ್ಮ ಮನದಲ್ಲಿ ಮರುಕೊಳಿಸುತ್ತವೆ. ಸೊಂಪುಗಾಲದಲ್ಲಿ ಅವು ಬಿರುಗಾಳಿಗೆ ಬೆದರವು; ಮಳೆಯ ಜಳಕಕ್ಕೆ ಮೋದಗೊಳ್ಳುತ್ತವೆ. ಆಷಾಢದಲ್ಲಿ ಒಂದೆಲೆ ಯನ್ನಾದರೂ ಬೀಳಿಸಲು ಸಮರ್ಥನಾಗುತ್ತಾನೆಯೇ ಪ್ರಭಂಜನ? ತನ್ನ ಪ್ರಜೆಗೆ ಇಂಥ ರಕ್ಷೆಯನ್ನು ಕೊಡ ಬಲ್ಲ ರಾಷ್ಟ್ರದಲ್ಲಿ ಆ ಜನಕ್ಕೆ ಹೇಗೆ ಮಮತೆ ತಪ್ಪೀತು --ಇದೂ ನಾವು ಮರದಿಂದ ಕಲಿಯಬೇಕಾದ ಪಾಠ.

ಇದನ್ನು ನಾನು ವಿಸ್ತರಿಸುತ್ತಾ ಹೋದರೆ ಇದೊಂದು ಸಸ್ಯಶಾಸ್ತ್ರ ಪ್ರವಚನ ವಾದೀತು. ಆದರೆ ಶಾಸ್ತ್ರದ ಕೆಲಸ ಬೆರಗು ಮೂಡಿಸುವುದಲ್ಲ; ತೀರಿಸುವುದು. ಜ್ಞಾನದ ಕೆಲಸವೇ ಅದು; ವಿಸ್ಮಯ ನಿರಸನ. ಆದರೆ ಭಾವದ ಕೆಲಸ ಬೇರೆ. ಮರಗಳ ಜ್ಞಾನ ಭಾವವಾಗಿ ಪರಿಣಮಿಸಿದಾಗ ನಮಗೆ ಅವುಗಳ ವಿಷಯದಲ್ಲಿ ಈಗಿನ ಔದಾಸೀನ್ಯ ನಶಿಸಿ ಹೋಗುತ್ತದೆ, ಮಮತೆ ಹುಟ್ಟುತ್ತದೆ, ಅಚ್ಚರಿ ಮೂಡುತ್ತದೆ. ಈ ಭಾವ ಸಂಕೇತವಾಗಿ ಅಶ್ವತ್ಥ ವೃಕ್ಷವನ್ನು ಬಲಬಂದು ಅದರ ಮರ್ಮರವನ್ನು ಆಲಿಸಿ ಕೈ ಜೋಡಿಸೋಣ ಎನ್ನಿಸುತ್ತದೆ. ಆಗ ನನ್ನಂತೆ ಒಂದು ಸಂಪಗೆ, ಒಂದು ಸುರಗಿ, ಒಂದು ಆಲ ಒಂದು ಅರಳಿಮರ ಅಳಿದರೂ, ಶ್ರೀ ರಾಜ ರತ್ನಂ ಅವರ ಜತೆಗೆ 'ಹೋಯ್ತಲ್ಲಪ್ಪೋ ನಮ್ಮರಳಿಮರ' ಎಂದು ರೋದಿಸೋಣ ಎನ್ನಿಸುತ್ತದೆ. ಇದು ಅಷ್ಟಕ್ಕೇ ಮುಗಿಯದೆ, ತೋಪು ನೆಡಸುವುದರಲ್ಲಿ ಉತ್ಸಾಹ ಮೂಡುತ್ತದೆ; ಸರ್ಕಾರ ನಡೆಸಿದರೂ ಸಹ 'ವನ ಮಹೋತ್ಸವ'ದಲ್ಲಿ ನಮಗೆ ನಿಜವಾದ ಆಸಕ್ತಿಹುಟ್ಟಿ ಅದೊಂದು ಹಬ್ಬವಾಗಿ ಪರಿಣಮಿಸುತ್ತದೆ; ಹೂ ತಳೆದ ಕಾಡನ್ನು ನೋಡಲು ಜನ ಜಾತ್ರೆ ಹೊರಡುತ್ತದೆ.

ಆದರೆ ಅಂಥ ಶುಭಕಾಲ ಈ ಸರ್ವಗ್ರಾಹಿಯಾದ ಔದ್ಯೋಗೀ ಯುಗದಲ್ಲಿ ನಮಗೆ ದೊರೆಯದು. ಸದ್ಯಕ್ಕೆ ನಮ್ಮ ವೃಕ್ಷ ಪ್ರೀತಿಯನ್ನು ತೋರಲು ವಾಲ್ಮೀಕಿ ಮಹರ್ಷಿಯ ಮಾತುಗಳಲ್ಲಿ ಅವುಗಳ ನೂರು ಹೆಸರನ್ನು ನೆನೆನೆನೆದು ಹರ್ಷಿಸುತ್ತಾ ಕವಿಗೂ ಆ ವೃಕ್ಷಗಳಿಗೂ ಸಮ್ಮೊಲವಿನ ನೆನಕೆಗಳನ್ನು ಸಮರ್ಪಿಸುವುದೊಂದೇ ಉಪಾಯ :

ಪಂಪಾ ತೀರರುಹಾಶ್ಚೇಮೇ ಸಂಸಿಕ್ತಾ ಮಧುಗಂಧಿನಃ
ಮಾಲತೀ ಮಲ್ಲಿಕಾಪದ್ಮ ಕರವೀರಾಶ್ಚ ಪುಷ್ಪಿತಾಃ

ಕೇತಕ್ಯಃ ಸಿಂಧುವಾರಾಶ್ಚ ವಾಸಂತ್ಯಶ್ಚ ಸುಪುಷ್ಪಿತಾಃ
ಮಾಧವ್ಯೋ ಗಂಧಪೂರ್ಣಾಶ್ಚ ಕುಂದಗುಲ್ಮಾಶ್ಚ ಸರ್ವಶಃ
ಚಿರಿಬಿಲ್ವಾ ಮಧೂಕಾಶ್ಚ ವಂಜುಲಾ ವಕುಲಾಸ್ತಥಾ
ಚಂಪಕಾಸ್ತಿಲಕಾಶ್ಚೈವ ನಾಗವೃಕ್ಷಾಶ್ಚ ಪುಷ್ಪಿತಾಃ
ನೀಪಾಶ್ಚ ವರಣಾಶ್ಚೈವ ಖರ್ಜೂರಾಶ್ಚಸುಪುಷ್ಪಿತಾಃ
ಪದ್ಮಕಾಶ್ಚೈವ ಶೋಭನ್ತೇ ನೀಲಾಶೋಕಾಶ್ಚ ಪುಷ್ಪಿತಾಃ
ಲೋಧ್ರಾಶ್ಚ ಗಿರಿಪೃಷ್ಠೇಷು ಸಿಂಹಕೇಸರಪಿಂಜರಾಃ
ಅಂಕೋಲಾಶ್ಚ ಕುರಂಟಾಶ್ಚ ಚೂರ್ಣಕಾಃ ಪಾರಿಭದ್ರಕಾಃ
ಚೂತಾಃ ಪಾಟಲಯಶ್ಚಾಪಿ ಕೋವಿದಾರಾಶ್ಚ ಪುಷ್ಪಿತಾಃ
ಮುಚುಕುಂದಾರ್ಜುನಾಶ್ಚೈವ ದೃಶ್ಯಂತೇ ಗಿರಿಸಾನುಷು
ಕೇತಕೋದ್ದಾಲಕಾಶ್ಚೈವ ಶಿರೀಷಾಃ ಶಿಂಶಪಾ ಧವಾಃ
ಶಾಲ್ಮಲ್ಯಃ ಕಿಂಶುಕಾಶ್ಚೈವ ರಕ್ತಾಃ ಕುರವಕಾಸ್ತಥಾ
ತಿನಿಶಾ ನಕ್ತಮಾಲಾಶ್ಚ ಚಂದನಾಃ ಸ್ಯಂದನಾಸ್ತಥಾ
ಹಿಂತಾಲಾಸ್ತಿಲಕಾಶ್ಚೈವ ನಾಗವೃಕ್ಷಾಶ್ಚ ಪುಷ್ಪಿತಾಃ
ಪುಷ್ಪಿತಾಃ ಪುಷ್ಪಿತಾಗ್ರಾಭಿರ್ಲತಾಭಿಃ ಪರಿವೇಷ್ಟಿತಾನ್
ದ್ರುಮಾನ್ ಪಶ್ಯೇಹ ಸೌಮಿತ್ರೇ ಪಂಪಾಯಾ ರುಚಿರಾನ್ ಬಹೂನ್
ವಾತ ವಿಕ್ಷಿಪ್ತ ವಿಟಪಾನ್ ಯಥಾ ಸನ್ನಾನ್‌ದ್ರುಮಾನಿಮಾನ್
ಲತಾಃ ಸಮನುವರ್ತನ್ತೇ ಮತ್ತಾ ಇವ ವರಸ್ತ್ರಿಯಃ
ಪಾದಪಾತ್ ಪಾದಪಂ ಗಚ್ಛನ್ ಶೈಲಾಚ್ಛೈಲಂ ವನಾತ್‌ವನಂ
ವಾತಿ ನೈಕರಸಾಸ್ವಾದ ಸಂಮೋದಿತ ಇವಾನಿಲಃ ೪, ೧, ೭೬-೮೬

ನಮ್ಮ ಕಣ್ಣೂ ಮನಸ್ಸೂ ಈ ಗಾಳಿಯೊಂದಿಗೆ ಸ್ಪರ್ಧಿಸುವುದೆಂದಿಗೆ. ಈ ಪುಷ್ಪಿತ ವನವಿಹಾರದಲ್ಲಿ!

ವಿಜ್ಞಾನ-ವಿಶ್ವಾಸ

ಮನುಷ್ಯ ವಿಚಾರಸಂಪನ್ನನೆಂದೂ ಆತನನ್ನು ಮೃಗಗಳಿಂದ ಪ್ರತ್ಯೇಕಿಸುವ ಗುಣ ಇದೆಂದೂ ತುಂಬ ವಿಚಾರಪರರ ಎಂಬೋಣವಿದೆ. ನಿಜ, ಮೃಗಗಳು ಯಾವ ವಿಚಾರವನ್ನೂ ನಡೆಸುವುದಿಲ್ಲ, ಕೇವಲ ಸ್ವಭಾವಬದ್ಧ ಪ್ರೇರಣೆಗಳಿಂದ ಅವು ವರ್ತಿಸುತ್ತವೆ. ಆದರೆ ಮನುಷ್ಯ ವಿಚಾರಸಂಪನ್ನ ಮಾತ್ರ ಆಗಿಲ್ಲ; ಆತ ನಂಬುವ ಪ್ರಾಣಿ; ಆತನಿಗೆ ಅನೇಕ ಭಾವನೆಗಳುಂಟು; ಈ ಭಾವನೆಗಳು ಆತನ ಅನೇಕ 'ಹುಚ್ಚು' ವರ್ತನೆಗಳಲ್ಲಿ ವ್ಯಕ್ತವಾಗುತ್ತವೆ. ಮೃಗಗಳಲ್ಲಿ ಈ ಗುಣವೂ ಸಹ ಅಷ್ಟಾಗಿ ಕಂಡುಬಾರದು—ಸಾಕಿದ ಪ್ರಾಣಿಗಳಲ್ಲಿ ವಿನಾ—ನಂಬುವ ಗುಣ ಈ ಸಾಕುಪ್ರಾಣಿಗಳಿಗೆ ಮಾನವನ ಸ್ವಭಾವ ಸಿದ್ಧವಾದ ದ್ವೈಧಾವೃತ್ತಿಯಿಂದ ಪ್ರಾಪ್ತವಾದ ಗುಣವೇ ಹೊರತು ಅವುಗಳ ಪ್ರಕೃತಿಗತ ಗುಣವಲ್ಲ; ಮತ್ತು ಈ ಗುಣ ಕಲಿತಿದ್ದರಿಂದ ಅವಕ್ಕೆ ಆಗುವ ಲೇಸೂ ಅಷ್ಟರಲ್ಲೇ ಇದೆ. ಇರಲಿ, ಪ್ರಕೃತಕ್ಕೆ ಬೇಕಾದುದು ಮನುಷ್ಯ ತನ್ನ ನಂಬುವ ಗುಣದಿಂದಲೂ ಸಹ ತನ್ನನ್ನು ತಾನು ಮೃಗದಿಂದ ಪ್ರತ್ಯೇಕಿಸಿಕೊಂಡಿದ್ದಾನೆ ಎಂಬುದು. ಈಗ ನಾವು ಆತನ ನಂಬಿಕೆಗಳನ್ನೇ ಅಲ್ಲಗಳೆಯ ಹೊರಟರೆ ಮೃಗಗಳನ್ನು ಎತ್ತಿ ಹಿಡಿಯಬೇಕಾಗುತ್ತದೆ, ಅವು ಮನುಷ್ಯನಿಗಿಂತ ಎಷ್ಟೋ ಮೇಲು ಎನ್ನಬೇಕಾಗುತ್ತದೆ, ವಾಲ್ಟ್ ವ್ಹಿಟಮನ್ ಕವಿ ಹಾಗೆ ಹೇಳಿಯೂ ಇದ್ದಾನೆ. ಆತನ ಮಾತನ್ನು ಇಲ್ಲಿ ಸ್ಮರಿಸೋಣ:

"ಹಿಂದಿರುಗಿ ಪ್ರಾಣಿಗಳೊಡನೆಯೇ ವಾಸಿಸುತ್ತ ಇದ್ದುಬಿಡೋಣ ಎಂದು ನನಗೆನ್ನಿಸುತ್ತದೆ. ಅವು ಅಷ್ಟು ಸ್ವಸ್ಥವಾಗಿವೆ. ಅಷ್ಟು ಆತ್ಮತೃಪ್ತಿ ಇವಕ್ಕೆ. ನಾನು ಅವನ್ನು ನೋಡುತ್ತ ನೋಡುತ್ತ ಹೊತ್ತು ತಿಳಿಯದೆ ನಿಂತುಬಿಡುತ್ತೇನೆ. ತಮ್ಮ ಸ್ಥಿತಿಯನ್ನು ಚಿಂತಿಸುತ್ತಾ ಅವು ಬೆವರುವುದಿಲ್ಲ, ಕೊರಗುವುದಿಲ್ಲ. ತಮ್ಮ ಪಾಪಗಳಿಗಾಗಿ ಪರಿತಪಿಸುತ್ತಾ ಅವು ಇರುಳೆಲ್ಲ ಜಾಗರವಿದ್ದು ಕಂಬನಿ ಸುರಿಸುವುದಿಲ್ಲ. ದೇವರೆಂದೂ ಧರ್ಮವೆಂದೂ ತರ್ಕಿಸಿ ತರ್ಕಿಸಿ ನನಗೆ ಓಕರಿಕೆ ತರುವುದಿಲ್ಲ. ಅತೃಪ್ತವಾದುದು ಒಂದೂ ಇಲ್ಲ. ಒಂದಕ್ಕೂ ನನ್ನದು ನನಗಿದು ಎಂಬ ಯೋಗಕ್ಷೇಮದ ಹುಚ್ಚಿಲ್ಲ. ಒಂದೂ ಮತ್ತೊಂದಕ್ಕೆ ಮಣಿಯದು. ಸಾವಿರ

ವರುಷದಾಚೆ ಬದುಕಿದ್ದ ತನ್ನಂಥ ಇನ್ನೊಂದಕ್ಕೂ ನಮೋ ಎನ್ನದು. ಮರ್ಯಾದೆಯುಳ್ಳದ್ದು ಒಂದೂ ಇಲ್ಲ. ಗೆಯ್ಮೆಯ ವ್ಯಸನವುಳ್ಳದ್ದೂ ಇಲ್ಲ—ಈ ಸಮಸ್ತ ಪ್ರಪಂಚದಲ್ಲೂ".

ನಿಶ್ಚಯ, ಮೋಹಕವಾಗಿದೆ ವರ್ಣನೆ, ತುಂಬ ಆಪ್ಯಾಯಮಾನವಾಗಿದೆ. ಆದರೆ ದೈವದ ಶಾಪವೋ ವರವೋ ಕಾಣೆ, ಈ ಮೃಗತ್ವ ಸಿದ್ಧಿಯನ್ನು ಕೆಡಿಸುವ ಎರಡು ತೋರಿಕೆಗೆ ವಿರುದ್ಧವೆಂದು ಕಾಣುವ ಶಕ್ತಿಗಳು ನಮ್ಮನ್ನು ಆಕ್ರಮಿಸಿ ಕೊಂಡು ಬಿಟ್ಟವೆಯಲ್ಲ. ಎರಡೂ ಎಂದೂ ನಮ್ಮ ಕೈ ಬಿಡುವಂತಿಲ್ಲ. ವಿಚಾರ ಪ್ರಬಲಿಸಿದಾಗ ವಿಶ್ವಾಸ ಸುಪ್ತವಾಗಿರುತ್ತದೆ, ವಿಶ್ವಾಸ ಎದ್ದಿರುವಾಗ ವಿಚಾರ ಕುಗ್ಗಿರುತ್ತದೆ. ಇಲ್ಲ, ಮದಗೂಡಿದಾಗ ಒಂದು ಇನ್ನೊಂದರ ಕ್ಷೇತ್ರಕ್ಕೆ ನುಗ್ಗಿ ಹಾವಳಿ ಮಾಡುತ್ತದೆ. ಇವು ದಿವಾರಾತ್ರಿಗಳಂತೆ ನಮ್ಮ ಇಡೀ ದಿನವನ್ನೇ ಆಕ್ರಮಿಸಿಕೊಂಡುಬಿಟ್ಟವೆ. ಇವನ್ನು ಸುವ್ಯವಸ್ಥಿತಗೊಳಿಸಿದ ಹೊರತು ನಮ್ಮ ಜೀವನ ಸುಗಮವಾಗಿ ಸಾಗದು. ಅವುಗಳ ವಿಚಾರದಲ್ಲಿ ನಮ್ಮ ವಿಚಾರವನ್ನು ಸ್ವಲ್ಪ ದೂರ ಓಡಿಸುವುದು ಸೂಕ್ತ.

ನಂಬಿಕೆ ಕುಂಠಿತವಾದರೆ ವಿಚಾರ ತಲೆದೋರುತ್ತದೆ, ವಿಚಾರ ನಿರುಪಾಯವಾದರೆ ನಂಬಿಕೆಯೇಳುತ್ತದೆ. ನಮ್ಮರಿವಿನ ಕೃಷ್ಣ ಶುಕ್ಲಗತಿಗಳಿವು. ಒಂದನ್ನೊಂದು ಆಧರಿಸಿಕೊಂಡಿದ್ದರೂ ಅವಕ್ಕೆ ಕಾರ್ಯಕಾರಣ ಸಂಬಂಧವಿಲ್ಲ. ಒಂದು ವಿಚಾರದಿಂದ ಒಂದು ನಂಬಿಕೆಯನ್ನು ಕೆಡಿಸುವುದು ದುಸ್ಸಾಧ್ಯ. ಒಂದು ನಂಬಿಕೆಗೆ ಮತ್ತೊಂದು ನಂಬಿಕೆ ಶತ್ರುವೇ ಹೊರತು ವಿಚಾರವಲ್ಲ. ವಿಚಾರವನ್ನು ಕೆಡಿಸುವುದಕ್ಕೆ ನಂಬಿಕೆಗೂ ಆಗದು. ಬರಿ ನಂಬಿಕೆಯಿಂದ ವಿಚಾರ ದೂರವಾಗದು—ಈಗ ಇಂಗ್ಲಿಷ್ ಮಾಧ್ಯಮದಿಂದ ನಮ್ಮ ವಿದ್ಯೆ ಬೆಳೆಯದೆಂಬ ಎಷ್ಟು ವಿಚಾರವನ್ನು ಎಷ್ಟು ಜನ ಮುಂದೊಡ್ಡಿದರೇನು ಅದನ್ನು ಕದಲಿಸಲಾಗುತ್ತದೆಯೆ? ಅದರ ವಿಷಯದಲ್ಲಿ ನಮ್ಮ ಭಾವನೆ ಬೆಳೆದಿದೆ, ನಮ್ಮ ಕನ್ನಡದ ವಿಷಯದಲ್ಲಿ ನಮ್ಮ ತಾತ್ಸಾರ ಕುಂದಿಲ್ಲ. ಈಗ ಔದ್ಯೋಗೀಕರಣದಲ್ಲೂ ನಾಗರಿಕತೆಯನ್ನೆಲ್ಲ ಯಂತ್ರಮಯವನ್ನಾಗಿ ಮಾಡುವುದರಲ್ಲೂ ನಮಗೆ ನಂಬಿಕೆ. ಮಹಾತ್ಮ ಗಾಂಧಿಯವರ ಸುವಿಚಾರ ಸ್ಮರಣೆಯಿಂದಾಗಲಿ, ಅದು ಬೇಡ ಎಂದರೆ ಅತ್ಯಂತ ವಿಚಾರಪರನಾದ ಬರಟ್‌ರೇಂಡ್ ರಸೆಲ್ಲಿನ ಆಧುನಿಕ ಯಂತ್ರಮೋಹ ಖಂಡನಾವಾದಗಳಿಂದಾಗಲಿ ಪ್ರಚಲಿತರಾಗುವವರು ಯಾರು? ನಾವಂತೂ ಅಲ್ಲ; ಪಾಶ್ಚಾತ್ಯರೂ ಅಲ್ಲ.

ಆದರೆ ಅದರ ಪರವಾಗಿ ಒಬ್ಬ ಯಃಕಶ್ಚಿತನಾಡುವ ಪುಡಿಮಾತುಗಳೂ ನಮಗೆ ಆಪ್ಯಾಯಮಾನವಾಗಿರುತ್ತದೆ. ಈಗ ಅರ್ಜುನನ ಯುದ್ಧವಿಷಯದಲ್ಲಿನ ವಿಚಾರವನ್ನೇ ತೆಗೆದುಕೊಳ್ಳೋಣ. ತದ್ವಿಚಾರಗ್ರಸ್ತ ಬುದ್ಧಿ ಆತನನ್ನು ಆತನ ಬಂಧು-ಪ್ರೀತಿಯ ಮೋಹದಲ್ಲಿ ಇನ್ನಷ್ಟು ದೃಢವಾಗಿ ಕೆಡವಿತೇ ಹೊರತು ಅದನ್ನು ಕದಲಿಸಿತೇ? ಅದನ್ನು ಅಲ್ಲಿಂದ ಹೊರಡಿಸಲು ಶ್ರೀಕೃಷ್ಣ ಕಡುಪಾಡು ಪಡಬೇಕಾಯಿತು.ಎಂದರೆ ಯಾವುದೋ ಒಂದು ವಿಚಾರದ ಜಾಡು ಹಿಡಿದು ಒಂದು ನಂಬುಗೆಯಲ್ಲಿ ನೆಲೆನಿಂತ ಮನುಷ್ಯನ ಚಿತ್ತವನ್ನು ಅಲ್ಲಿಂದ ಹೊರಡಿಸಬೇಕಾದರೆ ಅದು ಸಾಮಾನ್ಯ ಸಾಹಸವಲ್ಲ. ಏಕೆಂದರೆ ಸ್ತಬ್ಧವಿಚಾರಕ್ಕೆ ಅಂಟಿಕೊಂಡಿರುವುದು ಮೋಹದ ಜಿಗಟು. ಸಣ್ಣ ಸಣ್ಣ ಮೋಹಗಳನ್ನು ಒಂದು ಬೃಹದ್ ಮೋಹ ನುಂಗಬಲ್ಲದು, ಹಾಗೆಯೇ ಸಣ್ಣ ಸಣ್ಣ ವಿಚಾರಗಳನ್ನು ಒಂದು ಮಹಾ ವಿಚಾರ ಧಾರೆ ಪರಿಸಮಾಪ್ತಗೊಳಿಸಬಲ್ಲದು. ಅರ್ಜುನನ ಸ್ವಜನಮೋಹ ಭಗವನ್ಮೋಹದಿಂದ ನಿವಾರಿತವಾಯಿತು; ಆತನ ಜೀವ-ದೇಹ-ಸ್ವಭಾವ-ಕರ್ತವ್ಯ ಸಂಬಂಧವಾದ ಅಲ್ಪ ಶ್ರೇಣಿಯ ವಿಚಾರಸರಣಿ ಸಹ ಶ್ರೀಕೃಷ್ಣನ ವಿಚಾರದ ಮಹಾಪೂರದಲ್ಲಿ ತೇಲಿ ಹೋಯಿತು. ಆದರೆ ಕೃಷ್ಣನ ವಿಚಾರಲಹರಿ ಪರಸ್ಪರ ವಿಶ್ವಾಸವನ್ನು ನೆಮ್ಮಿ ಹೊರಟದ್ದು.

ಹೀಗೆ ಜರಗುತ್ತವೆ ಭೌತ-ಜೀವ-ವಿಕಸನ ಕ್ಷೇತ್ರದಲ್ಲಿ ಒಂದು ಸ್ಥಿರನೆಲೆಗಡರಿ. ಸಾಂಸ್ಕೃತಿಕ ಕ್ಷೇತ್ರದಲ್ಲಿನ ವಿಕಾಸಯಾತ್ರೆಗೆ ಹೊರಟ ಮಾನವನ ಆಯುಷ್ಯದ ಶುಕ್ಲ-ಕೃಷ್ಣ ಗತಿಗಳು. ಬರಿ ವಿಚಾರದಿಂದಲೇ ಮಾನವ ತನ್ನ ಸಾಂಸ್ಕೃತಿಕ ಪ್ರಗತಿಯನ್ನು ಸಾಧಿಸಿಕೊಳ್ಳುವುದು ಕಷ್ಟ; ಬರಿ ಅಂಧಶ್ರದ್ಧೆಯಿಂದಲೂ ಇದು ದುಃಸಾಧ್ಯ. ಈಗೀಗ ವಿಜ್ಞಾನ ತನ್ನ ಆಶ್ಚರ್ಯಕರವಾದ ಯಂತ್ರಗಳ ಪವಾಡಗಳನ್ನು ಮೆರೆಸಿ ನಮ್ಮ ಎಷ್ಟೋ ಶ್ರದ್ಧೆಗಳನ್ನು ಧ್ವಂಸಮಾಡುತ್ತಿದೆ, ನಿಶ್ಚಯ. ಭಾವನಾಶೀಲರ ಕಿವಿಗೆ ಅದರ ಭುಜಾಸ್ಫಾಲನ ಅಷ್ಟು ರಂಜಿಸದು; ಅದನ್ನು ತಮ್ಮ ದುರ್ಬಲ ವಿಚಾರ ಧಾರೆಯಿಂದ ಎದುರಿಸಲು ಹೊರಟು ಅವರು ಮುಖಭಂಗ ಪಡೆದರೆ ಅದೇನೂ ಸೋಜಿಗವಲ್ಲ. ಭಾವನಾಕ್ಷೇತ್ರ ಬೇರೆ; ವಿಜ್ಞಾನಕ್ಷೇತ್ರವೇ ಬೇರೆ. ಅವು ಅವುಗಳ ಕ್ಷೇತ್ರಗಳಲ್ಲಿ ಅವು ಅವು ಸಮಪ್ರಮಾಣದಲ್ಲಿ ವಿಕಾಸ ಹೊಂದುತ್ತಿದ್ದರೆ ಚೆನ್ನು, ಪರಸ್ಪರಾವಲಂಬಿಗಳಾಗಿ. ಅವುಗಳ ಪರಸ್ಪರ ಸೀಮೋಲ್ಲಂಘನದಿಂದ ಮಾನವನ ಘನತೆ ಏರದು. ವಿಜ್ಞಾನ ವಿಹರಿಸುವ ಕ್ಷೇತ್ರ ತಾನೇ

ಎಂಥದು ? ಅದರ ಪರಾಕ್ರಮವೆಲ್ಲ ಜಡ ಪ್ರಪಂಚದಲ್ಲಿ; ಅದರ ಹಾರಾಟ ತಾರಾಟವೆಲ್ಲ ಗಣಿತಕ್ಕೂ ಅಳತೆಗೂ ಸಿಕ್ಕುವ ಸ್ಥೂಲಮೂರ್ತಭೌತಕ್ಷೇತ್ರಗಳಲ್ಲಿ ಮಾತ್ರ. ಹಾಗೆಯೇ ನೋಡಿದರೆ, ವಿಜ್ಞಾನದ ನಿಷ್ಕೃಷ್ಟಜ್ಞಾನ ಭೌತ ಪ್ರಪಂಚದಲ್ಲಿ ಗೋಚರಿಸುವಷ್ಟು ಜೀವಲೋಕದಲ್ಲಿ ಗೋಚರಿಸುವುದಿಲ್ಲ; ಹೀಗೆಯೇ ಮೇಲ ಮೇಲಕ್ಕೇರುತ್ತ ಮಾನವ ಕ್ಷೇತ್ರದಲ್ಲಿ ಮುಗ್ಗರಿಸಿ ದೇವಕ್ಷೇತ್ರದಲ್ಲಿ ಕಕ್ಕಾಬಿಕ್ಕಿಯಾಗುತ್ತದೆ ಅದು. ದೇವರಿದ್ದಾನೆಯೇ ದೇವರುಗಳಿದ್ದಾರೆಯೇ ಎಂಬ ವಿಷಯದಲ್ಲಿ ವಿಜ್ಞಾನವನ್ನೂ ವಿಚಾರವನ್ನೂ ಕೇಳಿ ಯಾರಿಗೆ ಏನು ಪ್ರಯೋಜನ ? ಇವು ಅದಕ್ಕೆ ಒಗ್ಗುವ ಕ್ಷೇತ್ರವಲ್ಲ. ಈ ವಿಚಾರಗಳಲ್ಲಿ ವಿಚಾರಿಸ ಹೊರಟವನೇ ಅವಿಚಾರಿ. ಅವು ಭಾವನಾಕ್ಷೇತ್ರಕ್ಕೆ ಮೀಸಲಾದ ವಿಷಯಗಳು. ಅವುಗಳ ವ್ಯಕ್ತಿಮೆ ಸಹ ವೈಜ್ಞಾನಿಕ ವ್ಯಕ್ತಿಮೆಯ ಜಾಡನ್ನು ಹಿಡಿಯದೆ ತನ್ನದೇ ಒಂದು ದಾರಿ ಹಿಡಿಯುತ್ತದೆ. ಇವು ಪ್ರತ್ಯಕ್ಷ-ಅನುಮಾನ-ಭಾವಿಷ್ಯ ಸಂಭವಗಳಲ್ಲಿ ಕೈಹಾಕದಿದ್ದರೆ ಕ್ಷೇಮ. ಅದು ವಿಜ್ಞಾನದ ಸ್ವತ್ತು.

ಅಲ್ಲದೆ, ಇಡೀ ಭೌತವಿಶ್ವವೇ ಕ್ರಮದಿಂದ ಅಕ್ರಮದತ್ತ ನಿರಂತರವಾಗಿ ಸಾಗುತ್ತಿದೆ ಎಂದು ಭೌತನಿಯಮವೊಂದು ಸಾರುತ್ತಿದೆ. ಇಂಥ ಸಾಗುವಿಕೆಯನ್ನು ಎದುರಿಸಲು 'ಜೀವ' ಎದ್ದು ನಿಂತಿದೆಯಂತೆ. 'ಮರಣಂ ಪ್ರಕೃತಿಃ ಶರೀರಿಣಾಂ' ಎಂಬ ಕಾಳಿದಾಸೋಕ್ತಿ ಈ ಭೌತ ನಿಯಮವನ್ನು ಬಹು ಸುಂದರವಾಗಿ ನಿರೂಪಿಸುತ್ತದೆ, ಮಾನುಷ ಭೌತಶರೀರದ ದೃಷ್ಟಿಯಲ್ಲಿ. ಮರಣ ಎಂದರೆ ಜೀವದ ಪರಮ ಅಕ್ರಮಸ್ಥಿತಿ. ಜೀವ ತನ್ನ 'ಅಕ್ರಮನಿರೋಧಶಕ್ತಿ' ಯನ್ನು ಭೌತಕ್ಷೇತ್ರದಲ್ಲಿ ಪ್ರದರ್ಶಿಸಬಹುದು. ಉದಾಹರಣೆಗೆ ವ್ಯರ್ಥವಾಗಿ ಹೋಗುತ್ತಿರುವ ಜಲಪಾತದ ಶಕ್ತಿಯನ್ನು ಉಪಯುಕ್ತ ವಿದ್ಯುಚ್ಛಕ್ತಿಯಾಗಿ ಅಷ್ಟಿಷ್ಟು ಪ್ರಮಾಣದಲ್ಲಿ ಪರಿವರ್ತಿಸಿ. ಇದನ್ನು ಅದು ತನ್ನ 'ವಿಶ್ಲೇಷಣ–ಸಂಯೋಜನ' ಸಾಮರ್ಥ್ಯದ ದ್ವಾರ ಪ್ರಕಾಶಪಡಿಸುತ್ತದೆ. ಆದರೆ ಜೀವಕ್ಷೇತ್ರದಲ್ಲೇ, ಸ್ವಕ್ಷೇತ್ರದಲ್ಲೇ, ಜರಗುವ 'ಕ್ರಮದಿಂದ ಅಕ್ರಮಕ್ಕೆ' ಎಂಬ ವಿಶ್ವನಿಯಮವನ್ನು ನಿರೋಧಿಸಲು ಬುದ್ಧಿ ಉಪಯೋಗಕ್ಕೆ ಬಾರದು; ಅದರ ಉಪಟಲದಿಂದ ಈ ಅಕ್ರಮ ಹೆಚ್ಚಬಹುದೇ ಹೊರತು ಕುಗ್ಗುವ ಸಂಭವ ಕಡಮೆ. ಆದುದರಿಂದ ಭೌತಕ್ಷೇತ್ರದ 'ಕ್ರಮದಿಂದ ಅಕ್ರಮದತ್ತ' ಸಾಗುವ ಪರಿಪಾಟಿಯನ್ನು ತಡೆಯಲು ಜೀವ ಎದ್ದಂತೆ, ಜೀವಕ್ಷೇತ್ರದಲ್ಲಿನ ಈ ಪ್ರವೃತ್ತಿಯನ್ನು ತಡೆಯಲು ಬೇರೊಂದು ತದಾಶ್ರಿತಶಕ್ತಿ ಏಳಬೇಕಾಗುತ್ತದೆ;

ಮಾನವ ಜೀವಿತದಲ್ಲಿ ಅದು ಎದ್ದು ಇದೆ. ಅದನ್ನೇ ನಾವು 'ಆತ್ಮ' ಎಂದು ಕರೆಯುವುದು. 'ಆತ್ಮ' ಎಂಬುದು ಭಾವನೆಗಳ ಸಂಸ್ಥೆ. ಅದರ ಕಾರ್ಯ ಜೀವಕ್ಷೇತ್ರದಲ್ಲಿನ 'ಆಕ್ರಮ'ಕಾರಕಗಳಾದ ಅಹಂಕಾರ ಪ್ರಸೂತವಾದ ಅರಿಷಡ್ವರ್ಗದ ನಿಯಮನ. ಮಹಾತ್ಮರೂ ಮಹಾಪುರುಷರೂ ಅದರ ಸಿದ್ಧಿಸ್ಥಾನಗಳು, ಜನಕ್ಕೆ ತಮ್ಮ ಆತ್ಮೋತ್ಥಾನದ ನಿದರ್ಶಕರು. ಜೀವಕ್ಕೆ ಭೌತಶರೀರ ಹೇಗೋ ಹಾಗೆ ಆತ್ಮಕ್ಕೆ ಭಾವನಾಶರೀರ. ಅದು ಕಲ್ಪಾಗಮಾದಿಗಳ ರೂಪವನ್ನು ಪಡೆಯುತ್ತದೆ, ಸದಾಚಾರ ಸಭ್ಯಾಚಾರಗಳಲ್ಲಿ ಅಭಿವ್ಯಕ್ತವಾಗುತ್ತದೆ. ಅರಿಷಡ್ವರ್ಗದ ನಿಯಂತ್ರಣದಲ್ಲಿ ಆತ್ಮಕ್ಕೆ ಬುದ್ಧಿ ಸಹಾಯಕವಾಗಬಲ್ಲುದು, ಅದು ಉದಾಸೀನಪಕ್ಷಕ್ಕೆ ಸೇರಿರುವುದರಿಂದ ; ಮತ್ತು ಅಲ್ಪಾಹಂಕಾರಗಳಲ್ಲಿ ಸ್ತಬ್ಧಗೊಳ್ಳುತ್ತಾ ಅಲಭ್ಯತೆಯತ್ತ ನಡೆಯುವ ಜೀವಶಕ್ತಿಯ ಲಭ್ಯತೆಯ ಪ್ರಮಾಣವನ್ನು ಹೆಚ್ಚಿಸಲು ಆತ್ಮಕ್ಕೆ ಉತ್ಕೃಷ್ಟ ಸಾಧನವಾಗಬಲ್ಲುದು. ಮಾನವನ ಸಂತೋಷೋಲ್ಲಾಸಕ್ಕೆ ಜೀವಶಕ್ತಿಯ ಲಭ್ಯತೆಯೇ ಆತ್ಮಪ್ರವೃದ್ಧಿಯ ಕುರುಹು. ಅಂಥ ವೇಳೆಯಲ್ಲಿ ಮಾನವನಗರಗಳೂ ಹಳ್ಳಿಗಳೂ 'ಸಮಾಜೋತ್ಸವಶಾಲಿ'ಗಳಾಗುತ್ತವೆ ; ಈಗಿನಂತೆ ಪರಪೀಡಿತವಾಗಿ ನೀರಸವಾಗಿರುವುದಿಲ್ಲ.

ಅಲ್ಲದೆ ವಿಜ್ಞಾನಕ್ಷೇತ್ರವಾದ ಜಡಪ್ರಪಂಚದಲ್ಲಿ ಲೋಭಮೋಹಭಯಾದಿಗಳು ಇಲ್ಲವೇ ಇಲ್ಲ, ಉತ್ತಮವರ್ಗದ ಪ್ರಾಣಿಗಳಲ್ಲಿ ಎಲ್ಲೋ ಅಲ್ಪಸ್ವಲ್ಪ, ಮಾನವನಲ್ಲಿ ವಿಪುಲ. ಇವುಗಳ ಪ್ರಮಾಣ ಸೃಷ್ಟಿವಿಕಾಸಶ್ರೇಣಿಯ ಪ್ರಗತಿಯನ್ನೇ ಅನುಸರಿಸುವಂತಿದೆ. ಆದುದರಿಂದ ಭೌತಕ್ಷೇತ್ರ ನಿಯಂತ್ರಣ ಮತ್ತು ಆಧಿಪತ್ಯಕ್ಕೆ ವಿಚಾರಪ್ರಧಾನವಾದ ವಿಜ್ಞಾನವನ್ನು ಆತ ಪ್ರಯೋಗಿಸಿದರೆ, ಲೋಭಮೋಹ ಭಯಾದಿಗಳಿಂದ ತುಂಬಿರುವ ಅರಿಷಡ್ವರ್ಗ ಕ್ಷೇತ್ರದಲ್ಲಿ ಅವನ್ನು ಪಳಗಿಸಿ ಏರಿ ವೈಹಾಳಿಸಬಲ್ಲ ಸಮರ್ಥ ಸದ್ಭಾವನೆಗಳನ್ನು ರೂಢಿಸಿಕೊಂಡು ಅವುಗಳ ನಿಯಂತ್ರಣಕ್ಕೂ ಆಧಿಪತ್ಯಕ್ಕೂ ಆತ ಹವಣಿಸುವುದು ಸಾಧು. ಚಂದ್ರಸೂರ್ಯಾದಿ ಗ್ರಹಣಗಳು ಇಂಥಿಂಥ ದಿನಗಳಲ್ಲಿ ಈಯೀ ಗಳಿಗೆಗಳಲ್ಲಿ ಸಂಭವಿಸುತ್ತವೆ ಎಂಬುದನ್ನು ವೈಜ್ಞಾನಿಕವಾಗಿ ಭವಿಷ್ಯ ನುಡಿಯಬಹುದು. ಹಾಗೆ ಹಿಡಿದಾಗ ಆಯಾ ವ್ರತಗಳನ್ನು ಆಚರಿಸಬೇಕೇ ಎಂಬುದು ಭಾವನಾ ವಿಷಯ. ಎರಡು ಸಾವಿರ ವರ್ಷಗಳ ಹಿಂದೆ ಇಂಥ ಒಂದು ದಿನದಲ್ಲಿ ಕ್ರಿಸ್ತ ಹುಟ್ಟಿದ ಎಂಬುದು ವೈಜ್ಞಾನಿಕ ವಿಚಾರ ಸಿದ್ಧವಾದುದು ; ಆ ದಿವಸ ಕ್ರಿಸ್ತೋತ್ಸವವನ್ನು

ಈ ವಿಧಾನದಲ್ಲಿ ಆಚರಿಸತಕ್ಕದ್ದೆಂಬುದು ಅವರವರ ಭಾವನೆಗೆ ಸೇರಿದ್ದು. ನಿರ್ದಿಷ್ಟ ಭಾವನೆಗಳನ್ನು ಉಳಿಸಿಕೊಳ್ಳಬೇಕೆಂಬವರು ನಿರ್ದಿಷ್ಟ ವ್ರತಕಲ್ಪಾದಿಗಳನ್ನು ನೆರವೇರಿಸಲೇಬೇಕು. ಇಲ್ಲದೆ ಹೋದರೆ ಆಯಾ ಭಾವನೆಗಳು ಕ್ಷೀಣಿಸಿ ಲೋಭಮೋಹ ಭಯಾದಿಗಳು ವಿಜೃಂಭಿಸುತ್ತವೆ; ಇಲ್ಲ ಬೇರೆಯವರ ಭಾವನೆಗಳು ಕಾಲು ಹಾಕಿಕೊಂಡು ನಮ್ಮ ಸ್ವಂತವನ್ನು ಹೊರದೂಡಿ ನಮ್ಮ ಸ್ವಾಂತದ ಸತ್ವಹೀನತೆಯನ್ನೇ ಪ್ರದರ್ಶಿಸುತ್ತವೆ. ವಿಚಾರವಿಲ್ಲದೆ ಹೇಗೆ ಮನುಷ್ಯ ಮನುಷ್ಯನಾಗಿ ಬಾಳಲಾರನೋ ಹಾಗೆಯೇ ಭಾವನೆಗಳಿಲ್ಲದಿದ್ದರೂ ಬಾಳಲಾರ. ಕರುಣಾಳುವಾದ ಮಾನವಪ್ರಕೃತಿ ಬುದ್ಧಿಯನ್ನು ತುಸಕಾಲ ಮುದುಡಿಸುವುದಕ್ಕೆಂದೇ, ಅದರ ದಣಿವನ್ನು ತೀರಿಸಿ ಹುರುಪುಗೊಳಿಸುವುದಕ್ಕೆಂದೇ ಕಲ್ಪಾಗಮಾದಿ ಭಾವನಾ ತಂತ್ರಗಳನ್ನು ಸೃಷ್ಟಿ ಮಾಡುತ್ತದೆ. ಇವುಗಳ ಉದಯ-ವೃದ್ಧಿ-ಹಾನಿ-ವಿಕಾಸಗಳ ಕತೆ ಬೇರೆ; ವಿಶ್ವಾಸ ಮತ್ತು ತನ್ನಿರ್ಮಿತ ಅ-ವೈಜ್ಞಾನಿಕ ಕಲ್ಪಗಳು ಬುದ್ಧಿಯನ್ನು ತಮ್ಮ ಕ್ಷೇತ್ರಕ್ಕೆ ಕರೆದು ಭಾವಿಸಿ, ಆದರಿಸಿ, ವಿಶ್ರಾಂತಿಯನ್ನೊದಗಿಸಿ, ಉಪಚರಿಸಿ ಅದರ ಕ್ಷೇತ್ರದ ದುಡಿಮೆಗೆ ಕಳಿಸುತ್ತದೆ. ಭಾವನಾ ಕ್ಷೇತ್ರದಲ್ಲಿ ಬುದ್ಧಿ ದುಡಿಮೆಗಾರನಲ್ಲ, ಪ್ರಿಯಾತಿಥಿ. ಹಾಗೆಯೇ ವೈಜ್ಞಾನಿಕ ವಿಚಾರಕ್ಷೇತ್ರದಲ್ಲಿ ಭಾವನೆ ಸ್ತಬ್ಧವಾಗಿದ್ದರೆ ಮಾನವನಿಗೆ ಶುಭ. ಸ್ವಾತಂತ್ರ್ಯೋತ್ಸವದ ದಿನದಲ್ಲಿ ಧ್ವಜಪಟವನ್ನು ಮೇಲಕ್ಕೇಕೆ ಏರಿಸಬೇಕು, ಅದಕ್ಕೇಕೆ ಬ್ಯಾಂಡೂದಿಸಿ ಕವಾಯಿತು ಮಾಡಿಸಿ ಸೆಲ್ಯೂಟ್ ಹೊಡೆಯಬೇಕು ? ಇದು ವೈಜ್ಞಾನಿಕ ಪ್ರಶ್ನೆಯಲ್ಲ; ಭಾವನೆಯ ಪ್ರಶ್ನೆ. ಇಲ್ಲಿ ಬುದ್ಧಿ ಮತ್ತು ವಿಚಾರ ತಟಸ್ಥವಾಗಿರುವುದೇ ಲೇಸು. ಹಾಗೆಯೇ ನಮ್ಮ ಸಂಸ್ಕೃತಿಯ ವೈಶಿಷ್ಟ್ಯವನ್ನೂ ಸೌಂದರ್ಯವನ್ನೂ ಭಾವುಕತೆಯನ್ನೂ ಇದುವರೆಗೂ ಉಳಿಸಿರುವ ನಮ್ಮ ದೈವಾಗಮಗಳೂ ಗೃಹಕಲ್ಪಗಳೂ ಸಹ ನಮ್ಮ ವೈಜ್ಞಾನಿಕ ವಿಚಾರಗಳಿಗೆ ತಲೆಹಾಕಬಾರದು.

ಲೋಭ-ಮೋಹ-ಭಯಕ್ಷೇತ್ರಗಳಲ್ಲಿನ ನಿಯಂತ್ರಣ ವಿಜ್ಞಾನದಿಂದ ಸಾಗದು ಎಂದು ಹೇಳಿದೆನಷ್ಟೆ. ವೈಜ್ಞಾನಿಕವಾಗಿ ಮುಂದುವರಿದ ದೇಶಗಳು ಇದನ್ನು ಸಮರ್ಥಿಸುತ್ತವೆ. ಅಲ್ಲಿ ಇವು ಮೂರೂ ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ಬೆಳೆಯುತ್ತಿವೆ. ಎಷ್ಟು ಕ್ಷಿಪಣಿಗಳನ್ನು ತಯಾರಿಸಿ, ಎಷ್ಟು ಅಣುಬಾಂಬುಗಳನ್ನು ಪೇರಿಸಿ, ಎಷ್ಟು ವಿಮಾನಗಳನ್ನು ರೂಪಿಸಿ, ಎಷ್ಟೊಂದು ಹಡಗುಗಳನ್ನು ಸಾಗರಗಳ ಮೇಲೆ ಓಡಾಡಿಸಿಯೂ ಇದಕ್ಕಾಗಿ ಪರ್ವತರಾಶಿಯಷ್ಟು ಹಣವನ್ನು

ವೆಚ್ಚಮಾಡಿಯೂ ಅವರು ಪರಸ್ಪರವಾಗಿ ಪರರಾಷ್ಟ್ರಗಳ ಭಯವನ್ನು ನೀಗಿಕೊಂಡಿಲ್ಲ. ಈ ಪೇರಿಕೆಯೂ ಈ ಭೀತಿಯ ಪ್ರಮಾಣವನ್ನೇ ದ್ಯೋತಿಸುತ್ತದೆಯಲ್ಲದೆ ಮತ್ತೇನು? ಅಷ್ಟಕ್ಕೂ ಅವೆಲ್ಲವನ್ನೂ ಉಪಯೋಗಿಸುವ ಭವಿಷ್ಯ ದಿನವಾದರೂ ನಮ್ಮ ವಿಚಾರಕ್ಕೆ ಎಟುಕೀತೆ? ಅವು ಲೋಭಿಯ ಹಣದಂತೆ ಬರಿ ಪೇರಿಕೆಯಲ್ಲೇ ಮುಗಿಯಬೇಕು, ವೃಥಾ. ಅವುಗಳ ಕಾಲುಭಾಗ ವೆಚ್ಚವಾದರೂ ಇಡೀ ಭೂಮಿಯೇ ಭಸ್ಮವಾಗಿಬಿಡುತ್ತದೆ. ಆದರೂ ಶಸ್ತ್ರಾಸ್ತ್ರಗಳ ಸಜ್ಜು ನಡೆಯುತ್ತಲೇ ಇದೆ. ಏಕೆ? ಭಾವನಾಕ್ಷೇತ್ರ ಬಂಜರಾಗಿರುವುದರಿಂದ, ಮಾನವನ ಸಮಸ್ತ ಸಿದ್ಧಿಯನ್ನೂ ವಿಜ್ಞಾನದಿಂದ ಪಡೆಯಬಹುದೆಂಬ ಮೋಹ ಆವರನ್ನು ಆವರಿಸಿರುವುದರಿಂದ ; ಸರ್ವಗ್ರಾಹಕ ಯಂತ್ರೋದ್ಯೋಗ ತನಗೆ ಪೃಥ್ವಿಯ ಭಕ್ಷಣವೊಂದು ಸಾಲದೆಂಬಂತೆ ಗ್ರಹಭಕ್ಷಣಕ್ಕೂ ಹೊಂಚುತ್ತಿರುವುದರಿಂದ. ವೈಜ್ಞಾನಿಕ ವಿಚಾರಕ್ಕೆ ತಕ್ಕ ಪ್ರಮಾಣದಲ್ಲಿ ಭಾವನಾ ಕ್ಷೇತ್ರದಲ್ಲಿ ವಿಕಾಸ ಜರುಗಿಲ್ಲವಾದುದರಿಂದ ಬುದ್ಧಿ ಬೆಳೆದಿದೆ, ಹೃದಯ ಬರಡಾಗಿದೆ, ಅರಿಷಡ್ವರ್ಗ ವಿಜೃಂಭಿಸುತ್ತ ಹೃದಯದ ಜೀವದ್ರವವನ್ನು ಹೀರುತ್ತಿದೆ. ಅವನ್ನು ನಿಯಂತ್ರಿಸುವ ಸದ್‌ಭಾವನಾ ಕಲ್ಪಗಳು, ಪ್ರೇಮ-ತ್ಯಾಗ-ಸದ್ಭಾವಗಳನ್ನು ದ್ಯೋತಿಸಿ ವೃದ್ಧಿಸತಕ್ಕವು, ಬೆಳೆದಿಲ್ಲ. ಒಂದು ಆಶ್ಚರ್ಯಕರವಾದ ಯಂತ್ರವನ್ನು ನಿರ್ಮಿಸಬಹುದು, ಆದರೆ ತುಂಬುಲ್ಲಸವನ್ನೂ ವಿಶ್ರಾಂತಿಯನ್ನೂ ಶಾಂತಿ ಸಮಾಧಾನವನ್ನೂ ಕೊಡತಕ್ಕ ಒಂದು ಕಲ್ಪವನ್ನು ರಚಿಸುವುದು ಕಷ್ಟ. ವೈಚಾರಿಕ ವಿಜ್ಞಾನ ಕಲ್ಪಾಗಮಗಳತ್ತ ಹುಬ್ಬು ಗಂಟಿಕ್ಕುವುದು ಅದಕ್ಕೆ ಸ್ವಭಾವಪ್ರಾಪ್ತವಾದ ಗುಣ. ಅದನ್ನು ದೂರುವುದು ತಪ್ಪು. ಅದಕ್ಕೆ ಸ್ವಲ್ಪಕಾಲ ಬಿಡುವು ಕೊಡಬೇಕು ಭಾವನಾಕ್ಷೇತ್ರದಲ್ಲಿ, ಅಷ್ಟೆ. ಭಾರತದ ಐಶ್ವರ್ಯ ಈ ದಿಸೆಯಲ್ಲಿ ಸಮೃದ್ಧವಾಗಿದೆ. ಅದು ಅಕ್ಕಿಯನ್ನು ಅಕ್ಷತೆಯಾಗಿ ಪರಿವರ್ತಿಸಬಲ್ಲ ಪವಾಡವನ್ನು ಬಲ್ಲುದು. ಆದರೆ ದೀರ್ಘಕಾಲದ ದಾಸ್ಯದ ಫಲವಾಗಿ ನಮ್ಮ ದಿವ್ಯ ಹಬ್ಬಗಳನ್ನೂ ಉತ್ಸವಗಳನ್ನೂ ಒಟ್ಟಿಗೆ ಕಲೆತು ವಿಜೃಂಭಣೆಯಿಂದ ಈ ಕಾಲಕ್ಕೆ ತಕ್ಕಂತೆ ಅವುಗಳಿಗೆ ಹೊಸ ಸಂಕೇತಾರ್ಥಗಳನ್ನು ಕಲ್ಪಿಸುತ್ತಾ ರೂಪಿಸಿಕೊಳ್ಳುವುದಕ್ಕೆ ನಮಗೆ ಬಾರದು. ಈ ವಿಕಾಸವನ್ನು ನಮ್ಮಲ್ಲಿ ಹುದುಗಿರುವ ಭಾವನಾಪ್ರಕೃತಿಯೇ ಕರುಣಿಸಬೇಕು. ವಿಜ್ಞಾನ ಮತ್ತು ಭಾವನೆಗಳನ್ನು ಸುವಿಚಾರದಿಂದ ವಿಂಗಡಿಸಿಕೊಳ್ಳಬೇಕು. ಕಾರಣ-ಕಾರ್ಯ-ಫಲಗಳನ್ನು ಆಯಾ ಕ್ಷೇತ್ರಕ್ಕೇ ಮಿತಿಗೊಳಿಸದೆ, ವೈಜ್ಞಾನಿಕ ವ್ಯವಹಾರ ಕ್ಷೇತ್ರದಿಂದ ಭಾವನಾ

ಕ್ಷೇತ್ರಕ್ಕೆ ಹಾಯಿಸುವುದರಿಂದ ವಿಚಾರ ಮತ್ತು ಭಾವನಾ ಕ್ಷೇತ್ರಗಳೆರಡರಲ್ಲಿಯೂ ಕ್ಷತಿಯುಂಟಾಗುತ್ತದೆ; ಮಾನುಷಜೀವಿತ ಎರಡು ಕ್ಷೇತ್ರಗಳಲ್ಲೂ ಕಮರಿ ಹೋಗುತ್ತದೆ. ಅದಕ್ಕೆಯೇ ಇಡೀ ಗೀತಾಶಾಸ್ತ್ರ 'ಸಂಗಂ ತ್ಯಕ್ತ್ವಾ, ಆತ್ಮಶುದ್ಧಯೇ' ಮುಂತಾದ ಮಾತುಗಳನ್ನು ಬಳಸಿ ಫಲತ್ಯಾಗ ರೂಪವಾದ ಕರ್ಮಯೋಗವನ್ನು ಬೋಧಿಸುತ್ತದೆ; ಈ ಯಾಗದಿಂದ ಈ ಫಲ ದೊರೆಯುತ್ತದೆ ಎಂಬುದನ್ನು ಸಹ ಬರಿ 'ಅರ್ಥವಾದ'ಎನ್ನುತ್ತದೆ. ಎಂದರೆ, ಇದರಿಂದ ಹೇಗೂ ಒಳ್ಳೆಯದಾಗುತ್ತದೆ, ಆ ಒಳ್ಳಿತನ್ನು ಮಂದಬುದ್ಧಿಗಳಿಗೆ ಅವರ ಮಾತಿನಲ್ಲೇ ಹೇಳೋಣ ಎಂಬುದು ಅದರ ಆಶಯ; ಔಷಧವನ್ನು ಜೇನು ಎಂದ ಹಾಗೆ. ಭಯ-ಲೋಹ-ಮೋಹ ವಿವರ್ಧಕವಾದ ಭಾವನೆಗಳನ್ನು ತದ್ವ್ಯಂಜಕ ಕಲ್ಪಾದಿಗಳನ್ನು ತಿರಸ್ಕರಿಸಿಯೋ ಸಂಸ್ಕರಿಸಿಯೋ ಪ್ರೇಮ-ಸ್ನೇಹ-ಸಂತೋಷ ವರ್ಧಕಗಳಾದ ಕಲ್ಪಗಳಾಗಿ ಪರಿವರ್ತಿಸಿ ನಾವು ತೇಜಸ್ವಿಗಳಾಗಬಹುದು, ಬುದ್ಧಿಗೆ ಆತಿಥೇಯರಾಗಬಹುದು. ನಮ್ಮವೆಲ್ಲವನ್ನೂ ಕೆಲಸಕ್ಕೆ ಬಾರದವೆಂದು ನೂಕಿ ಮಿಕ್ಕವರ ಕೆಲಸಕ್ಕೆ ಬಾರದವೂ ನಮ್ಮವಕ್ಕಿಂತ ಏತರಲ್ಲೂ ಹೆಚ್ಚಲ್ಲದವೂ ನಮ್ಮ ಸ್ವಂತಕ್ಕೆ ಒಗ್ಗದವೂ ಆದ ಕಲ್ಪ ಆಗಮ ಆಚಾರಗಳನ್ನು ಅವುಗಳ ಸ್ಥಾನಗಳಲ್ಲಿ ಕೂರಿಸುವುದು ಪ್ರಬುದ್ಧ ಜನಾಂಗಕ್ಕೆ ಯೋಗ್ಯವಲ್ಲ, ಎನಿಸುತ್ತದೆ. ಸಮಾಜಿಕ ಮತ್ತು ರಾಷ್ಟ್ರೀಯ ಹಬ್ಬ ಹರಿದಿನಗಳೂ ಕಲ್ಪಾಗಮಗಳೂ ಪರಿಷ್ಕಾರ ಯೋಗ್ಯವೇ ಹೊರತು ತ್ಯಾಜ್ಯಗಳಲ್ಲ. ಇವನ್ನು ಬೇಕಾದರೆ ನಮ್ಮ 'ಆತ್ಮ'ವೃಕ್ಷದ ಒಳ ತೊಗಟೆಗಳು ಎಂದು ಕರೆಯಿರಿ. ಮಹಾವೃಕ್ಷಗಳನ್ನು ಉರುಳಿಸಲು ತೊಗಟೆ ಸುಲಿಯುವುದೊಂದು ಉಪಾಯ. ನಮಗೆ ಅನಾತ್ಮರಾಗಲು ಇಷ್ಟವಿಲ್ಲವಷ್ಟೆ. ನಮ್ಮ ದೇಶಕ್ಕೆ ಒಗ್ಗಿರುವ ನಮ್ಮ ಹಬ್ಬಗಳ ಮತ್ತು ದೇವಸ್ಥಾನಗಳ ವಿಷಯದಲ್ಲಿ ನಮ್ಮ ಔದಾಸೀನ್ಯ ಮಾರಕವಲ್ಲವೆ? ಅವುಗಳನ್ನು ನಮ್ಮ ಹರ್ಷವರ್ಧನಕ್ಕಾಗಿ ಬಳಸಲು ಯತ್ನಿಸಿ ಒಂದು ಹೊಸ ದೋಹಳ ಶಾಸ್ತ್ರವನ್ನು ಕಲ್ಪಿಸಬೇಕಲ್ಲವೆ?

ನಾನು ಇನ್ನು ಈ ವಿಚಾರವನ್ನು ಬೆಳಸಬಾರದು. ಗೃಹಿಣಿ ಸೂಚಿಸುವಂತೆ ಸಮಯವಾಯಿತು ಸ್ನಾನಾದಿ ಆಹ್ನೀಕಗಳಿಗೆ. ಈ ಪ್ರಾಚೀನೋಕ್ತಿಯನ್ನು ನೆನೆದು ಲೇಖನಿಯಿಳಿಸುವುದು ಸೂಕ್ತ:

> ಪಾರ್ಶ್ವಸ್ಥಬೋಧಿತಾಃ ಸಂತಃ ಪೂರ್ವಾಚಾರಕ್ರಮಾಗತಾನ್
> ಆಚಾರಾನಾಚರಂತ್ಯೇವ ಸುಪ್ತಬುದ್ಧವದಕ್ಷತಾಃ

ಸತ್ಪುರುಷರು, ತಾವು ಗಾಸಿಗೊಳ್ಳದೆಯೇ, ಕ್ರಮಾಗತವಾದ ಪೂರ್ವಾಚಾರಗಳನ್ನು, ಪಕ್ಕದವರು ಜ್ಞಾಪಿಸಲು, ನಿದ್ದೆ ತಿಳಿದೆಚ್ಚತ್ತಂತೆ, ಆಚರಿಸಿಯೇ ಆಚರಿಸುತ್ತಾರೆ. ತಮಗೆ ಅವುಗಳಿಂದ ಏನೂ ಉಪಯೋಗವಿಲ್ಲವೆಂದು ತ್ಯಜಿಸುವುದಿಲ್ಲ.

ಮೌನ

ಮಾಗಿ ಕಳೆದಿದೆ. ಮಧ್ಯಾಹ್ನದ ಹೊತ್ತು ಬಿಸಿಲು ಚುರುಕಾಗಿದೆ. ಊಟವಾದ ಮೇಲೆ ಜಗಲಿಯಮೇಲೆ ಕುಳಿತು ಬಿಸಲಿಗೆ ಬೆನ್ನನ್ನು ಆನುವ ಸುಖಕಾಲ ಮುಗಿಯಿತು. ಈಗ ನೆರಳು ಹಿತ ; ಆದರೆ ಬಿಸಿಲಿನಲ್ಲಿ ಬತ್ತವನ್ನು ಆರಹಾಕಲು ಒಳ್ಳೆಯ ಸಮಯವಿದು. ಅಜ್ಜಿ ಹಾಗೆ ಒಂದು ಕೋಲನ್ನು ಕೈಯಲ್ಲಿ ಹಿಡಿದು ಕಾವಲು ಕುಳಿತಿದ್ದಾಳೆ ಜೂಗಡಿಸುತ್ತಾ. ಆರಹಾಕಿದ ಬತ್ತಕ್ಕೆ ನೂರು ಗುಬ್ಬಚ್ಚಿಗಳು ಮುಸುರುತ್ತವೆ. ಅವು ಸದ್ದಿಲ್ಲದೆ ತಮ್ಮ ಆಹಾರ ಸಂಗ್ರಹವನ್ನು ಮಾಡಬಾರದೆ ? ಅವು ಚಿಂವುಗುಟ್ಟಿ ಮುದುಕಿಯನ್ನು ಎಬ್ಬಿಸುತ್ತವೆ. ಆಕೆ ಎಚ್ಚತ್ತು ಲ್ಹೋ ಎಂದು ಕುಳಿತಲ್ಲಿಯೇ ಕೋಲೆತ್ತುತ್ತಾಳೆ. ಗುಬ್ಬಿಗಳು ಪುರ್ರೆಂದು ಹಾರಿಹೋಗುತ್ತವೆ. ಹಾಗೆಯೇ ನನ್ನ ಮನಸ್ಸನ್ನು ಬಯಲಿಗೆ ತೆರವುಮಾಡಿ ನಿಶ್ಚಿಂತನಾಗಿ ಆರಾಮ ಕುರ್ಚಿಯ ಮೇಲೆ ಕುಳಿತಿರುವಾಗ ಅನೇಕ ಆಲೋಚನೆಗಳೂ ಭಾವನೆಗಳೂ ತಮ್ಮ ಚಿಂವುಗುಟ್ಟಿಕೆಯೊಡನೆ ಅದನ್ನು ಮುತ್ತಿಕೊಳ್ಳುತ್ತವೆ. ಎಚ್ಚತ್ತು ನಾನು ನನ್ನ ಪೇನವನ್ನೆತ್ತಿದಕ್ಷಣ ಅವೆಲ್ಲ ಪುರ್ರೆಂದು ಹಾರಿಹೋಗಿಬಿಡುತ್ತವೆ ; ಮನಸ್ಸು ಮೊದಲಿನಂತೆ ಬರಿದಾಗುತ್ತದೆ. ಹಾಗಾಗಿದೆ ನನ್ನ ಸ್ಥಿತಿ ಈಗ. ಮೌನದ ಎಷ್ಟೊಂದು ಭಾವನೆಗಳು ನನ್ನ ತಲೆಯಲ್ಲಿ ಸುಳಿದು ಹೋಗಿಲ್ಲ ನನ್ನ ಪ್ರಾತಸ್ಸಂಚಾರಗಳಲ್ಲಿ. ಈಗ ಅವೊಂದೂ ನನ್ನ ನುಡಿಯಬಲೆಗೆ ಬೀಳವು, ಪೇನದ ನಿಶ್ಶಬ್ದ ಚಂಕ್ರಮಣಕ್ಕೂ ಸಿಕ್ಕವು. ಅವಕ್ಕೆ ಮೌನವಾಗಿ ಕುಳಿತು ಸುಮ್ಮನೆ ಹೊಂಚು ಕಾಯಬೇಕು. ಆದರೆ ಆಗ ಪೇನ ಯಾರಿಗೆ ಬೇಕು ?

ಶಬ್ದಗಳು ತಮ್ಮ ನಾದಸ್ವರೂಪವನ್ನು ಮರೆಸಿ ಅರ್ಥಸ್ವರೂಪವನ್ನು ಮಾತ್ರ ಮೆರೆಸುತ್ತಾ ತಲೆಯಲ್ಲಿ ಸುಳಿದಾಡುವ ಚೆಂದವೇ ಚೆಂದ. ಇವುಗಳ ಈ ಸ್ವರೂಪವನ್ನು ಚಿತ್ರಗುಪ್ತ ಮಾತ್ರ ಹಿಡಿದಿಡಬಲ್ಲ. ಆದರೆ ಆತ ಯಮಧರ್ಮರಾಯನ ನ್ಯಾಯಕ್ಕೆ ಸಲ್ಲುವ ಪಾಪ ಪುಣ್ಯ ಎಂಬ ಗಣನೆಗೆ ಸಿಕ್ಕುವ ಆಲೋಚನೆಗಳನ್ನು ಮಾತ್ರ ಲೇಖಿಸಿ ಒಕ್ಕಣಿಸಿಯಾನು. ಸುಂದರ–ಅಸುಂದರ ಭವ್ಯ–ಅಭವ್ಯಗಳ ಗೋಜಿಗೆ ಆತ ಹೋಗಲಾರ. ಅಂಥ ಒಬ್ಬ ರಸಿಕ ಛಾಯಾಗ್ರಾಹಿ ಇದ್ದಿದ್ದರೆ ನನ್ನ ಎಷ್ಟೊಂದು 'ಅಶ್ರುತಗಾನ'ಗಳನ್ನು ಆತ ರೇಖಿಸಿಕೊಂಡು ಗಂಧರ್ವರಿಗೆ

ಒಪ್ಪಿಸಿ ಅವನನ್ನು ನಾಚಿಸಿಬಿಡುತ್ತಿದ್ದನೋ. ಹೋಲಿಕೆಗೆ ಬಾರದಂಥವು ಅವು. ಅವನ್ನು ನಡುವಗಲಿನ ಮತ್ತು ಸಂಜೆಯ ನೀಲಾಕಾಶದ ಮಹಾ ಮೌನಕ್ಕೆ ಅದೆಷ್ಟೋ ಬಾರಿ ಅರ್ಪಿಸಿಬಿಟ್ಟಿದ್ದೇನೆ, ಅದಕ್ಕೂ ನನ್ನ ಹಂಗು ಸ್ವಲ್ಪ ಇರಲಿ ಎಂದು. ಅದೇನು ಇಂದು ಹುಟ್ಟಿ ನಾಳೆ ದಿವಾಳಿಯಾಗುವ ಬ್ಯಾಂಕೆ? ಕವಿಗಳಿಗೆ ಸ್ಫೂರ್ತಿ ಬರುವುದು ಎಲ್ಲಿಂದ, ಪ್ರವಾದಿಗಳಿಗೂ ದೈವಾವೇಶ ಬರುವವರಿಗೂ ಭವಿಗಳನ್ನು ಉದ್ಧರಿಸುವ ಸ್ಫುರಿತಗಳು? ನನಗೆ ನಡುವಗಲಿನ ಗಾಢನೀಲಾಕಾಶ ಒಂದು ಮಹಾಮೌನನಿಧಿಯಂತೆ ಗೋಚರಿಸುತ್ತದೆ. ಅದಕ್ಕೆ ಕಣ್ಣಿತ್ತಿ ಮನಸ್ಸನ್ನು ಮುಳುಗಿಸಿದರೆ ಒಂದು ಪ್ರಯಾಗಸ್ನಾನದಷ್ಟು ಶುಚಿತೆ ಮತ್ತು ತಣ್ಪಿನ ಅನುಭವ ನನಗಾಗುತ್ತದೆ. ಆದರೆ ನಾನು ಮುತ್ತುಮುಳುಗನಲ್ಲ. ಆ ಕಲೆ ನನಗೆ ಗೊತ್ತಿಲ್ಲ. ಅರಿತಿದ್ದರೆ ಈ ಮೌನದ ಕಡಲಿನಲ್ಲಿ ಮುಳುಗಿ ಅನೇಕ ರತ್ನಗಳನ್ನು ಮೇಲಕ್ಕೆ ತಂದು ಎರಡು ಗಾಜಿನ ಬಳೆಗಳಿಗೆ ಮಾರಿಬಿಡುತ್ತಿದ್ದೆ. ಆದರೆ ಅದೇ ಇರುಳಿನಲ್ಲಿ ಅನೇಕ ನಕ್ಷತ್ರಗಳು ಝಗಝಗಿಸುತ್ತಿರುವಾಗ ಆ ಆಕಾಶದ ಮೌನ ನನ್ನ ಶ್ರವಣೇಂದ್ರಿಯದ ಮಿತಿಯನ್ನು ಸೂಚಿಸುತ್ತದೆಯೇ ಹೊರತು ಮೌನವನ್ನಲ್ಲ. ತಾರೆಗಳ ಮಿಡುಕು ಹೊಳವುಗಳು ಸಂತೆಯ ಗದ್ದಲವನ್ನೂ ಯಾತ್ರಾ ಘೋಷವನ್ನೂ ನೆನವಿಗೆ ತರುತ್ತವೆ. ಆಗ ನನಗೆ ನನ್ನ ಸುತ್ತಮುತ್ತ ಹಬ್ಬಿರುವ ಕತ್ತಲಿನ ಜೀರುಂಡೆ ಸ್ವರಗಳ ಅಂಚುಗಟ್ಟಿರುವ ಮೌನ ಹಿತ.

ಇದೇನು ಮೌನವನ್ನು ಕುರಿತು ಮಾತುಗೊಳ್ಳಲು ಹೊರಟನಲ್ಲ, ಇವನಿಗೆ ಮೌನದ ಜ್ಞಾನವೇ ಇರಲಾರದು ಎನ್ನಬೇಡಿ. ನಿಜ, ಮೌನ ಜ್ಞಾನದ ಲಕ್ಷಣ. ಜ್ಞಾನಿ ಎನಿಸಿಕೊಳ್ಳಲೆಂದೇ ಅನೇಕರು ಮೌನವ್ರತವನ್ನೂ ಆಚರಿಸುತ್ತಾರೆ. ಅಲ್ಲದೆ, ಈ ಲೇಖನ ಅಷ್ಟೇನೂ ಸದ್ದು ಮಾಡುತ್ತಿಲ್ಲ. ಮಹಾತ್ಮರೂ ತಮ್ಮ ಮೌನಕ್ಕೆ ಬರಹವನ್ನು ತಪ್ಪಿಸಿರಲಿಲ್ಲ. ವಾಚಾಲತ್ವ ಕಡಮೆಯಾದಷ್ಟೂ ಪದವಿ ಪ್ರತಿಷ್ಠೆ ಶ್ರೀಮಂತಿಕೆ ಜ್ಞಾನವಂತಿಕೆ ಹೆಚ್ಚುವ ವಿಶ್ವವಿದ್ಯಾನಿಲಯಗಳ ಲೆಕ್ಚರರ್ ರೀಡರ್ ಪ್ರೊಫೆಸರ್ ವ್ಯವಸ್ಥೆಯಲ್ಲೂ ಲೇಖನಗಳಿಗೆ ಮೇಲುಗಾರಿಕೆ ಇದ್ದೇ ಇದೆ. ಅಷ್ಟೇಕೆ, ತಮಗೆಂದೇ ಸೃಷ್ಟವಾದ ಶ್ರವಣೇಂದ್ರಿಯನ್ನು ವಂಚಿಸಿ ಚಕ್ಷುರ್ವಿಷಯಗಳಾಗಿ ವಿಹರಿಸುವ ಶಬ್ದಗಳ ವಿಲಾಸಗೃಹಗಳಿಗೆ ಈಗಿನಷ್ಟು ಪ್ರಾಶಸ್ತ್ಯ ಮತ್ತಾವ ಕಾಲದಲ್ಲಿತ್ತು? ಈ ಪುಸ್ತಕಭಾಂಡಾರಗಳನ್ನು ವ್ಯಾಪಿಸಿರುವ ಮೌನ ಅತ್ಯಂತ ವಿಸ್ಮಯ ಜನಕವಾಗಿದೆ. ಅಲ್ಲಿನ ಲಕ್ಷ ಗ್ರಂಥಗಳೆಲ್ಲ ವಾಚಾಲವಾದರೆ ಏನು ಗತಿ?

ಸಮಸ್ತ ಜ್ಞಾನವನ್ನೂ ಸೂರೆಗೊಳ್ಳಲೆಳಸುವ ಆ ಮಹಾ ತುಮುಲಘೋಷಕ್ಕೆ ಲೋಕದ ಯಾವ ಎಂಥ ಗದ್ದಲ ತಾನೆ ಈಡಾದೀತು ? ಯಾವ ಶ್ರೋತ್ರವಂತ ಅಲ್ಲಿಗೆ ಕಾಲಿಕ್ಕಿ ನಿಲ್ಲಬಲ್ಲ? ಆಗ ಇಂಗ್ಲಿಷ್‌ಭಾಷೆ ನಮ್ಮಲ್ಲಿಯೇ ನಿಲ್ಲಲಿ ಎಂದು ಯಾವ ಧೀರ ಎದೆ ತಟ್ಟಿಕೊಂಡು ಹೇಳುತ್ತಿದ್ದ ? ಆದರೆ ಅವುಗಳ ನಾದಸ್ವರೂಪ ವನ್ನೆಲ್ಲ ಅವನ್ನು ಅಚ್ಚಿಟ್ಟ ಯಂತ್ರ ಹೀರಿಕೊಂಡುಬಿಟ್ಟಿದೆ, ಛಾಯೆಯನ್ನು ಮಾತ್ರ ನಮ್ಮಲ್ಲಿಗೆ ಅಟ್ಟಿದೆ. ಈ ಛಾಯೆಗಳೂ ಸದ್ದಿಲ್ಲದೆ ಒಳಸರಿಯುತ್ತವೆ. ಮೂಕವಾಗಿ ಬಿದ್ದಿವೆ ಸ್ವಲ್ಪಕಾಲ, ಸದ್ದಿಲ್ಲದೆಯೇ ಸರಿದುಹೋಗುತ್ತವೆ ಯಾರ ಕಿವಿಯನ್ನೂ ತಲೆಯನ್ನೂ ಅಷ್ಟಾಗಿ ಸುಸ್ತು ಮಾಡಿ ಕೆಡಿಸದೆ. ನಡುವಗಲಿನ ನಿರ್ಮಲಾಕಾಶದ ಮೌನವನ್ನು ಬಿಟ್ಟರೆ ನನಗೆ ಇಷ್ಟೊಂದು ಪರಶಬ್ದಗಳನ್ನು ಸ್ತಬ್ಧಗೊಳಿಸಿರುವ ಈ ಗ್ರಂಥ ಭಂಡಾರದ ಮೌನ ಅಚ್ಚರಿತರುತ್ತದೆ. 'ಜ್ಞಾನಾ ನ್ಮೌನಂ' ಎಂಬ ಮಾತು ಅವುಗಳ ವಿಚಾರದಲ್ಲಿ ಅಕ್ಷರಶಃ ನಿಜ.

ನಾದದ ಸಹಾಯವಿಲ್ಲದೆ ಆಲೋಚನೆಗಳೂ ಭಾವನೆಗಳೂ ಸಂಕ್ರಮಿಸಲೊ ಲ್ಲವು ಎಂಬುದನ್ನು ನಂಬಬೇಡಿ. ಅದಕ್ಕೆ ತಾರ್ಕಣೆ ಎಷ್ಟೋ ವೇಳೆ ನನಗೆ ಸಿಕ್ಕಿದೆ. ಹಾಗಿದ್ದಿದ್ದರೆ, ಶಕುನ ಶಾಸ್ತ್ರವೇ ಹುಟ್ಟುತ್ತಿರಲಿಲ್ಲ. ನನ್ನಾಲೋಚನೆಗಳೂ ಕಾರ್ಯಾವಸರವೂ ಅದರ ಸಾಮಯಿಕ ಭವಿಷ್ಯವೂ ಚೆಕ್ಕಿಗೆ ತಿಳಿಯದೇ ಇದ್ದಿ ದ್ದರೆ, ಅದೇಕೆ ನಾನು ಎದ್ದು ಹೊರಟಾಗ ಅಡ್ಡಬರುತ್ತಿತ್ತು? ಬೇಕೇ ಬೇಡವೇ ಎಂಬ ಸಂದೇಹದಲ್ಲಿದ್ದಾಗ ಬೇಡ ಎಂದು ಹಲ್ಲಿ ಏಕೆ ಲೊಚಗುಟ್ಟುತ್ತಿತ್ತು ? ಆದರೆ ಯೋಗಿಗಳು ಹಾಗೂ ಪವಾಡ ಪುರುಷರ ವಿಷಯದಲ್ಲಿ ಹೊರತು, ಹಗಲಿನ ಬೆಳಕು ಮನುಷ್ಯರಲ್ಲಿ ಈ ಹರಿವನ್ನು ನಿರೋಧಿಸುತ್ತದೆ ಎಂದು ನನ್ನ ತಿಳುವಳಿಕೆ. ಸಂಜೆಯಲ್ಲೋ ಮುನ್ನಿರುಳಿನಲ್ಲೋ ಒಬ್ಬರ ಸನಿಯದಲ್ಲಿ ಒಬ್ಬರು ಮೌನವಾಗಿ ಕುಳಿತು 'ಅಲ್ಲವೇ', 'ಆಯಿತೇ' 'ಅಯ್ಯೋಪಾಪ' 'ಏನು ಮಾಡೋಣ' ಎಂದು ಮುಂತಾಗಿ ನಾನು ನನ್ನ ಯೋಚನೆಗಳ ನಡುವೆ ಥಟ್ಟನೆ ಎನ್ನುವಾಗ ನನ್ನಾಕೆ ಸಮಂಜಸವಾಗಿಯೇ ಉತ್ತರ ಕೊಡುತ್ತಾಳೆ, ಮೊದಲಿನಿಂದಲೂ ನನ್ನ ಮನಸ್ಸಿನ ಹಿಂದೆಯೇ ಹೆಜ್ಜೆಯಿಟ್ಟುಕೊಂಡು ಬಂದವಳಂತೆ. ಇದು ನಮಗೆ ಅಭ್ಯಾಸವಾಗಿ ಹೋಗಿದೆ. ನಮ್ಮಿಬ್ಬರಿಗೂ ಮಾತಿಗಿಂತಲೂ ಹೆಚ್ಚಾಗಿ ಮೌನವೇ ಒಗ್ಗಿರುವಂತಿದೆ. ಚಿಂತೆಯ ವಿನಿಯೋಗಕ್ಕೆ ಮೌನ, ಆಕ್ಷೇಪಣೆಗೆ ಮಾತು.

ಆಕ್ಷೇಪಣೆಗೆ ಮಾತು ಎಂದೆನಲ್ಲ. ಆ ಬಳಿಕದ ಮೌನದ ರೌದ್ರ ಸ್ವರೂಪ

ವನ್ನು ವರ್ಣಿಸುವುದೆಂತು? ಅದು ಬೆಂಕಿ, ಅದರ ತಾಪವೇ ತಾಪ. ಅದು ನಮ್ಮ ಮನಸ್ಸನ್ನು ಸುಟ್ಟು ಕರಿಕು ಮಾಡಿಬಿಡುತ್ತದೆ. ಕರಿಕುಮಾಡುತ್ತದೋ ಕರಗಿಸುತ್ತದೋ? ಮನೆಯಲ್ಲಿ ಸ್ವಲ್ಪಹೊತ್ತು ನೆಮ್ಮದಿಯಾಗಿ ತಮ್ಮ ಪಾಡಿಗೆ ತಾವು ಇರಬಯಸುವ, ಕ್ಲಬ್ಬು ಇತ್ಯಾದಿಗಳ ಹವ್ಯಾಸವಿಲ್ಲದ, ಗಂಡಂದಿರು ಗೃಹಣಿಯ ಮೌನವನ್ನು ಇದಿರಿಸುವುದು ಕಷ್ಟ. ಅದು ಆಕೆಯ ಪ್ರತಿಹತೇಚ್ಛೆಯ ಮುಳಿಸಿನ ತೀಕ್ಷ್ಣಯುಧ, ನಿಮ್ಮ ನೆಮ್ಮದಿಯನ್ನು ತೀವ್ರವಾಗಿ ಘಾತಿಸುವಂಥದು. ಬ್ಯಾಂಕಿನಲ್ಲಿ ಹಣ ಅಷ್ಟಿಷ್ಟಿದ್ದರೂ ಚೆಕ್‌ಬುಕ್ ನಿಮ್ಮ ವಶದಲ್ಲಿಲ್ಲದೆ, ಜೇಬಿದ್ದರೂ ಪರ್ಸ್ ಇಲ್ಲದೆ, ಪೆಟ್ಟಿಗೆಯಿದ್ದರೂ ಬೀಗವಿಲ್ಲದೆ ಇರುವ 'ಯಜಮಾನ'ರಿಗೆ ಈ ಮೌನದ ಕಿರುಕುಳ ಅಷ್ಟಾಗುವುದಿಲ್ಲ. ಅಂಥವನ ಪ್ರತಿಮೌನವೂ ಅಬ್ಯಾಪಾರಿಯೇ ಆಗಿರುತ್ತದೆ, ಘಾತಕವಲ್ಲ. ಹಿಡಿತವುಳ್ಳ ಆದರೆ ದಾಕ್ಷಿಣ್ಯಪರರಾದ ಗಂಡಂದಿರಿಗೆ ಈ ಮೌನದ ಮುಳ್ಳುಮುರಿತಗಳು ಹೆಚ್ಚು. ಅಲ್ಲದೆ ಎಲ್ಲ ಮಹಿಳೆಯರಿಗೂ ಪತಿಗಜಾಂಕುಶರೂಪವಾದ ಇಂಥ ಮೌನಪ್ರಹರಣ ವಶವಾಗಿಲ್ಲ. ಎಲ್ಲೋ ಕೆಲವರು ಕುಶಲರ ಸ್ವತ್ತು ಅದು. ಶ್ರೀಕೃಷ್ಣನಿಗೆ ಈ ಮುಳ್ಳುಮುರಿತಗಳು ಸತ್ಯಭಾಮೆಯಿಂದ ದೊರೆತಿರುವಷ್ಟು ರುಕ್ಮಿಣಿಯಿಂದಿರಲಾರದು. ಈ ಮೌನದಿಂದ ಭಾಮೆಯ ತರುವಾಯದ, ಎಂದರೆ ಸಾಂತ್ವನದಾಚೆಯ, ಮೆಲುನಗೆಗೆ ಅಪೂರ್ವವಾದ ಮೋಹಕತೆ ಯೊದಗಿರಬೇಕು. ರಾಮ ಅಷ್ಟು ಕಿಡಿಗೇಡಿಯಾಗಿದ್ದರೂ ಸೀತಾದೇವಿ ಮೌನದಿಂದ ಮುನಿಸಿಕೊಂಡಿದ್ದು ಕಾಣೆ. ಕಾಡಿಗೆ ಹೋಗುವಾಗಲೂ ಅತ್ತು ಕರೆದು ಗೋಗರೆದಳೇ ಹೊರತು ತುಟಿ ಬಿಗಿ ಹಿಡಿಯಲಿಲ್ಲ. ಪಾಪ, ಕೊನೆಗಾಲದಲ್ಲೂ ಅಳುತ್ತಲೇ ಎಲ್ಲರನ್ನೂ ಎಚ್ಚರಿಸುತ್ತಲೇ ಮೊರೆಗೊಡುತ್ತಲೇ ಭೂಮಿಗಿಳಿದು ಹೋದಳು. ಆಗ ರಾಮನನ್ನೂ ಮೌನ ಬಿಗಿದಿರಲಿಲ್ಲ; ಅತ್ತ, ಕೆರಳಿದ, ರೇಗಿಬಿದ್ದ. ಆದರೆ ಆಕೆಯ ಮೊದಲನೆಯ ದಿಬ್ಯದಲ್ಲಿ ಅವನನ್ನೂ ಅವನ ಸುಹೃತ್ ಪರಿವಾರವನ್ನೂ ಆಕ್ರಮಿಸಿದ್ದ ಮೌನ, ಲಕ್ಷ್ಮಣನಿಗೆ ಚಿತೆಗೈಯಲು ಆಜ್ಞಾಪಿಸಿದ್ದುದು, ಅತಿ ಭಯಂಕರವಾಗಿಯೂ ಬಹುಭಾವ ಸಂಕೀರ್ಣವಾಗಿಯೂ ಇದೆ. 'ನಹಿ ರಾಮಂ ತದಾ ಕಶ್ಚಿತ್ ಕಾಲಾಂತಕಯಮೋಪಮಂ। ಅನುನೇತುಮಥೋ ವಕ್ತುಂ ದ್ರಷ್ಟುಂ ವಾಪ್ಯಶಕತ್ ಸುಹೃತ್' (೬, ೧೧೮, ೨೨). ಆದರೆ ಆತನ ಪ್ರೇಮುಲ ಸ್ವಭಾವಕ್ಕೆ ಒಗ್ಗದಂಥ ಆಗಿನ ಸಾಮಾಜಿಕ ಸಂಸ್ಕಾರೋಪಲಬ್ಧವಾದ ಕಾಠಿಣ್ಯದ ಈ ಮೌನ ಸೀತೆ ಬೆಂಕಿಗೆ ಹಾರಿದಾಗ ಮುರಿದು ಆತನ ಕಂಗಳು ಕಣ್ಣೀರಿನಿಂದ

ತೊಯ್ದವು. ಮತ್ತೊಬ್ಬಳು ಮಹಾಮಾನವತಿ ಹಾಗೂ ಮೌನವತಿ ಯಾರೆಂದರೆ ಕೈಕೆ. ಆಕೆಯ ಮಾನಾಗಾರದ ಮೌನ ದಶರಥನನ್ನು ಎಂಥ ವ್ಯಾಕುಲಗರ್ತದಲ್ಲಿ ಕೆಡವಿತು ! ಮತ್ತು ತನ್ನ ವಾತ್ಸಲ್ಯ ಪೂರಿತವಾದ ಮಾತುಗಳಿಗೆ ಭರತ ಶಿರ ಮುಳಿದು ಬೈದಾಗಿನಿಂದ ಆಕೆ ಮೌನದಲ್ಲಿ ಪುನಃ ಮುಳಗಿದವಳು ಚೇತರಿಸಿ ಕೊಂಡದ್ದು ಎಲ್ಲಿ ಕಂಡುಬರುತ್ತದೆ ರಾಮಾಯಣದಲ್ಲಿ? ಅದನ್ನು ವರ್ಣಿಸುವುದಕ್ಕೆ ಒಂದು ಮಹಾಕಾವ್ಯವೇ ಬೇಕಾಗುತ್ತದೆ. ಇಂಥ ಮೌನಗಳು ಎರಡಲಗಿನ ಕತ್ತಿ ಗಳಂತೆ.

ರುದ್ರಮೌನ ಹೀಗೆ ಕೆಲವು ಸ್ವಭಾವಗಳಿಗೆ ಸಂಕ್ರಮಿಸುತ್ತವೆ. ಇದು ಸ್ತ್ರೀಯರಿಗೆ ಮಾತ್ರ ಮೀಸಲಲ್ಲ. ನನ್ನ ಕಂಡರೇಕೋ ಆಗದ ಒಬ್ಬ ಗಂಡಸಿನ ರುದ್ರಮುಖದ ಭೀಕರ ಮೌನದೃಷ್ಟಿ, 'ನಿರ್ದಹನ್ನಿವ ಚಕ್ಷುಷಾ' ನನ್ನ ಕಣ್ಣನ್ನು ಒಂದು ದಿನ ಸೋಕಿತು ; ಅದರ ನೆನವು ಇನ್ನೂ ನನ್ನೆದೆಯನ್ನು ನಡುಗಿಸುತ್ತದೆ. ಪಾಪ, ದೃಷ್ಟಿಯುದ್ಧಕ್ಕಾಗಿ ನಿಂತ ಆ ಅಣ್ಣ ತಮ್ಮಂದಿರು ಭರತ ಬಾಹುಬಲಿಗಳ ಮೌನದಲ್ಲಿ ಈ ತೀವ್ರತೆ ಇದ್ದಿರಬಹುದೇ ? ನನಗೆ ನಂಬಿಕೆಯಿಲ್ಲ. ಅದು ಒಬ್ಬನ ಪೌರುಷವನ್ನು ಮತ್ತೊಬ್ಬ ದಮಿಸಲೆಳಸಿದ ದೃಷ್ಟಿ ಪಾತಗಳು, ಅಷ್ಟೆ. ಅವುಗಳಲ್ಲಿ ತೀವ್ರ ದ್ವೇಷವಿದ್ದಿರಲಾರದು. ಇಂಥ ಮೌನ ಬೈಗುಳದ ಮಾತುಗಳಿಂದ ಸಡಲಿಸಿ ದರೆ ಇಬ್ಬರಿಗೂ ಕ್ಷೇಮ ಎನ್ನಬೇಕು, ಅದೊಂದು ವರವೇ ಸರಿ. ಬೈಗುಳ ರೋದನ ಗಳು—ಇವೇ ಮೌನೋಪಶಾಮಕಗಳು. ಅದು, ಶೀತಜ್ವರದ ಮೈ ಬೆವರಿದಂತೆ, ಗುಣಮುಖವಾಗುವ ಸೂಚನೆ. ನಿಮ್ಮ ಮನೆಯಲ್ಲಿ ಯಾರಲ್ಲಿಯಾದರೂ ಮೌನದ ಕುರುಹು ಕಂಡರೆ, ಕ್ಲಬ್ಬಿಗೆ ಹೋಗಿಬಿಡಿ, ಅದು ಹಣ್ಣಿಗೆ ಬರಲಿ, ಆಗ ಕೆರಳಿಸಿರಿ, ಬೈಯಿರಿ, ಬೈಯಿಸಿಕೊಳ್ಳಿರಿ. ನಾದ ಮೌನಕ್ಕೆ ಶತ್ರು ; ಕಣ್ಣೀರು ಮಾತ್ರ ಅದನ್ನು ತಣ್ಣಗೆ ಮಾಡಬಲ್ಲದು. ಇವೆರಡನ್ನೂ ಬರಿಸುವ ಈ ಚಿಕಿತ್ಸಾ ಪ್ರಯೋ ಗಕ್ಕೆ ಹಿಂಜರಿಯಬೇಡಿ.

ಜೀವಾತ್ಮಕ್ಕೆ ಎಷ್ಟು ಭಾವಮುಖಗಳಿವೆಯೋ ಅಷ್ಟು ಮುಖಗಳು ಮೌನಕ್ಕೂ ಇವೆ. ನಿರ್ವೇದ, ಗ್ಲಾನಿ, ಚಿಂತೆ, ವ್ರೀಡೆ, ಗರ್ವ, ವಿಷಾದ, ಉಗ್ರತೆ, ವಿರಕ್ತಿಯ ಉದಾಸೀನಭಾವ ಇವೆಲ್ಲವನ್ನೂ ತುಂಬ ಮಾರ್ಮಿಕವಾಗಿ ಮೌನ ವ್ಯಕ್ತಪಡಿಸು ವಷ್ಟು ಮಾತು ಪಡಿಸದು ಮನುಷ್ಯ ಮುಖದಲ್ಲಿ. ಪಾಪ, ದುರ್ವಾಸರು ಆಗಮಿಸಿ ದಾಗ ಚಿಂತಾಮಗ್ನಳಾಗಿದ್ದ ಶಕುಂತಲೆ ಎಂಥ ಕೇಡಿಗೀಡಾದಳು. ಮೌನಕ್ಕೂ

ಒಂದು ಸಮಯವುಂಟು. ಸಭೆಯನ್ನು ಪ್ರವೇಶಿಸಿದಾಗ ಶಕುಂತಲೆಯನ್ನು ದುಷ್ಯಂತ ಇದಿರುಗೊಂಡ ಬಗೆಯ ಆ ಮಾತಿಗಿಂತ ಮೌನವೇ ಹೆಚ್ಚಾದ ಔದಾಸೀನ್ಯಕ್ಕೆ ಪಡಿಯಾದುದು ಯಾವುದು? ಅಷ್ಟೇಕೆ, ನಮ್ಮ ನಿತ್ಯ ವ್ಯವಹಾರದಲ್ಲೇ ಅದು ಯಾವ ಮಾನವಂತನಿಗೆ ತಾನೇ ತನ್ನ ಚುರುಕನ್ನು ಮುಟ್ಟಿಸದು? ಗರ್ವವನ್ನು ಸೂಚಿಸುವಾಗ, ಲೋಭವನ್ನು ಸೂಚಿಸುವಾಗ, ನೀನು ಯಃಕಶ್ಚಿತ ಎನ್ನುವಾಗ, ಅದಕ್ಕೆ ಸಮಾನವಿಲ್ಲ. ನಿಮಗೆ ಚೆನ್ನಾಗಿ ಗುರುತಿದ್ದವರು ನಿಮ್ಮನ್ನು ಕಂಡರೂ ಮಾತನಾಡಿಸದೆ ಅತ್ತ ಸರಿದರೆ ನಿಮಗೇನೆನಿಸೀತು, ಅವರು ಸಾಲಗಾರರಾಗಿದ್ದ ಹೊರತು? ನೀವು ಆಪ್ತನೆಂದುಕೊಂಡಿದ್ದ ಸ್ನೇಹಿತನ ಹತ್ತಿರಕ್ಕೆ ಯಾವುದೋ ಒಂದು ಉಪಕಾರವನ್ನು ಬಯಸಿಹೋಗಿ ನಿಮ್ಮ ಅಹವಾಲನ್ನು ಮಂಡಿಸಿದಾಗ ಆತ ಸುಮ್ಮನಿದ್ದರೆ ಏನೆಂದು ಅರ್ಥಮಾಡಿಕೊಳ್ಳುತ್ತೀರಿ? ಪ್ರಾಯಶಃ ಮೊದಲೆರೆತಕ್ಕೆ ಆತ ಸಬೂಬು ಹೇಳಿಯಾನು? ಅಥವಾ ಅಲ್ಪಸ್ವಲ್ಪ ಸಹಾಯವನ್ನು ಮಾಡಿದರೂ ಮಾಡಿದನೇ, ಆತನ ಸ್ವಭಾವದಂತೆ. ಆದರೆ ಎರಡನೆಯಬಾರಿಗೆ ಮೌನವೇ ಉತ್ತರವಾದೀತು. ಹಾಗೂ ಮನೆಯಲ್ಲಿದ್ದರೂ ಇಲ್ಲವೆನಿಸಿಕೊಳ್ಳುವ ಬಗೆ ಅಥವಾ ಎಷ್ಟು ಕಾಗದಕ್ಕೂ ಉತ್ತರ ಕೊಡದಿರುವ ರೀತಿ, ಮೌನಕ್ಕೆ ಸಮವಾದದ್ದು. ನಿಮ್ಮನ್ನು ಎದುರಿಸಿದರೂ ಎದುರಿಸೀತು—ಆ ವಾಕ್ಸಂಯಮ ಆತನಿಗಿರುವುದಕ್ಕೆ ಬದಲು ನಿಮಗೆ ಇದ್ದಿದ್ದರೆ, ಅದರ ಸೊಗಸೇ ಬೇರೆ. ಹೀಗೆ ಸ್ಥಾನಪಲ್ಲಟದಿಂದ ಅದು ವಿಷ-ಅಮೃತ ಎಂಬ ಭೇದವನ್ನು ಪಡೆಯುತ್ತದೆ, ಕೆಲವು ರಸಾಯನಿಕ ವಸ್ತುಗಳಲ್ಲಿ ಪರಮಾಣುಗಳ ಸ್ಥಾನವ್ಯತ್ಯಾಸದಿಂದ ಅವುಗಳು ವಿರುದ್ಧ ಗುಣಗಳನ್ನು ಪ್ರದರ್ಶಿಸುವಂತೆ. ಆತ್ಮಶಾಲಿಯಾದ ಅರ್ಥಿಯಲ್ಲಿ ಮೌನ ಚೆನ್ನು. ಅದು ವಿಶ್ವಾಸವುಳ್ಳವನಿಗೆ ತನ್ನ ಅಹವಾಲನ್ನು ನಿಮ್ಮ ಅಭಿಮಾನವನ್ನು ಕೆಡಿಸದೆ ಹೇಗೋ ಮುಟ್ಟಿಸುತ್ತದೆ. ಅಲ್ಲದೆ ಕೆಲವು ಕೇಡುಗಳೂ ವಿಷಮ ಸಂದರ್ಭಗಳೂ ನಮಗೆ ಮಾತಿಲಿತನವನ್ನು ಕವಿಸುತ್ತವೆ. ದುಶ್ಶಾಸನ ದ್ರೌಪದಿಯ ಸೀರೆಯನ್ನು ಸೆಳೆದಾಗ ಭೀಷ್ಮಾದಿಗಳೆಲ್ಲ ತಲೆತಗ್ಗಿಸಿ ಮೌನದಿಂದಿರಲಿಲ್ಲವೆ? ದಮಯಂತಿ ಬಾಹುಕನ ವೇಷದಲ್ಲಿದ್ದ ನಳನನ್ನು ಮೂದಲಿಸಿದಾಗ ಆತ ಮೌನದಿಂದ ಕಂಬನಿ ಸುರಿಸಲಿಲ್ಲವೆ? ಇಂಥ ವಿಷಮ ಸಂದರ್ಭಗಳಲ್ಲಿ ಉದಾರ ಪುರುಷರನ್ನೂ ಕೋಮಲ ಮನಸ್ಕರನ್ನೂ ಧರ್ಮಭೀರುಗಳನ್ನೂ ಮೌನ ಮುಸುಕುತ್ತದೆ, ಅವರವರ ನಿಸ್ಸಹಾಯಕ ಸ್ಥಿತಿಯನ್ನು ಅವರವರಿಗೆ ದ್ಯೋತನಮಾಡಿ.

ಮಾನವಲೋಕದ ಅತ್ಯಂತ ಸುಂದರವಾದ ಮೌನಸ್ವರೂಪ ಪ್ರೀತಿ ವಿಶ್ವಾಸಸೂಚಕ ಮಂದಸ್ಮಿತದಲ್ಲಿ ಬೆಳಗುತ್ತದೆ, ಪ್ರಣಯಿನಿಯ ಸನ್ನೆಸಂಕೇತಗಳಲ್ಲಿ ಪ್ರಗಲ್ಭವಾಚಾಲತೆಯನ್ನು ಪಡೆಯುತ್ತದೆ, ವಿಲಾಸಿನಿಯ ಕೋರೆನೋಟದಲ್ಲಿ ಮಿಂಚಿನೇಟುಕೊಡುತ್ತದೆ. ನಿಮ್ಮ ವಿನಯವನ್ನೂ ಕೈಂಕರ್ಯವನ್ನೂ ಕೋರುವ ಮಾನಿನಿಯ ಮೌನದಲ್ಲೂ ಸವಿಯಿಲ್ಲದಿಲ್ಲ. "ಮಮ ಶಿರಸಿ ಮಂಡನಂ ಧೇಹಿ ಪದ ಪಲ್ಲವಮುದಾರಂ" ಎಂದು ರಾಧೆಯ ಕಾಲೊದೆತವನ್ನು ತನ್ನ ತಲೆಗೆ ಶ್ರೀ ಕೃಷ್ಣ ಬೇಡಿದಾಗ ಆ ರಾಧೆಯ ಹುಸಿಮುನಿಸಿನ ಮೌನಕ್ಕೆ ಎಂಥ ಪದವಿ, ಎಂಥ ಪ್ರತಿಷ್ಠೆ, ಎಂಥ ಪ್ರಕೃಷ್ಟತೆ! ಎಳಮಗುವಿನ ನಿದ್ರಾಮೌನದ ಸ್ಮಿತವಿಲಾಸದ ಚೆಲುವೇ ಬೇರೆ. ಪ್ರಾಯಶಃ ಅದರ ಸಮಜೋಡಿಯನ್ನು ನಿಮ್ಮಿಷ್ಟದೇವರ ಉತ್ಸವ ಮೂರ್ತಿಯ ಮಂದಹಾಸದಲ್ಲಿ ಒಮ್ಮೊಮ್ಮೆ ಕಾಣಬಲ್ಲಿರಿ. ಅಥವಾ ನಿಮಗೆ ಅದೃಷ್ಟವಿದ್ದರೆ ಮಹಾತ್ಮಾಗಾಂಧಿ, ಶ್ರೀ ರಾಮಕೃಷ್ಣ, ಗುರು ಹಿರಿಯಣ್ಣ ಇಂಥ ಸಾಧುಪುರುಷರ ಸ್ಮೇರವದನದಲ್ಲಿ. ತಮ್ಮ ನಿರ್ಮಲಾತ್ಮವನ್ನೇ ನಿಮಗೆ ಎರೆದು ನಿಮ್ಮ ಸತ್ತ್ವವನ್ನು ವರ್ಧಿಸುವ ಸಾಮರ್ಥ್ಯ ಆ ಮೌನದ ಹಾಸಸ್ಫುರಿತ ದೃಷ್ಟಿ ಪಾತದಲ್ಲಿದೆ. ತಾವು ರಾಮನನ್ನು ನೋಡದಿದ್ದರೂ, ರಾಮನ ದೃಷ್ಟಿ ತಮ್ಮ ಮೇಲೆ ಬೀಳದಿದ್ದರೂ ಅಯೋಧ್ಯಾವಾಸಿಗಳಿಗೆ ಅಧನ್ಯಭಾವ ಮೂಡುತ್ತಿದ್ದಿತಂತೆ. ಮೌನದ ಈ ದೃಷ್ಟಿಪಾತದ ಅತ್ಯಂತ ಆಕರ್ಷಕವಾದ ನೋಟ ವಿದುರ ಯುಧಿಷ್ಠಿರ ಸಮಾಗಮದ ಸಂದರ್ಭದಲ್ಲಿ ನಮಗೆ ದೊರೆಯುತ್ತದೆ: "ನಿರ್ಜನವೂ ರಹಸ್ಯವೂ ಆದ ಒಂದು ಸ್ಥಳ ಸಿಕ್ಕಲು, ಅಲ್ಲಿ ವಿದುರನು ಒಂದು ಮರವನ್ನು ನೆಮ್ಮಿನಿಂತನು. ಅವನ ಮೈ ಬಹಳ ಕೃಶವಾಗಿ ಆಕಾರ ಮಾತ್ರ ಉಳಿದಿತ್ತು; ಯುಧಿಷ್ಠಿರ 'ನಾನು ಯುಧಿಷ್ಠಿರ!' ಎಂದು ತನ್ನ ಹೆಸರು ಹೇಳಿ ಮುಂದೆ ನಿಲ್ಲಲು, ವಿದುರನು ಸನ್ನೆ ಯಿಂದ ಉತ್ತರಕೊಟ್ಟು ಅವನನ್ನು ನೆಟ್ಟ ಕಣ್ಣಿನಿಂದ ದೃಷ್ಟಿಸಿ ನೋಡಿದನು. ನಾಲ್ಕು ಕಣ್ಣುಗಳೂ ಸೇರಿದವು. ವಿದುರನು ಯೋಗಬಲದಿಂದ ಯುಧಿಷ್ಠಿರನ ದೇಹವನ್ನು ಹೊಕ್ಕನು. ಅವನ ಅಂಗಾಂಗಗಳೂ ಪ್ರಾಣಗಳೂ ಇಂದ್ರಿಯಗಳೂ ಯುಧಿಷ್ಠಿರನ ಅಂಗಾಂಗಗಳಲ್ಲಿಯೂ ಪ್ರಾಣಗಳಲ್ಲಿಯೂ ಇಂದ್ರಿಯಗಳಲ್ಲೂ ಸೇರಿ ಹೋದವು. ವಿದುರನು ಬಿರುಗಣ್ಣಿನಿಂದ ಮರವನ್ನು ಒರಗಿನಿಂತವನು ಅಲ್ಲಾಡಲೇ ಇಲ್ಲ. ಅದನ್ನು ನೋಡಿ ಅವನು ನಿಶ್ಚೇತನನಾಗಿದ್ದನೆಂದು ತೋರಿತು; ಯುಧಿ ಷ್ಠಿರನಿಗೆ ತನ್ನ ಮೈಯಲ್ಲಿ ಹೊಸಬಲವೂ ತೇಜಸ್ಸೂ ಸಂಚಾರವಾಗುತ್ತಿದ್ದುದ್ದು

ಅನುಭವವಾಯಿತು."(ಎ.ಆರ್.ಕೃ. ವ.ಭಾ. ೩೭೪-೩೭೫). ಹೀಗೆ ಮೌನದಿಂದ ಸಂಕ್ರಮಿತವಾದ ಆತ್ಮತೇಜಸ್ಸನ್ನು ಪಡೆದುಕೊಳ್ಳುವುದು ಸಾಮಾನ್ಯವಾಗಿ ಲಭಿಸತಕ್ಕ ವರವಲ್ಲ. ಈ ಸೌಭಾಗ್ಯದ ರುಚಿ ನಮಗೆ ಸ್ವಲ್ಪವಾದರೂ ತಟ್ಟಲೆಂದೇ ದೇವಸ್ಥಾನಗಳನ್ನೂ ದೇವೋತ್ಸವಗಳನ್ನೂ ನಮ್ಮ ಪೂರ್ವಜರು ಕಲ್ಪಿಸಿದ್ದಾರೆ ಎಂದೆನಿಸುತ್ತದೆ. ಮೂರ್ತಿಸಾನ್ನಿಧ್ಯದ ಜೀವಂತ ಮೌನ ಅತ್ಯಂತ ವಿಸ್ಮಯಕರ ವಾಗಿದೆ ನನಗೆ. ಅದು, ನೀವೆಡೆಗೊಟ್ಟರೆ, ನಿಮ್ಮಲ್ಲಿನ ಪುರುಷೋತ್ತಮಸ್ತರಕ್ಕೆ ನಿಮ್ಮನ್ನು ಸಂಗತಿಸುತ್ತದೆ; ನೀವು ಆಶ್ಚರ್ಯದಲ್ಲಿ ಮುಳುಗುತ್ತೀರಿ, ತೇಜೋಬಲ ಗಳನ್ನು ಪಡೆದು, ನವೀಕೃತರಾಗಿ.

ಶವದ ಮೌನ ಬೇರೆ, ಶ್ಮಶಾನ ಮೌನ ಬೇರೆ. ಯಾವ ನಾದವಾದರೂ ಸರಿಯೆ ಅದರ ಮುಂದೆ ವ್ಯರ್ಥ. ಬಾಜಾ ಬಜಂತ್ರಿಗಳೊಡನೆ ಮೌನಶವದ ಶ್ಮಶಾನಯಾತ್ರೆಗಳನ್ನು ಅನೇಕವಾಗಿ ನೋಡಿದ್ದೇನೆ; ಅದರ ಮುಂದೆ ಹಿಂದೆ ಪರಮ ಭೀಕರವಾದ ರೋದನ ಧ್ವನಿಗಳನ್ನೂ ಕೇಳಿದ್ದೇನೆ. ಆ ಮೌನ ಒಂದಿಷ್ಟು ಕದಲಿದ್ದು ಕಾಣೆ.ಅದರ ಅಸ್ತಿತ್ವವೂ ನಿಮ್ಮಿಂದ ದೂರ ಸರಿಯದು.ಅದು ಘನ, ಅದು ಶೀತಲ, ಅದು ಚರಮ, ಪರಮ, ಅದರ ಅ-ಭೌತಿಕ ಅಲೌಕಿಕಮೌನಕ್ಕೆ ನಮ್ಮ ಮೌನವನ್ನೂ ಸರಿಜೋಡಿಸುವುದರಿಂದ ಅದರ ವ್ಯಕ್ತಿಮೆ ಸ್ಫುಟತರವಾಗುತ್ತ ದೆಯೋ, ಇಲ್ಲ ನಾವು ಮಾಡುವ ಸದ್ದುಗಳಿಂದ ಅದರ ಘೋರ ಹೆಚ್ಚುತ್ತದೆಯೋ ಇಳಿಯುತ್ತದೆಯೋ ನಾನು ಸ್ಪಷ್ಟವಾಗಿ ಯಾವ ಉತ್ತರವನ್ನೂ ಹೇಳಲಾರೆ. ಜತೆಗೆ, ಸತ್ತ ಮನೆಯನ್ನು ಬಹುಕಾಲ ಕವಿಯುವ ಮೌನ, ಗೋರಿ-ಸಮಾಧಿಗಳ ಮೌನ, ಹಾಳುಬಿದ್ದ ಗುಡಿ ಅರಮನೆ ಸೌಧಗಳ ಮೌನ ಇವುಗಳನ್ನು ವರ್ಣಿಸ ಹೊರಟ ಮಾತು ಎಂದಾದರೂ ಗೆಲ್ಲುವುದುಂಟೆ? ನಮ್ಮನ್ನು ಅಗಲಿಹೋದ ಪ್ರಿಯತಮರ ಅಲಭ್ಯಕಂಠಸ್ವರದ ಅಮರ್ತ್ಯಮೌನ ನಮ್ಮ ಹೃದಯದ ಸುತ್ತಲೂ ನಿರಂತರವಾಗಿ ಪರಿವೇಷಗೊಂಡಿದೆಯಲ್ಲವೆ? ಹಾಗೆಯೇ, ಪಶುಲೋಕದ ಮೌನದ ಬಗೆಯೂ ಮತ್ತೊಂದು ತರ. ಸಾಕಿದವನನ್ನು ಅನುವರ್ತಿಸಿ ತುಂಬು ನಂಬುಗೆಯಿಂದ ಕಟುಕರ ಮನೆಗೋ ಬಲಿವೇದಿಗೋ ನಡೆವ ಪಶುವಿನ ವಿಶ್ವಾಸ ಮೌನ ಮತ್ತು ಕಡುಕನು ಅದನ್ನು ಕೊಲ್ಲಲು ಬಿಗಿಮುಷ್ಟಿಯಿಂದ ಹಿಡಿದು ಮಲಗಿಸಿದಾಗ ಆ ಪರಮ ಭೀತಿಯ ದಾರುಣಮೌನ—ಒಂದಕ್ಕೊಂದಕ್ಕೆ ಎಷ್ಟು ಅಂತರ! ಈ ದ್ವಂದ್ವ ಮೌನಗಳ ಮಥನದಿಂದ ಎರಡು ಮಹಾಮತಗಳು

ಹುಟ್ಟಿದವು ; ವೈದಿಕಮತವೂ ಸಹ ಹಿಂಸ್ರಯಜ್ಞಯಾಗಾದಿಗಳಿಂದ ಮುಕ್ತವಾಗಿ ನಿರ್ಮಲಿಸಿತು.

ಬುದ್ಧ ಮಹಾವೀರಾದಿಗಳ ಸ್ಮರಣೆ ನಮ್ಮನ್ನು ಮತ್ತೊಂದು ಮೌನ ಪ್ರಕಾರಕ್ಕೆ ಒಯ್ಯುತ್ತದೆ. ಆಲೋಚನಾ ಮೌನಕ್ಕೂ ಜಪಮೌನಕ್ಕೂ ತುಂಬ ವ್ಯತ್ಯಾಸವುಂಟು. ಇಂದ್ರಿಯಾನುಭೂತಿಗಳ ಪುನಃಸ್ಮರಣೆಗಳು ಕನಸುಗಳ ರೂಪದಲ್ಲಿ, ತಾತ್ವಿಕ ಸರಣಿಯನ್ನು ಹಿಡಿದು ನಿಶ್ಶಬ್ದಶಬ್ದರೂಪದಲ್ಲಿ, ಮನೋಲೋಕ ವಿಹಾರಕ್ಕೆ ಹೊರಡುತ್ತವೆ ನಾವು ತೆರವು ಮಾಡಿದ ಅಂತಃಕರಣ ಕ್ಷೇತ್ರದಲ್ಲಿ. ಧ್ಯಾನದ ವಿಚಾರ ಬೇರೆ. ಅಲ್ಲಿ ಸ್ವೈರಿತೆಗೆ ಎಡೆಯಿಲ್ಲ. ಅಲ್ಲಿನ ನಿಶ್ಶಬ್ದಶಬ್ದಕ್ಕೆ ಪ್ರಣವ, ನಾಮ, ಮಂತ್ರಾದಿ ಸ್ಥಿರರೂಪವುಂಟು. ಚಂಚಲ ಮನಸ್ಸಿನ ಚಾಂಚಲ್ಯವನ್ನು ತಹಬಂದಿಗೆ ತರುವುದೇ ಧ್ಯಾನದ ಉದ್ದೇಶ್ಯ. ಅದಕ್ಕೆ ಜಪ ಒಂದು ಉತ್ತಮ ಸಾಧನ. ಜಪದ ಮಹಿಮೆಯನ್ನು ನೀವು ಅಷ್ಟಾಗಿ ತಿಳಿದಿಲ್ಲ. ಅದು ನನಗೆ ಪರಮೋಪಕಾರಿಯಾಗಿದೆ. ನೀವು ಯಾವುದಾದರೂ ಒಂದು ದೀರ್ಘ ಉಪನ್ಯಾಸವನ್ನು ಕೇಳಬೇಕಾದ ಪ್ರಸಂಗ ಬರಬಹುದು, ಅವರು ಹೇಳುವ ವಿಷಯವೆಲ್ಲ ನಿಮಗೆ ಪೂರ್ವಭಾವಿಯಾಗಿ ತಿಳಿದು ಹೋಗಿರಬಹುದು, ವಿಚಾರ ಸ್ವಾರಸ್ಯವಾಗಿದ್ದರೂ ಅವರ ಧ್ವನಿಯಲ್ಲೇ ಏನೋ ಒಂದು ತರದ ನಿಮ್ಮ ಮನಸ್ಸಿನ ಎಳಚಿಗುರುಗಳನ್ನು ಚಿವುಟಕೊಳ್ಳುವ ಖರನಖರ ಗುಣ ಇರಬಹುದು. ಆದರೆ ನಿಮ್ಮ ಕಿವಿಗೆ ದೇವರು ರೆಪ್ಪೆಗಳನ್ನು ಸೃಷ್ಟಿಸಿಲ್ಲ. ಬೇಕೆಂದಾಗ ಅವನ್ನು ಮುಚ್ಚಿಕೊಳ್ಳಲಾರಿರಿ, ತೆರೆಯಲಾರಿರಿ. ನಿಶ್ಶಬ್ದನಾಮಜಪ ಅಥವಾ ಮಂತ್ರಜಪ ಆ ಶ್ರೋತ್ರಕವಾಟವನ್ನು ನಿಮಗೆ ಬಹು ಸುಲಭದಲ್ಲಿ ಒದಗಿಸಿಕೊಡುತ್ತದೆ. ನಾಮಧ್ಯಾನದಿಂದ ನಾನು ಅನೇಕ ಭಾಷಣಕಾರರನ್ನೂ ಭಾಷಣಗಳನ್ನೂ ಗೆದ್ದು ಬಂದಿದ್ದೇನೆ, ಅಕ್ಷತನಾಗಿ. ಆದರೆ ಮನಸ್ಸೇ ಮೌನದಾಶ್ರಯದಲ್ಲಿ ಕಾರ್ಯೋದ್ಯುಕ್ತವಾದಾಗ ಈ ಬಹಿರ್ನಾದಗಳು, ಅವು ಎಂಥವೇ ಆಗಿರಲಿ, ಗಾಸಿಯನ್ನು ತರುತ್ತವೆ. ಒಂದುವೇಳೆ, ಅಷ್ಟು ಒಳ್ಳೆಯದೂ ಅಷ್ಟು ಕೆಟ್ಟದ್ದೂ ಅಲ್ಲದ 'ಪ್ರೌಢ' ಎಂದರೆ ಕ್ಲಾಸಿಕಲ್ ಸಂಗೀತ ಇದಕ್ಕೆ ಅಪವಾದವಾಗಿ ಆಲೋಚನೆಯ ಓಟಕ್ಕೆ ಒಳ್ಳೆ ಹಿನ್ನೆಲೆಯಾಗಿದ್ದುಕೊಂಡು ತನ್ನ ನಾದಾವರಣದಿಂದ ಅದರ ಚಂಕ್ರಮಣಕ್ಕೆ ಬೇಕಾದ ಮೌನವನ್ನು ಕಾಪಾಡುತ್ತದೆ ಎನ್ನಬಹುದು.

ಸಂಗೀತದ ಪ್ರಸ್ತಾಪ ಬಂದಾಗ ರೇಡಿಯೋವಿನ ಒಂದು ಸೌಲಭ್ಯಗುಣವನ್ನು

ನಾವು ಮರೆಯಬಾರದು. ಆ ಸಾಧನದ ಒಂದು ಸೌಕರ್ಯ ನಾಮಜಪವನ್ನು ಮೀರಿಸಿದೆ. ನಿಮ್ಮ ಕಿವಿಗೆ ಹಿಡಿಸದ ಯಾವ ಮಾತನ್ನಾಗಲಿ ನಾದವನ್ನಾಗಲಿ ಒಂದು ಕ್ಷಣದಲ್ಲಿ ಅದರ ಕಿವಿ ತಿರುವಿ ತಟಕ್ಕನೆ ನಿಲ್ಲಿಸಿಬಿಡಬಹುದು. ಆಗ ಮೂಡಿ ಬರುವ ಮೌನ ಎಷ್ಟು ಆಪ್ಯಾಯಮಾನ! ಸ್ವಿಚ್ಚೊತ್ತಿದ್ದರೆ ಬೆಳಕಿನ ನೆರೆ ಚಿಮ್ಮುವಂತೆ ಈ ಮೌನ ಹೊಮ್ಮಿ ಬಂದು ಬೇಸರದ ಕತ್ತಲಿಂದ ಪಾರಾದ ನಿಮಗೆ ತೇಜಃ ಪ್ರವಾಹದಂತೆಯೇ ಭಾಸವಾಗುತ್ತದೆ. ನೀವು ಅಪೇಕ್ಷಿಸಿದಾಗ ಅದು ಪ್ರಪಂಚದ ನಾದಗಳನ್ನೆಲ್ಲ ನಿಮ್ಮೆಡೆಗೆ ತರಬಲ್ಲುದಾದರೂ ನೀವು ಇಷ್ಟಪಡದಿದ್ದರೆ ಅದು ತುಟಿ ಪಿಟಕ್ಕೆನ್ನುವುದಿಲ್ಲ. ನಾದಿಸುವುದಕ್ಕಿಂತ ಮೌನದಿಂದಿರುವುದು ಲೇಸೆಂಬ ಜ್ಞಾನ ಅದರ ತಿರುಪಿರುವಷ್ಟು ಮನುಷ್ಯನ ತುಟಿಗಳಿಗಿಲ್ಲ. ಮತ್ತೊಬ್ಬನ ಕೊರಲು ನಿಮ್ಮಿಚ್ಛಾಧೀನವಾಗಿರುವುದು ಇದೊಂದರಲ್ಲೇ. ಇದಿಷ್ಟು ಗುಣವೂ ಅದಕ್ಕಿರುವುದು, ಅದು ನಾದಸಮರ್ಥವಾಗಿರುವಾಗ ಮಾತ್ರ. ಆ ಯಂತ್ರ ಕೆಟ್ಟಿದ್ದರೆ ಅದರ ಆ ಮೌನಕ್ಕೆ ನಿಮ್ಮಷ್ಟು ಕೊರಗುವವರು ಯಾರೂ ಇಲ್ಲ. ಅದು ಕೆಟ್ಟಿರುವಾಗ ಪ್ರಪಂಚವೇ ಸತ್‌ಸಂಗೀತಮಯವಾಗಿರುವಂತೆ ತೋರುತ್ತದೆ ನಿಮಗೆ, ಅನರ್ಘ್ಯ ಭಾಷಣಗಳಿಂದಲೂ ವಿಸ್ಮಯಕರ ವಾರ್ತೆಗಳಿಂದಲೂ ನಿಬಿಡವಾಗಿರುವಂತೆ. ಅಂಥ ಸಮಯಗಳಲ್ಲಿ ನಿಮ್ಮದೇ ವಾಣಿ ಭಾಷಣ ರೂಪದಲ್ಲೋ ವಾಚನ ರೂಪದಲ್ಲೋ ನಿಮ್ಮ ಬಳಿಯೇ ಅಲೆಯುತ್ತಿರಬಹುದು, ತೌರಿಗೆ ತವಿಸಿ ಬರುವ ಹೆಣ್ಣಿನಂತೆ; ಆದರೆ ಮುನಿದ ಅತ್ತೆಯ ಮನೆಯವರಂತೆ ಈ ಯಂತ್ರ ಅದನ್ನು ನಿಮ್ಮೆಡೆಗೆ ಬರಗೊಡದು. ನಿಮ್ಮ ಒಂದು ಗೀತದ ತುಣಕೇ, ಅದಕ್ಕೆ ಶ್ರೋತಾ ನೀವೊಬ್ಬರೇ ಆದರೂ ಸಹ, ನಿಮ್ಮ ಕಿವಿಗೆ ಎಟುಕದಂತಾಗಿಬಿಡುತ್ತದೆಯಲ್ಲ. ಅದರ ಶ್ರವಣಕ್ಕೆಂದು ನೀವೆಷ್ಟೋ ದಿನದಿಂದ ಕಾದಿದ್ದಿರಿ. ಅಂಥ ವೇಳೆಯಲ್ಲಿ ರೇಡಿಯೋವಿನ ಈ ಮೌನರುಜೆ ನಿಮಗೆ ಸಹನಾತೀತವಾಗುತ್ತದೆ. ನಾದಸಮರ್ಥವಾದ ರೇಡಿಯೋವಿನ ಮೌನ, ಲೋಭಿಯ ಬ್ಯಾಂಕ್ ಬಾಲೆಸ್ಸಿನಂತೆ, ತುಂಬ ತೃಪ್ತಿಯನ್ನೂ ಸಮಾಧಾನವನ್ನೂ ತರುವ ವಿಷಯವೇ ಹೊರತು, ಆದರ ದಿವಾಳಿತನವಲ್ಲ.

ಆದರೆ ರೇಡಿಯೋ ಒಂದು ಸುಖಸಾಧನವಾಗಿರುವುದು ಅದು ನಿಮ್ಮ ಸಂಪೂರ್ಣ ಸ್ವಾಧೀನದಲ್ಲಿರುವಾಗ ಮಾತ್ರ, ಮತ್ತು ನಿಮ್ಮ ನೆರೆಹೊರೆಯವರು ಅದರ ಮಾಲೀಕರಾಗದಿದ್ದಾಗ ಮಾತ್ರ—ಅಲ್ಲದೆ ಹೋಟೇಲಾಗಲಿ ರೇಡಿಯೋ

ಅಂಗಡಿಗಳಾಗಲಿ ನಿಮ್ಮ ಮನೆಗೆ ಎಷ್ಟು ದೂರವಿದ್ದರೆ ಅಷ್ಟು ಮೇಲು—ವಾಸ್ತವವಾಗಿ ನೀವು ಏಕಾಂತವಾಸಿಗಳಾಗಿದ್ದು, ನಿಮ್ಮೊಬ್ಬರ ಅಧೀನದಲ್ಲೇ ಆ ಯಂತ್ರ ಸುಪ್ತರೂಪದಲ್ಲಿದ್ದು ಕಿವಿ ಹಿಂಡಿದಾಗ ಕ್ಷೀ ಅನ್ನುತ್ತಿದ್ದರೆ ನಿಮ್ಮನ್ನು ಸುಖಿ ಎನ್ನಬಹುದು. ಇಲ್ಲದಿದ್ದರೆ ನಿಮ್ಮಷ್ಟು ಅಸುಖಿಗಳು ಪ್ರಪಂಚದಲ್ಲಿ ಯಾರೂ ಇಲ್ಲ. ಈಚೀಚೆಗೆ ರೇಡಿಯೋವಿಗಿಂತ ದುಷ್ಟಜಂತುಗಳು ಹುಟ್ಟಿವೆ. ಅವಕ್ಕೆ ಜಿರಲೆಗಿರುವಂತೆ ತಲೆಮೀಸೆಯಿದೆ. ಅದನ್ನು ಹೊರಚಾಚಿದರೆ ತೀರಿತು ನಿಮ್ಮ ತಲೆ ಹಾರಿಹೋಗುತ್ತದೆ. ಜೌಗಿನ ಪ್ರದೇಶದಿಂದ ಮಲೇರಿಯಾ ಸೊಳ್ಳೆಗಳು ಹೊರಡುವಂತೆ ಹಾಡುಗಳು ಹೊರಡುತ್ತವೆ ಈ ಕೊಳಚೆ ಪ್ರದೇಶಗಳಿಂದ. ಈ ಸಾಂಕ್ರಾಮಿಕದಿಂದ ಪಾರಾದವರು ಅದೃಷ್ಟಶಾಲಿಗಳು. ಬಸ್ಸುಗಳಲ್ಲಿ ರೈಲುಗಳಲ್ಲಿ ಫುಟ್‌ಪಾತುಗಳ ಮೇಲೆ ನಡೆಯುತ್ತಿರುವಾಗ ಸಹ, ಗ್ರೀಕ್ ಪುರಾಣದ “ಫ್ಯೂರೀಸ್”ಗಳಂತೆ ಗೀತರೂಪದ ಈ ಮಕ್ಷಿಕಗಳು ನಿಮ್ಮನ್ನು ಮುತ್ತುತ್ತವೆ. ಪಲಾಯನವೊಂದೇ ಉಪಾಯ ಈಗ. ಆದರೆ ಬಸ್ಸುಗಳಲ್ಲಿ ಇವುಗಳ ಕಾಟವನ್ನು ತಪ್ಪಿಸಿಕೊಳ್ಳುವುದು ಹೇಗೆ? ತಂತ್ರವಿಜ್ಞಾನದಿಂದ ಸೌಕರ್ಯಕ್ಕಿಂತ ಕಿರುಕುಳಗಳೇ ಹೆಚ್ಚು ಎಂದು ಈಗೀಗ ಎನಿಸಿಬಿಟ್ಟಿದೆ ನನಗೆ.

ಅಷ್ಟಲ್ಲದೆ, ವೈಜ್ಞಾನಿಕ ಸಾಧನಗಳು ಅಬ್ಬರಿಸುವಷ್ಟು ಮತ್ತಾವುದೂ ನಿಸರ್ಗದಲ್ಲಿ ಅಬ್ಬರಿಸದು, ಸಿಡಿಲನ್ನು ಬಿಟ್ಟರೆ. ಆದರೆ ಆ ವಿಶಾಲವಾದ ಆಕಾಶದ ಬಯಲಿನಲ್ಲಿ ಅದು ಸೊಟಸೊಟರು ಘಟರ್ ಘಟಾರೆನ್ನುವುದು ಮೋಹಕವಾಗಿಯೇ ಇದೆ. ಯಂತ್ರಗಳದು ಹಾಗಲ್ಲ; ಮೌನವನ್ನು ಜಜ್ಜಿ ಹಾಕುತ್ತವೆ, ಒಂದಿಷ್ಟಗಲದಲ್ಲಿ ಅದನ್ನು ಬಂಧಿಸಿ. ಆಧುನಿಕ ನಗರಗಳಲ್ಲಿನ ನಾದವೃದ್ಧಿಯಿಂದಲೇ ವೈಜ್ಞಾನಿಕ ಜ್ಞಾನವೃದ್ಧಿಯನ್ನೂ ಅಳಿದುಬಿಡಬಹುದು. ಮನುಷ್ಯ ತನ್ನಿಂದಲೇ ನಿರ್ಮಿತವಾದ ಈ ಸದ್ದು ಗದ್ದಲಗಳಿಂದ ತನ್ನ ಜೀವಕ್ಕೆ ಹುಚ್ಚು ಹಿಡಿಯದಂತೆಯೂ ಬೇಸರ ತಟ್ಟದಂತೆಯೂ ಹೇಗೆ ಕಾಪಾಡಿಕೊಳ್ಳುತ್ತಾನೋ ಕಾದು ನೋಡಬೇಕು. ಈಗ ಸಣ್ಣ ಸಣ್ಣ ಸದ್ದುಗಳಿಲ್ಲದೆ ಹೇಗೆ ಆತ ನಿತಾಂತ ಮೌನದಲ್ಲಿ ಬದುಕಲಾರನೋ ಹಾಗೆಯೇ ಕ್ರಮೇಣ ಈ ಯಾಂತ್ರಿಕ ಘೋಷವೇ ಅಭ್ಯಾಸವಾಗಿ, ಸದ್ದು ತನ್ನ ಏಕರೂಪತೆಯಲ್ಲಿ ಸುಖಾವಹ ಮೌನವಾಗಿಯೇ ಪರಿಣಮಿಸಿಬಿಡುತ್ತದೋ ಆತನಿಗೆ? ನಾನೇನೋ ಬೇಕಾದಾಗ ಆಕಾಶಕ್ಕೆ ಮೊಗವೆತ್ತಿ ಆ ಮಹಾಮೌನವನ್ನು ಆಶ್ರಯಿಸಿ ಈ ಕ್ಷುದ್ರ ಆದರೆ ಬಾಧಕ ಸದ್ದುಗಳನ್ನು ನಿರ್ಲಕ್ಷಿಸುತ್ತೇನೆ.

ಆದರೆ ಎಷ್ಟು ಹೊತ್ತು ಹಾಗೆ ಕತ್ತೆತ್ತಿ ನಿಲ್ಲುವುದು ಸಾಧ್ಯ?

ಅಖಂಡಮೌನವನ್ನು ಖಂಡತುಂಡುಮಾಡಿ ಒಂದಿಷ್ಟು ಜಾಗದಲ್ಲಿ ಸೇರಿಸಿ
ಮರ್ದಿಸುವ ಯಂತ್ರಘೋಷವನ್ನು ಕಂಡು ಎರಡು ಮಾತನ್ನಾಡಿದೆನಲ್ಲ; ಅದನ್ನು
ಸಜ್ಜೆಗೆ ಬಿಜಯಗೈಯಿಸಿ, ಇಲ್ಲ, ಹೃದಯದ ಸಂಕೇತಗೃಹಗಳಿಗೆ ಕರೆತಂದು
ಸತ್ಕರಿಸುವ, ರಮಿಸುವ ಮಾನವಪ್ರಯತ್ನಗಳನ್ನು ಕುರಿತು ಹೇಳದಿದ್ದರೆ
ನಮಗೆ ನಾವೇ ಅಪಚಾರವೆಸಗಿದಂತಾಗುತ್ತದೆ. ಈಗ ಮೌನದ ಅತ್ಯಂತ ಸುಂದರ
ಸ್ವರೂಪ ನಮಗೆಲ್ಲಿ ಗೋಚರಿಸುತ್ತದೆ?—ನಡುವಗಲಿನ ನೀಲಾಕಾಶದಲ್ಲಿನ
ಗಭೀರೈಕಾಂತಸ್ಥಲದಲ್ಲಿ, ಅದನ್ನು ಬಿಟ್ಟರೆ ನಮ್ಮಿಷ್ಟದೈವದ ಅಥವಾ ಅತ್ಯಂತ
ಪ್ರಿಯರ ಸ್ಮಿತರುಚಿರವದನದ ಮೌನದಲ್ಲಿ. ಇಂಥ ಮೌನಕ್ಕೆ ಮಣಿಅಯ್ಯರ್
ಅಂಥವರ ಮೃದಂಗ ವಾದನಗಳಲ್ಲಿ ತನ್ನ ಮೈಯನ್ನು ಒತ್ತಿಸಿಕೊಂಡು ಲವಲವಿ
ಸಲು ಆಸೆ. ಅದೊಂದುತರದ ನಾದ-ಮೌನಪ್ರಣಯಲೀಲೆ ಎನ್ನಬೇಕು. ತಾಳದ
ಏಟು, ಮೃದಂಗದ ವಿಧವಿಧ ಗಮಕದ ಛಾಪುವಿನ ಏಟು ಇವುಗಳ ನಡುವಣ
ನಿಶ್ಶಬ್ದ-ಮೌನ, ಬಳಿಕ ಅನೇಕ ಆವರ್ತಗಳ ಅಂತ್ಯದಲ್ಲಿ ಏಟುಗಳ ಮಿಳನ,—ಈ
ವಿರಹ ಮಿಳನಗಳನ್ನು ನಡೆಗೊಳಿಸುತ್ತಾ, ಗೋಪಸ್ತ್ರೀಯರ ನಡುವೆ ಅವರು
ಯಾರಿಗೂ ತಾನು ಹೊರತಲ್ಲ ಎಂಬಂತೆ ಸರ್ವಸ್ವಾಮಿಯಾಗಿ ಆದರೂ ಪ್ರತ್ಯೇಕ
ವಾಗಿ ನಿಲ್ಲುವ ರಾಗಲೀಲಾರಸಿಕ ಶ್ಯಾಮನಂತೆ, ಈ ವಿವಿಧ ಮೃದಂಗನಾದಗಳೊ
ಡನೆ ಈ ಮೌನ ಲಾಸ್ಯವಾಡುತ್ತದೆಯಲ್ಲವೆ? ಅಥವಾ ಮಹಾಲಿಂಗಂ ಅವರ
ವೇಣುವಾದನವನ್ನೇ ತೆಗೆದುಕೊಳ್ಳಿ. ಅದರಲ್ಲಿ ಒಂದು ರಾಗ ಅಥವಾ ಕೀರ್ತನೆ,
ಅದರಲ್ಲಿ ಒಂದು ಜೀವಸ್ವರ. ಅದಕ್ಕೊಂದು ರಹಸ್ಯ ಸಂಕೇತ ಸ್ಥಾನವುಂಟು. ಅಲ್ಲಿ
ಅದರ ಜೀವೇಶ್ವರ ಕಾದಿದ್ದಾನೆ. ಆ ಸ್ಥಾನರಹಸ್ಯ ದೂತಿಯಾದ ಮಹಾಲಿಂಗಂ
ವೇಣುವಿದ್ಯೆಯೊಂದಕ್ಕೇ ಗೊತ್ತು. ಆ ಸ್ವರದ ಪ್ರಣಯಗೃಹ ಏಕಶ್ರುತಿಯದೋ
ದ್ವಿಶ್ರುತಿಯದೋ ತ್ರಿಶ್ರುತಿಯದೋ ಅಥವಾ ಅವುಗಳ ಸುಸೂಕ್ಷ್ಮ ಅಂತರ
ಪ್ರಾಂತದ್ದೋ ಆತನಾತ್ಮ ಮಾತ್ರ ಬಲ್ಲದು. ಅಲ್ಲಿಗೆ ಆ ವಿದ್ಯೆ ಆ ಸ್ವರವನ್ನು ಕರೆ
ದೊಯ್ಯುವ ಸೊಗಸೇ ಸೊಗಸು. ಅಲ್ಲಿ ಆ ಸ್ವರ ತನ್ನ ತುಡಿಯುವ ಮೆಲ್ದುಟಿ
ಯನ್ನು ಮೌನದ ಅಧರಕ್ಕೆ ಸೋಕಿಸಲು ಮೆಟ್ಟುಂಗಾಲಿಡುತ್ತದೆ; ಆ ನೀರವ
ಚುಂಬನದ ಜುಮ್ಮು ನಿಮಗೆ ತಟ್ಟುತ್ತದೆ. ಈ ನಾದಾಂತರಮೌನ ಮಹೇಂದ್ರ
ನಂತೆ ಘನೀಭೂತವಾಗಿ ನಿಂತು ಸ್ವರಲಹರಿಗಳ ಮಿಂಚುಗಳನ್ನು ಒಳ್ಳೆ ಸಂಚಿ

ನಿಂದ ಓಡಿಯಾಡಿಸುವ ಜಿರಗನ್ನು ನೀವು ಕಾಣಬೇಕೇನು ? ಹಾಗಾದರೆ ನನ್ನೊಡನೆ ಬಂದು ಏಕಾಂತವಾಗಿ ವೀಣಾ ದೊರೆಸ್ವಾಮಯ್ಯಂಗಾರ್ಯರ ಪ್ರಕ್ವಾಣಗಳನ್ನು ಆಲಿಸಿರಿ. ಅದರ ಸಜ್ಜೆಯ ವೈಭವವನ್ನು ನೋಡಬೇಕಾದರೆ ಮಧು-ಮಾಧವ ಋತುವಿನ ತಾರಾಸಿಬಿಡವಾದ ಆಕಾಶಗಳತ್ತ ನಾದಸ್ವರವನ್ನು ಅದರ ಕುಶಲವಾದಕರು ಎತ್ತುವ ವೇಳೆಯನ್ನು ಕಾಯಬೇಕು. ಇವೆಲ್ಲ ಅನುಭವೈಕವೇದ್ಯವಾದ ಭೋಗಗಳು. ಕಾವ್ಯಾದಿಗಳಲ್ಲಿ ಈ ವಿಭವಪ್ರಿಯವೂ ಭೋಗಪ್ರಿಯವೂ ಆದ ಮೌನವನ್ನು 'ಧ್ವನಿ' ಎಂದು ಕರೆಯುತ್ತಾರೆ. ಎಷ್ಟೋ ವಾಗರ್ಥಗಳು ಇದಕ್ಕೆ ಹಂಬಲಿಸಿ ಕಂಗೆಡುತ್ತವೆ. ತಾನೊಲಿದಾಗ ಮಾತ್ರ ವಶವಾಗುವ ಸ್ವೈರ ಪ್ರಣಯಿ ಇದು; ಎಂದೂ ಮುಕ್ತ ಎಂದೂ ಸ್ವತಂತ್ರ, ಆದರೆ ಪ್ರೇಮಬಾಹಿರನಲ್ಲ, ಆದರದು ಶುಷ್ಕ ಹೃದಯವಲ್ಲ. ಎಟುಕಿಯೂ ಎಟುಕದಂಥ ಯಕ್ಷಿಣಿ ವಿದ್ಯೆ ಅವರದು. ಇದೇ 'ಶಬ್ದದೊಳಗಣ ನಿಶ್ಶಬ್ದ'.

ಏನಾದರೂ ಮೌನ ದೊಡ್ಡದು, ಪರಮಘನ. ಇಡೀ ವಿಶ್ವದಲ್ಲಿ ಪ್ರಾಯಶಃ ಸದ್ದಿನ ಪರಾಕ್ರಮವೆಲ್ಲಾ ಅಷ್ಟಿಷ್ಟು ಭೂಮಿಯ ಮೇಲೆಯೇ ಎಂದು ತೋರುತ್ತದೆ. ಅದಕ್ಕೆ ಗಾಳಿ ಬೇಕು, ಕಿವಿ ಬೇಕು. ಶ್ರವಣೇಂದ್ರಿಯವಿಲ್ಲದ ಅನೇಕ ಜೀವಜಾತಗಳಿವೆ. ಅರ್ಥವತ್ತಾದ ಶಬ್ದಗಳೂ ಎಲ್ಲೋ ಕೆಲವು ಉಚ್ಚವರ್ಗದ ಪ್ರಾಣಿಪಕ್ಷಿಗಳಿಗೂ ಅದಕ್ಕಿಂತ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಮಾನವನಿಗೂ ಸೀಮಿತವಾಗಿ, ಅವರಲ್ಲೂ ಅನೇಕರಿಗೆ ಬರಿ ಸದ್ದೆನಿಸುವ ಕೆಲವರಿಗೆ ಮಾತ್ರ ನುಡಿ ಎನಿಸುವ ಅನೇಕ ಭಾಷೆಗಳಲ್ಲಿ ತಮ್ಮ ದ್ವಿವಿಧ ಸ್ವರೂಪವನ್ನು ಮೆರೆಸಿ, ಮೋಹಗೊಳಿಸಿವೆ. ಮೌನವೋ ವಿರಾಟ್, ಸರ್ವವ್ಯಾಪಿ. ಅದನ್ನು ಮೌನ ಎನ್ನುವುದಕ್ಕಿಂತ ನೀರವತೆ ಎಂದರೆ ಲೇಸೇನೋ. ನಾದ ಭೂಮಿಯ ಮೇಲೆ ನೀರವತೆಯ ಅಂಚಿನಲ್ಲಿ ಎಷ್ಟೋ ಅಷ್ಟು ಬೂಷ್ಟಿನಂತೆ ಇಷ್ಟಗಲ ಅಂಟಿಕೊಂಡಿದೆ. ನಮಗೆ ಈ ಅಪಾರವಾದ ಮೌನದ ಸಾಕ್ಷಾತ್ ಅರಿವಾಗುವುದೇ ಇಲ್ಲ ಎನ್ನಬೇಕು. ನಮ್ಮನ್ನು ಕವಿಯುವ ನಿದ್ದೆ ಗಾಢಸುಷುಪ್ತಿಯಾದಾಗ ಅದು ಇದರ ಅಲ್ಪಸ್ವಲ್ಪ ಪರಿಚಯವನ್ನು ನಮಗೆ ಮಾಡಿಕೊಡುತ್ತದೋ ಏನೋ; ಬ್ರಹ್ಮಾಂಡ ವ್ಯಾಪಿಯಾದ ಕತ್ತಲಿನ ಸಂಪರ್ಕವನ್ನು ಇರುಳು ನಮಗೆ ಅಷ್ಟಿಷ್ಟು ಒದಗಿಸಿ ಕೊಡುವಂತೆ. ಈ ಪ್ರಾಕೃತಿಕ ನೀರವತೆಯ ಅವಗಾಹದ ಹರ್ಷ ನಮಗೆ ನಿತ್ಯ ದೊರೆಯುತ್ತದೆಯೆಂದು ಹೇಳುವ ಹಾಗಿಲ್ಲ. ಆ ಸ್ಪರ್ಶಕ್ಕೆ ನಮ್ಮ ಜೀವವನ್ನೇ ಹೊಸದಾಗಿ ಮಾಡುವ ಶಕ್ತಿಯುಂಟು.

ಅದು ನಾವು ಬೆಳಿಗ್ಗೆ ಎದ್ದಾಗ ನಮ್ಮ ಹರ್ಷೋಲ್ಲಾಸಗಳಲ್ಲಿ ವ್ಯಕ್ತಪಡುತ್ತದೆ. ಈ ವಿಷಯದಲ್ಲಿ ಪಕ್ಷಿಗಳು ನಮಗಿಂತ ಎಷ್ಟೋ ಪುಣ್ಯಶಾಲಿಗಳು.ಅದೊಂದು ಆಶ್ಚರ್ಯಕರವಾದ ವಿಷಯ, ನನ್ನನ್ನು ನಿರಂತರವಾಗಿ ವಿಸ್ಮಿತನನ್ನಾಗಿ ಮಾಡಿರುವುದು.

ಉಷಃಕಾಲದಲ್ಲಿ ಎಚ್ಚರುವ ಹಕ್ಕಿಗಳ ಧ್ವನಿ ನಿಮ್ಮ ಕಿವಿಗೆಂದಾದರೂ ಬಿದ್ದಿದೆಯೇ? ಅದನ್ನು ಪ್ರತಿದಿನವೂ ಕೇಳುವ ಹರೂಢಿ ನಿಮಗುಂಟೆ? ಇದ್ದರೆ ಒಂದು ವಿಶೇಷವನ್ನು ನೀವು ಗಮನಿಸಬಲ್ಲಿರಿ. ಆ ಕಲರವದಲ್ಲಿ ಅಚ್ಚಳಿಯದ ಬೆರಗಿದೆ, ಹರ್ಷವಿದೆ, ಜೀವೋಲ್ಲಾಸವಿದೆ. ಮಾಗಿಯಲ್ಲಾಗಲಿ ಬೇಸಗೆಯಲ್ಲಾಗಲಿ ಈ ಬೆರಗು ನಲಿವು ಗೆಲವುಗಳಿಗೆ ಎಳ್ಳಷ್ಟೂ ಕುಗ್ಗು ಬರುವುದಿಲ್ಲ. ಬೇಸಗೆಯಲ್ಲಿ ಈ ಕಲಕಲವು ಹೊರನಾಡುಗಳಿಂದ ಬರುವ ಆಗಂತುಕ ಹಕ್ಕಿಗಳಿಂದ ಹೆಚ್ಚು ವೈವಿಧ್ಯವನ್ನೂ ಸೊಂಪನ್ನೂ ಪಡೆದಿರುತ್ತವೆ; ಸ್ಥಳೀಯ ಪರಿಚಿತ ಹಕ್ಕಿಗಳು ಈ ಪರಸ್ವರಕ್ಕೆ ಅಂಚುಗಟ್ಟುತ್ತವೆ. ಆಗ ಕೆಲವುಕಾಲ ಪ್ರಕೃತಿಯ ವಾದ್ಯಮೇಳದ ಸಕಲ ಸಿಬ್ಬಂದಿಯೂ ಒಟ್ಟೈಸಿ ತಮ್ಮ ಸ್ವರ ಗುಂಫನವನ್ನು ಆಗಸಕ್ಕೆ ಎರಚುತ್ತವೆ. ಬರಬರುತ್ತಾ ಈ ಧ್ವನಿಗಳ ವೈವಿಧ್ಯ ಮತ್ತು ಪ್ರಮಾಣ ಕಡಮೆಯಾಗಬಹುದೇ ಹೊರತು ಮೊಳಗಿನ ಗೆಲವು ಮಾತ್ರ ಇಷ್ಟೂ ಕುಂದದು. ದಿನವೂ ಬೆಳಗಾಗುತ್ತಲೇ ಇವೆ ಎಂದು ಹಕ್ಕಿಗಳು ಮಾತ್ರ ತಮ್ಮ ಪ್ರಹರ್ಷವನ್ನು ತೋರದೆ ಎಂದಿಗೂ ಬಿಡವು. ರೂಢಿಯಲ್ಲಿ ಬೆರಗು ಮುಳುಗಿ ಹೋಗದಿರುವ ಈ ಸಂಗತಿ ಪರಮಾಶ್ಚರ್ಯಕರವಾಗಿದೆ. ಒಂದು ದಿನವೂ ಸೋತು ಸೊರಗಿದ ಧ್ವನಿ ಹಕ್ಕಿಗಳ ಕೊರಲಿನಿಂದ ಮುಂಜಾನೆ ಮಂಜುಬೀಳಲಿ ಮಳೆ ಸೋರಲಿ ಏಳದು. ಮಾಗಿಯ ಕೊರೆತದಲ್ಲೂ ಕಾಗೆ ಗುಬ್ಬಚ್ಚಿಗಳು ಯಾವ ಬೇಸರವನ್ನೂ ತೋರದೆ ಬೆಳಗಾದುದನ್ನು ತಮ್ಮ ಸುಸ್ವನ ಮೇಳದಿಂದ ಸ್ವಾಗತಿಸುತ್ತವೆ. 'ಕಾಗೆಯದೂ ಸುಸ್ವನವೇ?' ಎನ್ನುತ್ತೀರಾ? ಹಿಮಗಾಲದಲ್ಲೂ ಮಧುಗಾಲದಲ್ಲೂ ಒಂದೇ ಸಮನಾಗಿ ಒಂದೇ ಸ್ವರದಲ್ಲಿ ಈ ಬದುಕು ಚೆನ್ನು ಈ ಬೆಳಕು ಚೆನ್ನು ಎಂದುಲಿಯುವ ಕಾಗೆಯ ಕ್ಷೇಮಘೋಷವನ್ನು ಮತ್ತೇನೆಂದು ಕರೆಯೋಣ? ಹಕ್ಕಿಗಳ ಪ್ರಭಾತಗೀತದ ಈ ಗೆಲವಿನ ಈ ಬೆರಗಿನ ಈ ಪ್ರಹರ್ಷದ ಮೂಲ ಯಾವುದು, ಈ ಪ್ರಾಕೃತಿಕ ವಿಶ್ವವ್ಯಾಪೀ ಸರ್ವಾಹಂಕಾರಶಮಮೌನಾವಗಾಹವಲ್ಲದೆ? ಸತ್ಕರ್ಮಶ್ರಾಂತ ನಿಶ್ಚಿಂತನಿಗೆ ಹೊರತು ಮಿಕ್ಕವರಿಗೆ ಈ ನಿದ್ದೆಯ ಮೌನಾಚ್ಛಾದನವೂ ಈ ಪ್ರಹರ್ಷೋದಯವೂ ವ್ಯಗ್ಯ.

ಹೀಗೆ ಈ ಮೌನವನ್ನು ವಿವರಿಸುತ್ತ ಹೋದರೆ ಈ ಲೇಖನಿ ಕೊನೆ ಮುಟ್ಟು ವುದು ಕಷ್ಟ. ಈ ಪೃಥ್ವಿ ಮಹಾವೇಗದಲ್ಲಿ ಸೂರ್ಯನನ್ನು ಮೌನವಾಗಿಯೇ ಸುತ್ತುತ್ತಿದೆ. ಜಗತ್ತಿನ ಮಹತ್ಕಾರ್ಯಗಳೆಲ್ಲವೂ ಮೌನವಾಗಿಯೇ ಜರಗುತ್ತಿವೆ. ಕವಿಯೊಬ್ಬ ಇದನ್ನು ಸ್ವಾರಸ್ಯವಾಗಿ ಹೇಳಿದ್ದಾನೆ:

ದಹತ್ಯಗ್ನಿರವಾಕ್ಯಸ್ತು ತೂಷ್ಣೀಂ ಭಾತಿ ದಿವಾಕರಃ
ತೂಷ್ಣೀಂ ಧಾರಯತೇ ಲೋಕಾನ್ ವಸುಧಾ ಸಚರಾಚರಾನ್

ಆತ ಅಗ್ನಿಗೆ ಹೇಳಿರುವುದನ್ನು ನೀವು ಒಪ್ಪದಿರಬಹುದು. ಅಲ್ಪ ಸ್ವಲ್ಪ ಅಟಾ ಟೋಪ ಉಂಟು ಅತನಲ್ಲಿ; ಆದರೆ ಆತ್ಮಸ್ತುತಿಯಿಲ್ಲ. ಮೌನಸ್ನಾನಾಪೇಕ್ಷೆ ಯುಳ್ಳವರು ಆಕಾಶ ಭೂಮಿ ಸೂರ್ಯ ನಕ್ಷತ್ರ ಇವುಗಳನ್ನು ಆಗಾಗ ನಿಟ್ಟಿಸು ವುದೊಳ್ಳೆಯದು; ನಿದ್ದೆಗೆ ತಮ್ಮ ಸರ್ವಸ್ವವನ್ನೂ ಏಕಮನಸ್ಸಿನಿಂದ ದಿನವೂ ಒಪ್ಪಿಸಿಬಿಡುವುದೂ ಒಳ್ಳೆಯದು. ನನ್ನ ಕೃತಿಗಳಲ್ಲಿ ಗೀತಗಳಲ್ಲಿ ಯಾವುದಾದರೂ ಸ್ವಾರಸ್ಯವಾದವುಗಳಿದ್ದರೆ ಅವು ನನ್ನ ಸುಷುಪ್ತಿನಿರ್ಮಿತಿಗಳು, ಚಿಂತಾ ನಿರ್ಮಿ ತಗಳಲ್ಲ ಎಂದುಕೊಳ್ಳಿ. ಇದು ನಿಜ. ಇರುಳಿನಲ್ಲಿ ನಿದ್ದೆಗೆ ನನ್ನದೆಲ್ಲವನ್ನೂ ಒಪ್ಪಿ ಸುವಂತೆಯೇ ನಾನು ಆಗಾಗ ನನ್ನ ಜಾಗ್ರದವಸ್ಥೆಯಲ್ಲಿ ಈ ವಿಶ್ವವ್ಯಾಪಿ ನೀರವ ತೆಗೆ ನನ್ನ ಮನಸ್ಸನ್ನು ಸಂಪೂರ್ಣವಾಗಿ ಒಪ್ಪಿಸಿಬಿಡುವ ಅಭ್ಯಾಸ ಇಟ್ಟುಕೊಂಡಿ ದ್ದೇನೆ. ಈ ಅಭ್ಯಾಸದಿಂದ ಒಂದು ಅನುಭವ ನನ್ನ ಅರಿವಿಗೆ ಬಂದಿದೆ.

ಮೌನಂ ಮೇಗಡೆ ಮೌನಂ ಕೆಳಗಡೆ
ಮೌನವೆ ಮಧ್ಯದಿ ವಾಙ್ಮುಖರಂ
ತಾನೆನಿಸಲು ದನಿಗೂಡದ ದನಿಯುಂ
ಜಾನಕೆ ತಹುದಲ ಬಾನ್‌ವಿಸರಂ
ಬಗೆಬಗೆ ನಗೆ ನಲ್‌ನುಡಿ ಬಿಸುಸುಯ್ಯಲು
ಡಗೆಯುಗ್ಗರ ಇಂಚರದೊಸಗೆ
ಒಗುಮಿಗೆ ಕರಗಿಹ ಮೌನವ ಸೀಪಲು
ಜಗ ಜಗ ವೆಚ್ಚರವುದು ಕವಿಗೆ—

ಈ ಸರ್ವರಸನಿಧಿ ನೀರವತೆ ಎಷ್ಟು ಮಹಾಸುಭಾವಗಳನ್ನು ನುಂಗಿದೆಯೋ, ತತ್‌ಸಕ್ತ ರಸಿಕನಿಗೆ ಎಂಥೆಂಥ ಭಾವಾಮೃತವನ್ನು ಹನಿಸುತ್ತದೋ. ಯಾರು ಬಲ್ಲರು?

ಅರೆ-ಮರೆ ಕವಿತೆಗಳ ನೊರೆ

'ಕಾಲವೋ ಕಿರಿದು ಕಲೆಯೋ ನಿಡಿದು' ಎಂಬ ಗಯಟೆ ಮಹಾಕವಿಯ ಸೂಕ್ತಿ ಈಗೀಗ ತುಂಬ ನೆನವಿಗೆ ಬರುತ್ತಿದೆ. ಸುದೀರ್ಘವೂ ಸಾರವುಳ್ಳದ್ದೂ ರಸಿಕ ರಂಜಕವೂ ಆದ ಕವಿತೆಯನ್ನು ಬರೆಯಬೇಕೆಂಬ ಆಸೆಯಿದ್ದರೂ ಅದು ತನ್ನ ನೆರವೇರಿಕೆಗೆ ಮತ್ತೊಂದು ಆಯುಷ್ಯವನ್ನೂ ಸಹೃದಯವರ್ಗವನ್ನೂ ಬೇಡುತ್ತಿದೆ. ಈ ಕೋರಿಕೆ ಮರುಹುಟ್ಟನ್ನು ನನಗಲ್ಲದೆ ನನ್ನ ಮುಕ್ತಮಿತ್ರರಿಗೂ ಬಯಸುವುದರಿಂದ ಅದು ಸರ್ವಥಾ ಮಾನ್ಯವಲ್ಲ. ನನ್ನ 'ಬಸ್ತು'ಕಟ್ಟುವುದೊಳ್ಳೆಯದು. ಆದರೆ ಯಾಚಕರು ಅಭ್ಯಾಸ ಬಲದಿಂದ ಹಿಂದೆ ದೈಯುಳ್ಳವರಾಗಿ ಈಗ ದುಃಸ್ಥಿತಿಗಿಳಿಯುತ್ತಿರುವವರ ಮನೆಯ ಹತ್ತಿರ ಸುಳಿದಾಡುವಂತೆ ನನ್ನ ಮನಸ್ಸಿನ ಸನಿಯ ಅನೇಕ ಮೂಕಭಾವಗಳು ವಾಗರ್ಥಭಿಕ್ಷವನ್ನು ಬೇಡಿ ತಿರಿಯುವುದು ತಪ್ಪಿಲ್ಲ. ಈಗೊಂದು ಗುಲಾಬಿಹೂ ನನ್ನ ಮನೋನೇತ್ರದ ಮುಂದೆ ಕಳಕಳನೆ ಹೊಳೆದು ನಿಂತಿದೆ. ಅದು ಬಹುಕಾಲದ ಅಭ್ಯರ್ಥಿ. ಈ ನಡುವೆ ಎಷ್ಟೋ ಗುಲಾಬಿ ಹೂಗಳು ಅರಳಿವೆ ಉದುರಿವೆ ಹೊಸಕಿ ಬಾಡಿಹೋಗಿವೆ; ಆದರೆ ಇದು ಮಾತ್ರ ಪ್ರಾತಃಕಾಲದ ಇಬ್ಬನಿಗೆ ನೆನೆದ ನರುಗಂಪನ್ನು ಬೀರುತ್ತಾ ನನ್ನ ಮನಸ್ಸನ್ನು ಬೆರಗು ಪಡಿಸುತ್ತಲೇ ಇದೆ. ಅದನ್ನು ಮೆರಸುವ ಗಿಡ ನಾನೊಂದು ಪದ್ಯಕ್ಕೆ ಬೇಡದವಳಾದೆನೇ ಎನ್ನುತ್ತಿದೆ ತನ್ನ ಹೂದಳಗಳನ್ನು ಅಲುಗಿಸಿ. "ಅಹುದು ಯೋಗ್ಯ, ಅತ್ಯರ್ಹ; ಆದರೆ ನಿನ್ನ ಹೂವನ್ನು ಕುರಿತು ಬರೆಯುವ ವಯಸ್ಸು ಈಗ ನನ್ನದಲ್ಲ; ಅದನ್ನು ಕಿತ್ತುಬೇಕಾವರೆ ಅವಳ ನೆರಿತನವಿರಿಗೆ ಮುಡಿಸಬಹುದು. ನಿನ್ನ ಹಾಗೆಯೇ ಆಕೆ ನನ್ನ ಕಿರುಕುಳವನ್ನು ಬೇಕಾದಷ್ಟು ಸಹಿಸಿದ್ದಾಳೆ. ಆದರೂ ಸ್ನೇಹ ತೋರಿಸಿದ್ದಾಳೆ. ಆದರೆ ಈ ಶೃಂಗಾರವನ್ನೂ ನನ್ನ ಈ ಶೃಂಗಾರಭಾವವನ್ನೂ ಆಕೆಯೊಪ್ಪುವ ಸಂಭವವಿಲ್ಲ; ಆ ಭಯ ನನಗೆ. ನೀನು ನವಯುವಕರತ್ತ ಸರಿಯುವುದು ಒಳ್ಳೆಯದು", ಎನ್ನುತ್ತೇನೆ. ಆದರೆ ಅದಕ್ಕೂ ಆ ನವ್ಯರಿಂದ ತಿರಸ್ಕಾರಭಯ. ನನ್ನ ಬಿಟ್ಟು ಕದಲಲೊಲ್ಲದು; ಸಹನೆ, ಅಹಿಂಸೆ ಮತ್ತು ಉದಾರ ಸ್ನೇಹದ ಪ್ರತೀಕವಾಗಿ ತನ್ನ ಆ ಹೂವನ್ನು ತಳತಳನೆ ಹೊಳೆಸುತ್ತಾ ನಿಂತೆಡೆಯೇ ನಿಂತಿದೆ. ಸಂದರ್ಭ ಹೀಗೆ: ಅಂದಿನ ಹಿಂದಿನ ಸಂಜೆ ಯಾವ ಕಾರಣವೂ ಇಲ್ಲದೆ

ಬರಿ 'ಉಗುರು ತೀಟೆ'ಗಾಗಿಯೇ ಆ ಎಳಗಿಡದ ಕೋಮಲವಾದ ಎಳಗಪ್ಪು ಗೆಂಪಿನ ಚಿಗುರುಗಳನ್ನು ವೃಥಾ ಚಿವುಟಿ ಎಸೆದಿದ್ದೆ. ಆಮೇಲೆ ಆ ಗಿಡಕ್ಕೆ ನನ್ನಿಂದ ಯಾವ ಉಪಚಾರವಾಗಲಿ ಆಗದೆ ಈ ಅಪಚಾರ ನಡೆದುದಕ್ಕಾಗಿ ಮರುಗಿದೆ. ಮರುದಿನ ನಾನು ಬೆಳಗ್ಗೆ ಎದ್ದು ಹೊರಕ್ಕೆ ಬರುತ್ತಲೂ ತನಿ ಯಾದ ತಣ್ಗಂಪನ್ನು ಬೀರುತ್ತಾ ದುಂಡಾಗಿ ಕೆಂಪಾಗಿ ಕಣ್ಮನಗಳನ್ನು ಸೂರೆಗೊಳ್ಳುತ್ತಿರುವ ಒಂದೇ ಒಂದು ಹೂವನ್ನು ಇಕೋ ಎಂದು ಈ ಗಿಡ ನನ್ನ ಮುಂದೊಡ್ಡಬೇಕೆ! ನನಗೆ ತುಂಬ ಆಶ್ಚರ್ಯವಾಯಿತು, ತುಂಬ ನಾಚಿಕೆಯೂ ಆಯಿತು, ಅದರ ಆ ಅತಿಪ್ರಸನ್ನ ದೃಷ್ಟಿಗೆ, ಆ ಉದಾರ ಸ್ನೇಹಭಾವಕ್ಕೆ. ಅದಕ್ಕೊಂದು ಪದ್ಯ ಬರೆಯಬೇಕೆನ್ನಿಸಿತು; ಆದರೆ ಏಕೋ ಕೈ ಸಾಗಲಿಲ್ಲ. ಗುಲಾಬಿ ಗಿಡಗಳ ಚಿಗುರುಗಳನ್ನು ಮನುಷ್ಯ ಚಿವುಟಿ ಹಾಕುವುದೂ ಅವು ಹೂ ಬಿಡುವುದೂ ಇವನು ಅವನ್ನು ಎತ್ತುವುದೂ ನಿತ್ಯದ ಕೆಲಸ. ಈ ರೂಢಿಯ ಪ್ರಸಂಗ ದಲ್ಲಿ ನನ್ನ ಈ ತನಿಭಾವಗಳನ್ನು ಬಿಡಿಸಿ ಮನ ಮುಟ್ಟಿಸುವುದು ಕಷ್ಟ. ಈ ವಿಷ ಯದಲ್ಲಿ ಮಾತಿಗಿಂತ ಮೌನ ಲೇಸು. ಅಲ್ಲದೆ ಆ ಹೂವಿಗೂ ಗಿಡಕ್ಕೂ ನಾನು ಕೊನೆಯವರೆಗೂ ಋಣಿಯಾಗಿಯೇ ನಿಲ್ಲುವುದೇ ಶ್ರೇಯಸ್ಕರ ಎಂದುಕೊಂಡೆ. ಆದರೆ ಗಿಡ ಮಾತ್ರ ಸುಮ್ಮನಿರದು; ಆಗಾಗ ಸುಳಿದು ನನ್ನ ವಾಗೌದಾರ್ಯ ವನ್ನು ಅಣಕಿಸುತ್ತಲೇ ಇದೆ. ನಾಳೆಗಾಗಲಿ ಎನ್ನದೆ, ಹೋಗಿಬಾ ಎನ್ನದೆ, ಅದಕ್ಕೆ ನನ್ನ ಎರಡು ಕಾರ್ಪಣ್ಯದ ನುಡಿಗಳನ್ನು ತೆರಲು ಮನಸ್ಸೀಗ. ನೋಡೋಣ ಇವು ಸರಿಹೋಗುತ್ತವೋ ಎಂದು:

> ಬೆರಗುಗೊಳ್ಳುತ ದಾಸರೆಂದರು:
> ಹೂವ ತರುವರ ಮನೆಗೆ ಹುಲ್ಲನು
> ಹೊರುವ ನೆಮ್ಮಿಯ ಶ್ರೀಹರಿ.
> ಇರಲತ್ತಲಾ ಬಕುತಿ ಬೇಹರ:
> ಚಿಗುರ ಚಿವುಟಿದ ಕೆಡುಕ ನೆನೆಯದೆ
> ಮರುದಿನದಿ ನರುಗಂಪಿನರಳಿನ
> ಒಲುಮೆ ದಿಟ್ಟಿಯನೆನಗೆಯೆತ್ತುವ
> ಈ ಗುಲಾಬಿಯ ಗಿಡವೊ ತಹುದೆನ-
> ಗದಕುಮಿಗಿಲಾದಚ್ಚರಿ!

ನಿಜ, ಸಾಲದು. ಆದರೆ ನನ್ನ ಮನಸ್ಸಿನ ನೆಮ್ಮದಿಗೆ ಈ ವಿರೇಚನ ಅವಶ್ಯಕ.

ಈ ಹೂಗೆ ಈ ಮಾತು ಸಲ್ಲಿಸುತ್ತಾ, ನನ್ನ ಮನಸ್ಸು ನನ್ನ ಅಂದಿನ ಮನೆಯ ಹೊರ ಬಯಲಿನಲ್ಲೂ ಹಿತ್ತಿಲಿನಲ್ಲೂ ಅಲೆದಾಡಲು ಹತ್ತಿರುವಾಗ, ಅಲ್ಲಿ ದೃಷ್ಟಿಗೆ ಬೀಳುವುದು ಒಂದು ದಾಳಿಂಬೆಯಗಿಡ. ಅದರ ತುಂಬ ಕೆಂಪು ಹೂಗಳು. ದಾಳಿಂಬೆಯ ಹಣ್ಣಿಗೊಂದು ಪದ್ಯ ಕಟ್ಟಿದ್ದೇನೆ. ಆದರೆ ಹೂವಿಗೆ ಬೇಡವೆ, ಗಿಡಕ್ಕೆ ಬೇಡವೆ? ಈ ಬಗೆಗೆ ಹಿಂದೆ ನನ್ನ ಮನಸ್ಸಿನಿಂದ ಒಂದೆರಡು ಸಾಲುಗಳು ಜಾರಿ ನನ್ನ ಜೇಬಿನ ಪುಸ್ತಿಕೆಗಳಲ್ಲಿ ಚೆಲ್ಲಿಹೋಗಿರಬೇಕಲ್ಲವೆ? ಎಂದು ನನ್ನ ಹಳೆಯ ನೋಟು ಬುಕ್ಕುಗಳ ಹಾಳೆಗಳನ್ನು ತಿರುವಿಹಾಕುತ್ತಲೂ ಈ ಸಾಲುಗಳು ಕಣ್ಣಿಗೆ ಬೀಳುತ್ತವೆ:

ತಳಿರಗೆಂಪ ಎಲೆತೊಟ್ಟಿನೊಳುಳಿಸಿ
ಚಳಿಗಾಲದಿ ಚೆನ್ನಲರಂ ಮರೆಸಿ
ತೆಳ್ಳನೆ ರೆಂಬೆಗೆ ಮುಳ್ಳನು ಕವಿಸಿ—

ಮುಂದಕ್ಕೆ? ಆದಿ ಮತ್ತು ಅಂತ್ಯಪ್ರಾಸಗಳ ಗೊಂದಲದಿಂದಲೋ ಏನೋ ಇದರ ಕಾಲುಡುಗಿ ಹೋಗಿರಬಹುದು, ಅಥವಾ ಭಾವವೇ ಅಲ್ಲಿಗೆ ಬರಿದಾಗಿರಬಹುದು—ಅಥವಾ ಭಾವ ತುಂಬ ದೊಡ್ಡದಾಗಿ ಒಂದು ಸಾಲಿಗೆ ಅಳವಡದಿದ್ದಿರಬಹುದು, ಹೀಗೆ: ಮಾಗಿಯ ಸಹವಾಸದಿಂದ ಬೆಳ್ಳತನಕ್ಕಿಳಿದಿರುವ ಸೂರ್ಯನಿಗೆ ತನ್ನ ಹೂ ಕಹಳೆಯಿಂದ, ಗ್ರಹಾಂತರದಲ್ಲಿ ಇಳಿದ ಸಾಹಸಿ ತಾನು ಕೃತಕೃತ್ಯನಾದ ಪರಿಯನ್ನು ಕುರಿತು ದೂರ ಮತ್ತೊಂದು ಗ್ರಹದಲ್ಲುಳಿದ ತನ್ನ ಸ್ನೇಹಿತನಿಗೆ ಸುದ್ದಿ ಕಳಿಸುವಂತೆ, ಏನೋ ಒಂದು ಸನ್ನೆ ಮಾತನ್ನು ರವಾನಿಸಲು ಹವಣಿಸಿರಬಹುದು ಈ ಗಿಡ. ಇದನ್ನು ಮುಕ್ಕಾಲಾಗಿ ಬಿಡುವುದು ಉಚಿತವಲ್ಲ. ಸ್ವಲ್ಪ ಬುದ್ಧಿಯೋಡಿಸೋಣ: ಇದು ಹೇಗೆ?

ಸಿಳ್ಳು ಹಾಕುತಿದೆ ಬೆಳ್ಳ ಹೊತ್ತಿಗೆ

'ಬೆಳ್ಳ'ಎಂಬುದರ ಶ್ಲೇಷೆ ಇದಕ್ಕೆ ವ್ಯಂಗ್ಯಾರ್ಥದ ಕಳೆಯನ್ನು ಕೊಟ್ಟೀತು. ಸದ್ಯ, ಪಾದಪೂರಣ ಒಂದರ್ಥದಲ್ಲಿ ಸಮರ್ಪಕವಾಗಿಯೇ ಆಯಿತೆನ್ನಬೇಕು. ಇದೇ ಗಿಡವನ್ನು ಕುರಿತು ಒಂದು ಹಾಡೂ ನನ್ನಿಂದ ಹೊರಟಂತಿದೆ—ಅಲ್ಲ ಅದರ ಹೂಗಾಲವನ್ನು ಕುರಿತು. ಆದರೆ ಅದಿರುವುದು ಒಂದು ಸಾಲು ಮಾತ್ರ: 'ದಾಡಿಮ ಸುರಕ್ತಸುಮ ರಂಜಿತ ಹಿಮಂತಸಮಯ' ಆದರೆ, ನನಗೆ ಈಗ ಹಾಡುವ ಸಮಯ

ಮೀರಿತು. ಅಷ್ಟಕ್ಕೂ ಇದನ್ನು ಬರೆದು ಮುಗಿಸಲಿಲ್ಲ ಎಂದು ಯಾರು ಅಳು ವವರು? ನಾನಂತೂ ಅಲ್ಲ.

ಹೀಗೆಯೇ, ಪುಟತಿರುವುತ್ತಾ ಹೋದರೆ, ನನ್ನ ಕಾರ್ಖಾನೆಯಲ್ಲಿ ಅನೇಕ ಸರಕುಗಳು ಬಿದ್ದಿವೆ. ಕೆಲವಕ್ಕೆ ಕಾಲಿಲ್ಲ, ಕೆಲವಕ್ಕೆ ಕಣ್ಣಿಲ್ಲ, ಕೆಲವು ಕುಂಟುತ್ತವೆ, ಕೆಲವಕ್ಕೆ ಮೆಳ್ಳೆಗಣ್ಣು—ಹಾಯುವುದೊಂದೆಡೆಗೆ, ನೋಡುವುದೊಂದೆಡೆಗೆ— ಕೆಲವು ಸಂಗಾತಿಗಳಿಲ್ಲದೆ ಏಕಾಂತವಾಗಿಯೇ ಬಿದ್ದಿವೆ, ಕೆಲವಂತೂ ಒಂದು ದೊಡ್ಡ ನಾಟಕವನ್ನೋ ಒಂದು ಪ್ರಗೀತವನ್ನೋ ಪ್ರಗಾಥವನ್ನೋ ಬೇಡುತ್ತವೆ. ಆದರೆ ಇವನ್ನು ಹೀಗೆ ಅರೆಕೊರೆಯಾಗಿಯೇ ಹೊರಗೆಡಹುವುದು ಉಚಿತವಲ್ಲ; ಅವನ್ನು ಪೂರ್ಣಗೊಳಿಸುವ ಸ್ಫೂರ್ತಿಯಾಗಲಿ ಸಾಮರ್ಥ್ಯವಾಗಲಿ ನನಗೊದಗುವ ಸಂಭವವೂ ಕಡಮೆ. ಹೀಗೆಂದು ನಾನು ರಟ್ಟುಮುಗುಚಿ ಪುಸ್ತಕಗಳನ್ನು ಮುಚ್ಚಲು ಹವಣಿಸಿದಾಗ ಅಲ್ಲಿನ ಕೆಲವು ನನ್ನ ಕುರಿತು ಹೀಗೆನ್ನುತ್ತವೆ:

“ನೀನು ಹುಂಬ, ನಿನಗೋ ತುಂಬ ಜಂಬ. ಕಾಲಸ್ಥಿತಿಯನ್ನು ನೀನರಿಯೆ. ಒಂದು ಪಕ್ಷ ಒಂದು ಇಡೀ ಪದ್ಯವನ್ನೇ, ಇಡೀ ಪ್ರಗಾಥವನ್ನೇ ಬರೆದೆ ಎಂದಿಟ್ಟು ಕೊಳ್ಳೋಣ. ಅದನ್ನು ಯಾರು ಓದುವವರು? ವಿಮರ್ಶಕರಿಗೂ ಸಹ ಬೇಕಾದು ದೇನು? ಹೊಗಳಲೋ ತೆಗಳಲೋ ಒಂದೆರಡು ಸಾಲುಗಳು, ಅಷ್ಟೆ. ಒಂದು ವೇಳೆ ನೀನು ಬರೆದುದನ್ನು ಅವರು ಗಮನಿಸಿದರೆ ಅವರು ಎತ್ತಿಕೊಳ್ಳುವುದೂ ನೀ ನಿಲ್ಲಿ ಉದುರಿಸಿರುವ ಸಮ್ಮಂಥವನ್ನೇ, ಏಕೆಂದರೆ, ನಿನ್ನ ಭಾವತುಂಬಿ ಬಂದಾಗ ಸರಾಗವಾಗಿ ತುಳುಕಿದವು ನಾವು. ನಮ್ಮಿಂದ ಮುಂದೆ ಅವರು ಓದುಗರನ್ನು ಬಿಡುವುದೇ ಇಲ್ಲ. ವಿಮರ್ಶೆಯನ್ನು ಓದಿ ಪುಸ್ತಕವನ್ನೂ ಓದಬೇಕೆನ್ನಿಸಿದರೆ ಆತ ನೆಂಥ ವಿಮರ್ಶಕ, ಒಂದು ನೋಟದಲ್ಲೇ ಎಲ್ಲವನ್ನೂ ಜಾಲಾಡಿಸಿ ಬಿಡದವ? ಅಂದವಲ್ಲಿ ನಾವು ನೀನು ರಚಿಸಬೇಕಾದುದೆಲ್ಲವನ್ನೂ ಮೀರಿಸಿದ್ದರಿಂದಲೇ ಈ ಸ್ವರ್ಣಕ್ಷಣಿಕೆಗಳು ಎಲ್ಲಾದರೂ ಸುಣಚಿಕೊಂಡಾವು ಎಂದು ನೀನು ಕೂಡಲೆ ರೇಖಿಸಿಕೊಂಡುಬಿಟ್ಟೆ.” ಇವುಗಳ ಮಾತಿಗೆ ಮಿಕ್ಕವೂ ಜತೆಗೂಡಿಸಿ ತಮ್ಮನ್ನು ಇದ್ದ ಇದ್ದ ಹಾಗೆಯೇ ಬೆಳಕಿಗೆ ಒಡ್ಡಲು ಕೋರುತ್ತವೆ. ಅವುಗಳ ಮಾತುಗಳಲ್ಲೂ ತಥ್ಯಾಂಶವಿಲ್ಲದೆ ಇಲ್ಲ—ಅವೆನ್ನುತ್ತವೆ. “ನಾವೆಲ್ಲ ಮುಕ್ತಿಯನ್ನು ಕಾಣುವುದು ವಿಮರ್ಶಕರ, ವಿದ್ವಾಂಸರ, ವ್ಯಾಖ್ಯಾನಪಟುಗಳ, ಉಪನ್ಯಾಸ ವಿಶಾರದರ ಉಕ್ತಿ, ಉದ್ಧರಣಗಳಲ್ಲಿ ಮಾತ್ರ. ಇಡೀ ರಾಮಾಯಣದಲ್ಲಿ ವ್ಯಾಖ್ಯಾತರ

ಬಾಯಲ್ಲಿ ಬರತಕ್ಕವು ಎಷ್ಟು—ನೂರಕ್ಕೆ ಏಕ್ಕಾವೇ? ಆದರೆ ವಾಲ್ಮೀಕಿ ೨೪೦೦೦ ಶ್ಲೋಕ ಬರೆದನಲ್ಲ. ಪ್ರವಚನಪಟುಗಳೆಲ್ಲರೂ ಉದ್ಧರಣೈಕಪ್ರಿಯರು. ಕಾಳಿದಾಸನ 'ರಘುವಂಶವನ್ನು ಓದಿರುವವರೆಷ್ಟು ಮಂದಿ ಇದ್ದಾರೆ? 'ಸಂಚಾರಿಣೀ ದೀಪಶಿಖೇವ' ಎಂಬಲ್ಲಿಗೆ ಅವನ ಉಪಮೆ ಮುಗಿಯುತ್ತದೆಯಲ್ಲವೆ? ಅಂಥ ಉದ್ಧರಣಕ್ಕೆ ನಾವೂ ತಕ್ಕವರು. ತುಂಬುಗವಿತೆಗೆ ಆಸೆ ಪಡಬೇಡ, ಅದನ್ನು ಓದುವುದಕ್ಕೆ ಯಾರಿಗೂ ಅಷ್ಟು ವ್ಯವಧಾನವೂ ಇಲ್ಲ. ಅಲ್ಲದೆ ನಮ್ಮಂಥವರಿಗೆಲ್ಲ ಉದ್ಧರಣಗಳಲ್ಲೇ ಅಷ್ಟಿಷ್ಟುಳಿವು. ನವ್ಯಕವಿಗಳೂ ಹಳಗಬ್ಬಗಳನ್ನು ಪುರಸ್ಕರಿಸುವುದು ತಮ್ಮ ಕವಿತೆಗಳ ಹೂರಣವಾಗಿ ಅಲ್ಲಲ್ಲಿ ಅಷ್ಟಿಷ್ಟು—ಒಂದು ತುಣುಕು, ಒಂದು ಚೂರು, ಒಂದು ಅಣುಕು, ಒಂದು ಮಣುಕು. ಈ ಉಳಿವ ಅವಕಾಶವನ್ನು ನೀನು ನಮಗೆ ತಪ್ಪಿಸಬಾರದು ಕಂಡೆಯಾ"—ಮತ್ತೆರಡು ಸಾಲು ಈ ವಾದವನ್ನು ಸಮರ್ಥಿಸುತ್ತಾ ಈಗ ಎದ್ದು ನನ್ನ ಕಣ್ಣಮುಂದೆ ಠರಾಯಿಸುತ್ತಿದೆ:

ಬಿಸಿಲೊಳು ಗಾಜಿನ ಮಣಿಗೂ ಮೆರುಗು
ನೆರಳೊಳು ರತ್ನಕು ಬರಿ ಬರಿ ಕೊರಗು
ನಗುವುದು ಕಲೆ ಹೆಮ್ಮೆಗೆ ಮರೆದೈವ
ಎಲ್ಲದಕೂ ಬೆಲೆ ಒಳ್ಳಿಯ ಜಾವ

ನಿಜ. ಯಾವವುಗಳ ಜಾತಕ ಯಾವ ರೀತಿಯಿವೆಯೋ—ನಾನು ತುಂಬ ಮೆಚ್ಚಿಕೊಂಡಿದ್ದ ಎಷ್ಟೋ ಕವನಗಳಿಗೂ ಗೀತಗಳಿಗೂ ನಾಟಕಗಳಿಗೂ ನಾನೊಬ್ಬನೇ ಸಹಸ್ರಾರು ಮಂದಿ ಓದುಗರನ್ನು ಸಹಸ್ರಾರು ಸಲ ಓದುವುದರಿಂದ ಒದಗಿಸುವಂತಾಗಿದೆ. ಮತ್ತೆರಡು ಸಾಲುಗಳೂ ನೀಲಿಸವಷ್ಟು ದಿಟ್ಟತನದಿಂದಲ್ಲದಿದ್ದರೂ ಆ ಭಾವವನ್ನೇ ಪೋಷಿಸುತ್ತವೆ—ಹೆಚ್ಚು ನಮ್ರವಾಗಿ: ತಮ್ಮ ಗುನ್ನಾಂಪಟ್ಟಿತನಕ್ಕೆ ಅವು ಮರುಗುವಂತೆ ಕಾಣಲಿಲ್ಲ:

ಬೆಳಕಿತ್ತ ಮೆರುಗ ತಾ ಬೆಳಕಿಗೇ ತೆತ್ತು
ಕಳೆಯುಳಿವ ಬೇಗಡೆಯೊಳೇನಿಹುದು ಕುತ್ತು
ಅದು ನಡೆವತನಕವೂ ನಾವು ಜತೆಗೇ ನಡೆಯೆ
ಹೊನ್ನಿನೊಳಗೇನಿದೆ ಮಹತ್ತು?

ಅಹುದಹುದು, ಈ ವಾದಕ್ಕೆ ಪ್ರತಿಯಿಲ್ಲ. ಬೇಗಡೆಯಿಲ್ಲದಿದ್ದರೆ ಬಡವರ ಹೊನ್ನಾಸೆಯ ಗತಿಯೇನು? ಆಸೆ ತೀರಿದಮೇಲೆ ಅವೆರಡಕ್ಕೂ ಏನು ವ್ಯತ್ಯಾಸ? ಇಗೋ ಈ ನಾಲ್ಕು ಸಾಲುಗಳೂ ಈ ವಾದವನ್ನೇ ಮತ್ತೊಂದು ಬಗೆಯಲ್ಲಿ ಎತ್ತಿ ಹಿಡಿವಂತಿದೆಯಲ್ಲ :

ಮುಂಬೆಳಗಾರಿತು ಹೊಂಬೆಳಗಿನೊಳೆ
ತುಂಬು ಹರೆಯದೊಳು ತುಂಬಿತು ಹಸುಳೆ
ರಂಗು ರಂಗಿನೀ ಹೃದಯದ ಚೆಂಬೆಳ-
ಕಿಂಗಿತು ಹೊಳನುಡಿಯಂಗದೊಳೆ

ಇವು ಮಿಕ್ಕವಷ್ಟು ಮುಗ್ಧವಲ್ಲ; ಒಂದು ದೊಡ್ಡ ವ್ಯಾಖ್ಯಾನವನ್ನೇ ಬೇಡುತ್ತವೆ. ಎರಡನೆಯ ಸಾಲಿನ ಅರ್ಥ, ಹಸುಳೆಯ ಮಾರ್ದವ ಕೋಮಲತೆಗಳು ಅದೇ ಹಸುಳೆ ಬಳೆ ಬಳೆಯುತ್ತಾ ತುಂಬುಹರೆಯಕ್ಕೇರಿದಾಗ ಆ ಹರೆಯದ ಮೆರುಗಿನಲ್ಲಿ ಅಂತರ್ಹಿತವಾಗುತ್ತವೆ ಎಂದು. ಹಾಗೆಯೇ ಅನೇಕ ದಿನಗಳು ತಮ್ಮೈಸಿರಿಯಿಂದ ನನ್ನ ಮನಸ್ಸನ್ನು ತುಂಬಿ ಮಹೋತ್ಸವಗೊಂಡಿದ್ದ ಕನಸು ಕಣಸುಗಳು ಒಂದು ಹೊಳನುಡಿಯಲ್ಲಿ ಬಂದು ಸೇರಿಕೊಂಡು ಮಾಯವಾಗಿಬಿಡುತ್ತವೆ. ಈ ಬಿಡಿನುಡಿಗಳಲ್ಲೂ ಇಂಥವಿರಬಹುದು. ಇವುಗಳಿಂದ ಆ ದಿನಗಳ ಐಶ್ವರ್ಯವನ್ನು ಬಿಡಿಸಿಕೊಳ್ಳಬಲ್ಲ ಸಮರ್ಥರು ಬಿಡಿಸಿಕೊಳ್ಳಲಿ; ನನಗೇನು ಇದರಿಂದ ಬಾಧೆ? ಈ ಗ್ರಂಥದಲ್ಲಿ ಮೊಳಗುವ ಗಾರ್ದಭಧ್ವನಿಯ ಸುಮುಹೂರ್ತದಲ್ಲಿ ಇವನ್ನು ಏಕೆ ಹೊರಬಿಡಬಾರದು; ನನ್ನ ಕಾರ್ಖಾನೆಯ ಸೆರೆಮನೆಯಲ್ಲಿ ಏಕೆ ಕೊಳೆಯಿಸಬೇಕು? ಎಂದು ಬಾಗಿಲನ್ನು ಹಾರುಬಡಿಯುವಂತೆ ಹಾಳೆಗಳನ್ನು ಪುನಃ ತಿರುವಿಹಾಕಲು ಪ್ರಾರಂಭಿಸುತ್ತೇನೆ.

ಮೊದಲು ಕಣ್ಣಿಗೆ ಬೀಳುವುದು ನಮ್ಮ ಮನೆಯಂಗಳದ ಬಿಸಿಲಿನ ಮೇಲಿನ ನಾಲ್ಕಾರು ಸಾಲುಗಳು. ಆ ಮನೆಯ ಸ್ವಾರಸ್ಯವೆಲ್ಲ ಅದರ ಹರವಾದ ಕಾಂಪೌಡಿನ ಆವರಣ, ಅಲ್ಲಿನ ತೆಂಗಿನಮರ, ಆಚೆಬೀದಿಯ ಕೈದೋಟಗಳು ಮತ್ತು ರಸ್ತೆಯ ಉನ್ನತ ವೃಕ್ಷಗಳು, ಹಿತ್ತಲಿನ ದಾಸವಾಳದಗಿಡ, ಮಗ್ಗುಲು ಮನೆಯ ಬನ್ನಿ, ಕಿರುನೆಲ್ಲಿ, ಬಾದಾಮಿ, ಹಲಸಿನ ಮರಗಳು. ಅಲ್ಲಿ ನಮ್ಮಂಗಳದಲ್ಲಿ ಬೀಳುವ ಬಿಸಿಲಿನ ಸ್ವಾರಸ್ಯವೇ ಸ್ವಾರಸ್ಯ—ಒಂದು ದಿನ ಹೀಗೆನ್ನಿಸಿತು :

ಸ್ವರ್ಗದ ಕದಳೀವೃಕ್ಷದ ಪರ್ಣವ
ಕೆಡಹಿದನೋ ಈ ನೆಲದೊಳು ಗರುಡ
ಎನೆ ಮೆಲುಪಿನ ಹೊಂಬೆಳಕೀ ಮನದೊಳು
ಎಬ್ಬಿಸಿಹುದು ನಲ್‌ಕಳೆಗಳ ಹುರುಡ

ನಿಶ್ಚಯ, ಆ ಬೆಳಕಿನ ಅಂದವನ್ನು ನೆನೆದುಕೊಂಡರೆ ಈಗಲೂ ನನ್ನ ಮನಸ್ಸು ಕಳೆಗೊಳ್ಳುತ್ತದೆ. ಆ ಬಣ್ಣದ ಚೆಲುವನ್ನು ಹೇಳಿ ತೀರಿತು—ಎಲೆಗಳ ಮೂಲಕ ತೂರಿಬರುವುದರಿಂದ ಈ ಬಿಸಿಲು ನಸು ಹಸುರಿನ ಹಳದಿ ಬಣ್ಣವನ್ನು ತಳೆದು ತುಂಬ ಚೆಲುವಾಗಿದೆ. ಅದೇ ಬೆಳಕು, ಅತ್ತ ಬಿದ್ದಿರುವುದು, ನಮ್ಮ ಅಂಗಳದಲ್ಲಿ ನಷ್ಟು ಚೆಲುವಲ್ಲ. ಈ ಬಿಸಿಲೂ ಅದರೊಡನಾಡುವ ನೆರಳುಗಳ ಲೀಲೆಯೂ ನನಗೆ ಮರುಳುಗವಿಸುತ್ತವೆ. ಈ ಸಾಲುಗಳನ್ನು ನೋಡಿ, ಅದನ್ನೇ ಕುರಿತದ್ದು :

ಬಿಡುವೊಳು ಪವಡಿಸಿಹ
ಬಿಸಿಲಿನ ಬೆನ್ನಿನ ನವೆಯನು ತುರಿಸುತಲಿ
ತೆಂಗಿನ ಗರಿ ನೆರಳು
ಬೆರಳಾಡಿಸುತಿದೆಯಿಕೊ ನಮ್ಮಂಗಳದಿ

ಇವರ ಸೊಗಸು ಇಷ್ಟಕ್ಕೇ ಮುಗಿಯುವುದಿಲ್ಲ. ಸ್ವಲ್ಪ ಮಳೆ ಬಂದು ಗರಿಕೆ ಹಸುರಿನ ಮೇಲೆ ಜಲಬಿಂದುಗಳು ಮುತ್ತಿನ ಮಣಿಗಳ ಹಾಗೆಯೇ ಕೋದು ನಿಂತಿರುವಾಗ, ಬಿಸಿಲು ಬಿದ್ದು, ಅದೇ ತೆಂಗಿನ ಮರದ ಗರಿಯ ನೆರಳುಗಳು ಆ ಗರಿಕೆ ಹಸರದ ಮೇಲೆ ಆಡುತ್ತಾ ಅದನ್ನು ಎಷ್ಟು ಸಲ ತಡವಿದರೂ ಆ ಮುತ್ತಿನ ಮಣಿಗಳು ಕೆಳಗುರುಳದೆ ಇದ್ದ ಹಾಗೆಯೇ ಇರುತ್ತವೆಯಲ್ಲ! ಅದನ್ನು ಉರುಳಿ ಸುವ ಚೈತನ್ಯ ಅವಕ್ಕೆ ಇಲ್ಲ. ಅಥವಾ ಅವುಗಳ ಮಮತೆಯ ಕೈಯಾಡಿಸಿಕೆ ಅಷ್ಟು ಕೋಮಲವಾಗಿದೆ! ಈ ಆಶ್ಚರ್ಯವನ್ನು ಈ ಸಾಲುಗಳು ಕೊಂಡಾಡ ಹೊರ ಟವೆ :

ಮಳೆ ತೊಯ್ದಿಳೆಯೊಳು ಮಾಯಾಜಾಲವ
ಹರಡಿದೆ ಬೇಸಗೆಯೆಳೆಬಿಸಲು
ಹನಿಮುತ್ತುರುಳದ ತೆರದೊಳು ಗರಿಕೆಯ
ನೇವರಿಸುತ್ತಿದೆ ಗರಿನೆರಳು

ಈ ಬೆಳಕಿನ ಜೊಂಗಡೆ ನನ್ನ ಮನಸ್ಸೀಗ ನನ್ನೆಳತನದ ನೆನಪುಗಳತ್ತ ಹಾಯುತ್ತದೆ. ಮೊದಲು ನೆನಪಿಗೆ ಬರುವುದು ನನ್ನ ತಾಯಿಯ ತವರುಮನೆ ಗೊರೂರು; ಅದು ಕೆಳೆಯನ ಊರೂ ಆಹುದು. ಅದಕ್ಕೊಂದು ಹಾಡು ಬರೆಯ ಬೇಕೆಂದು ಹವಣಿಸಿದ್ದೆಸಲ್ಲವೆ? ಒಂದು ಗೀತರೂಪಕ ನಡುವೆ ಅಡ್ಡ ಬಂದು ಅದನ್ನು ನುಂಗಿತಲ್ಲವೆ? ಅದರ ಚೂರುಪಾರು ಎಲ್ಲೋ ಬಿದ್ದಿರಬೇಕು—ಇಕೊ:

ಹಗಲಿರುಳಿನ ಪದಪದರವ ತೆರೆಯುತ
ತೆರಳಿಲೆ ತಾರುಣ್ಯದ ದಿನಕೆ—ಮನ,
ಮರಳದ ಮರುಳಿನ ಎಳತನಕೆ
ತಿಳಿವಿನ ತೇಜದಿ ತಳಿರಿನ ಪರಿ ಅನು.
ರಾಗವ ಬಿಡಿಸುತ ಹೊಳೆದುದಕೆ—ಹೊಂ.
ಬಳಿಯ ದಿಗಂತಕೆ ಹೊರಟುದಕೆ

ಇದರ ಮುಂದುವರಿಕೆಯ ಸಾಲುಗಳು ಇನ್ನೆಲ್ಲೋ ಹೊಳಹು ಹಾಕಿವೆ:

ಇಬ್ಬನಿತಂಪಿನ
ಸುರಗಿಯ ಕಂಪಿನ
ಸಂಪಿಗೆಯುಪ್ಪಿನ ಗೆಲುಗಾಳಿ—ನೆಲ.
ಸಂಪಿಗೆ ಕೊಪ್ಪಿನ ಕೆನ್ನೀಲಿ
ಹಿತ್ತಿಲ ಗಿಡಗಳ
ಕತ್ತಲೆಯನು ತ.
ನ್ನತ್ತಲೆ ಸೆಳೆಯುವ ಹೂ ಬೇಲಿ—ಹಿರಿ.
ಸುತ್ತಿನ ತಾಳಿನ ಹೆಜ್ಜಾಲಿ

ಹೀಗೆ ಹಿತ್ತಲಲ್ಲಿ ಹರಿವು ತೋಪಿನಲ್ಲಿ ನಿಂತು ಹೊಳೆಯತ್ತ ಹೊರಳುತ್ತದೆ ಮನಸ್ಸು, ಮತ್ತಷ್ಟು ದಿನಗಳನಂತರ:

ಬೆಳಕಿನ ಮದಿರವ
ಕುಡಿದಮಲೇರುವ
ಚಿನ್ನಲೆಮುಲೆತದ ಹೊನ್ನಾರು—ನ.
ನ್ನೆಳನ್ಮೈ ಜಳಕದ ತಣ್ಣೀರು

ಈ ತಣ್ಣೀರಿನ ಮಜ್ಜನದ ಸುಖ ಪದ್ಯಕ್ಕೆ ಬಿರಿ ಹಾಕಿತೋ ಏನೋ. ಉದ್ಯಮ... ಪರಮಶತ್ರು ಸಂತೋಸ. ಜರ್ಮವಿಳಿದಮೇಲೂ ಸ್ವಲ್ಪ ಪ್ರಯತ್ನಪಟ್ಟಿದ್ದ...

ಇದನ್ನು ಮುಗಿಸಬಹುದಾಗಿತ್ತೇನೋ, ಬರಿಯ ಅಭ್ಯಾಸಬಲದಿಂದ, ವ್ಯುತ್ಪತ್ತಿಯ ಬಲದಿಂದ. ಆದರೆ ಹಾಗೆ ನಡೆಸುವ ಕವನ ಗಾರ್ಹಸ್ಥ್ಯ ದಾಂಪತ್ಯದಂತೆ. ನನಗೋ ಎಂದೂ ಪ್ರಣಯಿಯಾಗಿರಬೇಕೆಂಬಾಸೆ. ಆದರಿಂದಲೇ ಇಂಥ ಎಷ್ಟೋ ಕವನಗಳ ಕೈಬಿಟ್ಟು ಸ್ವರ್ಣಕ್ಷಣದ ಮರಳಿಕೆಯನ್ನು ಕಾದುಕುಳಿತೆ. ಹೀಗೆಂದು ನನ್ನ ಬೆನ್ನನ್ನು ನಾನೇ ತಟ್ಟಿಕೊಳ್ಳುತ್ತಾ ಮತ್ತೊಂದು ಹಾಳೆಯನ್ನು ಮಗುಚಿದರೆ, ಅದು ನನ್ನನ್ನು ಪಶ್ಚಿಮವಾಹಿನಿಯಾದ ಕಾವೇರಿಯ ತೀರಕ್ಕೆ ಒಯ್ಯುತ್ತದೆ. ಅಹುದು, ಅದು ಮನೋಹರವಾದ ರಾತ್ರಿ: ಆಗ ಈ ಸಾಲು ರೂಪಗೊಂಡಿತು

ದಡದ ದೀಪದ ನೆಳಲ ತಂಬೂರಿಯನು ಮಿಡಿದು
ಹಾಡಿ ಹೊಳೆ ಹರಿಯುತಿರಲು

ಎಂದು. ಇಲ್ಲಿ ಉದ್ದಿಷ್ಟವಾದುದು ದಡದ ಎಲೆಕ್ಟ್ರಿಕ್ ದೀಪ ನೀರಿನ ಮೇಲೆ ತನ್ನ ಬಿಂಬವನ್ನು ಚೆಲ್ಲಿರುವುದು. 'ನೆಳಲು' ಪ್ರಾಯಶಃ ಒಳ್ಳೆಯ ಪದವಲ್ಲವೇನೋ. ನೀರಿಗೆ ಬಿದ್ದ ಜಾಗದಲ್ಲಿ ಬಲ್ಬಿನ ಪ್ರತಿಬಿಂಬ ತಂಬೂರಿಯ ಬುರುಡೆಯಂತೆ ಹರವಾಗುತ್ತದೆ; ಅದೇ ಮುಂದೆ ನೀಳ್ದು ದಂಡಾಕಾರ ತಾಳುತ್ತದೆ. ಹೊಳೆಯ ಹರಿವಿನ ಮೆಲ್ಲಲೆಗಳು ಅದನ್ನು ಮಿಡಿಯುವಂತೆ ತೋರುತ್ತವೆ. ಇದು 'ರಸ ಸರಸ್ವತಿಯಲ್ಲಿ' ಬರಬೇಕಾಗಿದ್ದ ಸಾಲು—ಅಲ್ಲಿಂದ ಏಕೆ ನುಣಚಿಕೊಂಡಿತೋ ಕಾಣೆ. ಪ್ರಾಯಶಃ ಸಂಗತವಾಗುವುದಿಲ್ಲವೆಂದು ಆಗ ಎನಿಸಿರಬೇಕು.

ಇಲ್ಲಿಂದ ಮನಸ್ಸು ದೀಪದ ಬಳಿಯನ್ನೇ ಹಿಡಿದು ಕಾರ್ತಿಕದ ದೀಪೋತ್ಸವದತ್ತ ಹಾರುತ್ತದೆ. ಅದು ಶ್ರೀಹರಿ ಶಯನಕ್ಕೆ ಹೋಗುವ ರಾತ್ರಿ. ಗುಡಿಯ ಮುಂದಿನ ದೀಪಸ್ತಂಬದ ಮೇಲೆ ಜ್ಯೋತಿ ಉರಿದಾರುತ್ತಿದೆ. ಉತ್ಸವ ಮೂರ್ತಿಯ ಎದುರು ತುಪ್ಪದಲ್ಲಿ ನೆನೆದ ಹೊಸ ಬಟ್ಟೆಯನ್ನು ಹಿಡಿದು ಅಗ್ನಿ ತೇಜಸ್ಸು ವರ್ಧಿಸುತ್ತಾ ತನ್ನಾಸರೆಯನ್ನು ತಾನೇ ಸುಡುತ್ತ ಬಯಲಾಗುತ್ತಿದೆ. ಆ ಮನೋಹರವೂ 'ಧ್ವನಿ'ಪೂರ್ಣವೂ ಆದ ದೃಶ್ಯದ ತುಣಕೊಂದು ಈ ಹಾಳೆಯಲ್ಲಿ ಶಯನಿಸಿದೆ:

ಗುಡಿಯುದಿರ ಬೆಳಗಂಬವೇರಿದ ಬೆಳಕು ಬಯಲೊಳಗಾರಿತು
ಸುಡುಸುಡುತ ಉಡುಗೊರೆಯ ಸರಿದುರಿ ಬಾನವರ ನೆಲೆಗೇರಿತು
ಕಡಲೊಳಗೆ ಫಣಿಶಯನದೊಳು ಹರಿ ಯೋಗನಿದ್ರೆಗೆ ಸಂದನು
ನುಡದಿಯುಳಿ ತನ್ನೊಳಗಿಗಿಳಿದಳು ಕಾಣೆ ಮುಂದಿನ ಹೊಂದನು

("ತನ್ನೊಳಗೆಯಿಳಿದಳು" ಎಂದರೆ ಪ್ರಾಯಃಶಃ ನನ್ನ ಸ್ನೇಹಿತರು ಒಪ್ಪುತ್ತಿದ್ದರೋ ಏನೋ. ಆದರೆ ನನ್ನರ್ಥವನ್ನು ಅದು ತೆಳ್ಳನೆ ಮಾಡಿಬಿಡುತ್ತದೆ.) ಇದು ಇಷ್ಟಕ್ಕೆಯೇ ನಿಂತು, 'ಚಳಿಗಾಲವೇ ಚೆಲುವು' ಎಂಬ ಹಾಡು ತನ್ನ ಪೂರ್ಣ ಸ್ವರೂಪದಲ್ಲಿ ನನ್ನಿಂದ ಜಗುಳಿತು—ಇದೊಂದು 'ಕ್ಷಣವಿಲಾಸ'ವಲ್ಲವೆ? ಇವರಂತೆಯೇ ಚಂದ್ರೋದಯದ ಒಂದು ಸ್ವರ್ಣಕ್ಷಣದ ಸೆರಗನ್ನು ಹಿಡಿಯಲು, ಪುರೂರವನು ಊರ್ವಶಿಗೆ ಎಂತೋ ಅಂತೆ, ತನ್ನ ಕೈಯನ್ನು ಚಾಚಿದೆ: 'ಮೂಡುತಿವೆ ಮಲೆಗುಡಿಯ ಬೆನ್ನ ಬಾನಂಚಿನೊಳು ಹೊನ್ನ ಸೊಡೆಗಳಿಗೆ' ಎಂಬ ಸಾಲು. ಆದರೆ ಒಲಿದವರು ಬೇಡಬಲ್ಲರೇ ಹೊರತು ಬಲಾತ್ಕರಿಸುವವರಲ್ಲ. ಇಂಥ ಸುವರ್ಣಸಮಯಗಳೆಷ್ಟೋ, ದೇವತೆಗಳಂತೆ ತಮ್ಮ ಹೆಜ್ಜೆಯ ಗುರುತುಗಳನ್ನು ಸಹ ಬಿಡದೆಯೇ, ನುಡಿಯಲ್ಲಿ ಕಾಲೂರದೆಯೇ, ನಡೆದುಬಿಟ್ಟವೆ.

ಬಹು ಹೃದಯಸ್ಪರ್ಶಿಯಾದ ಸಂಗೀತವನ್ನು ಕೇಳಿದಾಗಲೂ ಒಂದು ತೆರದ ವಿಷಾದ ಮನಸ್ಸಿನಲ್ಲಿ ಕವಿದುಕೊಳ್ಳುತ್ತದೆ. ಒಂದು ದಿನ ರಾಜರತ್ನಂ ಪಿಳ್ಳೆಯವರ ನಾಗಸ್ವರವನ್ನು ಕೇಳಿ ತುಂಬ ಪ್ರಹರ್ಷಗೊಂಡು ಮರುಗಳಿಗೆಯಲ್ಲಿ ಪಾತಾಳಕ್ಕಿಳಿಯಿತದು. ಈ ಸಾಲುಗಳು ಆ ವಿಚಿತ್ರ ಅನುಭವವನ್ನು ಕುರಿಯುತ್ತವೆ:

ನಿನಗೊಲಿದಿಹೆ ನಾ ನಿನಗೊಲಿದಿಹೆ ನಾ
ನಿನ್ನಿರವಿನಿದಿನಿದೆನಗಿನಿಯ
ಎನುತೀ ಸರ ಮುದ್ದಿಡುತಲೆ ಕೊರಗಿಪು-
ದೊಲಿವರ ತೋರದೆ ತನಗೆಣೆಯ.

ಸಂಗೀತದ ಸ್ವರಗಳು ನಮ್ಮನ್ನು ಮುದ್ದಿಸುವ ಹಾಗೆ, ಪ್ರಾಯಶಃ ಲಕ್ಷ್ಮಿ ನಾರಾಯಣನನ್ನು ಮುದ್ದಿಸಬಲ್ಲಳು, ಅಷ್ಟೆ. ಮರ್ತ್ಯಲೋಕದಲ್ಲಿ ಅಂಥ ದಿವ್ಯ ಪ್ರಣಯ ಅಪರೂಪ.

ಹೀಗೆ ಅಲ್ಲಲ್ಲಿ ಬಿದ್ದಿರುವ ಚೂರುಪಾರುಗಳಲ್ಲಿ ಸ್ವಾತ್ಮವೀಕ್ಷಣವೂ ಇಲ್ಲದಿಲ್ಲ:

ಜೀವ ಜೀವದ ಕವಣೆಕಲ್ಗಳ ಬೀಸೊಗೆವನೆಲ್ಲಿಗೆ ವಿಧಿ?
ಆವ ನೇರಕೆ ಆವ ದೂರಕೆ ಸಾರವಾವುದ ತಾಕಲು?

ಇದು ಯಾವುದೋ ಒಂದು ಮಹಾಪ್ರಗಾಥವಾಗಬೇಕಾಗಿದ್ದ ದಾರ್ಶನಿಕ ಪದ್ಯದ ನಡುವೆ ಎದ್ದು ಬಂದಿರುವ ಸಾಲು—'ಅನಾದಿ-ಅನಂತ'.

ಒಡಲೊಡಲ ತಿಂದುಳಿವ ಜೀವತ
ನ್ನೊಡಲೊಡಲ ತಿಂದುಳಿವ ಜೀವ
ನಿನಗಿದರೊಳಿಲ್ಲವೇ ಹೇವ?

ನಮ್ಮ ಶರೀರದಲ್ಲಿ ಪ್ರತಿಗಳಿಗೆಯೂ ಲಕ್ಷ ಲಕ್ಷ ಜೀವಕೋಶಗಳು ಅಳಿಯುತ್ತವೆಂದೂ ಮತ್ತೆ ಲಕ್ಷ ಲಕ್ಷ ಹುಟ್ಟಿಕೊಳ್ಳುತ್ತವೆಯೆಂದೂ ಇಂಥ ನಿತ್ಯ ಜನನ ಮರಣಗಳಲ್ಲಿ ನಾವು ಬದುಕಿದ್ದೇವೆಂದೂ ಯಾರೋ ಶರೀರ ವಿಜ್ಞಾನಿ ಹೇಳಿದ ಮಾತು ಒಂದು ಗೀತವಾಗಿ ಹೊರಟು ಅಲ್ಲೇ ನಿಂತುಬಿಟ್ಟಿದೆ. ಸಂಪ್ರದಾಯ ರೀತ್ಯಾ ಹೇಳಬೇಕಾದರೆ, ಜನ್ಮ ಜನ್ಮಗಳನ್ನು ತಾಳಿ ನಿನ್ನೊಡಲನ್ನು ನೀನೇ ತಿನ್ನುತ್ತಾ, ಕರ್ಮ ಸವೆಸುವ ವೈರಾಗ್ಯವನ್ನು ತಾಳದೆ, ಭೋಗ ಜೀವನಕ್ಕೆ ಅಪೇಕ್ಷೆ ಪಡುವ ವಿಲಾಸಿ ಜೀವ ನಿನಗೆ ನಾಚಿಕೆಯಾಗದೆ? ಎಂದೂ ಅರ್ಥೈಸಬಹುದು. ಅಂತೂ ಬುದ್ಧಿಗ್ರಾಹ್ಯ ವಿಷಯಗಳನ್ನು ಭಾವನೆಗೆ ತಿರುಗಿಸುವುದು ಪ್ರಯಾಸ. ಆದರೆ ಬುದ್ಧಿಯನ್ನು ತನ್ನ ಅನ್ನವನ್ನಾಗಿಮಾಡಿಕೊಳ್ಳದೆ ಭಾವನೆಯ ಬದುಕೇ ಸಾಗುವಂತಿಲ್ಲ ಆಧುನಿಕ ಯುಗದಲ್ಲಿ. ಇಂಥ ಪದ್ಯದ ತುಣುಕುಗಳು ಒಂದು ಗಾದೆಯ ಮಾತನ್ನು ನೆನವಿಗೆ ತರುತ್ತವೆ: 'ಟಗರ್ ಸಾಕಿ ಎದೆ ಗುದ್ದಿಸಿಕೊಂಡರು' ಎಂದು. ಅಂಥ ಅನುಭವ ನನ್ನ ಕವಿತಾ ಜೀವನದಲ್ಲಿ ನನಗೆ ತುಂಬ ಉಂಟು—ಈ ಅರೆಮರೆ ಕವಿತೆಗಳೇ ಸಾಕ್ಷಿ.

ದೇವರ ಮೇಲೆಯೂ ಇಲ್ಲಿ ಗದಾ ಪ್ರಹಾರವಿದೆ. ಅವನ ಅಸ್ತಿತ್ವಕ್ಕೇ ಸಂಚಕಾರ ತರುತ್ತವೆ ಈ ಕೆಳಗಣ ಸಾಲುಗಳು. ಆತ ಶ್ರಿಯಃಪತಿಯಾಗಿರುವುದು ಸುಮ್ಮನೆ ದಂಡಕ್ಕೆ:

ನಿನ್ನ ಲೋಭವೆ ಮೆರೆವುದೆನ್ನ ಕಾರ್ಪಣ್ಯದೊಳು
ಅನ್ಯ ನಾ ನಿನಗೆನಗೊ ಶೂನ್ಯ ನೀನು

ಈ ಬೈಗುಳ ಅಥವಾ ಕೃಪಣಕೋಪ ಮತ್ತೊಂದೆಡೆಯಲ್ಲೂ ಲಾವಾದಂತೆ ಬೇರೆಯ ರೂಪದಲ್ಲಿ ವ್ಯಂಗದ ನುಡಿಯಾಗಿ ಹರಿದಿದೆಯಲ್ಲ—ಅದೂ ಒಂದು ನಾಟಕದ ಪಾತ್ರದ 'ಜನಾಂತಿಕ' ಅಥವಾ 'ಸ್ವಗತ'ವಾಗಿರಬೇಕಾಗಿತ್ತೋ ಏನು?

ನಾನೊಬ್ಬ ಅವತಾರ ಪುರುಷ
ಜನಕೆನ್ನ ಕಂಡರೆಯೆ ತುಂಬ ಹರುಷ
ಹಿಂದಿಲ್ಲ ಮುಂದಿಲ್ಲ

ಕರ್ಮ ಬಂಧನವಿಲ್ಲ
ನನ್ನಿಚ್ಛೆಗಿದಿರಿಲ್ಲ
ಈ ತುಚ್ಛಜಗವೆನ್ನ ಹೇರಾಸೆಯುಡಿಗಬ್ಬ
ಬೇರೇನು ಅಲ್ಲ
ಇದನು ಬಲ್ಲವರೆನ್ನ ಹೊರತಾರು
ಈ ತಿರೆಯೊಳಿಲ್ಲ
ನಾನೊಬ್ಬ ಅವತಾರ ಪುರುಷ
ಎನ್ನ ಕಂಡರೆ ಜಗಕೆ
ಅತ್ಯಂತ ಹರುಷ.

ಈ ಭೂಮಿಗೂ ಒಂದು ಕಿಡಿನುಡಿ ಎಲ್ಲೋ ಎಂದೋ ಹೊರಟು ಇಲ್ಲಿ ಪ್ರಸುಪ್ತ ವಾಗಿದೆ.

ಈ ಕಡೆ ಮಳೆ ಆ ಕಡೆ ಚಳಿ
ಇಲ್ಲಿ ಮೊಳಕೆ ಅಲ್ಲಿ ಬೆಳೆ
ಉರುಳಿಯುರುಳಿ ಉರಿಯ ಸುತ್ತ
ಉಸಿರ ಹೊರೆಯುಬ್ಬಿಹಳಿಳೆ

ಕಾಲದಮೇಲೂ ಗದಾ ಪ್ರಹಾರ ಇಲ್ಲುಂಟು: ಆದರೆ ಅದು ಇಂಗ್ಲಿಷಿನಲ್ಲಿದೆ. ಅದನ್ನು ಇಲ್ಲಿ ಕೊಡದಿದ್ದರೆ ಉದ್ಧರಿಸುವವರಾರು?

Time is a bitch which eats its
own progeny

ಪ್ರಾಯಶಃ ನನ್ನ ಕೃತಿಗಳ ಮುಂದಿನ ಭವಿಷ್ಯವನ್ನು ಕುರಿತ ಭಯ ಈ ನಿಂದೆಯ ಲ್ಲುಂಟು.

ಕೃತಿಗಳ ಮಾತು ಬಂದಾಗ ಇನ್ನೆರಡು ಮೂರು ಎತ್ತುಗೆಗಳೂ ಪ್ರಕೃತ ವಾದಾವು—ಇವು ಕಾವ್ಯ ಕಲೆಯನ್ನೇ ಕುರಿತವು—ಸುಮಾರು ಐದು ವರ್ಷಗಳ ಕೆಳಗೆ:

Poetry is an irrational explanation of
why we are happy, thoughtful, or sad

* * *

An epic is a ship
a lyric is a jet
It all depends upon in what
haste you are to reach your goal

* * *

What was a street becomes a
temple if you cross the threshold.
But the earth is continuous,
Apprehension is continuous, but
the mode of it changes.

ಇವೆಲ್ಲ ಬರಿ ನೆನವುಗಳು, ಸವಿಗನಸುಗಳು, ಸರಸ್ವತಿ ತನ್ನೊಂದು ವೋಜಿನಲ್ಲಿ ದಾರಿತಪ್ಪಿಯೋ ಬೇಕೆಂದೋ ನನ್ನತ್ತ ಸುಳಿದುಹೋದ ನಡೆ ಗುರುತುಗಳು. "ವಾಗ್ದೇವತಾಚರಿತಚಿತ್ರಿತ ಚಿತ್ತಸದ್ಮಾ" ಎಂದು ಶ್ರೀ ಜಯದೇವಕವಿ ಹೇಳಿ ಕೊಂಡ. ಆದರೆ ನನ್ನ ಈ ಸಾಲುಗಳೆಲ್ಲ "ಪ್ರಾಂಶು ಲಭ್ಯೇ ಫಲೇ ಲೋಭಾತ್ ಉದ್ಬಾಹುರಿವ ವಾಮನಃ" ಎಂಬುದನ್ನೇ, ಬಾನತ್ತ ನನ್ನ ಮೆಟ್ಟುಂಗಾಲಿಡುವಿಕೆ ಯನ್ನೇ, ದ್ಯೋತಿಸುತ್ತವೆ. ಆದರೆ ಕವಿತೆ, ಕಲೆಯೂ ಸಹ, ಪ್ರಕೃತಿಜನ್ಯ ವಾದುದೋ ಏನೋ; ಹಿಡಿದು ನಿಲ್ಲಿಸುವಂಥದಲ್ಲ. ಅದು ಬುದ್ಧಿಯ ಎಳತನ ವನ್ನೂ ಬಲವನ್ನೂ ಅವಲಂಬಿಸಿರಲಾರದು. ಅದನ್ನು ಕುರಿತೂ ಒಂದು ನಗೆನುಡಿ ಒಂದು ಹಾಳೆಯಲ್ಲಿ ಬಿದ್ದು ಈಗ ವೈಮುರಿಯುತ್ತಿದೆ:

ಬುದ್ಧಿ ಬೆಳೆಯಲಿ ಬೆಳೆಯದೆ ಇರಲಿ
ಬಂದೇ ಬರುವವು ಮೀಸೆ ಮೊಲೆ

ಬೇಕಾದರೆ

"ಅಂತೆಯೆ ತರುಣಗೆ ಕವಿತೆ, ಕಲೆ"

ಎಂದು ಸೇರಿಸಬಹುದಲ್ಲವೆ?

ಆದರೆ ಇನ್ನುಮೇಲೆ,

ಇರುವವರ ಸರಿಗಲ್ಲ ನಾವು
ಸರಿವವರ ಜತೆಯೆಮ್ಮದು

ಮತ್ತು ನನ್ನ ಈಗಿನ ಆಸೆಯನ್ನೇ ಆಗಿನ ಈ ಸಾಲುಗಳು ಮತ್ತಷ್ಟು ಚೆನ್ನಾಗಿ ಹೇಳುತ್ತವೆ:

ಸರಿವರು ಸರಿಯಲಿ ರಂಗಿನ ಬೆಳಕೆಡೆ
ಇರವಿನವಸರದಿ ಕಂಗೊಳಲು
ಇರುವುದೆ ಸಾಕೆನಗೀ ತಣ್ಣೆಳಲೊಳು
ಎರಡನಳಿದವರ ಸಂಗದೊಳು

ನೆಗಡಿ

ನನ್ನ ಮಿತ್ರರು ಮೇಲಿನ ವಿಷಯದಲ್ಲಿ ಬಹು ಸಮೀಚೀನವಾದ ಪ್ರಬಂಧ ವೊಂದನ್ನು ಬರೆದಿದ್ದಾರೆ. ನಾನು ಅದರೊಡನೆ ಹೋರಲಾರೆ, ಅನುಕರಿಸಲೂ ಆರೆ. ಆದರೆ ಈಗ ನನ್ನ ಮೂಗಿಗೆ ನೆಗಡಿಹಿಡಿದಿದೆ. ಯಾರು ಎಷ್ಟೇ ಚೆನ್ನಾಗಿ ವರ್ಣಿಸಿದರೂ ನೆಗಡಿಯ ಸುಖ ನೆಗಡಿ ಹಿಡಿದವನಿಗೇ ಗೊತ್ತು. ಕರವಸ್ತ್ರದ ಸಹಾಯವಿಲ್ಲದೆ ಆತ ಒಂದು ಹೆಜ್ಜೆಯೂ ಮುಂದಿಡಲಾರ. ಎಂಥ ವೊಗರು ಬದನೆಯ ಕಾಯ ಈರುಳ್ಳಿ ಹುಳಿಯಾದರೂ ಅವನ ನಾಲಗೆ ತೋರಿಸುವುದು ಬರಿ ಒಂದಿಷ್ಟು ಉಪ್ಪು ಕಾರ ಹುಳಿಯನ್ನು, ಅವುಗಳ ಅತ್ಯಂತ ಸ್ಥೂಲ ಸರಳ ರೂಪದಲ್ಲಿ. ಭೋಜನ 'ಕ್ಷುದ್ರುಜಾಪಹ' ವೆಂದೆನಿಸುವುದು ಕೇವಲ ವಿರಕ್ತರಿಗೆ ಮಾತ್ರವಲ್ಲ ; ನೆಗಡಿಹಿಡಿದವರಿಗೂ ಕೂಡ. ಒಂದಾನೊಂದು ಕಾಲದಲ್ಲಿ ಹಬೆಯ ವಾಸನೆ ಹಿಡಿದೇ ಸಾರಿಗೋ ಹುಳಿಗೋ ಕೊನೆಗೆ ಪಲ್ಯಕ್ಕೂ ಸಹ ಈ ಪರಿಕರ ಕಡಮೆಯಾಗಿದೆ ಎಂದು ಲೊಟಗುಟ್ಟುತ್ತಿದ್ದ ನನಗೆ ಈಗ ಬಾಯೇ ಕಟ್ಟಿಹೋಗಿದೆ. ರಸನೆ ಇಷ್ಟು ಮುಠ್ಠಾಳ ಎಂದು ನನಗೆ ಇದುವರೆಗೂ ತಿಳಿದು ಬಂದಿರಲಿಲ್ಲ. ಅದಕ್ಕೆ ನೂರಾರು ಮುಳ್ಳುಗಳಿದ್ದು ಏನು ಪ್ರಯೋಜನ ? ಷಡ್ರಸಗಳಂತೆ ! ಮೂಗಿಲ್ಲದಿದ್ದರೆ ಬರಿ ಮಣ್ಣುವು. ನಾಲಿಗೆಗೆ ರುಚಿಯ ಪಾತಿವ್ರತ್ಯ ಬೇಕಾದರೆ ಮೂಗಿಗೆ ನೆಗಡಿ ಹಿಡಿಯಬೇಕು. ಆಗ ಅದಕ್ಕೆ ಯಾವ ಚಾಪಲ್ಯವೂ ಇರುವುದಿಲ್ಲ; ಭಕ್ಷ್ಯಭೋಜ್ಯಗಳೆಲ್ಲ ಪಥ್ಯಗಳ ದರ್ಜೆಗೆ ಇಳಿದುಬಿಡುತ್ತವೆ. ರುಚಿಬಲ್ಲ ಗಂಡನನ್ನು ಅಕುಶಲ ಗೃಹಿಣಿ ಸಮಾಧಾನಕ್ಕೆ ತರಬೇಕಾದರೆ ಆತನ ಮೂಗಿಗೆ ನೆಗಡಿ ಹಿಡಿಸುವುದೊಂದೇ ಉಪಾಯ. ಆಗ ಎಲ್ಲರ ಮನೆಯ ಅಡಿಗೆಯೂ ಒಂದೇ ಆತನಿಗೆ ; ತನ್ನ ಮನೆಯದಕ್ಕೂ ಅದಕ್ಕೂ ಯಾವ ಭೇದವೂ ತೋರದೆ ಆ ಸಾಮ್ಯವೇ ಸಮಾಧಾನ ಕಾರಣವೂ ಆಗುತ್ತದೆ.

ನೆಗಡಿ ಏಕೆ ಹೇಗೆ ಬರುತ್ತದೆ ಯಾವಾಗ ಬಿಟ್ಟುಹೋಗುತ್ತದೆ ಎಂಬುದೂ ಸಹ ಅದೊಂದಕ್ಕೇ ತಿಳಿದಿರುವ ವಿಷಯ. ಅದರದು ನಮ್ಮ ಗಡಿಯಂಚಿನ ಚೀನಾ ಮನಸ್ಸು. ಧನ್ವಂತರಿಗೂ ಅದರ ಆಕ್ರಮಣ ಮತ್ತು ಪ್ರಶಮನ ನಿದಾನ ತಿಳಿದಿರುವ ಮಟ್ಟಿಗೆ ಕಾಣೆ. ಮತ್ತು ನೆಗಡಿ ಹಿಡಿದವನಿಗೆ ಒಂದೆರಡು ಸೌಕರ್ಯಗಳೂ ಇಲ್ಲ

ದಿರುವುದಿಲ್ಲ. ಆಗ ಆತ ಗಂಧಶೂನ್ಯ, ವಾಸನೆಗುರುಡ. ಆಗ ಅವನು ನಾರುವ ಮೋರಿಗಳ ಸನಿಯದಲ್ಲಿ ಮೂಗನ್ನು ಕರವಸ್ತ್ರದಿಂದ ಮುಚ್ಚಿಕೊಳ್ಳದೆ ಹಾಯಾಗಿ ನಡೆಯಬಲ್ಲ. ಮುನಿಸಿಪಾಲಿಟಿಯವರ ಕರ್ತವ್ಯಪರಾಙ್ಮುಖತೆಗೆ ಆತ ಅಷ್ಟಾಗಿ ಮುನಿಯಲೂ ಒಲ್ಲ. ಚಾತುರ್ಮಾಸ್ಯ ವ್ರತ ಹಿಡಿದು ಉಪ್ಪು ಹುಳಿ ಖಾರಗಳನ್ನೂ ತರಕಾರಿಗಳನ್ನೂ ವರ್ಜಿಸಿ ಬರಿ ಸಪ್ಪೆ ಊಟಕ್ಕೆ ಕುಳಿತುಕೊಳ್ಳುವವರಿಗೆ ಆ ಕಾಲದಲ್ಲಿ ನೆಗಡಿಯಂಥ ಉಪಕಾರಿ ಮತ್ತಾವುದೂ ಅಲ್ಲ. ಒಂದು ಮಾತಿನಲ್ಲಿ ಅದನ್ನು ವ್ರತೋಪಕಾರಿ ಎಂದು ಕರೆದುಬಿಡಬಹುದು. ಮತ್ತು ಅದು ಸಭೆಗಳಲ್ಲಿ ದೀರ್ಘಭಾಷಣ ಮಾಡುವ ಕಷ್ಟವನ್ನು ನಿಮಗೆ ತಪ್ಪಿಸುತ್ತದೆ; ಆ ಭಾಷಣ ಚೆನ್ನಾಗಿಲ್ಲದಿದ್ದರೂ ಆ ದೋಷವನ್ನು ತಾನೇ ಹೊತ್ತುಕೊಳ್ಳುತ್ತದೆ. ಅಲ್ಲದೆ ನಿಮ್ಮ ಕೆಮ್ಮು ಸೀನುಗಳನ್ನೇ ಮುಂದುಮಾಡಿ, ದಾಕ್ಷಿಣ್ಯ ಕೆಡದಂತೆ, ಅನೇಕ ಸಂಘ, ಸಭೆ, ಕೂಟಗಳಿಂದ ತಪ್ಪಿಸಿಕೊಳ್ಳಲೂ ನಿಮಗೆ ನೆರವಾಗುತ್ತದೆ. ಅದೊಂದು ಜಾಡ್ಯವಲ್ಲದ ಜಾಡ್ಯ. ಅದರ ಮತ್ತೊಂದು ಮಹಾಗುಣ ಈ ದಿನ ಪತ್ರಿಕೆಯೊಂದರಲ್ಲಿ ನನ್ನ ಕಣ್ಣಿಗೆ ಬಿದ್ದು ನನ್ನ ಮನಸ್ಸಿಗೆ ಎಷ್ಟೋ ನೆಮ್ಮದಿ ಯಾಯಿತು. ನಮಗೆ ವಯಸ್ಸಾಗುತ್ತಿರುವುದು ನಮ್ಮ ಮಗಳಿಗೆ ಆತಂಕವಾಗಿ 'ನಿಮ್ಮ ದೇಹವನ್ನು "ಕಾನ್‌ಸರ್" ಖಾಯಿಲೆಯ ದೃಷ್ಟಿಯಿಂದ ಪರೀಕ್ಷಿಸಿಕೊಳ್ಳಿ' ಎಂದು ಪದೇ ಪದೇ ಎಚ್ಚರಿಕೆಯ ಮಾತನ್ನಾಡುತ್ತಿದ್ದಾಳೆ; ಆದರೆ ನಾವು ಅದನ್ನು ಉಪೇಕ್ಷೆ ಮಾಡುತ್ತಿದ್ದೇವೆ. ಈ ಸಮಯದಲ್ಲಿ 'ನೆಗಡಿ ಮತ್ತು ಇತರ ಸಾಮಾನ್ಯ ರೋಗಗಳು ಅಪಾಯಕಾರಿ ರೋಗಗಳಾದ ಕಾನ್ಸರ್ ಹಾಗೂ ಲ್ಯೂಕೇಮಿಯಾ ಗಳನ್ನು ತಡೆಗಟ್ಟಿ ಮಾನವನಿಗೆ ಉಪಕಾರ ಮಾಡುತ್ತವೆ' ಎಂಬ ಮಾತುಗಳು ಈ ದಿನದ ಪತ್ರಿಕೆಯಲ್ಲಿ ನನ್ನ ಕಣ್ಣಿಗೆ ಬಿದ್ದಾಗ, ನನ್ನ ನೆಗಡಿ ನನಗೊಂದು ವರ ವೆಂದೇ ತೋರಿ ಅದನ್ನು ಚುಚ್ಚು ಮದ್ದಿನಿಂದ ನಿವಾರಿಸಿಕೊಳ್ಳಬೇಕೇ ಬೇಡವೇ ಎಂಬ ಸಂದೇಹವೂ ಹುಟ್ಟಿಕೊಂಡಿತು. ಅಂತೂ ನೆಗಡಿಯಿಂದ ರುಚಿಗೆ ಅಪಾಯ ವಾದರೂ, ದುರ್ಗಂಧ ಸುಗಂಧಗಳಲ್ಲಿ ಉದಾಸೀನಭಾವ ಏರ್ಪಟ್ಟರೂ, ತೀವ್ರ ರೋಗದಿಂದ ನಮಗೆ ಅಪಾಯವೊದಗದಂತೆ ಅದು ನಮ್ಮನ್ನು ಕಾಪಾಡುವುದ ರಿಂದ ಅದು ಸಹ್ಯವೇ ಎನಿಸುತ್ತದೆ. ಸಹನೆ ಅಲ್ಲದೆ ಅದರ ವಿಷಯದಲ್ಲಿ ಬೇರೆ ಉಪಾಯವೇ ಇಲ್ಲ.

ನಮ್ಮ ಅಂತಃಕರಣ ವ್ಯವಸ್ಥೆಯಲ್ಲೂ ನೆಗಡಿ ಕಾಲುಹಾಕದೆ ಇಲ್ಲ. ಆ ವ್ಯವಸ್ಥೆ

ಯಲ್ಲಿ ಪ್ರಮುಖವಾದದ್ದು ಅಹಂಕಾರ; ಮನಸ್ಸು ಮತ್ತು ಬುದ್ಧಿ ಅದರ ಉಪಾಂಗಗಳು—ನಮ್ಮ ನಾಲಿಗೆ ಮೂಗುಗಳಂತೆ. ನೆಗಡಿ ಹಿಡಿಯುವುದು ಬುದ್ಧಿಗೆ. ಮನಸ್ಸು ಪಡೆಯಬಹುದಾದ ಅನೇಕ ಸೂಕ್ಷ್ಮಾನುಭೂತಿಗಳಿಗೆ ಬಿರಿ ಹಾಕುತ್ತದೆ ಬುದ್ಧಿಯು ನೆಗಡಿ. ಬುದ್ಧಿಗೆ ಹಿಡಿಯುವ ನೆಗಡಿಯನ್ನೇ ನಾವು ವ್ಯಾಮೋಹ ಎಂದು ಕರೆಯುವುದು. ಪ್ರಾಪಂಚಿಕಾನುಭವದ ಸೂಕ್ಷ್ಮ ರುಚಿಗಳನ್ನು ನುಂಗಿಬಿಡುವುದರಲ್ಲಿ ವ್ಯಾಮೋಹದಷ್ಟು ಬಕಾಸುರ ಮತ್ತಾವುದೂ ಇಲ್ಲ. ಮನಸ್ಸಿಗೆ ಬುದ್ಧಿಯು ಸಹಕಾರ ತಪ್ಪಿದಾಗಲೆಲ್ಲ ತಿರಸ್ಕಾರ ತಲೆಹಾಕುತ್ತದೆ. ಅಲ್ಲದೆ ಬುದ್ಧಿಗೆ ಅನೇಕ ಮುಖಗಳಿವೆ, ಆದುದರಿಂದ ಮೂಗುಗಳೂ ಇವೆ. ಅದು ಬಹುನಾಸಿಕ. ಯಾವ ಮೂಗಿಗೆ ನೆಗಡಿ ಹಿಡಿದಿದೆಯೋ ಅದನ್ನು ಪತ್ತೆ ಮಾಡುವುದೂ ಕಷ್ಟ. ಅದಕ್ಕೆ ನೆಗಡಿ ಹಿಡಿದಿರುವ ಸೂಚನೆ ಅದು ಮನಸ್ಸನ್ನು ಸಹಿಸಿಕೊಳ್ಳುವಂತೆ ಮಾಡುವ ನಾತಗಳಿಂದ ಗೋಚರವಾಗುತ್ತದೆ, ಮತ್ತು ಮನಸ್ಸು ತನಗೆ ತೋಚಿದ ಕೇವಲ ಕೆಲವು ವಿಷಯಗಳಲ್ಲಿ ಮಾತ್ರ ಆಸಕ್ತವಾಗಿದ್ದು ಮಿಕ್ಕೆಲ್ಲ ವಿಷಯಗಳಲ್ಲೂ ಔದಾಸೀನ್ಯವನ್ನೋ ತಿರಸ್ಕಾರವನ್ನೋ ತೋರುವುದರಲ್ಲೂ ಪತ್ತೆಯಾಗುತ್ತದೆ. ನಮಗೆ ಹರಿಜನರ ವಿಷಯದಲ್ಲಿ ಅಂಥ ನೆಗಡಿ ಹಿಡಿದಿತ್ತು; ಆ ನಾರಿಕೆ ನಮಗೆ ಮಹಾತ್ಮರು ಬಂದು ನಮ್ಮ ಶೀತವನ್ನು ಮುರಿಯುವವರೆಗೂ ಗೊತ್ತಾಗಲೇ ಇಲ್ಲ. ಹಾಗೆಯೇ ಈಗ ನಮಗೆ ಯೋಗಿಹೃದಯಕಮಲ ನಿಷ್ಯಂದವಾದ ಲಕ್ಷ್ಮೀ, ಸರಸ್ವತೀ, ದುರ್ಗೆ, ಹರಿ, ಶಂಕರ—ಮುಂತಾದ ದಿವ್ಯ ಸೌರಭಯುಕ್ತ ಭಾವಗಳ ಪರಿವೆಯೂ ಅಳಿಯುತ್ತಿದೆ; ಪಾಶ್ಚಾತ್ಯಮೋಹ ನಮ್ಮನ್ನಾವರಿಸಿರುವುದರಿಂದ. ಈಗ ಮೆಕಾಲೆ ಭಾರತೀಯರಲ್ಲಿ ಯಾವ ಸಾಹಿತ್ಯವಿದೆ, ಒಂದು ಬೀರುವಿನಲ್ಲಿ ತುಂಬಿ, ಆಚೆಗಿಡುವಷ್ಟು—ಎಂದು ತನ್ನ ಅನಭಿಜ್ಞತೆಯನ್ನು ಮೆರೆದು ಆ ವಿಷಯದಲ್ಲಿ ತನ್ನ ಬುದ್ಧಿಗೆ ನೆಗಡಿ ಹಿಡಿದಿರುವ ಸ್ಥಿತಿಯನ್ನು ನಮಗೆ ತೋರಿದ. ಅದು ತನ್ನ ಭಾಷೆ ತನ್ನ ಮೇಲ್ಮೆ ಈ ವ್ಯಾಮೋಹದ ಫಲ. ಅದಕ್ಕೆ ತಕ್ಕ ಚಿಕಿತ್ಸೆಯನ್ನು ನಾವು ಮಾಡಬಹುದಾಗಿತ್ತು, ಧನ—ಪ್ರತಿಷ್ಠೆ—ಭೋಗ ಈ ವ್ಯಾಮೋಹ ನಮಗೆ ಕವಿಯದೆ ಇದ್ದಿದ್ದರೆ. ಈಗ ಅದೇ ಒಂದು ತೀವ್ರವ್ಯಾಧಿಯಾಗಿ ಪರಿಣಮಿಸಿದೆ. ಈಗ ವಿಜ್ಞಾನಿಗಳಿಗೂ ತಾಂತ್ರಿಕರಿಗೂ ಇಂಗ್ಲಿಷ್ ಸಾಹಿತ್ಯ ಭೋಗಿಗಳಿಗೂ—ಅಜೀರ್ಣದಿಂದಲೋ ಏನೋ ಅಥವಾ ಸಾಂಕ್ರಾಮಿಕ ವ್ಯಾಧಿಯ ಪರಿಣಾಮವಾಗಿಯೋ—ಮಿಕ್ಕ ನಮ್ಮ

ದೇಶೀಯ ಸಾಹಿತ್ಯ, ಜನ, ಸಂಸ್ಕೃತಿ ಇವುಗಳ ವಿಷಯದಲ್ಲಿ ತೀರ ತಿರಸ್ಕಾರ ಹುಟ್ಟಿದೆ. ಇದು ಪ್ರಬುದ್ಧವೂ ಆರೋಗ್ಯಕರವೂ ಆದ ಜನಾಂಗದ ಸ್ಥಿತಿಯಲ್ಲ; ಬುದ್ಧಿಗೆ ನೆಗಡಿ ಹಿಡಿದು ತಮ್ಮ ಪರಿಸರದಲ್ಲೇ ಅಲೆಯುವ ದುರ್ಗಂಧ ಸುಗಂಧ ಗಳನ್ನೂ ತಮ್ಮ ಭೋಜ್ಯಗಳ ವಿಶಿಷ್ಟ ರುಚಿಗಳನ್ನೂ ಅರಿಯಲಾಗದ ಜಾಡ್ಯ ಸ್ಥಿತಿ. ಈಗ ವಿಜ್ಞಾನ ಮತ್ತು ತಂತ್ರ ವಿದ್ಯೆ ಎಲ್ಲ ಕ್ಷೇತ್ರಗಳಲ್ಲಿಯೂ ಯಾರಿಗೆ ಮುಖ್ಯವಾಗಿ ಬೇಕು? ಪ್ರಕೃತಿಯೊಂದಿಗೂ ಪದಾರ್ಥಗಳೊಂದಿಗೂ ಸದಾ ಗುದ್ದಾಡುತ್ತಿರುವ ಕಾರ್ಮಿಕರಿಗೆ ಮತ್ತು ವ್ಯವಸಾಯಗಾರರಿಗೆ. ಆದರೆ ವಿಜ್ಞಾನಿ ಗಳಿಗೂ ತಾಂತ್ರಿಕರಿಗೂ ಇವರ ಪರಿವೆಯೇ ಇಲ್ಲ! ಇವರ ಗಂಧವೇ ಅವರಿಗೆ ತಟ್ಟದು. ಈ ನೆಗಡಿಯನ್ನು ನಿವಾರಿಸುವ ಔಷಧವೂ ಉಂಟು. ಅದು ಆಯಾ ಜನದ ಮಾತು—ಅನುಭವಸಂಪರ್ಕಮಾಧ್ಯಮ. ನಮ್ಮ ನಾಡಿನಲ್ಲಿ ಅದು ಕನ್ನಡ. ಆದರೆ ನಮ್ಮ ನಾಡಿನ ವಿಜ್ಞಾನಿಗಳಿಗೂ ಬುದ್ಧಿವಂತರಿಗೂ ಈ ಭಾಷೆಯ ಅರಿವೇ ಇಲ್ಲ. ಇದು ಜನ್ಮನೆಗಡಿಯಾಗಿ ಬಿಡುತ್ತದೆಯೇನೋ ಎಂಬ ಭಯ ನಮಗೆ ಬರುತ್ತಿರುವಾಗ, ಕೇಂದ್ರ ಸರ್ಕಾರದ ಧೀರಮಂತ್ರಿಯೊಬ್ಬ ಚುಚ್ಚು ಮದ್ದನ್ನು ಎತ್ತಿಕೊಂಡು ಬಂದಿದ್ದಾನೆ. ಪರಿಣಾಮ ನೋಡಬೇಕು. ನಮ್ಮ ನೆರೆ ಹೊರೆಯವರ ವಿಚಾರವಾಗಿಯೂ ನಮಗೆ ಏನೇನೂ ತಿಳಿಯದು. ಅವರ ವಿಷಯ ದಲ್ಲೂ ಸಹ ನಮ್ಮ ಬುದ್ಧಿಗೆ ನೆಗಡಿ ಹಿಡಿದಿದೆ. ರುಚಿಬಲ್ಲವರಾರೂ ಯಾವ ಜನವನ್ನಾಗಲಿ ಯಾವ ಭಾಷೆಯನ್ನಾಗಲಿ ಯಾವ ಕಲೆಯನ್ನಾಗಲಿ ತಿಳಿವಳಿಕೆ ಯನ್ನಾಗಲಿ ನಿಂದಿಸರು, ತಿರಸ್ಕರಿಸರು. ಆದರೆ ನೆಗಡಿ ಹಿಡಿದಿರುವಾಗ ಅವರ ಸಂವೇದನೆ ಕುಂಠಿತವಾಗುವುದು ಅನಿವಾರ್ಯ. ಈಗ ನಮ್ಮ ಕನ್ನಡ ಪ್ರೇಮ ವನ್ನು ಕಂಡು ಮಿಕ್ಕವರು ನಮಗೆ ನೆಗಡಿ ಹಿಡಿದಿದೆಯೆಂದೂ ತಮ್ಮ ಬುದ್ಧಿಯ ಮೂಗು ಸ್ವಚ್ಛವೆಂದೂ ಭಾವಿಸಬಹುದು. ಎನ್ನಲಿ, ಬಾಧಕವಿಲ್ಲ. ನಮಗೆ ಕನ್ನಡದ ನೆಗಡಿ ಹಿಡಿದಿರುವುದರಿಂದ, ಅವರಲ್ಲಿ ಉಲ್ಬಣವಾಗಿ 'ಅವರತನ'ವನ್ನೇ, ಎಂದರೆ ಸ್ವರೂಪವನ್ನೇ ನಾಶಮಾಡ ಹೊರಟಿರುವ ಇಂಗ್ಲಿಷು ನಮ್ಮಲ್ಲೂ ಅರ್ಬುದ ರೋಗವಾಗಿ (ಕಾನ್‌ಸರ್) ಬೆಳೆಯುವುದು ತಪ್ಪೀತು. ಮಿಕ್ಕವರೂ ಸಹ ಈ ದೇಶಭಾಷಾ ವ್ಯಾಮೋಹವನ್ನು ಹಚ್ಚಿಕೊಳ್ಳದಿದ್ದರೆ ಆ ಮಾರಕ ರೋಗಕ್ಕೆ ಪಕ್ಕಾದಾರು. ನಾವು ಸ್ವಲ್ಪ ಕಾಲ ಈ ಜಾಡ್ಯವಲ್ಲದ ಜಾಡ್ಯವನ್ನು ಅನುಭವಿಸು ವುದು ಕ್ಷೇಮ. ಅದು ಸದಾಕಾಲ ಇರುವಂಥದೂ ಅಲ್ಲ; ಇರುವಂತಿದ್ದರೆ ನೆಗಡಿ

ಎನ್ನಿಸಿಕೊಳ್ಳುವುದಿಲ್ಲ. ನಮ್ಮ ಮನಸ್ಸಿನ ನಾಲಿಗೆಗೂ ಅನೇಕ ಚಪಲಗಳು ಸ್ವಲ್ಪ ಕಾಲ ತಪ್ಪಲಿ. ನೆಗಡಿ ಬಿಟ್ಟ ಮೇಲೆ, ನಾವು ಕನ್ನಡದಲ್ಲಿ ಕಾಲೂರಿ ನಮ್ಮ ಬುದ್ಧಿ ಬಲಿತು ನಾವು ಸ್ವಸ್ಥರಾದಾಗ, ಇಂಗ್ಲಿಷ್ ಒಂದೇ ಏಕೆ ಪ್ರಪಂಚದ ಪ್ರಬುದ್ಧ ಭಾಷೆಗಳೆಲ್ಲದರಲ್ಲೂ ನಮ್ಮ ಕುತೂಹಲ ಮತ್ತು ಆಸಕ್ತಿ ಬೆಳೆಯುವುದೂ ಅನಿವಾರ್ಯವಾಗುತ್ತದೆ. ಆಗ ಅವುಗಳ ಸಮೃದ್ಧ ರುಚಿಗಳು ನಮ್ಮ ಮನೋಬುದ್ಧಿಗಳ ಮೇಳದಿಂದ ನಮ್ಮರಿವಿಗೂ ಬಂದಾವು. ಕನ್ನಡದ ವಿಷಯದಲ್ಲಿ ಒಂದರಲ್ಲೇ ಅಲ್ಲ, ಸ್ವದೇಶೀ ವಸ್ತು, ಉದ್ಯಮ, ಜನ, ಭಾಷೆ, ಸಂಸ್ಕೃತಿ ಇವುಗಳಲ್ಲೂ ಈಗ ನಮ್ಮ ವ್ಯಾಮೋಹ ನಮ್ಮ ಬುದ್ಧಿಯನ್ನು ಅಮರಿಕೊಳ್ಳುವುದು ಕ್ಷೇಮ. ಇಲ್ಲದೆಹೋದರೆ ದುರ್ಬಲವಾಗಿರುವ ನಮ್ಮ ದೇಹದಲ್ಲಿ ಅನೇಕ ತೀವ್ರ ವ್ಯಾಧಿಗಳು ಕಾಲೂರಿ ಮಾರಕವಾದವೂ ಆದಾವೇ. ಆದರೆ ನೆಗಡಿಯೇ ಒಂದು ಮಹಾವ್ಯಾಧಿಯಾಗಿ ಪರಿಣಮಿಸಲು ನಾವು ಬಿಡಬಾರದು. ನೆಗಡಿ ಸಹ್ಯವೇ ಹೊರತು ಗೂರಲಲ್ಲ, ಉಬ್ಬಸವಲ್ಲ, ಶ್ಲೇಷ್ಮಜಾಡ್ಯವಲ್ಲ, ಆದುದರಿಂದ ನಮ್ಮ ದೇಶದ ಬುದ್ಧಿವಂತರಿಗೆ ಸ್ವದೇಶೀ ನೆಗಡಿ ಸ್ವಲ್ಪಕಾಲ ಹಿಡಿದು ಅನೇಕ ಸಖತ್ ಕಾಯಿಲೆಗಳ ಆಕ್ರಮಣವನ್ನು ತಡೆಯಲಿ. ತನ್ನ ಅವಧಿ ಕಳೆದ ಮೇಲೆ ಬಿಟ್ಟು ಹೋಗಿ ನಮಗೆ ಸಹಜವಾಗಿಯೇ ಪ್ರಾಪ್ತವಾಗಿರುವ ಬಹುರುಚಿ ಪ್ರಾಗಲ್ಭ್ಯವೂ ಸೂಕ್ಷ್ಮ ಶುಭ ಗಂಧಸಂವೇದನೆಯೂ ನಮಗೆ ಯಥಾಕಾಲದಲ್ಲಿ ದೊರೆತೇ ದೊರೆಯುತ್ತದೆ. ಸದ್ಯಕ್ಕೆ, ಇಂಗ್ಲಿಷ್ ಜನಕ್ಕೆ ಇಂಗ್ಲಿಷ್ ಹೇಗೆ ಸ್ವಾಭಾವಿಕವೋ ಕನ್ನಡ ಜನಕ್ಕೆ ಕನ್ನಡ ಹಾಗಾಗುವವರೆಗೂ, ಸ್ವಲ್ಪಕಾಲ ಇರಿಸು ಮುರಿಸಾದರೂ ಸರಿಯೆ, ಕನ್ನಡದ ವ್ಯಾಮೋಹವನ್ನು ಕನ್ನಡ ಜನಕ್ಕೆಲ್ಲ ಹಿಡಿಸುವಂತೆ ಮಾರಕ ಜಾಡ್ಯನಿರೋಧಿನಿಯಾದ ದುರ್ಗೆಗೆ ಬೇಡೋಣ.

ದೇವರು ಮತ್ತು ಅಪ್ಪಾಜಿ ಆನೆ

ದೇವರು ಇದ್ದಾನೋ ಇಲ್ಲವೋ ಎಂಬ ವಿಷಯ ಮನುಷ್ಯನನ್ನು ಆದಿಯಿಂದಲೂ ಕಾಡುತ್ತಲೇ ಇದೆ. ಅದಿನ್ನೂ ತೀರ್ಮಾನವಾಗಿಲ್ಲ, ತೀರ್ಮಾನವಾಗುವ ಹಾಗೂ ಇಲ್ಲ. ದೊಡ್ಡವರೂ ಪ್ರಾಮಾಣಿಕರೂ ಯಾರಿಂದಲೂ ಯಾವ ಪ್ರಯೋಜನವನ್ನಾಗಲಿ ಎಂದೂ ಬಯಸದ ವಿರಕ್ತರೂ ದೇವರು ಇದ್ದಾನೆ ಎಂದು ಹೇಳುತ್ತಲೇ ಬಂದಿದ್ದಾರೆ. ಆದರೆ ಆತನ ನೆಲೆ ಅನಿಶ್ಚಿತ, ರೂಪು ಅನಿಶ್ಚಿತ, ಕಾರ್ಯವೂ ಲೇಸು ಕೇಡುಗಳಿಂದ ಕೂಡಿ ಅನಿಶ್ಚಿತವಾಗಿಯೇ ಇದೆ—'ನ ಜಾನೇ ಸಂಸಾರಃ ಕಿಮಮೃತಮಯಃ ಕಿಂ ವಿಷಮಯಃ' ಇದು ಆತನ ಕೃತಿಯ ಸ್ವರೂಪ. ಹೀಗೆಂದುಕೊಳ್ಳುತ್ತಾ, ಆತನಿಲ್ಲ ಎಂದು ನಂಬಿದರೆಯೇ ಎಷ್ಟೋ ವಾಸಿ, ಯಾವ ವ್ರತೋಪವಾಸಾದಿಗಳ ಕಾಟವೂ ಇಲ್ಲದೆ ತಿಂದು ಕುಡಿದು ಮಲಗಿ ಹಾಯಾಗಿರಬಹುದು ಎಂದು ನಾನಿರಬೇಕಾದರೆ, ಸಂತರ ಋಜುಜೀವನ ಈ ನೆಮ್ಮದಿಗೆ ಧಕ್ಕೆ ತರುತ್ತದೆ—ಎಲ್ಲೂ ಯಾವಾಗಲೂ ಏತಕ್ಕೂ ಸುಳ್ಳು ಹೇಳದವರು ಈ ವಿಷಯದಲ್ಲಿ ಸುಳ್ಳು ಹೇಳುವುದುಂಟೇ ಎಂದು. ಅಂಥ ವೇಳೆಗಳಲ್ಲಿ ಥಟ್ಟನೆ ಒಂದು ದಿನ ಅಪ್ಪಾಜಿಯ ಕಥೆ ಜ್ಞಾಪಕಕ್ಕೆ ಬಂದಿತು; ಮನಸ್ಸಿಗೆ ಎಷ್ಟೋ ನೆಮ್ಮದಿಯಾಯಿತು.

ಅಪ್ಪಾಜಿ ಮಂತ್ರಿ ನಮ್ಮ ಜನಕ್ಕೆ ಹೊಸಬನೇನೂ ಅಲ್ಲ. ವಿಜಯನಗರ ಎಂದರೆ ಕೃಷ್ಣದೇವರಾಯ ಮತ್ತು ಆತನ ಪ್ರಖ್ಯಾತ ಮಂತ್ರಿ ಅಪ್ಪಾಜಿಯನ್ನು ನೆನೆಯದವರಾರು? ಅಪ್ಪಾಜಿ ಬಹಳ ಬುದ್ಧಿವಂತನೆಂದು ಹೇಳಬೇಕಾಗಿಯೇ ಇಲ್ಲ. ಹಾಗಿಲ್ಲದಿದ್ದರೆ ವಿಜಯನಗರದ ಪೇಟೆಗಳಲ್ಲಿ ಹೊನ್ನು ರತ್ನಗಳನ್ನು ಬಳ್ಳಗಳಲ್ಲಿ ಅಳೆಯುತ್ತಿದ್ದರೆ? ಆತನ ವಿಚಾರದಲ್ಲಿ ಹೇಳುವ ಕತೆಗಳಲ್ಲಿ ಆನೆಯ ಕತೆಯೂ ಒಂದು. ಅದರ ವಿವರ ಹೀಗೆ: ಒಬ್ಬ ಶ್ರೀಮಂತ. ಆತ ಹದಿನೇಳು ಆನೆಗಳನ್ನು ತನ್ನ ಲಾಯದಲ್ಲಿ ಕಟ್ಟಿದ್ದ, ಎಂದರೆ ಭಾರಿ ಸಾಹುಕಾರನೇ ಇರಬೇಕು. ಶ್ರೀಮಂತರಿಗೆ ಮಂತ್ರಿಗಳ ಸ್ನೇಹವಿಲ್ಲದೆ ಇರುತ್ತದೆಯೆ? ಅಪ್ಪಾಜಿ ಆತನಿಗೆ ಬೇಕಾದವನಾಗಿದ್ದ. ಆತ ಸಾಯುವಾಗ ಒಂದು ಉಯಿಲು ಬರೆದಿಟ್ಟು ಹೋದ. ಈ ಆನೆಗಳ ಪಾಲಿನಲ್ಲಿ ಮಾತ್ರ ತಕರಾರೆದ್ದಿತು, ಏಕೆಂದರೆ, ಅವನ ಇಷ್ಟದ

ಪ್ರಕಾರ ದೊಡ್ಡವನಿಗೆ ಅರ್ಧಪಾಲು, ಎರಡನೆಯವನಿಗೆ ಮೂರನೆಯ ಒಂದು ಪಾಲು, ಕಿರಿಯನಿಗೆ ಒಂಭತ್ತನೆಯ ಒಂದು ಪಾಲು, ಹೀಗೆ ಆ ಆನೆಗಳ ವಿಭಾಗ ಆಗಬೇಕಾಗಿತ್ತು. ಆದರೆ ಹದಿನೇಳರ ಅರ್ಧ ಎಂಟೂವರೆಯಲ್ಲವೇ—ಯಾವ ರೀತಿ ಯಲ್ಲೂ ಇವು ಅಪ್ಪನ ಇಚ್ಛೆಯಂತೆ ಭಾಗವಾಗುವ ಹಾಗಿಲ್ಲವಲ್ಲ. ತಂದೆ ಎಷ್ಟು ಬುದ್ಧಿವಂತನೋ ಮಕ್ಕಳು ಅಷ್ಟೂ ಮೂರ್ಖರು; ಬಂಧುಗಳು ತಡೆಯದಿದ್ದರೆ ಅವರು ಆನೆಗಳನ್ನು ಸೀಳಿಯೇ ಹಂಚಿಕೊಳ್ಳುತ್ತಿದ್ದರು.

ಇವರ ಜಗಳ ಯಾವ ಪಂಚಾಯಿತಿಯಿಂದಲೂ ಪರಿಹಾರವಾಗದೆ ಅಪ್ಪಾಜಿ ಮಂತ್ರಿಯ ಕಿವಿಯವರೆಗೂ ಮುಟ್ಟಿತು. ಆತ ಕನಿಕರದಿಂದ ತಾನೂ ಒಂದಾನೆಯ ಮೇಲೇರಿ ಆ ಮನೆಗೆ ಬಂದು ಮಕ್ಕಳನ್ನು ಕರೆದ: ‘ಏಕೆ ವೃಥಾ ಜಗಳವಾಡುತ್ತೀರಿ. ನನಗೇನೂ ಆನೆಗಳು ಕಡಮೆಯಾಗಿಲ್ಲ. ನನ್ನ ಈ ಆನೆಯನ್ನೂ ನಿಮ್ಮ ಲೆಕ್ಕಕ್ಕೆ ಸೇರಿಸಿಕೊಂಡು ಆಮೇಲೆ ನಿಮ್ಮಪ್ಪನ ಇಷ್ಟದಂತೆ ಹಂಚಿಕೊಳ್ಳಿ. ನನ್ನ ನಿಮ್ಮ ತಂದೆಯ ಸ್ನೇಹಕ್ಕೆ ನಾನಿಷ್ಟನ್ನಾದರೂ ಮಾಡಬೇಡವೆ—ನನಗೊಂದು ವೇಳೆ ಒಂದಾನೆ ಕಡಿಮೆಯಾದರೇನಂತೆ?’ ಎಂದು ತನ್ನ ಆನೆಯನ್ನೂ ಅವುಗಳ ಸಾಲಿನಲ್ಲಿ ನಿಲ್ಲಿಸಿದ. ಈಗ ಪಾಲುಗಾರಿಕೆ ಸುಲಭವಾಯಿತು. ಹಿರಿಯನಿಗೆ ಅರ್ಧ, ಒಂಭತ್ತು; ಮಧ್ಯಮನಿಗೆ ಮೂರನೆಯ ಒಂದು ಪಾಲು, ಆರು; ಕಿರಿಯನಿಗೆ ಒಂಭತ್ತರ ಒಂದು ಪಾಲು, ಎರಡು. ಉಯಿಲಿನಲ್ಲಿ ಬರೆದಿದ್ದಂತೆಯೇ ಆಯಿತು! ವ್ಯಾಜ್ಯ ಹೀಗೆ ಅಪ್ಪಾಜಿಯ ಔದಾರ್ಯದಿಂದಲೂ ಜಾಣತನದಿಂದಲೂ ಪರಿಹಾರವಾದುದಕ್ಕೆ ಎಲ್ಲರಿಗೂ ಪರಮಸಂತೋಷವಾಯಿತು. ಮಕ್ಕಳೂ ತಮ್ಮ ತಮ್ಮ ಆನೆಗಳನ್ನು ತಮ್ಮ ತಮ್ಮ ಲಾಯಗಳಿಗೆ ಕೊಂಡೊಯ್ದರು. ಆಶ್ಚರ್ಯ, ಒಂದು ಹಿಂದೆಯೇ ಉಳಿಯಿತಲ್ಲ, ಯಾರೂ ವಾರಸುದಾರರಿಲ್ಲದೆ! ಪಾಪ, ಅಪ್ಪಾಜಿ ತಾನೆ ಏನು ಮಾಡಿಯಾನು? ಅದನ್ನೇ ಏರಿಕೊಂಡು ಸ್ವಸ್ಥಾನಕ್ಕೆ ಹಿಂದಿರುಗಿದ. ಅಪ್ಪಾಜಿ ಆನೆ ಈ ವ್ಯವಹಾರಕ್ಕೆ ಸಿಕ್ಕಿಕೊಳ್ಳದೆಯೇ, ಲೆಕ್ಕಕ್ಕೆ ಬಂದರೂ ಬಾರದಂತಿದ್ದು, ಅವರವರಿಗೆ ಅವರವರ ಪಾಲಿನ ನ್ಯಾಯ ಸಲ್ಲಿಸಿತು.

ಯಾವ ತಕರಾರೂ ಇಲ್ಲದೆ ಅವರವರಿಗೆ ಬರಬೇಕಾದ ಪಾಲುಗಳನ್ನು ಅವರವರು ಪಡೆದುಕೊಳ್ಳುವುದು ಸರಾಗವಾಗುವುದಕ್ಕಾಗಿಯೂ ಬಾಳು ಸೊಗಸುವುದಕ್ಕಾಗಿಯೂ ಸಂತರೂ ಸಿದ್ಧರೂ ಯೋಗಪುರುಷರೂ ಮಹಾತ್ಮರೂ ತಮ್ಮದೆಂದುಕೊಳ್ಳುವ ಮತ್ತು ನಮ್ಮ ಕಷ್ಟನಿವಾರಣೆಗಾಗಿ ನಮಗೆ ಆಗಾಗ ತಂದು

ತೆರುವ ಅಪ್ಪಾಜಿ ಆನೆ ಈ ದೇವರು! ಆತ ಭವಿಗಳ ವ್ಯವಹಾರದಲ್ಲಿ ಬೆರೆತು ಉಳಿದುಕೊಳ್ಳುವುದು ಸಂತರ ಸ್ವತ್ತಾಗಿಯೇ; ಇಷ್ಟಪ್ರಾಪ್ತಿ ಅನಿಷ್ಟ ನಿವೃತ್ತಿಗಳೆಂಬ ಹಾರೈಕೆಗಳಿಂದ ತುಂಬಿರುವ ನಮ್ಮ ವ್ಯವಹಾರದಲ್ಲಿನ ವಿಘ್ನಗಳನ್ನು ನಿವಾರಿಸಿ ನಮ್ಮನಮ್ಮ ಪ್ರಾಪ್ತಿಯನ್ನು ನಾವು ಪಡೆಯುವಂತೆ ಮಾಡುವುದಕ್ಕಲ್ಲವೆ ಯಾವ ಭವಿಗೂ ಸಲ್ಲದ ಈ ಯೋಗಿಧ್ಯೇಯ ನಮ್ಮ ಮನಸ್ಸಿಗೆ ಬರುವುದು, ಪೂಜಾವಿಧಿಗಳಲ್ಲಿ ಆಗಾಗ ಮೈದೋರುವುದು? ನಮ್ಮ ಲೆಕ್ಕಕ್ಕೆ ಆತ ಕರೆದ ವೇಳೆಗಳಲ್ಲಿ ಹೊರತು ಮಿಕ್ಕ ಸಮಯಗಳಲ್ಲಿ ಬಾರನು, ಬಂದರೂ ನಮ್ಮ ಸ್ವತ್ತಾಗನು, ನಮ್ಮದಲ್ಲದ ಅದು ನಮಗೆ ಬೇಕಾಗಿಯೂ ಇಲ್ಲ. ಆದರೆ ಆತ ಬಂದಾಗ ಎಷ್ಟು ಸಂತೋಷ, ಎಷ್ಟು ಉಲ್ಲಾಸ, ಎಂಥ ಬಿಡುವು, ಎಂಥ ಮಹೋತ್ಸವ, ಮತ್ತು ದುಃಖೋಪಶಮನ! ಆದಕ್ಕೇ ನಾವೆನ್ನುವುದು: "ಸಂಕಟ ಬಂದಾಗ ವೆಂಕಟರಮಣ" ಎಂದು. ಆತನು ಇದ್ದಾನೋ ಇಲ್ಲವೋ? ನಮ್ಮ ಸ್ವತ್ತಲ್ಲದ ಆ ಪರವಸ್ತುವಿನ ವಿಚಾರ ನಮಗೇಕೆ, ಇಷ್ಟನ್ನೋ ಅಷ್ಟನ್ನೋ ನಮ್ಮದೆಂದುಕೊಂಡು ತೃಪ್ತಿಪಟ್ಟುಕೊಳ್ಳುವವರಿಗೆ? ಅದು ನಮ್ಮದಾದಾಗಲೋ, ಆ ತೆರನೇ ಬೇರೆ.

SOME OPINIONS

Dr. K. V. Puttappa, M.A., D. Litt. MYSORE
Vice-Chancellor *Dated 16th July 1959*

I have been watching, with great interest the progress and achievement of Kannada Kavi Kavya-Male and the services that are being rendered by Professor H. M. Shankarnarayan Rao in the Kannada Literary field through Kavi Kavya Male of which he is himself the Proprietor and Editor. He has brought out so far about 50 books. Most of which are classical works such as Kalidasa's Shakuntala, Malavikagni mitra, Bhamaha's Kavyalankara etc. The books that have been published in this series are of varied interest and of permanent value. I sincerely believe that, if proper financial encouragement is extended to Sri H. M. Shankarnarayan Rao, he would be able to render more service in the field of Kannada Language and Literature. I wish his endeavours all success.

(Sd) K. V. PUTTAPPA
Vice-Chancellor

31, Second Cross Road
Basavanagudi,
BANGALORE—4
Dated 8th May 1959

A. R. Krishna Sastry, M.A.
Prof of Kannada (Retd.)
Mysore University.

Enterprising Kannada Scholars like Mr. H. M. Shankarnarayan Rao, M.A. who have enthusiastically taken to book publication business are caught in a vicious circle. Due to Central Excise and Provincial Sales-Tax among other things, the cost of paper and printing has become enormously high and books become unsalable if

they are priced proportionately. Retail book-selle demand high rate of commission and books on credit sal Consequent bad debts and loss over unsold and shopsoil copies are not negligible. Shop rent, godown rent, ar establishment charges are going up every day. It is on the Text Book-Publisher and Seller that can make son money in a reasonable time. All publishers are not equal fortunate in this respect.

If the market is not to be flooded with cheap nove and badly produced text books, standard publishers lik Mr. H. M. Shankarnarayan Rao should be grante decent subvention and exemption from excise on pape Mr. H. M. Shankarnarayan Rao, has published i Kannada very decent books with good get-up. The comprise original works, translations, and editions c classics by reputed scholars and University Professors. H deserve generous help by the Sahitya Akademi an Mysore Government.

(Sd) A. R. KRISHNA SASTRY
Professor of Kannada (Retd.)

S. V. Ranganna, M.A.
Professor of English (Retd.)
University of Mysore

1961/1 K. M. Puram
MYSORE
May 5th 1959

Sri H. M. Shankarnarayan Rao, Professor and Head of the department of Kannada, Sarada Vilas College Mysore, has established himself as a teacher, and he is or the way to establish himself as publisher of books. More than a score of books has he already brought out. Only a few of them are stories for which there seems to be a